ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಮಕ್ಕಳು ಒಂದು ಅಥವಾ ಎರಡನೇ ತರಗತಿಯಿಂದ ಅಕ್ಷರ/ಪದಗಳನ್ನು ಧ್ವನಿಸುತ್ತಾರೆ. ನಂತರ ಹಂತ ಹಂತವಾಗಿ ಪದ, ಪದಪುಂಜ, ವಾಕ್ಯಗಳನ್ನು ಓದಿ ಅರ್ಥ ಗ್ರಹಿಸಲು ಪ್ರಾರಂಭಿಸುತ್ತಾರೆ.

ಚುನಾವಣೆ ಹೊಸ್ತಿಲಲ್ಲಿ ನಾಯಕರ ಶಿಕಾರಿ! 5

ರಾಜ್ಯದಾದ್ಯಂತ ದೂರುಗಳ ಸಂಖ್ಯೆ ಹೆಚ್ಚಳ

ವಂಚನೆಗೆ 'ಕ್ರಿಪ್ಟೊ ಕರೆನ್ಸಿ' ಬಂಡವಾಳ 4

ಕನಕದಾಸ ಜಯಂತಿ ಶುಭಾಶಯಗಳು

ಮಸೂದೆಗೆ ಬುಧವಾರ ಒಪ್ಪಿಗೆ?

ಕೃಷಿ ಕಾಯ್ದೆ ಹಿಂದಕ್ಕೆ: 29ರಿಂದ ಶುರುವಾಗುವ ಚಳಿಗಾಲದ ಅಧಿವೇಶನದಲ್ಲಿ ಮಂಡನೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೂರು ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಮಸೂದೆಗೆ ಕೇಂದ್ರ ಸಚಿವ ಸಂಪುಟವು ಬುಧವಾರ ಒಪ್ಪಿಗೆ ನೀಡುವ ಸಾಧ್ಯತೆ ಇದೆ. ಮೂರೂ ಕಾಯ್ದೆಗಳನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಹಿಂದಕ್ಕೆ ಪಡೆಯಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಸುದ್ದಿವಾಹಿನಿಯಲ್ಲಿ ಪ್ರಸಾರವಾದ ಭಾಷಣದಲ್ಲಿ ಘೋಷಿಸಿದ್ದರು.

ಕೃಷಿ ಉತ್ಪನ್ನಗಳ ವ್ಯಾಪಾರ ಮತ್ತು ವಾಣಿಜ್ಯ (ಪ್ರಚಾರ ಮತ್ತು ನೆರವು) ಕಾಯ್ದೆ, ದರ ಭರವಸೆ ಮತ್ತು ಕೃಷಿ ಸೇವೆಗಳಿಗೆ ರೈತರ (ಸಬಲೀಕರಣ ಮತ್ತು ರಕ್ಷಣೆ) ಒಪ್ಪಿಗೆ ಕಾಯ್ದೆ ಮತ್ತು ಅಗತ್ಯ ವಸ್ತುಗಳ (ತಿದ್ದುಪಡಿ) ಕಾಯ್ದೆಗಳನ್ನು ಹಿಂದಕ್ಕೆ ಪಡೆಯಲು ಅಗತ್ಯವಾದ ಮಸೂದೆಗಳನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗುವುದು. ಅಧಿವೇಶನವು ಇದೇ 29ರಂದು ಆರಂಭ ಆಗಲಿದೆ.

ಮೂರೂ ಕಾಯ್ದೆಗಳನ್ನು ರದ್ದುಪಡಿಸಬೇಕು ಮತ್ತು ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಕಾನೂನುಬದ್ಧ ಖಾತರಿ ನೀಡಬೇಕು ಎಂದು ಒತ್ತಾಯಿಸಿ ರೈತರು ದೆಹಲಿಯಲ್ಲಿ ಸುಮಾರು ಒಂದು ವರ್ಷದಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದು ಸಾಧ್ಯವಿಲ್ಲ ಎಂದು ಸರ್ಕಾರ ಪಟ್ಟು ಹಿಡಿದಿತ್ತು.

8ನೇ ಪುಟ ನೋಡಿ

ದೆಹಲಿಯ ಸಿಂಘು ಗಡಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿರುವ ಸ್ಥಳದಲ್ಲಿ ಭಾನುವಾರ ನಿಹಾಂಗ್‌ಗಳು ಮೆರವಣಿಗೆ ನಡೆಸಿದರು –ಪಿಟಿಐ ಚಿತ್ರ

ರೈತ ಮಹಾಪಂಚಾಯಿತಿ ಇಂದು

ರೈತರ ಪ್ರಮುಖ ಬೇಡಿಕೆಗಳ ಬಗೆಗಿನ ಚರ್ಚೆಗಾಗಿ, ಲಖನೌದಲ್ಲಿ ಸೋಮವಾರ ರೈತರ ಮಹಾಪಂಚಾಯಿತಿ ನಡೆಯಲಿದೆ. ಕನಿಷ್ಠ ಬೆಂಬಲ ಬೆಲೆ ಖಾತರಿ, ವರ್ಷವಿಡೀ ನಡೆದ ರೈತ ಪ್ರತಿಭಟನೆಯಲ್ಲಿ ಮೃತಪಟ್ಟ ರೈತರ ಕುಟುಂಬದವರಿಗೆ ಪರಿಹಾರ, ರೈತರ ವಿರುದ್ಧದ ಪ್ರಕರಣಗಳನ್ನು ಹಿಂದೆಗೆದುಕೊಳ್ಳಲು ಆಗ್ರಹಿಸುವ ಪ್ರಮುಖ ವಿಷಯಗಳು ಚರ್ಚೆಗೆ ಬರಲಿವೆ.

ಇನ್ನಷ್ಟು ಸುದ್ದಿಗಳು 8

'ಪಿಎಂ ಕೇರ್ಸ್‌ನಿಂದ ಪರಿಹಾರ ನೀಡಿ'

ಕೃಷಿ ಕಾಯ್ದೆಗಳ ವಿರುದ್ಧ ಹೋರಾಡುವ ವೇಳೆ ಮೃತಪಟ್ಟ ರೈತರ ಕುಟುಂಬಗಳಿಗೆ ಪರಿಹಾರ ನೀಡುವಂತೆ ಶಿವಸೇನಾ ಸಂಸದ ಸಂಜಯ್ ರಾವುತ್ ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಕೇಂದ್ರ ಸರ್ಕಾರಕ್ಕೆ ಈಗ ತನ್ನ ತಪ್ಪಿನ ಅರಿವಾಗಿದ್ದು, ಕೃಷಿ ಕಾಯ್ದೆಗಳನ್ನು ಹಿಂಪಡೆದಿದೆ. ಹೋರಾಟದಲ್ಲಿ ಪ್ರಾಣ ಕಳೆದುಕೊಂಡ ರೈತರ ಕುಟುಂಬಗಳಿಗೆ ಪರಿಹಾರ ನೀಡಬೇಕು ಎಂಬ ಒತ್ತಾಯ ದೇಶದ ಹಲವು ಭಾಗಗಳಿಂದ ಕೇಳಿ ಬರುತ್ತಿದೆ. ಪಿಎಂ ಕೇರ್ಸ್‌ನಲ್ಲಿ ಲೆಕ್ಕ ಕೊಡದ ಹಣವಿದೆ. ಅದರಲ್ಲೇ ಪರಿಹಾರ ನೀಡಿ. ರೈತರಲ್ಲಿ ಕೇವಲ ಕ್ಷಮೆ ಕೇಳಿದರೆ ಸಾಲುವುದಿಲ್ಲ. ಅವರ ಕುಟುಂಬಗಳಿಗೆ ನೆರವು ನೀಡುವುದು ಮುಖ್ಯವಾಗಿದೆ ಎಂದು ಹೇಳಿದ್ದಾರೆ.

27ರಂದು ರೈತರ ಸಭೆ

ಮುಂದಿನ ಹೋರಾಟದ ರೂಪುರೇಷೆ ಕುರಿತು ಇದೇ 27ರಂದು ಮತ್ತೊಂದು ಸುತ್ತಿನ ಸಭೆ ನಡೆಸಿ ನಿರ್ಧಾರ ತೆಗೆದುಕೊಳ್ಳಲು ರೈತ ಸಂಘಟನೆಗಳು ನಿರ್ಧರಿಸಿವೆ. 29ರಂದು ಆರಂಭವಾಗಲಿರುವ ಸಂಸತ್ ಅಧಿವೇಶನದಲ್ಲಿ ಕೃಷಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ ವಾಪಸ್ ಪಡೆಯುವ ನಿರೀಕ್ಷೆಯಿದ್ದು, ಇದಕ್ಕೂ ಮುನ್ನ ಈ ಸಭೆ ಜರುಗಲಿದೆ.

ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಸೇರಿದಂತೆ ಬಾಕಿ ಇರುವ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರಧಾನಿಗೆ ಬಹಿರಂಗ ಪತ್ರ ಬರೆಯಲು ಭಾನುವಾರದ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ರೈತ ಮುಖಂಡ ಬಲ್ಬೀರ್ ಸಿಂಗ್ ರಾಜೇವಾಲ್ ತಿಳಿಸಿದ್ದಾರೆ. ಪೂರ್ವ ನಿಗದಿಯಂತೆ, 29ರಂದು ಸಂಸತ್‌ಗೆ ಟ್ರ್ಯಾಕ್ಟರ್ ಜಾಥಾ ನಡೆಯಲಿದೆ.

ತುರ್ತುಸಭೆ ಕರೆಯಲು ಮುಂದಾದ ಮುಖ್ಯಮಂತ್ರಿ

ಬೆಲೆ ಏರಿಕೆ ಬಿಸಿ: ನೀರಾವರಿ ಕಾಮಗಾರಿಗಳು ಕುಂಠಿತ

• ಎಸ್.ರವಿಪ್ರಕಾಶ್

ಬೆಂಗಳೂರು: ನಿರ್ಮಾಣ ಕ್ಷೇತ್ರದ ಅಗತ್ಯ ವಸ್ತುಗಳ ಬೆಲೆ 'ಗಗನಮುಖಿ'ಯಾಗಿರುವುದರಿಂದ ರಾಜ್ಯದಲ್ಲಿ ಸಾವಿರಾರು ಕೋಟಿ ಮೊತ್ತದ ನೀರಾವರಿ ಕಾಮಗಾರಿಗಳು ಸ್ಥಗಿತಗೊಳ್ಳುವ ಹಂತ ತಲುಪಿವೆ. ವಿಷಯದ ಗಂಭೀರತೆ ಅರಿತ ಮುಖ್ಯಮಂತ್ರಿಯವರು ಜಲಸಂಪನ್ಮೂಲ, ಆರ್ಥಿಕ ಇಲಾಖೆ ಮತ್ತು ಇತರ ಇಲಾಖೆಗಳ ಉನ್ನತ ಅಧಿಕಾರಿಗಳ ತುರ್ತುಸಭೆ ಕರೆಯಲು ನಿರ್ಧರಿಸಿದ್ದಾರೆ.

ಮುಂದಿನ ದಿನಗಳಲ್ಲಿ ವಿವಿಧ ಕಾಮಗಾರಿಗಳ ಟೆಂಡರ್ ಮೊತ್ತವೂ ಹೆಚ್ಚಾಗುವ ಸಾಧ್ಯತೆ ಇದೆ. ಇನ್ನೊಂದೆಡೆ, ತಾವು ಕೈಗೆತ್ತಿಕೊಂಡಿರುವ ಕಾಮಗಾರಿಗಳ ಅಂದಾಜು ವೆಚ್ಚವನ್ನು ಹೆಚ್ಚಿಸುವಂತೆ ಒತ್ತಾಯಿಸಲೂ ಗುತ್ತಿಗೆದಾರರು ಸಿದ್ಧತೆ ನಡೆಸಿದ್ದಾರೆ.

ಉಕ್ಕು, ಸಿಮೆಂಟ್, ಎಂಎಸ್ ಪ್ಲೇಟ್‌ಗಳು ಮತ್ತು ಎಂಎಸ್ ಪೈಪ್‌ಗಳು, ಪಿವಿಸಿ, ಎಚ್‌ಡಿಪಿಇ, ಡಿಐ ಪೈಪ್‌ಗಳು, ಎಲೆಕ್ಟ್ರೋ ಮೆಕ್ಯಾನಿಕಲ್ ಮತ್ತು ಹೈಡ್ರೊ ಮೆಕ್ಯಾನಿಕಲ್ ಉಪಕರಣಗಳು ಮತ್ತು ಇಂಧನದ ಬೆಲೆ ವಿಪರೀತ ಏರಿಕೆ ಆಗಿದೆ. ಗುತ್ತಿಗೆದಾರರು ಆರ್ಥಿಕ ಸಂಕಷ್ಟದಲ್ಲಿರುವ ಕಾರಣ, ಬಹುತೇಕ ಕಾಮಗಾರಿಗಳು ತೆವಳುತ್ತಿವೆ. ಸರ್ಕಾರ ಈಗ ಮಧ್ಯಪ್ರವೇಶಿಸದಿದ್ದರೆ ಅವು ಸ್ಥಗಿತಗೊಳ್ಳಲಿವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಪ್ರಜಾವಾಣಿ ವಿಶೇಷ

'ನೀರಾವರಿ ಮೂಲಸೌಕರ್ಯ ನಿರ್ಮಾಣ ಉಪಕರಣಗಳ ಬೆಲೆ ಏರಿಕೆಯಿಂದಾಗಿ ಕಾಮಗಾರಿ ಮುಂದುವರಿಸುವುದು ಕಷ್ಟವಾಗಿದೆ. ನೀವು ತಕ್ಷಣ ಮಧ್ಯಪ್ರವೇಶಿಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ 'ಕ್ಯಾಟಗರಿ ಕಾಂಟ್ರಾಕ್ಟರ್ಸ್ ಫೋರಂ' ಪತ್ರ ಬರೆದಿದೆ. ಕರ್ನಾಟಕ ನೀರಾವರಿ ನಿಗಮ, ಕೃಷ್ಣಾ ಭಾಗ್ಯ ಜಲ ನಿಗಮ, ವಿಶ್ವೇಶ್ವರಯ್ಯ ಜಲ ನಿಗಮ ಮತ್ತು ಕಾವೇರಿ ಜಲ ನಿಗಮಗಳ ಅಡಿ ಏತ ನೀರಾವರಿ, ಹನಿ ನೀರಾವರಿ ಯೋಜನೆಗಳು, ಬ್ರಿಜ್ ಕಂ ಬ್ಯಾರೇಜ್‌ಗಳು, ನಾಲೆಗಳ ಸಂಪರ್ಕ ಜಾಲಗಳ ಕಾಮಗಾರಿಗಳು ಚಾಲ್ತಿಯಲ್ಲಿವೆ.

5ನೇ ಪುಟ ನೋಡಿ

ಗುತ್ತಿಗೆದಾರರಿಗೆ ಪಾವತಿ ಆಗಬೇಕಾದ ಮೊತ್ತ

ನಿಗಮ	ಮೊತ್ತ (₹ ಕೋಟಿಗಳಲ್ಲಿ)
ಕೆಬಿಜೆಎನ್‌ಎಲ್	1,550
ಕೆಎನ್‌ಎನ್‌ಎಲ್	4,900
ವಿಜೆಎನ್‌ಎಲ್	2,900
ಸಿಎನ್‌ಎನ್‌ಎಲ್	1300
ಒಟ್ಟು	10,650

ಕಾಮಗಾರಿ ಕುಂಠಿತ ಬಗ್ಗೆ ಜಲಸಂಪನ್ಮೂಲ ಸಚಿವರು, ಅಧಿಕಾರಿಗಳು ಮತ್ತು ಗುತ್ತಿಗೆದಾರರ ಜತೆ ಮುಖ್ಯಮಂತ್ರಿಯವರು ಸದ್ಯವೇ ಚರ್ಚೆ ನಡೆಸಲಿದ್ದಾರೆ

ಎನ್. ಮಂಜುನಾಥ ಪ್ರಸಾದ್
ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿ

ಕ್ರಿಕೆಟ್: ಭಾರತ ಕ್ಲೀನ್‌ಸ್ವೀಪ್

ಕೋಲ್ಕತ್ತ (ಪಿಟಿಐ): ರೋಹಿತ್ ಶರ್ಮಾ (56) ಅಬ್ಬರದ ಬ್ಯಾಟಿಂಗ್ ಬಲದಿಂದ ಭಾರತ ತಂಡವು ನ್ಯೂಜಿಲೆಂಡ್ ಎದುರಿನ ಮೂರನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ 73 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಸರಣಿಯನ್ನು 3–0ಯಿಂದ ತನ್ನದಾಗಿಸಿಕೊಂಡಿತು.

ಈಡನ್ ಗಾರ್ಡನ್‌ನಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 184 ರನ್ ಗಳಿಸಿತು. ಅದಕ್ಕುತ್ತರವಾಗಿ ಕಿವೀಸ್ ಬಳಗಕ್ಕೆ 17.2 ಓವರ್‌ಗಳಲ್ಲಿ 111 ರನ್ ಗಳಿಸಲಷ್ಟೇ ಸಾಧ್ಯವಾಯಿತು. 12

ಮಳೆ ಹಾನಿ: ರಸ್ತೆ ದುರಸ್ತಿಗೆ ಸಿ.ಎಂ ಸೂಚನೆ

₹500 ಕೋಟಿ ತಕ್ಷಣ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕಾಲಿಕ ಮಳೆಯಿಂದ ರಾಜ್ಯದಲ್ಲಿ ಉಂಟಾಗಿರುವ ಹಾನಿ ಮತ್ತು ಈ ಸಂಬಂಧ ಕೈಗೊಂಡಿರುವ ಕ್ರಮಗಳ ಕುರಿತು ಅವಲೋಕಿಸಲು ಭಾನುವಾರ ರಾತ್ರಿ ತುರ್ತು ಸಭೆ ನಡೆಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಸ್ತೆಗಳ ದುರಸ್ತಿಗೆ ಲೋಕೋಪಯೋಗಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ತಕ್ಷಣ ₹ 500 ಕೋಟಿ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಗೆ ಆದೇಶಿಸಿದರು.

ಕೃಷಿ ಇಲಾಖೆಯ ಸಿಬ್ಬಂದಿ ಕಂದಾಯ ಮತ್ತು ತೋಟಗಾರಿಕೆ ಅಧಿಕಾರಿಗಳ ಜೊತೆ ಜಂಟಿ ಸಮೀಕ್ಷೆ ತಕ್ಷಣ ಆರಂಭಿಸಿ, ನಷ್ಟದ ವಿವರವನ್ನು ಪರಿಹಾರ ಆ್ಯಪ್‌ನಲ್ಲಿ ದಾಖಲಿಸಬೇಕು. ಬೆಳೆ ನಷ್ಟ ಪರಿಹಾರ ವಿತರಣೆ ತ್ವರಿತವಾಗಿ ಆಗಬೇಕು. ಕೃಷಿ ಇಲಾಖೆಯ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿ ಮುಂದಿನ 15-20 ದಿನಗಳಲ್ಲಿ ಬೆಳೆ ಸಮೀಕ್ಷೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅವರು ಸೂಚಿಸಿದರು.

ಬೆಂಗಳೂರು ನಗರ, ಗ್ರಾಮಾಂತರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಹಾಸನ ಜಿಲ್ಲೆಗಳಲ್ಲಿ ಹೆಚ್ಚಿನ ಹಾನಿ ವರದಿಯಾಗಿದೆ.

3ನೇ ಪುಟ ನೋಡಿ

ವಾರ್ಡ್‌ವಾರು ವರದಿಗೆ ಸೂಚನೆ

'ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆ ಹಾನಿ ಪರಿಹಾರ ಕಾರ್ಯಕ್ಕೆ ಪ್ರತಿ ವಲಯಕ್ಕೆ ₹25 ಲಕ್ಷ ಬಿಡುಗಡೆ ಮಾಡಲಾಗಿದೆ. ರಸ್ತೆ ಗುಂಡಿ ಮುಚ್ಚಲು ವಸ್ತುಸ್ಥಿತಿ ಆಧಾರಿತ ವರದಿ ಸಲ್ಲಿಸಿ ತಕ್ಷಣ ಕ್ರಮ ಕೈಗೊಳ್ಳಬೇಕು. ಮಾರಣಾಂತಿಕ ರಸ್ತೆ ಗುಂಡಿಗಳ ಬಳಿ ಬ್ಯಾರಿಕೇಡ್ ಹಾಗೂ ಲೈಟಿಂಗ್ ವ್ಯವಸ್ಥೆ ಮಾಡಿ, ದುರಸ್ತಿಗೆ ಕ್ರಮ ವಹಿಸಬೇಕು. ಮಳೆ ಹಾನಿ ಸಂಭವಿಸಿದ ಕುರಿತು ವಾರ್ಡ್‌ವಾರು ವರದಿ ಸಲ್ಲಿಸಬೇಕು' ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.

ಜೋರು ಮಳೆ: ಮನೆಗಳಿಗೆ ನುಗ್ಗಿದ ನೀರು

ಬೆಂಗಳೂರು: ನಗರದ ಟಿ. ದಾಸರಹಳ್ಳಿ ಹಾಗೂ ಯಲಹಂಕ ಸುತ್ತಮುತ್ತ ಭಾನುವಾರ ಸಂಜೆಯಿಂದ ರಾತ್ರಿಯವರೆಗೂ ಜೋರು ಮಳೆಯಾಗಿದ್ದು, ನಾಗಸಂದ್ರ ಕಾಲೊನಿ ಬಳಿ ರಾಜಕಾಲುವೆ ಒಡೆದು ಹಲವು ಮನೆಗಳಿಗೆ ನೀರು ನುಗ್ಗಿತು.

ಹಲವು ದಿನಗಳಿಂದ ಸುರಿಯುತ್ತಿದ್ದ ಮಳೆ, ಭಾನುವಾರ ಬೆಳಿಗ್ಗೆ ಬಿಡುವು ನೀಡಿತ್ತು. 3A

ಕರಾವಳಿ ಜಿಲ್ಲೆಗಳಲ್ಲಿ ಇಂದು ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ನ.22 ರಂದು ಭಾರಿ ಮಳೆಯಾಗುವ ಮುನ್ಸೂಚನೆ ಇದ್ದು, ಉಳಿದ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನಲ್ಲಿ ಉಂಟಾಗಿದ್ದ ಮೇಲ್ಮೈ ಸುಳಿಗಾಳಿ ದುರ್ಬಲಗೊಂಡಿದ್ದು, ಅರಬ್ಬಿ ಸಮುದ್ರದಲ್ಲಿದ್ದ ವಾಯುಭಾರ ಕುಸಿತದ ತೀವ್ರತೆ ತಗ್ಗಿರುವುದರಿಂದ ರಾಜ್ಯದಲ್ಲಿ ಮಳೆ ಕಡಿಮೆಯಾಗುವ ಸಾಧ್ಯತೆಗಳಿವೆ.

ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಾತ್ರ ಸೋಮವಾರ ಹೆಚ್ಚು ಮಳೆಯಾಗುವ ಸೂಚನೆಗಳಿದ್ದು, 'ಯೆಲ್ಲೊ ಅಲರ್ಟ್' ಮುಂದುವರಿಸಲಾಗಿದೆ. ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಗಳಿದ್ದು, ಉತ್ತರ ಒಳನಾಡಿನಲ್ಲಿ ಮಳೆಯ ಸೂಚನೆಗಳಿಲ್ಲ. ನ.23 ರಿಂದ ರಾಜ್ಯದಾದ್ಯಂತ ಮಳೆ ಪ್ರಮಾಣ ತಗ್ಗಲಿದೆ ಎಂದು ಮಾಹಿತಿ ನೀಡಿದೆ.

ಮಳೆ–ಎಲ್ಲಿ, ಎಷ್ಟು?: ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಹಾಗೂ ಬಳ್ಳಾರಿ ಜಿಲ್ಲೆಯ ಕುಡತಿನಿ ಪ್ರದೇಶದಲ್ಲಿ ಭಾನುವಾರ ಗರಿಷ್ಠ, ತಲಾ 9 ಸೆಂ.ಮೀ ಮಳೆಯಾಗಿದೆ.

ಸಿಂಧನೂರು 8, ಗಂಗಾವತಿ, ಬಾಗಲಕೋಟೆ 5, ಭಟ್ಕಳ, ಕಾರವಾರ, ಧರ್ಮಸ್ಥಳ, ಕಾರ್ಕಳ, ಹುಕ್ಕೇರಿ, ಬಂಗಾರಪೇಟೆ 3, ಉಡುಪಿ, ಮಂಗಳೂರು, ಹಾವೇರಿ, ಗದಗ, ಮುಳಬಾಗಿಲು 2, ಬೆಳ್ತಂಗಡಿ, ಚಿಕ್ಕೋಡಿ, ನಿಪ್ಪಾಣಿ, ಧಾರವಾಡ, ಬೆಳಗಾವಿ, ನರಗುಂದ, ರಾಯಚೂರು, ಚಿಕ್ಕಬಳ್ಳಾಪುರದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ದಾವಣಗೆರೆಯಲ್ಲಿ 18 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಒಳ ಪುಟಗಳು

ಯೋಗಿ ಭುಜದ ಮೇಲೆ ಕೈಇಟ್ಟು ಮೋದಿ ಹೆಜ್ಜೆ 8

ಸಂಖ್ಯೆ–ಸುದ್ದಿ
ಗುರಿ ಮೀರಿದ ತೆರಿಗೆ ಆದಾಯ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕಸಾಪ ಚುನಾವಣೆ ಶೇ 52ರಷ್ಟು ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಸ್ಥಾನಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ಶೇ 52.09 ರಷ್ಟು ಮತದಾನ ನಡೆದಿದೆ.

3.05 ಲಕ್ಷ ಮತದಾರರಲ್ಲಿ 1.59 ಲಕ್ಷ ಮತದಾರರು ಹಕ್ಕು ಚಲಾಯಿಸಿದ್ದಾರೆ. ಕೊಡಗಿನಲ್ಲಿ ಗರಿಷ್ಠ (ಶೇ 71.18) ಹಾಗೂ ಬೆಂಗಳೂರು ನಗರ ಜಿಲ್ಲೆಯಲ್ಲಿ ಕನಿಷ್ಠ (ಶೇ 28.88) ಮತದಾನ ನಡೆದಿದೆ. ಹೆಚ್ಚು ಮತದಾರರು ಇರುವ ಕಡೆ ಕಡಿಮೆ ಪ್ರಮಾಣದಲ್ಲಿ ಮತದಾನವಾಗಿದೆ.

2016ರ ಚುನಾವಣೆಯಲ್ಲಿ ಶೇ 57.90ರಷ್ಟು ಮತದಾನವಾಗಿತ್ತು. ಪರಿಷತ್ತಿನ ಕೇಂದ್ರ ಘಟಕದ ಅಧ್ಯಕ್ಷ ಸ್ಥಾನ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷ ಸ್ಥಾನಗಳ ಫಲಿತಾಂಶ ಇದೇ 24ಕ್ಕೆ ಪ್ರಕಟ ಆಗಲಿದೆ.

ಬೆಳಿಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನಕ್ಕೆ ಅವಕಾಶ ನೀಡಲಾಗಿತ್ತು. ರಾಜ್ಯದಾದ್ಯಂತ ಶಾಂತಿಯುತವಾಗಿ ಮತದಾನ ನಡೆದಿದೆ. ಸಂಜೆ ವೇಳೆಗೆ ಜಿಲ್ಲಾ ಕಸಾಪ ಚುನಾವಣಾಧಿಕಾರಿಗಳು ತಮ್ಮ ಮತಗಟ್ಟೆಯ ವಿವರದ ಜೊತೆಗೆ ಇತರೇ ತಾಲ್ಲೂಕು ಮತಗಟ್ಟೆಗಳಲ್ಲಿನ ಮತದಾನದ ವಿವರ ಪಡೆದು, ಪರಿಷತ್ತಿನ ಜಿಲ್ಲಾ ಘಟಕಗಳ ಅಧ್ಯಕ್ಷರ ಫಲಿತಾಂಶ ಘೋಷಿಸಿದರು.

ಈ ಬಾರಿ 420 ಮತಗಟ್ಟೆಗಳಿದ್ದವು. ಬೆಂಗಳೂರಿನಲ್ಲಿ ಇದೇ ಮೊದಲ ಬಾರಿ 28 ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಮತದಾನ ಪ್ರಕ್ರಿಯೆ ನಡೆಸಲಾಯಿತು. ಇದರಿಂದಾಗಿ ಕೆಲವರಿಗೆ ಮತಗಟ್ಟೆ ಮಾಹಿತಿ ಇಲ್ಲದೇ ಗೊಂದಲವಾಯಿತು. ಒಂದೆಡೆಯಿಂದ ಮತ್ತೊಂದೆಡೆ ತೆರಳಿದರು. ಅಭ್ಯರ್ಥಿಗಳ ಭಾವಚಿತ್ರವಿದ್ದ ಬ್ಯಾನರ್‌ಗಳು ಎಲ್ಲೆಂದರಲ್ಲಿ ಕಾಣುತ್ತಿದ್ದವು.

5ನೇ ಪುಟ ನೋಡಿ

ಕಸಾಪ ಚುನಾವಣೆ ಮತದಾನದ ವಿವರ

ಜಿಲ್ಲೆ	ಮತದಾರರು	ಮತ ಚಲಾವಣೆ	ಪ್ರಮಾಣ (%)
ಅತೀ ಹೆಚ್ಚು ಮತದಾನ ನಡೆದ ಜಿಲ್ಲೆಗಳು			
ಕೊಡಗು	2,425	1,726	71.18
ಕೋಲಾರ	10,046	7,074	70.42
ಹಾವೇರಿ	8,498	5,775	67.96
ಗದಗ	5,999	4,053	67.56
ಚಿಕ್ಕಬಳ್ಳಾಪುರ	6,827	4,538	66.47
ಕಡಿಮೆ ಮತದಾನ ನಡೆದ ಜಿಲ್ಲೆಗಳು			
ಬೆಂಗಳೂರು ನಗರ	36,491	10,538	28.88
ಯಾದಗಿರಿ	4,787	1,719	35.91
ಮೈಸೂರು	13,381	5,722	42.76
ಬೆಳಗಾವಿ	15,780	6,805	43.12
ದಕ್ಷಿಣ ಕನ್ನಡ	4,541	2,034	44.79

ಕೇಂದ್ರ ರೆವೆನ್ಯೂ ಕಾರ್ಯದರ್ಶಿ ತರುಣ್ ಬಜಾಜ್ ಹೇಳಿಕೆ

ಗುರಿ ಮೀರಲಿದೆ ಕೇಂದ್ರದ ತೆರಿಗೆ ವರಮಾನ

ನವದೆಹಲಿ (ಪಿಟಿಐ): ಅಕ್ಟೋಬರ್‌ವರೆಗೆ ದೇಶದಲ್ಲಿ ಸಂಗ್ರಹ ಆಗಿರುವ ನೇರ ತೆರಿಗೆಗಳ ಮೊತ್ತವು ₹ 6 ಲಕ್ಷ ಕೋಟಿಯನ್ನು ಮೀರಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಮಾಸಿಕ ಸರಾಸರಿ ಜಿಎಸ್‌ಟಿ ಸಂಗ್ರಹವು ₹ 1.15 ಲಕ್ಷ ಕೋಟಿ ಇರಲಿದೆ ಎಂದು ಅಂದಾಜು ಮಾಡಲಾಗಿದೆ. ಹೀಗಾಗಿ, 2021–22ರಲ್ಲಿ ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹ ಪ್ರಮಾಣವು ಬಜೆಟ್ ಅಂದಾಜನ್ನು ಮೀರಲಿದೆ.

ಇವು ಕೇಂದ್ರ ರೆವೆನ್ಯೂ ಕಾರ್ಯದರ್ಶಿ ತರುಣ್ ಬಜಾಜ್ ಅವರು ಹೇಳಿರುವ ಮಾತುಗಳು. 'ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ತಗ್ಗಿಸಿದ್ದರ ಹಾಗೂ ಅಡುಗೆ ಎಣ್ಣೆ ಮೇಲಿನ ಸೀಮಾ ಸುಂಕವನ್ನು ಕಡಿಮೆ ಮಾಡಿದ್ದರ ಪರಿಣಾಮವಾಗಿ ಕೇಂದ್ರದ ಬೊಕ್ಕಸಕ್ಕೆ ಈ ವರ್ಷದಲ್ಲಿ ಅಂದಾಜು ₹ 80 ಸಾವಿರ ಕೋಟಿ ನಷ್ಟ ಆಗಲಿದೆ' ಎಂದು ಬಜಾಜ್ ಅವರು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಹಾಲಿ ಆರ್ಥಿಕ ವರ್ಷದಲ್ಲಿ ತೆರಿಗೆ ಸಂಗ್ರಹದ ಮೂಲಕ ಒಟ್ಟು ₹ 22.2 ಲಕ್ಷ ಕೋಟಿ ವರಮಾನ ಬರುವ ಅಂದಾಜನ್ನು ಕೇಂದ್ರವು ಹೊಂದಿದೆ. ತೆರಿಗೆ ಸಂಗ್ರಹದಲ್ಲಿ ಶೇಕಡ 9.5ರಷ್ಟು ಹೆಚ್ಚಳ ಆಗುತ್ತದೆ ಎಂಬ ನಿರೀಕ್ಷೆಯನ್ನು ಕೂಡ ಕೇಂದ್ರ ಹೊಂದಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ ತೆರಿಗೆ ಮೂಲಕ ₹ 20.2 ಲಕ್ಷ ಕೋಟಿ ಸಂಗ್ರಹ ಆಗಿತ್ತು.

ನೇರ ತೆರಿಗೆಗಳ ಮೂಲಕ ಈ ವರ್ಷದಲ್ಲಿ ಒಟ್ಟು ₹ 11 ಲಕ್ಷ ಕೋಟಿ ವರಮಾನ ಸಂಗ್ರಹ ಆಗಬಹುದು ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಕಾರ್ಪೊರೇಟ್ ತೆರಿಗೆ ಮೂಲಕ ಬರಬಹುದಾದ ₹ 5.47 ಲಕ್ಷ ಕೋಟಿ ಹಾಗೂ ಆದಾಯ ತೆರಿಗೆ ಮೂಲಕ ಬರಬಹುದಾದ ₹ 5.61 ಲಕ್ಷ ಕೋಟಿ ಸೇರಿವೆ.

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಡಿಯಲ್ಲಿ ಸಂಗ್ರಹ ಆಗುವ ವರಮಾನವು ನವೆಂಬರ್ ತಿಂಗಳಿನಲ್ಲೂ ದೊಡ್ಡ ಪ್ರಮಾಣದಲ್ಲಿ ಇರಲಿದೆ. ಆದರೆ ಇದು ಡಿಸೆಂಬರ್‌ನಲ್ಲಿ ತುಸು ಕಡಿಮೆ ಆಗಬಹುದು. ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಜಿಎಸ್‌ಟಿ ವರಮಾನ ಸಂಗ್ರಹ ಮತ್ತೆ ಹೆಚ್ಚಳ ಆಗಲಿದೆ ಎಂದು ಕೇಂದ್ರವು ಅಂದಾಜು ಮಾಡಿರುವುದಾಗಿ ಬಜಾಜ್ ಅವರು ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಸೀಮಾ ಸುಂಕದ ಮೂಲಕ ₹ 1.36 ಲಕ್ಷ ಕೋಟಿ, ಎಕ್ಸೈಸ್ ಸುಂಕದ ಮೂಲಕ ₹ 3.35 ಲಕ್ಷ ಕೋಟಿ ಹಾಗೂ ಜಿಎಸ್‌ಟಿ ಮೂಲಕ (ಸೆಸ್ ಸೇರಿ) ₹ 6.30 ಲಕ್ಷ ಕೋಟಿ ವರಮಾನ ಸಂಗ್ರಹ ಆಗಲಿದೆ ಎಂದು ಕೇಂದ್ರವು ಅಂದಾಜಿಸಿದೆ.

ಸೋಮವಾರದ ಉಷ್ಣಾಂಶ
27° ಗರಿಷ್ಠ 19° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಆಗಾಗ ಅಲ್ಲಲ್ಲಿ ಮಳೆಯಾಗುವ ಸಾಧ್ಯತೆ ಇದೆ

ಮುನ್ಸೂಚನೆ

ಮಂಗಳವಾರ	ಬುಧವಾರ	ಗುರುವಾರ
27° 19°	27° 19°	26° 19°

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಹದಗೆಟ್ಟ ರಸ್ತೆಯನ್ನು ಸರಿಪಡಿಸಿ

ಅಂದ್ರಹಳ್ಳಿಯ ವಿದ್ಯಮಾನ ನಗರದ 5ನೇ ಅಡ್ಡರಸ್ತೆಯು ಸಂಪೂರ್ಣವಾಗಿ ಹಾಳಾಗಿದೆ. ಪ್ರತಿದಿನ ಈ ರಸ್ತೆಯಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ಮಳೆ ಬಂದಾಗ ಕೆಸರುಮಯವಾಗುವ ಈ ರಸ್ತೆಯಲ್ಲಿ ವಾಹನ ಸವಾರರ ಪರದಾಟ ಹೇಳತೀರದು. ಒಮ್ಮೆ ಮಳೆ ಬಂದರೆ, ರಸ್ತೆ ಸಹಜ ಸ್ಥಿತಿಗೆ ಬರಲು ವಾರಗಟ್ಟಲೆ ಸಮಯ ಬೇಕು. ಈ ರಸ್ತೆಯಲ್ಲಿ ಸ್ಥಳೀಯ ನಿವಾಸಿಗಳು ಸಂಚರಿಸಲು ಹಿಂದೇಟು ಹಾಕುತ್ತಾರೆ. ರಸ್ತೆಗೆ ಡಾಂಬರು ಹಾಕಿದರೆ, ವಾಹನ ಸವಾರರು ಹಾಗೂ ಸ್ಥಳೀಯ ನಿವಾಸಿಗಳಿಗೆ ಅನುಕೂಲವಾಗಲಿದೆ.

ಸುಧಾ ಕಾಂತರಾಜು, ಅಂದ್ರಹಳ್ಳಿ

ಅಂದ್ರಹಳ್ಳಿಯ ವಿದ್ಯಮಾನನಗರದ 5ನೇ ಅಡ್ಡರಸ್ತೆಯಲ್ಲಿ ಕೆಸರಿನಲ್ಲೇ ವಾಹನಗಳು ಸಂಚರಿಸುತ್ತಿರುವುದು.

ಕೆರೆಯಂತಾದ ನಿವೇಶನ

ಸರ್ಜಾಪುರ ರಸ್ತೆಯ ದೊಡ್ಡಕನ್ನಳ್ಳಿಯ ಅಣ್ಣಯ್ಯರೆಡ್ಡಿ ಬಡಾವಣೆಯಲ್ಲಿರುವ ಖಾಲಿ ಮನೆಯೊಂದು ಪಾಳು ಬಿದ್ದಿದೆ. ಇದರ ಮಾಲೀಕರು ವಿದೇಶದಲ್ಲಿ ನೆಲೆಸಿದ್ದಾರೆ. ಈ ಮನೆಯಲ್ಲಿ ಮಳೆ ನೀರು ಸಂಗ್ರಹಗೊಂಡು, ಇಲ್ಲಿನ ಕೊಳಚೆ ನೀರು ಪಕ್ಕದ ನಿವೇಶನಕ್ಕೂ ಹರಿಯುತ್ತಿದೆ. ಈ ಸಮಸ್ಯೆ ಕುರಿತು ಪಾಲಿಕೆಯವರಿಗೂ ದೂರು ನೀಡಲಾಗಿದ್ದು, ಯಾವುದೇ ಪ್ರಯೋಜನ ಆಗಲಿಲ್ಲ.

ಮಳೆ ಬಂದಾಗ ಇಲ್ಲಿನ ನಿವಾಸಿಗಳ ಗೋಳನ್ನು ಕೇಳುವವರು ಯಾರೂ ಇಲ್ಲ. ಕೊಳಚೆ ದುರ್ವಾಸನೆಯಿಂದ ನಿವಾಸಿಗಳು ಮೂಗುಮುಚ್ಚಿ ನಡೆಯಬೇಕಾಗಿದೆ. ಪಕ್ಕದಲ್ಲೇ ಶಾಲೆಯಿದ್ದು, ಇದರಿಂದ ವಿದ್ಯಾರ್ಥಿಗಳಿಗೂ ಸಮಸ್ಯೆ ಆಗುತ್ತಿದೆ. ಪಾಲಿಕೆಯವರು ಈ ಸ್ಥಳವನ್ನು ಕೊಳಚೆಮುಕ್ತಗೊಳಿಸಲು ಕ್ರಮ ಕೈಗೊಂಡರೆ ಸ್ಥಳೀಯರಿಗೆ ಅನುಕೂಲವಾಗಲಿದೆ.

ರಾಘವೇಂದ್ರ, ದೊಡ್ಡಕನ್ನಳ್ಳಿ

ದೊಡ್ಡಕನ್ನಳ್ಳಿಯ ಅಣ್ಣಯ್ಯರೆಡ್ಡಿ ಬಡಾವಣೆಯ ನಿವೇಶನದಲ್ಲಿ ಕೊಳಚೆ ನೀರು ನಿಂತಿರುವುದು.

ಶೌಚಾಲಯದಲ್ಲಿ ಸುಲಿಗೆ

ವ್ಯಾಪಾರ ನಿಮಿತ್ತ ಕೆ.ಆರ್.ಮಾರುಕಟ್ಟೆಗೆ ಹೋಗಿದ್ದೆ. ಮೂತ್ರವಿಸರ್ಜನೆಗೆಂದು ಮಾರುಕಟ್ಟೆಯ ಒಳ ಆವರಣದಲ್ಲಿರುವ ಶೌಚಾಲಯಕ್ಕೆ ಹೋದಾಗ ಅಲ್ಲಿನ ವಾತಾವರಣ ಕಂಡು ವಾಕರಿಕೆ ಬಂತು. ಮೂತ್ರ ವಿಸರ್ಜನೆ ಉಚಿತವಿದ್ದರೂ ಅಲ್ಲಿದ್ದ ವ್ಯಕ್ತಿ ₹5 ನೀಡಬೇಕು ಎಂದು ಗದರಿಸಿದ. ಅದಕ್ಕೆ ವಿರೋಧಿಸಿದಾಗ ಅವಾಚ್ಯ ಶಬ್ಧಗಳಿಂದಲೂ ನಿಂದಿಸಿದ.

ಶೌಚಾಲಯದಲ್ಲಿ ಸ್ವಚ್ಛತೆ ಎನ್ನುವುದೇ ಇಲ್ಲ. ಸ್ಥಳೀಯ ಆರೋಗ್ಯಾಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಈ ಬಗ್ಗೆ ವಿಚಾರಿಸಿದಾಗ ಶೌಚಾಲಯವನ್ನು ಅನಧಿಕೃತವಾಗಿ ನಡೆಸುತ್ತಿರುವುದಾಗಿ ತಿಳಿಯಿತು.

ಇಲ್ಲಿಗೆ ಬರುವ ಮಹಿಳೆಯರಿಂದ ದುಪ್ಪಟ್ಟು ಹಣ ವಸೂಲಿ ಮಾಡಲಾಗುತ್ತಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಶೌಚಾಲಯದ ಸ್ಥಿತಿ ಸರಿಪಡಿಸಿ, ಇಲ್ಲಿನ ಸುಲಿಗೆಗೆ ಕಡಿವಾಣ ಹಾಕಬೇಕು.

ನರಸಿಂಹ ಮೂರ್ತಿ, ಹನುಮಂತನಗರ

ಬಸ್ ಸ್ಥಗಿತದಿಂದ ಸಮಸ್ಯೆ

ಕೆ.ಆರ್.ಮಾರುಕಟ್ಟೆಯಿಂದ ಕಾಕೋಳು ಮಾರ್ಗದಲ್ಲಿ ಸಂಚರಿಸುತ್ತಿದ್ದ 251ಎ ಬಿಎಂಟಿಸಿ ಬಸ್ ಅನ್ನು ಸ್ಥಗಿತಗೊಳಿಸಲಾಗಿದೆ.

ಪೀಣ್ಯ ದಾಸರಹಳ್ಳಿ ಮಾರ್ಗದಲ್ಲಿ ಸಂಚರಿಸುತ್ತಿದ್ದ ಏಕೈಕ ಬಸ್ ಇದಾಗಿತ್ತು. ಕಾರ್ಖಾನೆಗಳಿಗೆ ಹೋಗುತ್ತಿರುವ ಕೆಲಸಗಾರರಿಗೆ ಈ ಬಸ್ ಸಂಚಾರ ಸ್ಥಗಿತದಿಂದ ಭಾರಿ ಸಮಸ್ಯೆ ಎದುರಾಗಿದೆ. ಈ ಮಾರ್ಗದಲ್ಲಿ ಸಂಚರಿಸುತ್ತಿದ್ದ ಬಸ್ ಸೇವೆಯನ್ನು ಮತ್ತೆ ಆರಂಭಿಸಬೇಕು.

ರವಿಕುಮಾರ್, ಚಿಕ್ಕಬಾಣಾವರ

ನಾಗರಬಾವಿ ರಸ್ತೆಯಲ್ಲಿರುವ ಬಸ್ ತಂಗುದಾಣದ ಸ್ಥಿತಿ.

ಬಸ್ ತಂಗುದಾಣ ಸರಿಪಡಿಸಿ

ಜ್ಞಾನಭಾರತಿ ವಾರ್ಡ್‌ನ ಕೆಂಗುಂಟೆ ವೃತ್ತದಿಂದ ನಾಗರಬಾವಿ ಕಡೆಗೆ ಹೋಗುವ ರಸ್ತೆಯಲ್ಲಿರುವ ಬಸ್ ತಂಗುದಾಣದಲ್ಲಿ ಗುಂಡಿಗಳು ಬಿದ್ದಿವೆ. ಪ್ರಯಾಣಿಕರ ಆಶ್ರಯಕ್ಕಾಗಿ ಇರುವ ತಂಗುದಾಣದಲ್ಲಿ ದ್ವಿಚಕ್ರ ವಾಹನಗಳನ್ನು ನಿಲ್ಲಿಸಲಾಗುತ್ತದೆ. ಕುಳಿತುಕೊಳ್ಳುವ ಜಾಗದಲ್ಲಿ ಗುಂಡಿ ಬಿದ್ದು, ಗಿಡಗಂಟಿಗಳು ಬೆಳೆದಿವೆ. ಈ ದುಸ್ಥಿತಿಯಿಂದಾಗಿ ಪ್ರಯಾಣಿಕರು ಇಲ್ಲಿ ನಿಲ್ಲುವುದೇ ಇಲ್ಲ. ತಂಗುದಾಣದ ಚಾವಣಿಯೂ ಸರಿಯಾಗಿಲ್ಲ. ದಯವಿಟ್ಟು ಈ ತಂಗುದಾಣವನ್ನು ದುರಸ್ತಿಪಡಿಸಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಿ.

ತುಕಾರಾಂ, ಮಲ್ಲತ್ತಹಳ್ಳಿ

ಮಹಾಲಕ್ಷ್ಮೀ ಬಡಾವಣೆಯ ಕಮಲಾನಗರದ ರಸ್ತೆಯಲ್ಲಿ ನಿಧಾನಗತಿಯಲ್ಲಿರುವ ಚರಂಡಿ ಕಾಮಗಾರಿ.

ಚರಂಡಿ ಕಾಮಗಾರಿ ಪೂರ್ಣಗೊಳಿಸಿ

ಮಹಾಲಕ್ಷ್ಮೀ ಬಡಾವಣೆ ಸಮೀಪದ ಕಮಲಾನಗರ ಒಂದನೇ ಮುಖ್ಯ ರಸ್ತೆಯಲ್ಲಿ ಚರಂಡಿ ಕಾಮಗಾರಿ ಆರಂಭಿಸಿ ಹಲವು ದಿನಗಳು ಕಳೆದಿದ್ದು, ಈವರೆಗೆ ಮುಗಿದಿಲ್ಲ. ಕಿರಿದಾದ ಈ ರಸ್ತೆಯಲ್ಲಿ ಬಸ್ ನಿಲ್ದಾಣ, ಶಾಲೆ ಹಾಗೂ ತರಕಾರಿ ಮಾರುಕಟ್ಟೆಗಳಿವೆ. ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿರುವುದರಿಂದ ಸಾರ್ವಜನಿಕರಿಗೆ ಸಮಸ್ಯೆ ಎದುರಾಗಿದೆ. ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡಿ.

ಮಂಜುಳಾ, ಬಸವೇಶ್ವರ ನಗರ ನಿವಾಸಿ

ಜಂಬೂಸವಾರಿ ದಿಣ್ಣೆಯಿಂದ ಅಂಜನಾಪುರಕ್ಕೆ ಸಂಪರ್ಕ ಕಲ್ಪಿಸುವ ಗುಂಡಿಗಳ ರಸ್ತೆ.

ರಸ್ತೆಗೆ ಡಾಂಬರು ಹಾಕಿಸಿ

ಜೆ.ಪಿ.ನಗರದ ಜಂಬೂಸವಾರಿ ದಿಣ್ಣೆಯಿಂದ ಅಂಜನಾಪುರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಒಂದೂವರೆ ವರ್ಷದಿಂದ ಹಾಳಾದ ಸ್ಥಿತಿಯಲ್ಲೇ ಇದೆ. ರಸ್ತೆಗೆ ಮೊದಲು ಹಾಕಲಾಗಿದ್ದ ಡಾಂಬರು ಕಿತ್ತುಹೋಗಿದೆ. ಇದರಿಂದ ರಸ್ತೆಯುದ್ದಕ್ಕೂ ದೊಡ್ಡ ಗುಂಡಿಗಳು ಬಿದ್ದು, ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿದೆ.

ಒಮ್ಮೆ ಇದೇ ರಸ್ತೆಯಲ್ಲಿ ವಾಹನದಿಂದ ಬಿದ್ದು ಆಸ್ಪತ್ರೆಯಲ್ಲಿ ಕೆಲವು ದಿನಗಳವರೆಗೆ ವಿಶ್ರಾಂತಿ ಪಡೆಯಬೇಕಾಯಿತು. ಮಳೆ ಬಂದರಂತೂ ಇದು ರಸ್ತೆಯ ಸ್ವರೂಪದಲ್ಲಿ ಇರುವುದಿಲ್ಲ. ಇದೇ ರಸ್ತೆಯಲ್ಲಿ ಶಾಲೆಯಿದ್ದು, ನೂರಾರು ವಿದ್ಯಾರ್ಥಿಗಳು ಪ್ರತಿದಿನ ಸಂಚರಿಸುತ್ತಾರೆ. ಮಕ್ಕಳ ಹಿತದೃಷ್ಟಿಯಿಂದಾದರೂ ಈ ರಸ್ತೆಗೆ ಡಾಂಬರು ಭಾಗ್ಯ ಕಲ್ಪಿಸಿ.

ನಾಗರಾಜ ಬಾಬು, ಜೆ.ಪಿ.ನಗರ ನಿವಾಸಿ

ವಿವಿಧೆಡೆ ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಇದೇ 23ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಬಿಎಚ್‌ಇಎಲ್ ಲೇಔಟ್, ಕೃಷ್ಣ ಗಾರ್ಡನ್, ಡಿ.ಬಿ. ಕಲ್ಲು, ಅಂದ್ರಹಳ್ಳಿ, ಟಿ.ಜಿ.ಪಾಳ್ಯ, ಆರ್‌ಟಿಒ ಕಚೇರಿ ಮುಖ್ಯ ರಸ್ತೆ, ಗಂಗಾನಗರ, ಯಮುನಾನಗರ ಸ್ಕೂಲ್, ಗಾಳಿ ಆಂಜನೇಯ ದೇವಸ್ಥಾನ, ವಿಜಯನಗರ, ಮಾರೇನಹಳ್ಳಿ, ಗೋವಿಂದರಾಜ ನಗರ, ಲಕ್ಷ್ಮಣ ನಗರ, ಸಂಜೀವಿನಿ ನಗರ, ಹೆಗ್ಗನಹಳ್ಳಿ, ಸುಂಕದಕಟ್ಟೆ, ಪ್ರಶಾಂತನಗರ, ಅಮರಜ್ಯೋತಿ ನಗರ, ಪಂಚಶೀಲ ನಗರ, ಮೂಡಲಪಾಳ್ಯ, ಎಸ್‌ವಿಜಿ ನಗರಗಳಲ್ಲಿ ವಿದ್ಯುತ್ ಇರುವುದಿಲ್ಲ.

ದಿ.ಪುನೀತ್ ರಾಜ್‌ಕುಮಾರ್‌ಗೆ ರಂಗನಮನ

‘ಹೊಸ ಹಾದಿ ತೋರಿಸಿ ಹೋದ ಅಪ್ಪು’

ಬೆಂಗಳೂರು: ‘ಅಪ್ಪು ಜನಿಸಿದಾಗ ಆಸ್ಪತ್ರೆಗೆ ಹೋಗಿ ಆತನನ್ನು ಎರಡೂ ಕೈಗಳಲ್ಲಿ ಎತ್ತಿ ಆಡಿಸಿದ್ದೆ. ಅವನ ನಟನೆ ನೋಡಲು ಚಿತ್ರೀಕರಣದ ಸ್ಥಳಗಳಿಗೂ ಹೋಗುತ್ತಿದ್ದೆ. ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸುವಾಗಲೂ ಜೊತೆಗೇ ಇದ್ದೆ. ಆತ ನನ್ನ ಪಾಲಿಗೆ ತಮ್ಮನಲ್ಲ. ಮಗನಂತಿದ್ದ...’

ನಟ ರಾಘವೇಂದ್ರ ರಾಜ್‌ಕುಮಾರ್ ಮನದಂತರಾಳದಿಂದ ಹೊಮ್ಮಿದ ನುಡಿಗಳಿವು.‘ಅಪ್ಪು ನಮಗೆಲ್ಲಾ ಹೊಸ ದಾರಿ ತೋರಿಸಿಕೊಟ್ಟಿದ್ದಾನೆ. ಬದುಕಿರುವವರೆಗೂ ಆತನ ಹೆಜ್ಜೆಯನ್ನೇ ಹಿಂಬಾಲಿಸುತ್ತೇನೆ’ ಎಂದು ಅವರು ತಿಳಿಸಿದರು.

ಸಾಹಿತಿ ಮತ್ತು ಕಲಾವಿದರ ವೇದಿಕೆಯು ರಂಗ ವಿಜಯಾ ಸಂಘಟನೆಯ ಸಹಯೋಗದಲ್ಲಿ ನಟ ದಿ. ಪುನೀತ್ ರಾಜ್‌ಕುಮಾರ್ ಅವರಿಗೆ ರಂಗನಮನ ಸಲ್ಲಿಸಲು ಹಮ್ಮಿಕೊಂಡಿದ್ದ ‘ನಿನ್ನಂಥೋರ್ ಯಾರೂ ಇಲ್ವಲ್ಲೋ ಈ ಲೋಕದಾ ಮ್ಯಾಲೆ’ ಕಾರ್ಯಕ್ರಮದಲ್ಲಿ ಭಾನುವಾರ ಅವರು ಪುನೀತ್ ಜೊತೆಗಿನ ಒಡನಾಟವನ್ನು ಹಂಚಿಕೊಂಡರು.

‘ಅಪ್ಪು ನಿಧನವಾದ ದಿನ ದೂರವಾಣಿ ಕರೆಯೊಂದು ಬಂದಿತ್ತು. ಪುನೀತ್‌ಗೆ ಹುಷಾರಿಲ್ಲ ಬೇಗನೇ ಹೊರಟು ಆಸ್ಪತ್ರೆಗೆ ಬಂದು ಬಿಡಿ ಎಂದು ತಿಳಿಸಿದರು. ಏನೋ ತೊಂದರೆಯಾಗಿರಬಹುದು ಎಂದು ಒಳ ಮನಸ್ಸು ಹೇಳುತ್ತಲೇ ಇತ್ತು. ಆಸ್ಪತ್ರೆ ತಲುಪಿದ ಬಳಿಕವೇ ಸಾವಿನ ವಿಚಾರ ಗೊತ್ತಾಯಿತು. ಅಲ್ಲಿಂದ ಮೂರು ದಿನ ಆತ ಪರಮಾತ್ಮನ ಹಾಗೆ ತಣ್ಣಗೆ ಮಲಗಿದ್ದ. ಇಡೀ ಸರ್ಕಾರ, ಪೊಲೀಸರು ಹಾಗೂ ಮಾಧ್ಯಮದವರು ಸುತ್ತುವರಿದಿದ್ದರು’ ಎಂದು ತಿಳಿಸಿದರು.

‘ಅಪ್ಪುವಿನ ಅಗಲಿಕೆಯ ನೋವು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದ ಅಭಿಮಾನಿಯೊಬ್ಬನ ಮನೆಗೆ ಭೇಟಿ ನೀಡಿದ್ದೆ. ಮನೆಯವರನ್ನು ಸಂತೈಸಲು ಹೋಗಿದ್ದ ನನಗೆ ಅವರೇ ಸಮಾಧಾನ ಹೇಳಿದ್ದರು. ಮಗನನ್ನು ಕಳೆದುಕೊಂಡಿದ್ದಕ್ಕಿಂತಲೂ ಅಪ್ಪು ತೀರಿಕೊಂಡ ವಿಚಾರ ಕೇಳಿ ಆಘಾತವಾಗಿದೆ ಎಂದರು. ಜನ ಅವನ ಮೇಲೆ ಇಟ್ಟಿರುವ ಪ್ರೀತಿಗೆ ಅದು ಸಾಕ್ಷಿ’ ಎಂದು ತಿಳಿಸಿದರು.

ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ, ‘ಅಪ್ಪು ಹೆಸರು ಕೇಳಿದಾಕ್ಷಣ ಜನರ ಕಣ್ಣುಗಳು ಈಗಲೂ ಹನಿಗೂಡುತ್ತವೆ. ಹಿರಿಯರನ್ನು ಕಂಡೊಡನೆ ಆತ ಶಿರಬಾಗಿ ನಮಿಸುತ್ತಿದ್ದ ರೀತಿ ಕಣ್ಣೆದುರೇ ಬರುತ್ತದೆ’ ಎಂದರು.

ಸಾಹಿತಿ ಬರಗೂರು ರಾಮಚಂದ್ರಪ್ಪ, ‘ಡಾ.ರಾಜ್‌ಕುಮಾರ್ ಅವರಲ್ಲಿದ್ದ ಸರಳತೆ, ಸೌಜನ್ಯ, ಸ್ನೇಹಭಾವ ಅಪ್ಪು ಅವರಲ್ಲಿತ್ತು. ಪ್ರಚಾರವಿಲ್ಲದೆ ಜನಸೇವೆ ಮಾಡುವುದು ಹೇಗೆ ಎಂಬುದನ್ನು ರಾಜ್ ಕುಟುಂಬ ತೋರಿಸಿಕೊಟ್ಟಿದೆ. ಪುನೀತ್ ನಿಧನ ಸಾಮಾಜಿಕ ದುರಂತ’ ಎಂದು ಹೇಳಿದರು.

ಗಾಯಕಿ ಬಿ.ಜಯಶ್ರೀ, ‘ಅಪ್ಪುಗೆ ರಾಜಣ್ಣ ನೆರಳಾಗಿ ನಿಂತಿದ್ದರು ಎನಿಸುತ್ತಿದೆ. ಸಾವಿನ ನಂತರ ಅಪ್ಪು ಎಲ್ಲರ ಹೃದಯವನ್ನೂ ಅಪ್ಪಿಕೊಂಡಿದ್ದಾನೆ’ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ‘ಯಾರಾದರೂ ಹೊಗಳಿದರೆ ನಾಚಿಕೊಳ್ಳುತ್ತಿದ್ದ ಅಪ್ಪು ಸ್ವಭಾವ ನನಗಿಷ್ಟ. ಎಲ್ಲರೂ ನಮ್ಮವರೇ ಎಂಬ ಶರಣ ತತ್ವವನ್ನು ಮೈಗೂಡಿಸಿಕೊಂಡಿದ್ದರು’ ಎಂದರು.

ನಟ ಪ್ರಕಾಶ್ ಬೆಳವಾಡಿ, ‘ಅಪ್ಪು ಅವರಿಗೆ ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವ ಆಸೆ ಇತ್ತು. ಒಟಿಟಿ ವೇದಿಕೆಯಲ್ಲಿ ಕನ್ನಡದ ಚಿತ್ರಗಳಿಗೂ ಬೇಡಿಕೆ ತಂದುಕೊಡುವ ದಿಸೆಯಲ್ಲಿ ಕೆಲಸ ಮಾಡುತ್ತಿದ್ದರು’ ಎಂದು ಸ್ಮರಿಸಿದರು.

ನಟಿ ಸುಧಾ ಬೆಳವಾಡಿ, ‘ಅಪ್ಪು ಅಂದಾಕ್ಷಣ ನೆನಪಾಗುವುದು ನಿಷ್ಕಲ್ಮಶ ನಗು. ಎಲ್ಲಾ ಅಮ್ಮಂದಿರಿಗೂ ಇಂಥ ಮಗ ಇರಬಾರದೇ ಎಂಬ ವ್ಯಕ್ತಿತ್ವ. ಅಪ್ಪು ಮತ್ತೆ ಹುಟ್ಟಿ ಬರಲಿ’ ಎಂದರು.

ನಿರ್ದೇಶಕ ಟಿ.ಎನ್.ಸೀತಾರಾಂ, ‘ಕರ್ನಾಟಕದ ಮನೆಯ ಮಗು ನಿಧನವಾಗಿದೆ. ಆ ಸಂಕಟವನ್ನು ತಡೆದುಕೊಳ್ಳುವುದಕ್ಕೆ ಯಾರಿಗೂ ಆಗುತ್ತಿಲ್ಲ. ಇಡೀ ರಾಜ್ಯ ಈಗಲೂ ದುಃಖದ ಮಡುವಿನಿಂದ ಹೊರಬಂದಿಲ್ಲ’ ಎಂದರು.

‘ನಾವು ಮಾಡುವ ಸಿನಿಮಾ ಗಳು ಜಗತ್ತಿನಾದ್ಯಂತ ಜನ ನೋಡುವಂತಾಗಬೇಕು ಎಂಬ ಒಳನೋಟ ಅವರಿಗಿತ್ತು. ಆ ಬಗ್ಗೆ ಆಗಾಗ ಮಾತನಾಡುತ್ತಿದ್ದರು’ ಎಂದು ನಿರ್ದೇಶಕ ಬಿ.ಸುರೇಶ್ ಸ್ಮರಿಸಿದರು.

ನಟಿ ಗಿರಿಜಾ ಲೋಕೇಶ್ ಅವರು ಪುನೀತ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ನಾಗತಿಹಳ್ಳಿ ಚಂದ್ರಶೇಖರ, ಬಿ.ಜಯಶ್ರೀ, ಪ್ರಕಾಶ್ ಬೆಳವಾಡಿ, ಬರಗೂರು ರಾಮಚಂದ್ರಪ್ಪ, ರಾಘವೇಂದ್ರ ರಾಜ್‌ಕುಮಾರ್, ಟಿ.ಎಸ್.ನಾಗಾಭರಣ, ಎ.ಜೆ. ಸದಾಶಿವ ಇದ್ದಾರೆ —ಪ್ರಜಾವಾಣಿ ಚಿತ್ರ

> **ಲೋಕಜ್ಞಾನದೊಂದಿಗೆ ಆದರ್ಶ ಜೀವನ ನಡೆಸುತ್ತಿದ್ದರು. ವ್ಯವಹಾರಿಕ ವಿಚಾರದಲ್ಲೂ ಅಗಾಧ ಜ್ಞಾನ ಹೊಂದಿದ್ದರು.**
> **ಜಯರಾಮ್ ರಾಯಪುರ,** ಲೇಖಕ

> **ಸಿನಿಮಾವಷ್ಟೇ ಅಲ್ಲ, ನಿಜ ಜೀವನದಲ್ಲೂ ಅಪ್ಪು ಹೀರೊ ಆಗಿದ್ದರು. ಪರೋಪಕಾರದ ಈ ನಂದಾದೀಪ ಸದಾ ಬೆಳಗುತ್ತಿರಲಿ**
> **ಎಚ್.ಎಸ್.ಶಿವಪ್ರಕಾಶ್,** ಚಿಂತಕ

> **ಅಪ್ಪುವಿನ ಸಾವು ಪ್ರತಿ ಮನೆಯನ್ನೂ ತಟ್ಟಿದೆ. ಕಲಿಯುವ ಆಸೆ ಅವರಲ್ಲಿ ಮಡುಗಟ್ಟಿತ್ತು. ಅವರ ಆದರ್ಶ ಮುಂದುವರಿಸುವುದೇ ನಮ್ಮೆದುರಿರುವ ದಾರಿ**
> **ನಾಗತಿಹಳ್ಳಿ ಚಂದ್ರಶೇಖರ್,** ನಿರ್ದೇಶಕ

> **ತಾನು ಡಾ.ರಾಜ್‌ಕುಮಾರ್ ಮಗ ಎಂಬ ಅಹಂ ಇಲ್ಲದೆಯೇ ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡು ಸಿನಿ ರಂಗದಲ್ಲಿ ಪ್ರಜ್ವಲಿಸಿದ ತಾರೆ. ಅಪ್ಪು ಎಂದಿಗೂ ಅಮರ**
> **ಗಿರಿಜಾ ಲೋಕೇಶ್,** ನಟಿ

ಪಬ್‌ಜಿ ಆಡುತ್ತಿದ್ದ ಬಾಲಕರು ರೈಲಿನಡಿಗೆ ಬಿದ್ದು ಸಾವು

ಮಥುರಾ (ಪಿಟಿಐ): ಇಲ್ಲಿನ ಲಕ್ಷ್ಮಿನಗರದಲ್ಲಿ ಭಾನುವಾರ ರೈಲು ಹಳಿಯಲ್ಲಿ ಪಬ್‌ಜಿ ಆಡುತ್ತಿದ್ದ ಇಬ್ಬರು ಬಾಲಕರು ರೈಲು ಹರಿದು ಮೃತಪಟ್ಟಿದ್ದಾರೆ.

‘ಇಬ್ಬರೂ 10ನೇ ತರಗತಿ ವಿದ್ಯಾರ್ಥಿಗಳು. ಘಟನಾ ಸ್ಥಳದಲ್ಲಿ ಎರಡು ಮೊಬೈಲ್‌ಗಳು ಸಿಕ್ಕಿವೆ’ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಸಿ.ವೀರಣ್ಣ ಅವರ ‘ರುದ್ರ ಭಾರತ’ ಕೃತಿ ಬಿಡುಗಡೆ: ನಾ.ದಾಮೋದರ ಶೆಟ್ಟಿ, ಅನುವಾದ–ಸಿ.ವಿ.ವೇಣುಗೋಪಾಲ್, ಅತಿಥಿ–ಸಂಪಿಗೆ ತೋಂಟದಾರ್ಯ, ಆಯೋಜನೆ–ಕರ್ನಾಟಕ ಸಾಹಿತ್ಯ ಪರಿಷತ್ತು, ಸ್ಥಳ–ಪಾಲಿಕೆ ಸೌಧ, ಎಂ.ಸಿ. ಬಡಾವಣೆ, ವಿಜಯನಗರ, ಬೆಳಿಗ್ಗೆ 10.30

‘ಕಮಲಾ ಹಂಪನಾ ಸಾಹಿತ್ಯ ಪುರಸ್ಕಾರ’ ಪ್ರದಾನ:ಬರಗೂರು ರಾಮಚಂದ್ರಪ್ಪ, ಕಮಲಾ ಹಂಪನಾ ಅವರ ‘ಶರ್ಮಿಳಾ’ ಕಾದಂಬರಿ ಬಿಡುಗಡೆ, ಅಧ್ಯಕ್ಷತೆ–ಸಿ. ಸೋಮಶೇಖರ್, ಪುರಸ್ಕೃತರು–ನಿತಿನ್ ಶಾ, ಹರಿಹರ ಪ್ರಿಯ, ವಿಜಯಾ ಸುಬ್ಬರಾಜ್, ಕೆ.ರಾಜಕುಮಾರ್, ಅಜಿತ ಮುರಗುಂದಿ, ಶಾಂತಿನಾಥ ಶಿರಹಟ್ಟಿ, ಆಯೋಜನೆ–ಕಮಲಾ ಹಂಪನಾ ಸಾಹಿತ್ಯ ಪುರಸ್ಕಾರ ವೇದಿಕೆ, ಸಪ್ನ ಬುಕ್‌ಹೌಸ್, ಸ್ಥಳ–ಗಾಂಧಿಭವನ, ಬೆಳಿಗ್ಗೆ 10.30

ಶಾಂತಾ ಜಯಾನಂದ್ ಅವರ **‘ಹುದುಗಿಟ್ಟ ಭಾವಗಳ ಮತ್ತೆ ನುಡಿಸಿ’ ಪುಸ್ತಕ ಬಿಡುಗಡೆ:**ಜಯಂತ ಕಾಯ್ಕಿಣಿ, ಅಧ್ಯಕ್ಷತೆ–ಟಿ.ಪಿ.ಅಶೋಕ, ಕೃತಿ ಪರಿಚಯ–ರಾಜಶೇಖರಯ್ಯ ಮಠಪತಿ, ಅತಿಥಿಗಳು–ಬಿ.ಆರ್.ಲಕ್ಷ್ಮಣ ರಾವ್, ಬೇಲೂರು ರಘುನಂದನ್, ಆಯೋಜನೆ–ಕಾಜಾಣ ಪ್ರಕಾಶನ, ಸ್ಥಳ–ಚಿತ್ರಕಲಾ ಪರಿಷತ್ ಆವರಣ, ಬೆಳಿಗ್ಗೆ 10.30

ಅನಂತಪಥ ಸಂಚಿಕೆ ಬಿಡುಗಡೆ:ಲೇಖಕ ಬಾಬು ಕೃಷ್ಣಮೂರ್ತಿ, ಆಯೋಜನೆ–ಅನಂತಕುಮಾರ್ ಪ್ರತಿಷ್ಠಾನ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ಕನಕ ಜಯಂತಿ:ಕನಕದಾಸರ ಕೀರ್ತನೆಗಳ ಗಾಯನ ಹಾಗೂ ಮೋಹನ ತರಂಗಿಣಿ ನೃತ್ಯ ರೂಪಕ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 5.30

ಪ್ರೀತಿಯ ‘ಅಪ್ಪು’ಗೆ ನೆನಪಿನ ಅಪ್ಪುಗೆ: ಗೀತನಮನ–ದೊಡ್ಡರಂಗೇಗೌಡ, ಜಯಂತ ಕಾಯ್ಕಿಣಿ, ನಾಗೇಂದ್ರ ಪ್ರಸಾದ್, ಕವಿರಾಜ್, ನುಡಿನಮನ–ಜೋಗಿ, ಜಯತೀರ್ಥ, ವಸಿಷ್ಠ ಸಿಂಹ, ಶಶಿಧರ ಅಡಪ, ಅಧ್ಯಕ್ಷತೆ–ನಾಗತಿಹಳ್ಳಿ ಚಂದ್ರಶೇಖರ್, ಅತಿಥಿಗಳು–ಟೆಲಿಕಾಂ ದತ್ತಾತ್ರೇಯ, ಎನ್.ಆರ್. ಹೆಗಡೆ, ಆಯೋಜನೆ–ರಂಗಚಂದಿರ ಮತ್ತು ಟೆಂಟ್ ಸಿನಿಮಾ, ಸ್ಥಳ–ನಯನ ಸಭಾಂಗಣ, ಜೆ.ಸಿ.ರಸ್ತೆ, ಸಂಜೆ 6.30

CONNECT ಕ್ಲಾಸಿಫೈಡ್ಸ್

CONCRETE PAVER BLOCKS FOR SALE
60MM HYDRAULIC PRESSED MIN STRENGTH OF 50+ (N/mm2)
Mfd. by: COBBLEWAY
Call: 9845021227, 9880203114, 9663300006
SUITABLE FOR HEAVY TRUCK MOVEMENT AREAS LIKE WAREHOUSES, GODOWNS, INDUSTRIAL SHEDS, APARTMENTS AND LAYOUT ROADS, ETC.
ROUNAQH

ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಮಾರಾಟ
ಕಾಂಚೀಪುರಂ ಎ.ಜಿ. ಬಾಬು ಸಾಹ್ ರೇಷ್ಮೆ ಸೀರೆ ವ್ಯಾಪಾರಿಗಳು
ದಿ ಕೆನರಾ ಯೂನಿಯನ್
ನಂ. 42, 8ನೇ ಮೈನ್, ಕೆನರಾ ಯೂನಿಯನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003
ಮೊ. : 6385697571
ದಿನಾಂಕ: 22,23,24,25,26 ಮತ್ತು 27ನೇ ನವೆಂಬರ್ 2021
ಕೊನೆಯ ದಿನ ಸಂಜೆ 5–00 ಗಂಟೆಗೆ ಮುಕ್ತಾಯ
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರುಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
At a time only 50 persons are allowed
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ ಎ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

Business to Business

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

Others

PETROL PUMP Dealership Know complete process to Open a New Petrol Pump in India Contact us 9163283658

EDUCATIONAL

Admission

ONE SITTING: LL.B (3&5 Years, Can Practice, Limited Seats) Also B.Tech/ Diploma/ MBA/ MCA/ BBA/ BCA/ B.Sc/ B.Com/ PU/ SSLC. Asha Institute: Bangalore. Ph: 9448460103/ 7093438248

BUILDERS ESSENTIAL

Building Contractors

WE CONSTRUCT Your Projects, Residential Commercial and Interior's Reasonable Rates in time Completion. 9481183707

REAL ESTATE SELLING

House

Koramangala

AVAILABLE FOR sale 4 BHK West facing house, 3000 sft builton '50x75ft' plot in Koramangala 3rd block. Quiet location. Call Rajender 9886111960

JOB OPPORTUNITIES

General

IATA TRAVEL Agency urgently required International & Domestic Air Ticketing counter staff and VISA consultant with minimum experience of 4 to 5-yrs. Send resume to E-mail: unextravels@gmail.com

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Ltd Company in around Rajajinagar Contact: 9108458798/ 23384085

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/7676760399

Wanted

WANTED FEMALE Office Assistant Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Classifieds
Book Your Classifieds Ads
Online Log in to dhclassifieds.com
For More Details Call 9880856233 • 9886213331
Email: Santhoshkumar@deccanherald.co.in

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.
Tender Notification
The Karnataka State Cricket Association, M. Chinnaswamy Stadium, Cubbon Road, Bangalore, invites sealed tenders from GST Compliant, registered class I and above KPWD/CPWD/Equivalent contractors who have completed similar work, for proposed construction of entrance canopy, pergola, tensile fabric, STP & allied works for KSCA Cricket Academy at Alur.
The details of issue/submission of tender document are as follows :-
1. Name of work :- Proposed construction of entrance canopy, pergola, tensile fabric, STP & allied works for KSCA Cricket Academy at Alur.
2. Estimated Cost :- Rs. 1.60 Crores
3. Earnest Money Deposit :- Rs. 3.20 Lakhs should be enclosed in the technical bid cover
4. Cost of tender form :- Rs.15,000/- plus GST (Non Refundable)
5. Date of issue of tender form :- 23/11/2021 to 13/12/2021
6. Last date of submission of filled tender form two covers bid system :- 22/12/2021 before 4.30 p.m (Technical & Commercial Separately)
Technical bid will be opened on same day at 5.00 p.m. Any delay will be intimated.
7. Completion of work by :- 3 (Three) months from the date of work order
Tender documents may be obtained from the Office of the KSCA, by submitting a requisition in the company's letter head between 11.00 a.m to 5.00 p.m on any working days. For any clarification please contact Mr.H.A.Venkatesprasad , AGM Civil Engineering Dept , Mobile No. 9945604515/8150900022
Hon. Secretary, KSCA

ಸ್ವಚ್ಛ ಸರ್ವೇಕ್ಷಣ್ ಸರ್ವೆ 2021: ಕಸಮುಕ್ತ ನಗರ ವಿಭಾಗದಲ್ಲಿ ಶೂನ್ಯ ಅಂಕಗಳಿಕೆ

ಶ್ರೇಯಾಂಕ ಸುಧಾರಿಸಿಕೊಂಡ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಚ್ಛ ನಗರಗಳನ್ನು ಗುರುತಿಸುವ ಸ್ವಚ್ಛ ಸರ್ವೇಕ್ಷಣ್ ಸಮೀಕ್ಷೆ 2021ರಲ್ಲಿ ಬಿಬಿಎಂಪಿಯು ಶ್ರೇಯಾಂಕವನ್ನು ತುಸು ಸುಧಾರಿಸಿಕೊಂಡಿದೆ. 2020ರ ಸಮೀಕ್ಷೆಯಲ್ಲಿ 10 ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ 47 ನಗರಗಳಲ್ಲಿ 37ನೇ ಸ್ಥಾನ ಪಡೆದಿದ್ದ ಪಾಲಿಕೆ ಈ ಬಾರಿ 48 ನಗರಗಳಲ್ಲಿ 28ನೇ ಸ್ಥಾನಗಳಿಸಿದೆ.

ಈ ಸಲದ ಸ್ಪರ್ಧೆಯಲ್ಲಿ 'ಪ್ರೇರಕ್ ದೌಡ್ ಸಮ್ಮಾನ್' ವರ್ಗದಲ್ಲಿ ದಿವ್ಯಾ (ಪ್ಲಾಟಿನಂ), ಅನುಪಮ (ಚಿನ್ನ), ಉಜ್ವಲ (ಬೆಳ್ಳಿ), ಉದಿತ್ (ಕಂಚು) ಹಾಗೂ ಆರೋಹಿ (ಭರವಸೆದಾಯಕ) ಎಂಬ ಐದು ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. ಆರು ಸೂಚ್ಯಂಕಗಳನ್ನು ಆಧರಿಸಿ ಈ ವರ್ಗೀಕರಿಸಲಾಗಿತ್ತು. ಕಸವನ್ನು ಹಸಿ, ಒಣ ಹಾಗೂ ಅಪಾಯಕಾರಿ ಎಂದು ವಿಂಗಡಿಸುವುದು, ಹಸಿ ಕಸದಲ್ಲಿ ಸಂಸ್ಕರಣೆಗೆ ಒಳಗಾಗುವ ಕಸದ ಪ್ರಮಾಣ, ಹಸಿ ಮತ್ತು ಒಣ ಕಸಗಳ ಸಂಸ್ಕರಣೆ ಮತ್ತು ಮರುಬಳಕೆ, ಕಟ್ಟಡ ತ್ಯಾಜ್ಯಗಳ ಸಂಸ್ಕರಣೆ, ಭೂಭರ್ತಿ ಕೇಂದ್ರಕ್ಕೆ ತಲುಪುವ ಕಸದ ಪ್ರಮಾಣ ನಗರದ ನೈರ್ಮಲ್ಯ ಗುಣಮಟ್ಟ ಆಧರಿಸಿ ಈ ಪ್ರಶಸ್ತಿಗೆ ಆಯ್ಕೆ ನಡೆದಿದೆ. ಇದರಲ್ಲಿ ಯಾವ ವಿಭಾಗದಲ್ಲೂ ಬಿಬಿಎಂಪಿ ಸ್ಥಾನ ಪಡೆದಿಲ್ಲ.

ಸ್ವಚ್ಛ ಸರ್ವೇಕ್ಷಣ್ ಸರ್ವೆ 2021ರ ವೇಗವಾಗಿ ಸಾಗುತ್ತಿರುವ ಮಹಾನಗರಗಳ ವಿಭಾಗದಲ್ಲಿ (ಫಾಸ್ಟೆಸ್ಟ್ ಮೂವರ್ ಮೆಗಾ ಸಿಟಿ) ಬಿಬಿಎಂಪಿ 'ಸ್ವಚ್ಛ ನಗರ' ಗೌರವಕ್ಕೆ ಪಾತ್ರವಾಗಿದ್ದು, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ನವದೆಹಲಿಯಲ್ಲಿ ಶನಿವಾರ ಏರ್ಪಡಿಸಿದ್ದ ಸ್ವಚ್ಛ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಆಯುಕ್ತ ಗೌರವ ಗುಪ್ತ ಅವರು ಸಚಿವಾಲಯದ ಕಾರ್ಯದರ್ಶಿ ದುರ್ಗಾಶಂಕರ್ ಮಿಶ್ರಾ ಅವರಿಂದ ಪ್ರಮಾಣಪತ್ರ ಸ್ವೀಕರಿಸಿದರು. ಬಿಬಿಎಂಪಿ ವಿಶೇಷ ಆಯುಕ್ತ (ಕಸ ನಿರ್ವಹಣೆ) ಡಾ. ಹರೀಶ್ ಕುಮಾರ್ (ಬಲದಿಂದ ಎರಡನೆಯವರು), ಜಂಟಿ ಆಯುಕ್ತ ಸರ್ಫರಾಜ್ ಖಾನ್ ಇದ್ದಾರೆ.

ಈ ಬಾರಿಯ ಸ್ಪರ್ಧೆಯಲ್ಲಿ ಪಾಲಿಕೆಗಳ ಸೇವಾ ಗುಣಮಟ್ಟದ ಸುಧಾರಣೆ (ಗರಿಷ್ಠ 2400 ಅಂಕ), ಪ್ರಮಾಣೀಕರಣ (ಗರಿಷ್ಠ 1800 ಅಂಕ) ಹಾಗೂ ನಾಗರಿಕರ ಪ್ರತಿಕ್ರಿಯೆ (ಗರಿಷ್ಠ 1800) ಸೇರಿದಂತೆ ಒಟ್ಟು 6000 ಅಂಕಗಳನ್ನು ನಿಗದಿಪಡಿಸಲಾಗಿತ್ತು. ಇದರಲ್ಲಿ ಬಿಬಿಎಂಪಿ ಒಟ್ಟು 3585.5 ಅಂಕಗಳನ್ನು ಪಡೆದಿದೆ. ರಾಷ್ಟ್ರೀಯ ಸರಾಸರಿಗಿಂತ (2,072) ಹಾಗೂ ರಾಜ್ಯದ ಸರಾಸರಿಗಿಂತ (1,530) ಬಿಬಿಎಂಪಿ ಮುಂದಿದೆ. ಈ ಬಾರಿಯೂ 'ಕಸ ಮುಕ್ತ ನಗರ' (ಜಿಎಫ್‌ಸಿ) ವಿಭಾಗದಲ್ಲಿ ಶೂನ್ಯ ಸಾಧನೆ ಮಾಡಿರುವುದು ಬಿಬಿಎಂಪಿ ಸ್ವಚ್ಛತಾ ಸಮೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುವ ಕನಸಿಗೆ ಕೊಳ್ಳಿ ಇಟ್ಟಿದೆ.

ಪ್ರಮಾಣೀಕರಣ ವಿಭಾಗದಲ್ಲಿ ಬಯಲು ಬಹಿರ್ದೆಸೆ ಮುಕ್ತಗೊಳಿಸುವ ಕಾರ್ಯಗಳಿಗೆ 500 ಅಂಕ ನಿಗದಿಪಡಿಸಲಾಗಿದೆ. ಒಡಿಎಫ್ ಪ್ಲಸ್ ಹಾಗೂ ಒಡಿಎಫ್ ಪ್ಲಸ್ ಪ್ಲಸ್ ಶ್ರೇಯವನ್ನು 2020ರಲ್ಲೇ ಪಡೆದಿತ್ತು. ಈ ಬಾರಿ ಕಸ ಮುಕ್ತ ನಗರ ವಿಭಾಗದಲ್ಲಿ ಅಂಕ ಗಳಿಸುವ ಅವಕಾಶ ಬಿಬಿಎಂಪಿಗೆ ಇತ್ತು. ಆದರೆ, ಈ ವಿಭಾಗದಲ್ಲಿ ಯಾವುದೇ ಅಂಕ ಸಿಕ್ಕಿಲ್ಲ. ಹಾಗಾಗಿ ಈ ವಿಭಾಗದ 1800 ಅಂಕಗಳಲ್ಲಿ ಕೇವಲ 500 ಅಂಕಗಳಿಗಷ್ಟೇ ಬಿಬಿಎಪಿ ತೃಪ್ತಿಪಟ್ಟುಕೊಳ್ಳಬೇಕಾಯಿತು.

ಬಿಬಿಎಂಪಿಗೆ ಹೆಚ್ಚು ಅಂಕ ಸಿಕ್ಕಿರುವುದು (1,933.10) ಸೇವಾ ಗುಣಮಟ್ಟ ಸುಧಾರಣೆ ವಿಭಾಗದಲ್ಲಿ. ಈ ಸಾಧನೆಯಿಂದಾಗಿ ಕಳೆದ ಸಾಲಿಗಿಂತ ತುಸು ಉತ್ತಮ ಸಾಧನೆ ತೋರಿಸಲು ಸಾಧ್ಯವಾಗಿದೆ.

ನಾಗರಿಕರ ಪ್ರತಿಕ್ರಿಯೆಗೆ ಈ ಬಾರಿ ಗರಿಷ್ಠ 1800 ಅಂಕ ಪಡೆಯುವ ಅವಕಾಶವಿತ್ತು. ಅದರಲ್ಲಿ ಬಿಬಿಎಂಪಿಗೆ 1152.45 ಅಂಕಗಳು ಸಿಕ್ಕಿವೆ. ಕಳೆದ ಸಾಲಿಗೆ ಹೋಲಿಸಿದರೆ ಈ ವಿಭಾಗದಲ್ಲಿ ತುಸು ಉತ್ತಮ ಸಾಧನೆಯನ್ನು ಬಿಬಿಎಂಪಿ ಮಾಡಿದೆ. ನಾಗರಿಕರ ಪ್ರತಿಕ್ರಿಯೆ ಹೆಚ್ಚಿಸಲು ಬಿಬಿಎಂಪಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಅಲ್ಲಲ್ಲಿ ಜಾಥಾಗಳನ್ನು ಏರ್ಪಡಿಸುವ ಮೂಲಕ ಜಾಗೃತಿ ಮೂಡಿಸಿತ್ತು.

'ಕಸ ಮುಕ್ತ ವಿಭಾಗದಲ್ಲಿ ಶೂನ್ಯ ಅಂಕ ನೀಡುವಷ್ಟರ ಮಟ್ಟಿಗೆ ನಮ್ಮ ನಿರ್ವಹಣೆ ಕಳಪೆ ಏನಿಲ್ಲ. ದೇಶದಲ್ಲಿ 1 ಕೋಟಿಗಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಇತರ ನಗರಗಳಿಗೆ ಹೋಲಿಸಿದರೆ ಸ್ವಚ್ಛತೆ ನಿರ್ವಹಣೆಯಲ್ಲಿ ಬಿಬಿಎಂಪಿ ಸಾಕಷ್ಟು ಮುಮದೆ ಇದೆ. ಕೇಂದ್ರ ಸರ್ಕಾರವು ಸೂಚಿಸಿದ ತಂತ್ರಾಂಶವನ್ನು ಬಳಸುತ್ತಿಲ್ಲ ಎಂಬ ಕಾರಣಕ್ಕೆ ಅಂಕ ಕಡಿತ ಮಾಡಲಾಗಿದೆ. ಕೋವಿಡ್ ತೀವ್ರವಾಗಿದ್ದುದರಿಂದ ಈ ಬಾರಿ ಕಸ ನಿರ್ವಹಣೆಯ ವಿಶ್ಲೇಷಣೆಯೂ ಸಮರ್ಪಕವಾಗಿ ನಡೆದಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಬಿಬಿಎಂಪಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಒಂದೇ ತಕ್ಕಡಿ ಸರಿಯೇ?'

'10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳೆಲ್ಲವನ್ನೂ ಒಂದೇ ತಕ್ಕಡಿಯಲ್ಲಿ ತೂಗುವುದು ಸರಿಯಲ್ಲ. 1 ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳು ಕಸ ನಿರ್ವಹಣೆ ವಿಚಾರದಲ್ಲಿ ಎದುರಿಸುವ ಸಮಸ್ಯೆಗಳು ವಿಭಿನ್ನವಾಗಿವೆ. ಅವುಗಳ ಕಾರ್ಯವಿಧಾನವೂ ಬೇರೆಯೇ. ಹಾಗಾಗಿ 1 ಕೋಟಿಗಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳಿಗೆ ಪ್ರತ್ಯೇಕ ಸ್ಪರ್ಧೆ ಏರ್ಪಡಿಸುವುದು ಸಮಂಜಸ. ಈ ವಿಚಾರವನ್ನು ನಾವು ಹಾಗೂ ಬೃಹನ್ ಮುಂಬೈ ಮಹಾನಗರ ಪಾಲಿಕೆಯವರೂ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಗಮನಕ್ಕೆ ತಂದಿದ್ದೇವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸ್ವಚ್ಛ ಸರ್ವೇಕ್ಷಣ ಸಮೀಕ್ಷೆ– ಬಿಬಿಎಂಪಿಯ ಹಾದಿ

ವರ್ಷ	ಭಾಗವಹಿಸಿದ ನಗರಗಳು	ಬಿಬಿಎಂಪಿ ಸ್ಥಾನ
2016	73	38
2017	434	210
2018	4,203	216
2019	4,237	194
2020	4,242	214
2021	48	28*

*ಈ ಬಾರಿ ಮಹಾನಗರಗಳನ್ನು ಪ್ರತ್ಯೇಕವಾಗಿ ಪರಿಗಣಿಸಲಾಗಿದೆ

ಸ್ವಚ್ಛ ಸರ್ವೇಕ್ಷಣ್ ಸಮೀಕ್ಷೆ ಮಾನದಂಡಗಳನ್ನು ಆಳವಾಗಿ ಅಧ್ಯಯನ ಮಾಡಿ, ಬಿಬಿಎಂಪಿಯ ಸ್ಥಾನವನ್ನು ಮತ್ತಷ್ಟು ಉತ್ತಮ ಪಡಿಸಲು ಕ್ರಮಕೈಗೊಳ್ಳುತ್ತೇವೆ – **ಹರೀಶ್ ಕುಮಾರ್,** ವಿಶೇಷ ಆಯುಕ್ತ (ಕಸ ನಿರ್ವಹಣೆ), ಬಿಬಿಎಂಪಿ



ಪ್ರತ್ಯೇಕ ಕಂಪನಿಯಿಂದ ಸುಧಾರಣೆ?

ನಗರದ ಕಸ ವಿಲೇವಾರಿಗಾಗಿ ಸರ್ಕಾರ 'ಬೆಂಗಳೂರು ಕಸ ನಿರ್ವಹಣೆ ನಿಯಮಿತ' ಕಂಪನಿಯನ್ನು ಐದು ತಿಂಗಳ ಹಿಂದೆ ಸ್ಥಾಪಿಸಿದೆ. ಸಾರ್ವಜನಿಕ ಶೌಚಾಲಯಗಳ ಕಸ ಹಾಗೂ ಜೈವಿಕ– ವೈದ್ಯಕೀಯ ಕಸವನ್ನು ಹೊರತಾಗಿ ಉಳಿದ ಎಲ್ಲ ರೀತಿಯ ಕಸಗಳನ್ನು ಈ ಕಂಪನಿಯೇ ನಿರ್ವಹಿಸಬೇಕಿದೆ. ಕಸ ಸಂಗ್ರಹ, ವಿಂಗಡಣೆ, ರವಾನೆ, ಸಂಸ್ಕರಣೆ, ಹಸಿ ತ್ಯಾಜ್ಯದಿಂದ ಸಾವಯವ ಗೊಬ್ಬರ ತಯಾರಿ, ಮರುಬಳಕೆ ಹಾಗೂ ವಿಲೇವಾರಿ ಕುರಿತ ಎಲ್ಲ ಹೊಣೆಗಳೂ ಈ ಕಂಪನಿಯದ್ದಾಗಿದೆ. ಆದರೆ, ಕಂಪನಿ ಇನ್ನೂ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಣೆ ಆರಂಭಿಸಿಲ್ಲ.

'ಈ ಕಂಪನಿ ಪೂರ್ಣ ಪ್ರಮಾಣ ದಲ್ಲಿ ಕಾರ್ಯನಿರ್ವಹಣೆ ಆರಂಭಿಸಿದ ಬಳಿಕ ಕಸ ನಿರ್ವಹಣೆಯ ಪರಿಸ್ಥಿತಿ ಮತ್ತಷ್ಟು ಸುಧಾರಣೆಯಾಗುವ ನಿರೀಕ್ಷೆ ಇದೆ' ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ ಅಧಿಕಾರಿಗಳು.

₹500 ಕೋಟಿ ತಕ್ಷಣ ಬಿಡುಗಡೆ

ಒಂದನೇ ಪುಟದಿಂದ...

ರಾಜ್ಯದಲ್ಲಿ ಎಲ್ಲ ಜಿಲ್ಲಾಧಿಕಾರಿಗಳ ಬಳಿ ರಾಜ್ಯ ವಿಪತ್ತು ಪರಿಹಾರ ನಿಧಿ (ಎಸ್‌ಡಿಆರ್‌ಎಫ್) ₹ 689 ಕೋಟಿ ಲಭ್ಯವಿದೆ. ಹೆಚ್ಚುವರಿ ಅಗತ್ಯವಿದ್ದಲ್ಲಿ ತಕ್ಷಣ ಬಿಡುಗಡೆ ಮಾಡಲು ಸಭೆಯಲ್ಲಿ ಸೂಚಿಸಲಾಯಿತು.

ಮನೆ ಹಾನಿ ವಿವರಗಳನ್ನು ತಂತ್ರಾಂಶದಲ್ಲಿ ಛಾಯಾಚಿತ್ರಗಳೊಂದಿಗೆ ದಾಖಲಿಸಿ, ಮನೆ ಸಂಪೂರ್ಣ ಹಾನಿಯಾದವರಿಗೆ ಮೊದಲ ಕಂತಿನ ಪರಿಹಾರ ತಲಾ ₹ 1 ಲಕ್ಷ ಕೂಡಲೇ ವಿತರಿಸಬೇಕು. ಆಯಾ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ-ನಿರ್ವಹಣಾಧಿಕಾರಿ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿಗಳಿಗೆ ಹೊಣೆಗಾರಿಕೆ ನಿಗದಿಪಡಿಸಬೇಕು. ಅಲ್ಲದೆ, ವಿಮಾ ಕಂಪನಿಗಳು ಕೂಡಾ ಬೆಳೆ ನಷ್ಟಕ್ಕೆ ತ್ವರಿತವಾಗಿ ಪರಿಹಾರ ವಿತರಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಮಳೆ ಕಡಿಮೆಯಾದ ತಕ್ಷಣ ರಸ್ತೆ ದುರಸ್ತಿ ಪಡಿಸಬೇಕು. ಸಂಚಾರ ಸಂಪರ್ಕ ಕಡಿತಗೊಂಡ ಸ್ಥಳಗಳನ್ನು ಆದ್ಯತೆಯಲ್ಲಿ ಸರಿಪಡಿಸಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು.

ಗ್ರಾಮೀಣ ರಸ್ತೆಗಳ ಹಾನಿಯ ಕುರಿತು ತಾಲ್ಲೂಕುವಾರು ವಿವರ ನೀಡುವಂತೆಯೂ ಸೂಚಿಸಲಾಯಿತು. ನಾಲ್ಕು ಕೆರೆಗಳು ಸಂಪೂರ್ಣ ಹಾನಿಯಾಗಿದೆ. ಕೆರೆಗಳ ದುರಸ್ತಿಯನ್ನು ಸಮರೋಪಾದಿಯಲ್ಲಿ ಮಾಡಿ, ನೀರು ವ್ಯರ್ಥವಾಗದಂತೆ ಎಚ್ಚರ ವಹಿಸಬೇಕು. ವಿದ್ಯುತ್ ಸರಬರಾಜು ಕಂಪನಿಗಳು ಕೂಡಾ ತ್ವರಿತವಾಗಿ ದುರಸ್ತಿ ಕಾರ್ಯ ಕೈಗೊಳ್ಳಬೇಕು ಎಂದೂ ಹೇಳಿದರು.

ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ 3.43 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದ್ದು, 1.5 ಲಕ್ಷ ರೈತರಿಗೆ ₹ 130 ಕೋಟಿ ಬಿಡುಗಡೆ ಮಾಡಲಾಗಿದ್ದು, ಉಳಿದ 79 ಸಾವಿರ ರೈತರಿಗೆ ಪರಿಹಾರ ನೀಡಲು ₹ 52 ಕೋಟಿ ಕೂಡಲೇ ಬಿಡುಗಡೆ ಮಾಡುವಂತೆ ಬೊಮ್ಮಾಯಿ ಸೂಚಿಸಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸಭೆಯಲ್ಲಿ ಕಂದಾಯ ಸಚಿವ ಆರ್. ಅಶೋಕ, ಜಲ ಸಂಪನ್ಮೂಲ ಸಚಿವ ಗೋವಿಂದ ಎಂ. ಕಾರಜೋಳ, ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ಕೋಲಾರ ಸಂಸದ ಕೆ. ಮುನಿಸ್ವಾಮಿ, ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಾದ ವಂದಿತಾ ಶರ್ಮ ಮತ್ತಿತ್ತರರು ಇದ್ದರು.

ನವೆಂಬರ್ 30ಗಳಿನ ನಷ್ಟದ ವಿವರ

ವಿಷಯ	ಹಾನಿ
ಜೀವ ಹಾನಿ	24
ಸಂಪೂರ್ಣ ಮನೆ ಹಾನಿ	658
ಭಾಗಶಃ ಮನೆ ಹಾನಿ	8,495
ಜಾನುವಾರು ಸಾವು	191
ಕೃಷಿ ಬೆಳೆ ಹಾನಿ	5 ಲಕ್ಷ ಹೆಕ್ಟೇರ್
ತೋಟಗಾರಿಕೆ ಬೆಳೆ	30,114 ಹೆಕ್ಟೇರ್
ರಸ್ತೆ ಹಾನಿ	2,203 ಕಿ.ಮೀ.
ಸೇತುವೆಗಳು	165
ಶಾಲೆಗಳು	1,225
ಪ್ರಾಥಮಿಕ ಆರೋಗ್ಯ ಕೇಂದ್ರ	39
ವಿದ್ಯುತ್ ಕಂಬ	1,674
ವಿದ್ಯುತ್ ಟ್ರಾನ್ಸ್ ಫಾರ್ಮರ್	278

ಕೆನಡಾ ಜತೆ ಮಹಿಳಾ ಉದ್ಯಮಿಗಳ ವೇದಿಕೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಉದ್ಯಮಿಗಳಿಗೆ ಉತ್ತೇಜನ ಮತ್ತು ಉತ್ಪನ್ನಗಳಿಗೆ ಮಾರುಕಟ್ಟೆ ಅವಕಾಶ ಕಲ್ಪಿಸಲು ಕೆನಡಾದ 'ಮೈ ಫೆಮ್ ವರ್ಲ್ಡ್' ಉದ್ಯಮ ಸಂಸ್ಥೆ ಜತೆ ಮಹಿಳಾ ಉದ್ಯಮಿಗಳ ವೇದಿಕೆ ಒಪ್ಪಂದ ಮಾಡಿಕೊಳ್ಳಲು ಮುಂದಾಗಿದೆ.

ಕೆನಡಾದಲ್ಲಿನ ಮಾರುಕಟ್ಟೆಯ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳುವುದು ಈ ಒಪ್ಪಂದದ ಉದ್ದೇಶ.

800 ಸದಸ್ಯರನ್ನು ಹೊಂದಿರುವ ಈ ವೇದಿಕೆಯು, ಅಮೆಜಾನ್ ಜತೆ ಈಗಾಗಲೇ ಒಪ್ಪಂದ ಮಾಡಿಕೊಂಡಿದೆ. ಅಮೆಜಾನ್ ಆನ್‌ಲೈನ್ ಮಾರಾಟದಲ್ಲಿ ನಾಲ್ಕೈದು ಉತ್ಪನ್ನಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೃತಕ ಆಭರಣಗಳು, ನೈಸರ್ಗಿಕ ಸಾಬೂನು, ಆರೋಗ್ಯಪೇಯಗಳು, ಪುರುಷರ ಬಟ್ಟೆಗಳು ಹೆಚ್ಚು ಮಾರಾಟವಾಗುತ್ತಿವೆ.

ರೂಪಾ ರಾಣಿ

'ಕೆನಡಾದ ಈ ಸಂಸ್ಥೆ ಜತೆ ಒಪ್ಪಂದ ಮಾಡಿಕೊಳ್ಳುವುದರಿಂದ ವೀಸಾ ಪಡೆಯಲು ಮತ್ತು ಉತ್ಪನ್ನಗಳ ಪ್ರದರ್ಶನ ಸುಲಭವಾಗಲಿದೆ. ಇದರಿಂದ, ಉದ್ಯಮಿಗಳು ತಮ್ಮ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳಲು ಅನುಕೂಲವಾಗುತ್ತದೆ. ಜಾಗತಿಕ ಮಾರುಕಟ್ಟೆಯಲ್ಲಿ ಉತ್ಪನ್ನಗಳ ರಫ್ತು ವಹಿವಾಟು ನಡೆಸಲು ಈ ರೀತಿ ಒಪ್ಪಂದಗಳು ಮುಖ್ಯವಾಗುತ್ತವೆ. ಈಗಾಗಲೇ ಸರ್ಕಾರ ಒಂದು ಜಿಲ್ಲೆ, ಒಂದು ಉತ್ಪನ್ನ ನೀತಿ ಜಾರಿಗೊಳಿಸಿದೆ. ಈ ನಿಟ್ಟಿನಲ್ಲಿಯೂ ನಮ್ಮ ವೇದಿಕೆಯು ಚಿಂತನೆ ನಡೆಸಿ ಯೋಜನೆ ರೂಪಿಸುತ್ತಿದೆ' ಎಂದು ವೇದಿಕೆ ಅಧ್ಯಕ್ಷೆ ರೂಪಾ ರಾಣಿ ತಿಳಿಸಿದ್ದಾರೆ.

'ಸಿರಿ ಧಾನ್ಯಗಳ ಆರೋಗ್ಯ ಪೇಯಕ್ಕೆ ವಿದೇಶಗಳಲ್ಲಿ ಬೇಡಿಕೆ ಹೆಚ್ಚಾಗಿದೆ. ಅದೇ ರೀತಿ ರೇಷ್ಮೆ ಸೀರೆ, ಚಿಪ್‌ಗಳು ಹಾಗೂ ಪರಿಸರ ಸ್ನೇಹಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗಿದೆ. ರಾಜ್ಯ ಸರ್ಕಾರದ ನೆರವಿನೊಂದಿಗೆ ಕೆನಡಾ ಜತೆ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ' ಎಂದು ತಿಳಿಸಿದ್ದಾರೆ.

'ಮಹಿಳಾ ಉದ್ಯಮಿಗಳ ವೇದಿಕೆ ವತಿಯಿಂದ ಇದೇ 25ರಂದು ಮಹಿಳಾ ಉದ್ಯಮಿಗಳ ದಿನವನ್ನು ಕಾಸಿಯಾ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಗ್ರಾಮೀಣ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಕೈಗೊಳ್ಳಬೇಕಾದ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಗುವುದು. ಜತೆಗೆ, ನವೋದ್ಯಮ ಆರಂಭಿಸಲು, ರಫ್ತು ವಹಿವಾಟು ಮುಂತಾದ ವಿಷಯಗಳ ಬಗ್ಗೆ ಮಹಿಳಾ ಉದ್ಯಮಿಗಳಿಗೆ ಈ ಸಂದರ್ಭದಲ್ಲಿ ಮಾರ್ಗದರ್ಶನ ನೀಡಲಾಗುವುದು. ವರ್ಷದ ಅತ್ಯುತ್ತಮ ಉದ್ಯಮಿ ಪ್ರಶಸ್ತಿಯನ್ನು ಈ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು' ಎಂದು ತಿಳಿಸಿದ್ದಾರೆ.

'ಒಂದು ಹೆಜ್ಜೆ ಹಿಂದಿಟ್ಟು, ಎರಡು ಹೆಜ್ಜೆ ಮುಂದಿಡುತ್ತೇವೆ'

ಉಡುಪಿ: 'ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಂಡು ಕೇಂದ್ರ ಸರ್ಕಾರ ಒಂದು ಹೆಜ್ಜೆ ಹಿಂದಿಟ್ಟಿರುವುದು ತಪ್ಪಲ್ಲ; ಮುಂದೆ ಎರಡು ಹೆಜ್ಜೆ ಮುಂದಿಡುತ್ತೇವೆ' ಎಂದು ಆರ್‌ಎಸ್‌ಎಸ್ ಮುಖಂಡ ಡಾ.ಕಲ್ಲಡ್ಕ ಪ್ರಭಾಕರ ಭಟ್ ಹೇಳಿದರು.

ಭಾನುವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು,'ಕೃಷಿ ಕಾಯ್ದೆಗಳು ಜನಮಾನಸಕ್ಕೆ ಮುಟ್ಟಬೇಕು ಎಂದು ಒಂದು ವರ್ಷ ಕಾದರೂ ಪ್ರಯೋಜನವಾಗಲಿಲ್ಲ. ಹಾಗಾಗಿ, ಜನಸಾಮಾನ್ಯರಿಗೆ ತೊಂದರೆಯಾಗಬಾರದು ಎಂದು ರೈತರ ಪರವಾಗಿದ್ದ ಕಾಯ್ದೆಗಳನ್ನು ಕೇಂದ್ರ ಸರ್ಕಾರ ಪಾಪಸ್ ಪಡೆದಿದೆ. ಸರ್ಕಾರದ ನಿರ್ಧಾರ ಉತ್ತಮವಾಗಿದೆ' ಎಂದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,55,054 ▲ ಒಟ್ಟು ಸೋಂಕಿತರು (12,54,920 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,798 ▼	12,32,932 ▲	16,323 ▲

ದಿನದ ಏರಿಕೆ

ಹೊಸ ಪ್ರಕರಣ	134 –
ಗುಣಮುಖ	180 ▼
ಸಾವು	01 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	25.77 ಕೋಟಿ ▲	3.45 ಕೋಟಿ
ಸಕ್ರಿಯ ಪ್ರಕರಣ	1.98 ಕೋಟಿ	1.22 ಲಕ್ಷ ▼
ಗುಣಮುಖ	23.26 ಕೋಟಿ ▲	3.39 ಕೋಟಿ
ಸಾವು	51.67 ಲಕ್ಷ ▲	4.65 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.87 ಲಕ್ಷ ▼	10,488 ▲
ಗುಣಮುಖ	3.99 ಲಕ್ಷ ▼	12,329 ▲
ಸಾವು	6,028 ▼	313 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)



ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

1.40 ಲಕ್ಷ	ಮಹಾರಾಷ್ಟ್ರ
36,361 ▲	ತಮಿಳುನಾಡು
37,299 ▲	ಕೇರಳ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

66.29	ಮಹಾರಾಷ್ಟ್ರ ▲
50.95	ಕೇರಳ ▲
27.19	ತಮಿಳುನಾಡು ▲

ನಿಮ್ಮ ಡೀಲ್‌ಗಳು & ಡಿಸ್ಕೌಂಟ್‌ಗಳನ್ನು ಪಡೆದುಕೊಳ್ಳಿ!

FURNITURE FAIR™

INTERIOR & EXTERIOR EXHIBITION

BIG SALE & SAVINGS UPTO 70% OFF

ಕೊನೆಯ ದಿನ

ಬೆಳಿಗ್ಗೆ 10.00 ರಿಂದ ರಾತ್ರಿ 8.30

ತ್ರಿಪುರವಾಸಿಣಿ ಅರಮನೆ ಮೈದಾನ, ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು

ಲಿವಿಂಗ್ ರೂಮ್ ಸೆಟ್ • ಬೆಡ್‌ರೂಮ್ ಸೆಟ್ಸ್ • ಡೈನಿಂಗ್ ಸೆಟ್ಸ್ • ರಿಕ್ಲೈನರ್ ಸೋಫಾ ಸೆಟ್ಸ್ • ಔಟ್‌ಡೋರ್ ಫರ್ನಿಚರ್ • ಕಾರ್ವ್ಡ್ ವುಡ್ ಸೋಫಾ ಸೆಟ್ಸ್ ಮ್ಯಾಟ್ರೆಸ್ಸಸ್ • ಚೇರ್ಸ್ • ಬಂಕರ್ ಬೆಡ್ • ಬ್ರಾಸ್ & ಆರ್ಟಿಕ್ರಾಫ್ಟ್ಸ್ • ಮಸಾಜ್ ಚೇರ್ • ಹೋಮ್ ಡೆಕೊರ್ ಪ್ರಾಡಕ್ಟ್ಸ್ ಮತ್ತು ಇನ್ನೂ ಅನೇಕ..



exhibitions_iadsnevents
iadsnevents
Covid-19 protocol followed inside the venue
+91 93425 77908
AN EVENT BY iads & events COMPLETE BUSINESS SOLUTIONS

ಮಣಿಪಾಲ್ ಹಾಸ್ಪಿಟಲ್ಸ್ ಲೈಫ್ಸ್ ಆನ್

ನಿಮ್ಮ ಆರೋಗ್ಯದ ಎಲ್ಲಾ ಅಗತ್ಯಗಳನ್ನು ನೋಡಿಕೊಳ್ಳಲು 4000+ ವೈದ್ಯರುಗಳು

ಇದೀಗ ಕೊಲಂಬಿಯಾ ಏಷ್ಯಾ ಹಾಸ್ಪಿಟಲ್ಸ್ ಮತ್ತು ವಿಕ್ರಂ ಹಾಸ್ಪಿಟಲ್* ಮಣಿಪಾಲ್ ಹಾಸ್ಪಿಟಲ್ಸ್ ಕುಟುಂಬಕ್ಕೆ ಸೇರಿವೆ.

ನಾವು ಎಲ್ಲಾ ವಿಶೇಷತೆಗಳಾದ್ಯಂತ ವೈದ್ಯಕೀಯ ತಜ್ಞರ ಸಂಯೋಜಿತ ತಂಡದ ಮೂಲಕ, ನಿಮಗೆ ಸಹಾನುಭೂತಿಯ ಆರೈಕೆಯನ್ನು ಒದಗಿಸುವ ಭರವಸೆ ನೀಡುತ್ತೇವೆ. ಭರವಸೆಯಿಂದಿರಿ, ನೀವು ಈಗ ನಿಮ್ಮ ಆರೋಗ್ಯವನ್ನು ಹೆಚ್ಚು ಆತ್ಮವಿಶ್ವಾಸದಿಂದ ನಿರ್ವಹಿಸಬಹುದು.

27 ಹಾಸ್ಪಿಟಲ್ ಗಳು | 7600+ ಬೆಡ್ ಗಳು | 4000+ ವೈದ್ಯರು

15 ನಗರಗಳಲ್ಲಿ ಸೇವೆ | 4.5 ಕೋಟಿಗೂ ಹೆಚ್ಚಿನ ಜೀವಗಳ ಕಾಳಜಿ

*ವಿಕ್ರಮ್ ಹಾಸ್ಪಿಟಲ್, ಬೆಂಗಳೂರು

ಹೊಸ ಸವಾಲುಗಳ ಮೆಟ್ಟಿ ಕನ್ನಡ ಕಟ್ಟುತ್ತೇವೆ: ಕಸಾಪ ನಗರ ಜಿಲ್ಲಾಧ್ಯಕ್ಷ ಎಂ. ಪ್ರಕಾಶಮೂರ್ತಿ ಭರವಸೆ

‘ಹಿರಿಯರ ತಾಣದಲ್ಲಿ ಕಿರಿಯರಿಗೆ ಅವಕಾಶ’

• ವರುಣ್ ಹೆಗಡೆ

ಬೆಂಗಳೂರು: ‘ರಾಜಧಾನಿ ಬೆಂಗಳೂರಿನಲ್ಲಿ ಹೊಸ ಸವಾಲುಗಳೊಂದಿಗೆ ಕನ್ನಡ ಕಟ್ಟಬೇಕಿದೆ. ಹೊಸ ತಲೆಮಾರನ್ನೂ ಮುಟ್ಟಬೇಕಿದೆ. ಹೀಗಾಗಿ, ಬಹುತೇಕ ಹಿರಿಯರ ತಾಣವಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಿರಿಯರನ್ನೂ ತೊಡಗಿಸಿಕೊಂಡು ಕನ್ನಡದ ಕಾಯಕ ಮಾಡುವೆ.’

ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಎಂ. ಪ್ರಕಾಶಮೂರ್ತಿ ಅವರು ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದು ಇಷ್ಟು. ಮೂರನೇ ಪ್ರಯತ್ನದಲ್ಲಿ ಗೆಲುವು ಸಾಧಿಸಿರುವ ಅವರು, ಈ ಹಿಂದೆ ಎರಡು ಬಾರಿ ಅಲ್ಪ ಅಂತರದಲ್ಲಿ ನಿರಾಸೆ ಅನುಭವಿಸಿದ್ದರು. ಅವರ ಅಭಿಪ್ರಾಯಗಳು ಇಂತಿವೆ.

• ಆಡಳಿತದ ಕೇಂದ್ರ ಸ್ಥಾನವಿರುವ ಬೆಂಗಳೂರು ನಗರ ಜಿಲ್ಲೆಯ ಅಧ್ಯಕ್ಷರಾಗಿ ಆಯ್ಕೆಯಾಗಿರುವಿರಿ. ನಿಮ್ಮ ಆದ್ಯತೆಗಳೇನು?

ರಾಜಧಾನಿಯಲ್ಲಿ ಕನ್ನಡ ಉಳಿದರೆ ಇಡೀ ರಾಜ್ಯದಲ್ಲಿ ಕನ್ನಡ ಉಳಿಯುತ್ತದೆ. ಹಾಗಾಗಿ, ನಗರದಲ್ಲಿ ಕನ್ನಡದ ವಾತಾವರಣ ಇರುವಂತೆ ನೋಡಿಕೊಳ್ಳುವುದು ನನ್ನ ಆದ್ಯತೆ. ಕನ್ನಡ ಪರ ಕಾರ್ಯಕ್ರಮಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹಮ್ಮಿಕೊಳ್ಳುತ್ತೇನೆ.

• ಬೆಂಗಳೂರು ಹಾಗೂ ಇಲ್ಲಿನ ಕನ್ನಡಿಗರಿಗೆ ಸಂಬಂಧಿಸಿದಂತೆ ಏನೆಲ್ಲ ಕಾರ್ಯಯೋಜನೆ ಹೊಂದಿರುವಿರಿ?

ಚುನಾವಣೆಗೂ ಮುನ್ನ ದತ್ತಿ ಪ್ರಶಸ್ತಿಗಳ ಸ್ಥಾಪನೆ ಒಳಗೊಂಡಂತೆ 20 ಅಂಶಗಳ ನನ್ನ ಆಶಯಗಳನ್ನು ಮತದಾರರಿಗೆ ತಿಳಿಸಿದ್ದೆ. ಅವುಗಳನ್ನು ಸಾಕಾರಗೊಳಿಸಲು ಪ್ರಯತ್ನ ಪಡುತ್ತೇನೆ.

• ಡಿಜಿಟಲ್ ಹಾಗೂ ಸಾಮಾಜಿಕ ಮಾಧ್ಯಮಗಳು ಪ್ರಬಲವಾಗುತ್ತಿದ್ದು, ಯುವಜನರನ್ನು ಸೆಳೆದುಕೊಳ್ಳುತ್ತಿವೆ. ಈ ವೇದಿಕೆಗಳಲ್ಲಿ ಸಾಂಸ್ಕೃತಿಕವಾಗಿ ಕನ್ನಡ ಕಟ್ಟಲು ಕಾರ್ಯತಂತ್ರವೇನು?

‘ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು’ ಎಂಬ ಮಾತಿನಂತೆ ಯುವಜನರನ್ನೂ ಕರೆತಂದು, ಕನ್ನಡಪರ ಕಾರ್ಯಕ್ರಮ ಮಾಡಬೇಕಿದೆ. 5 ವರ್ಷಗಳಿಂದ ನಗರ ಜಿಲ್ಲೆಯ ಪದಾಧಿಕಾರಿಗಳ ಬಗ್ಗೆ ಸಿನಿಕತನದ ಮಾತುಗಳು ಹೊರ ಹೊಮ್ಮುತ್ತಿದ್ದವು. ನನ್ನ ಅವಧಿಯಲ್ಲಿ ಸುಸಂಸ್ಕೃತರನ್ನು ಪದಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು, ಮುನ್ನಡೆಯುವೆ.

• ಉದ್ಯೋಗ ಕ್ಷೇತ್ರದಲ್ಲಿ ಕನ್ನಡಿಗರಿಗೆ ಆದ್ಯತೆ ಸಿಗುತ್ತಿಲ್ಲ, ಕನ್ನಡ ಕಡೆಗಣಿಸಲಾಗುತ್ತಿದೆ ಎಂಬ ದೂರುಗಳಿವೆ. ಈ ಬಗ್ಗೆ ಏನು ಹೇಳಲು ಬಯಸುವಿರಿ

ಉದ್ಯೋಗ ಸೇರಿದಂತೆ ವಿವಿಧೆಡೆ ಕನ್ನಡಿಗರಿಗೆ ಅವಕಾಶಗಳು ಸಿಗಬೇಕು. ಇದು ಸಾಕಾರವಾಗಲು ಸರ್ಕಾರಗಳಿಗೂ ಇಚ್ಛಾಶಕ್ತಿ ಇರಬೇಕು. ಉದ್ಯೋಗದಲ್ಲಿ ಕನ್ನಡಿಗರಿಗೆ ಹಾಗೂ ಶಿಕ್ಷಣದಲ್ಲಿ ಕನ್ನಡ ಮಾಧ್ಯಮಕ್ಕೆ ಆದ್ಯತೆ, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕನ್ನಡದ ಬಳಕೆ ಸೇರಿದಂತೆ ನಾಡು–ನುಡಿ ಹಾಗೂ ಕನ್ನಡಿಗರಿಗೆ ಸಂಬಂಧಿಸಿದ ವಿವಿಧ ಸಂಗತಿಗಳ ಬಗ್ಗೆ ಸರ್ಕಾರದ ಬೆಂಬಲ ಪಡೆಯಲು ಮುಂದಾಗುತ್ತೇವೆ. ಒಂದು ವೇಳೆ ಬೆಂಬಲ ನೀಡದಿದ್ದಲ್ಲಿ ಹೊಸ ಕಾರ್ಯಕಾರಿ ಸಮಿತಿಯ ಮನವೊಲಿಸಿ, ಸರ್ಕಾರದ ವಿರುದ್ಧ ಚಳವಳಿಯನ್ನು ನಡೆಸುತ್ತೇವೆ.

• ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹಿಂದಿ ಭಾಷೆಯ ಹೇರಿಕೆ ಬಗ್ಗೆ ಏನನ್ನುತ್ತೀರಿ?

ಶಿಕ್ಷಣ ಸೇರಿದಂತೆ ವಿವಿಧೆಡೆ ಒತ್ತಾಯ ಪೂರ್ವಕ ಹಿಂದಿ ಭಾಷೆಯ ಹೇರಿಕೆ ಸಲ್ಲದು. ಅದರ ಬಗ್ಗೆ ವಿರೋಧವಿದೆ.

• ಕೇಂದ್ರ ಸರ್ಕಾರ ಸ್ವಾಮ್ಯದ ಬ್ಯಾಂಕ್ ಹಾಗೂ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಕನ್ನಡವು ಸ್ಥಾನ ಕಳೆದುಕೊಳ್ಳುತ್ತಿದೆ. ಇದನ್ನು ಹೇಗೆ ತಡೆಯುವಿರಿ...

ವಾಣಿಜ್ಯ ಮಳಿಗೆ, ಬ್ಯಾಂಕ್‌ಗಳಲ್ಲಿ ಕನ್ನಡ ಬಳಕೆಯ ಬಗ್ಗೆ ಜಾಗೃತಿ ಮೂಡಿಸುತ್ತಾ ಬಂದಿದ್ದೇವೆ. ಕನ್ನಡ ಬಳಸದಿದ್ದವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದ್ದೇವೆ. ಕನ್ನಡಕ್ಕೆ ಧಕ್ಕೆಯಾದಾಗ ನಮ್ಮ ಸಂಘಟನೆಗಳ ಮೂಲಕ ಖಂಡಿಸಿದ್ದೇವೆ. ಮುಂದಿನ ದಿನಗಳಲ್ಲಿ ಈ ಬಗ್ಗೆ ಬಹಿರಂಗವಾಗಿ ಶಕ್ತಿಯುತ ಹೋರಾಟ, ಚಳವಳಿ ನಡೆಸಲಾಗುವುದು.

• ಈ ಗೆಲುವಿನ ಬಗ್ಗೆ ಏನು ಹೇಳಲು ಬಯಸುವಿರಿ?

ಹಿಂದಿನ ಚುನಾವಣೆಗಳಲ್ಲಿ ಅತ್ಯಲ್ಪ ಮತಗಳಲ್ಲಿ ಸೋತಿದ್ದೆ. ಆಗ ಧೃತಿಗೆಡದೆಯೇ ಕನ್ನಡ ಪರ ಕೆಲಸಗಳನ್ನು ಮುಂದುವರಿಸಿಕೊಂಡು ಬಂದಿದ್ದೇನೆ. ಅದನ್ನು ಗುರುತಿಸಿರುವ ಕನ್ನಡಿಗರು, ಬಹುಮತದಿಂದ ಆಯ್ಕೆ ಮಾಡಿದ್ದಾರೆ. ಅವರ ವಿಶ್ವಾಸಕ್ಕೆ ನಾನು ಋಣಿ. ಬೆಂಗಳೂರಿನ ಜನರಿಗೆ ಧನ್ಯವಾದಗಳು.

ಹೊಸ ಅಧ್ಯಕ್ಷರ ಪರಿಚಯ

ಸದ್ಭಾವನಾ ಪ್ರತಿಷ್ಠಾನದ ಅಧ್ಯಕ್ಷರಾಗಿರುವ ಎಂ. ಪ್ರಕಾಶಮೂರ್ತಿ ಅವರು, ಪ್ರಕಾಶಕ–ಸಂಪಾದಕರಾಗಿಯೂ ಸಾಂಸ್ಕೃತಿಕ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ವಿವಿಧ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಹಲವು ಹುದ್ದೆಗಳನ್ನು ನಿಭಾಯಿಸಿದ ಅನುಭವ ಹೊಂದಿದ್ದಾರೆ. ಎ.ಬಿ. ಮಾರೇಗೌಡ ಹಾಗೂ ಎಚ್.ಆರ್. ಲಕ್ಷ್ಮಮ್ಮ ದಂಪತಿ ಪುತ್ರರಾದ ಇವರು, ಬಿ.ಎ ಹಾಗೂ ಡಿ.ಎಂ.ಇ ವಿದ್ಯಾರ್ಹತೆ ಹೊಂದಿದ್ದಾರೆ. ಇವರ ತಂದೆ ಶಿಕ್ಷಕರಾಗಿದ್ದರು. ಬಾಲ್ಯದಿಂದಲೇ ಸಾಂಸ್ಕೃತಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಪ್ರಜಾವಾಣಿ ಸಂದರ್ಶನ

ತಡರಾತ್ರಿವರೆಗೂ ನಡೆದ ಮತ ಎಣಿಕೆ • ಎಂ. ತಿಮ್ಮಯ್ಯಗೆ ನಿರಾಸೆ

ಕಸಾಪ: ನಗರ ಜಿಲ್ಲೆಗೆ ಪ್ರಕಾಶಮೂರ್ತಿ ಸಾರಥಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿಯೇ ಗರಿಷ್ಠ ಮತದಾರರನ್ನು ಹೊಂದಿರುವ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೆಂಗಳೂರು ನಗರ ಜಿಲ್ಲೆ ಘಟಕಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ಎಂ. ಪ್ರಕಾಶಮೂರ್ತಿ ಗೆಲುವಿನ ನಗೆ ಬೀರಿದರು.

ಎಂ. ಪ್ರಕಾಶಮೂರ್ತಿ 5314 ಮತಗಳಿಸಿದ್ದಾರೆ. ಎಂ. ತಿಮ್ಮಯ್ಯ 3987 ಮತ ಗಳಿಸಿದರು. ಪ್ರಕಾಶಮೂರ್ತಿ 1327 ಅಂತರದಿಂದ ಗೆಲುವು ಸಾಧಿಸಿದರು. ತಡರಾತ್ರಿವರೆಗೂ ಮತ ಎಣಿಕೆ ನಡೆಯಿತು.ಗೆಲವು ಖಚಿತವಾಗುತ್ತಿದ್ದಂತೆ ಬೆಂಬಲಿಗರೊಂದಿಗೆ ಸಂಭ್ರಮಿಸಿದ ಪ್ರಕಾಶಮೂರ್ತಿ, ‘ಡಾ. ಅಶ್ವತ್ಥನಾರಾಯಣ ಅವರ ‘ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ’ ಕೃತಿ ಬಿಡುಗಡೆ ಮಾಡಿದರು.

ಭಾನುವಾರ ಬೆಳಿಗ್ಗೆ ಮತದಾನ ಮಂದಗತಿಯಲ್ಲಿ ಆರಂಭವಾದರೂ, ಮಧ್ಯಾಹ್ನದ ಬಳಿಕ ಬಿರುಸಿನಿಂದ ನಡೆಯಿತು. ಆದರೂ ಶೇ 28.88 ರಷ್ಟು ಮಾತ್ರ ಮತದಾನ ನಡೆದಿದೆ. 36,491 ಮತದಾರರಲ್ಲಿ 10,538 ಮಂದಿ ಹಕ್ಕು ಚಲಾಯಿಸಿದ್ದಾರೆ.

28 ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಮತದಾನಕ್ಕೆ 42 ಮತಗಟ್ಟೆಗಳನ್ನು ಗುರುತಿಸಲಾಗಿತ್ತು. ಮತದಾರರು ಈ ಬಾರಿ ವಿವಿಧೆಡೆ ಹಂಚಿ ಹೋಗಿದ್ದರಿಂದ ಎಲ್ಲಿಯೂ ನೂಕಾಟ, ತಳ್ಳಾಟ ನಡೆಯಲಿಲ್ಲ. ಹೆಚ್ಚಿನ ಮತದಾನದ ಕೇಂದ್ರಗಳಲ್ಲಿ ಚುನಾವಣೆಯ ಕಾವು ಕಾಣಿಸಲಿಲ್ಲ.

ಕವಿ ದೊಡ್ಡರಂಗೇಗೌಡ, ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಹಂ.ಪ. ನಾಗರಾಜಯ್ಯ, ಕಮಲಾ ಹಂಪನಾ, ವಿದ್ವಾಂಸ ಗೊ.ರು. ಚನ್ನಬಸಪ್ಪ, ಕವಿ ಬಿ.ಆರ್. ಲಕ್ಷ್ಮಣ ರಾವ್, ಲೇಖಕಿಯರಾದ ವಿಜಯಾ, ವಸುಂಧರಾ ಭೂಪತಿ ಸೇರಿದಂತೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಮತದಾನ ಮಾಡಿದರು.

ಮತ ಕೇಂದ್ರದಲ್ಲಿ ಪ್ರಚಾರ: ಮತಗಟ್ಟೆಯ ಆವರಣದಲ್ಲಿ ಅಭ್ಯರ್ಥಿಗಳ ಬ್ಯಾನರ್‌ಗಳನ್ನು ಹಾಕಲಾಗಿತ್ತು. ಅಭ್ಯರ್ಥಿಗಳು ಕೆಲವೆಡೆ ಮತದಾರರನ್ನು ತಮ್ಮೆಡೆಗೆ ಸೆಳೆಯಲು ಕೊನೆಯ ಕ್ಷಣದ ಕಸರತ್ತನ್ನೂ ನಡೆಸಿದರು. ಮತದಾನ ನಡೆಯುತ್ತಿರುವ ಕಟ್ಟಡಗಳ ಒಳಗಡೆಯೂ ಬೆಂಬಲಿಗರು ಅಭ್ಯರ್ಥಿಗಳ ಕ್ರಮ ಸಂಖ್ಯೆ ಹಾಗೂ ಮಾಹಿತಿ ಒಳಗೊಂಡ ಕಾರ್ಡ್‌ಗಳನ್ನು ವಿತರಿಸಿ, ಮನವಿ ಮಾಡಿಕೊಂಡರು. ಆದರೆ, ಮತ ಪತ್ರಗಳಲ್ಲಿ ಕ್ರಮ ಸಂಖ್ಯೆ ಇಲ್ಲದಿದ್ದರಿಂದ ಕೆಲ ಮತದಾರರು ಗೊಂದಲಕ್ಕೆ ಒಳಗಾಗಿ, ತಮ್ಮ ನೆಚ್ಚಿನ ಅಭ್ಯರ್ಥಿಯ ಹೆಸರಿಗಾಗಿ ಹುಡುಕಿದರು.

ಮಧ್ಯಾಹ್ನ ಆಗುತ್ತಿದ್ದಂತೆ ಅಭ್ಯರ್ಥಿಗಳು ಮತದಾನಕ್ಕೆ ಬರದಿದ್ದವರಿಗೆ ಕರೆಮಾಡಿ, ಮತ ಚಲಾಯಿಸುವಂತೆ ಮನವಿ ಮಾಡಿಕೊಂಡರು. ಸಂಜೆ 4 ಗಂಟೆ ನಂತರ ಬಂದವರನ್ನು ಚುನಾವಣಾಧಿಕಾರಿಗಳು ಮತಗಟ್ಟೆಯೊಳಕ್ಕೆ ಬಿಟ್ಟುಕೊಳ್ಳದೇ ವಾಪಸ್ ಕಳುಹಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಆಯ್ಕೆಯಾದ ಎಂ. ಪ್ರಕಾಶಮೂರ್ತಿ ಅವರು ಬೆಂಬಲಿಗರೊಂದಿಗೆ ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ : ಎಂ.ಎಸ್. ಮಂಜುನಾಥ್

ಮತಗಟ್ಟೆಗಾಗಿ ಹುಡುಕಾಟ

ಕಳೆದ ವರ್ಷ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮಾತ್ರ ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಈ ಬಾರಿ ನಗರದ ವಿವಿಧೆಡೆ ಮತ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಕೆಲವರು ಮಾಹಿತಿ ಕೊರತೆಯಿಂದ ಮತಗಟ್ಟೆಗಾಗಿ ಅಲೆದಾಟ ನಡೆಸಿದರು. ಬೆಳಿಗ್ಗೆ 9 ಗಂಟೆಗೆ ಬನಶಂಕರಿಯ ಬಿಎನ್‌ಎಂ ಪದವಿಪೂರ್ವ ಕಾಲೇಜಿಗೆ ಬಂದ ಕವಿ ಬಿ.ಆರ್. ಲಕ್ಷ್ಮಣ ರಾವ್, ಅಲ್ಲಿನ ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದಿರುವುದರಿಂದ ಜಯನಗರಕ್ಕೆ ತೆರಳಿದರು.

ಕಸಾಪ : ಮಹೇಶ್ ಜೋಶಿ ಗೆಲುವು ನಿಶ್ಚಿತ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಸ್ಥಾನಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ಮಹೇಶ್ ಜೋಶಿ ಮುನ್ನಡೆ ಸಾಧಿಸಿದ್ದಾರೆ.

ಅವರು 51,169 ಮತ ಗಳಿಸಿದ್ದು, 33,513 ಸಾವಿರ ಮತಗಳ ಮುನ್ನಡೆ ಹೊಂದಿದ್ದಾರೆ. ಶೇಖರಗೌಡ ಮಾಲಿ ಪಾಟೀಲ ಅವರು 17,656 ಸಾವಿರ ಮತ ಪಡೆಯುವ ಮೂಲಕ ಎರಡನೇ ಸ್ಥಾನದಲ್ಲಿ ಇದ್ದಾರೆ. ಇನ್ನೂ 5 ಜಿಲ್ಲೆಗಳು ಹಾಗೂ ಹೊರ ರಾಜ್ಯಗಳ ಅಂಚೆ ಮತಪತ್ರ ಬರಬೇಕಿದೆ.

ಇದೇ 24 ರಂದು ಪರಿಷತ್ತಿನ ಚುನಾವಣಾಧಿಕಾರಿಯ ಕೇಂದ್ರ ಕಚೇರಿಯಲ್ಲಿ ಗಡಿನಾಡ ಘಟಕಗಳ ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟ ಅಂಚೆ ಮತಪತ್ರಗಳನ್ನು ಎಣಿಕೆ ಮಾಡಿ, ಫಲಿತಾಂಶ ಘೋಷಿಸಲಾಗುತ್ತದೆ. ರಾಜ್ಯಾಧ್ಯಕ್ಷರ ಆಯ್ಕೆಗೆ ಎಲ್ಲ ಜಿಲ್ಲೆಗಳಿಂದ ಬಂದ ಮತಗಳು ಹಾಗೂ ಅಂಚೆ ಮತಗಳನ್ನು ಕ್ರೋಢೀಕರಿಸಿ, ಅದೇ ದಿನ ಫಲಿತಾಂಶವನ್ನು ಅಧಿಕೃತವಾಗಿ ಘೋಷಿಸಲಾಗುತ್ತದೆ.

ಕಳೆಗುಂದಿದ ಚುನಾವಣೆ

ಈ ಹಿಂದೆ ನ್ಯಾಷನಲ್ ಕಾಲೇಜಿನ ಮೈದಾನದಲ್ಲಿ ಮಾತ್ರ ಮತಗಟ್ಟೆಗಳು ಇರುತ್ತಿದ್ದರಿಂದ ಒಂದೇ ಕಡೆ ಮತದಾರರು ಸೇರುತ್ತಿದ್ದರು. ಹೀಗಾಗಿ, ಹಬ್ಬದ ವಾತಾವರಣ ನಿರ್ಮಾಣವಾಗುತ್ತಿತ್ತು. ಸಾಹಿತಿಗಳು ಸೇರಿದಂತೆ ಮತದಾನದ ಹಕ್ಕನ್ನು ಹೊಂದಿರುವ ವಿವಿಧ ಕ್ಷೇತ್ರಗಳ ಪ್ರಮುಖರನ್ನು ಕಣ್ತುಂಬಿಕೊಳ್ಳಲು ಜನರು ದಿನವಿಡೀ ಅಲ್ಲಿ ಕಾಯುತ್ತಿದ್ದರು. ಈ ಬಾರಿ ವಿಕೇಂದ್ರೀಕರಣ ಮಾಡಿ, ವಿವಿಧೆಡೆ ಮತಗಟ್ಟೆ ಸ್ಥಾಪಿಸಿದ್ದರಿಂದ ಸರಳವಾಗಿ ಚುನಾವಣೆ ನಡೆಯಿತು.

ಮಧ್ಯಾಹ್ನದ ನಂತರ ಮೋಡ ಕವಿದ ವಾತಾವರಣ • ಟಿ. ದಾಸರಹಳ್ಳಿ ಸುತ್ತಮುತ್ತ ವರುಣನ ಆರ್ಭಟ

ಮಳೆ: ಒಡೆದ ರಾಜಕಾಲುವೆ, ಮನೆಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಟಿ. ದಾಸರಹಳ್ಳಿ, ಯಲಹಂಕ ಸುತ್ತಮುತ್ತ ಭಾನುವಾರ ಸಂಜೆಯಿಂದ ರಾತ್ರಿಯವರೆಗೂ ಜೋರು ಮಳೆಯಾಗಿದ್ದು, ನಾಗಸಂದ್ರ ಕಾಲೊನಿ ಬಳಿ ರಾಜಕಾಲುವೆ ಒಡೆದು ಹಲವು ಮನೆಗಳಿಗೆ ನೀರು ನುಗ್ಗಿತು.

ಹಲವು ದಿನಗಳಿಂದ ಸುರಿಯುತ್ತಿದ್ದ ಮಳೆ, ಭಾನುವಾರ ಬೆಳಿಗ್ಗೆ ಬಿಡುವು ನೀಡಿತ್ತು. ಬಹುತೇಕ ಪ್ರದೇಶಗಳಲ್ಲಿ ಬಿಸಿಲು ಕಾಣಿಸಿಕೊಂಡಿತ್ತು. ಮಧ್ಯಾಹ್ನದ ನಂತರ ಮೋಡ ಕವಿದ ವಾತಾವರಣ ಆವರಿಸಿ, ಮಳೆಯೂ ಸುರಿಯಿತು.

ಟಿ. ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ರುಕ್ಮಿಣಿ ಬಡಾವಣೆ, ಗುಂಡಪ್ಪ ಬಡಾವಣೆ, ಬೆಲ್ಮರ್ ಬಡಾವಣೆ, ರಾಯಲ್ ಎನ್‌ಕ್ಲೇವ್, ಬಿಟಿಎಸ್ ಬಡಾವಣೆ ಹಾಗೂ ಸುತ್ತಮುತ್ತ ಪ್ರದೇಶಗಳ ರಸ್ತೆಯಲ್ಲಿ ನೀರು ಧಾರಾಕಾರವಾಗಿ ಹರಿಯಿತು. ಈ ಭಾಗದಲ್ಲಿ ರಾಜಕಾಲುವೆ ಒತ್ತುವರಿಯಾಗಿರುವ ಆರೋಪವಿದ್ದು, ಅದೇ ರಾಜಕಾಲುವೆಯಲ್ಲಿ ಹರಿದು ಹೋಗಬೇಕಾದ ನೀರು ರಸ್ತೆಗೆ ಹರಿದು ಮನೆಗಳಿಗೆ ನುಗ್ಗಿತು.

ಬಿಟಿಎಸ್ ಬಡಾವಣೆ ಖಾಲಿ ಜಾಗದಲ್ಲಿ ನೀರು ನಿಂತುಕೊಂಡಿತ್ತು

ಉದ್ಯಾನ, ಮೈದಾನ, ಖಾಲಿ ನಿವೇಶನ ಸ್ಥಳದಲ್ಲಿ ಎರಡು ಅಡಿಯಷ್ಟು ನೀರು ನಿಂತುಕೊಂಡಿತ್ತು. ಬಡಾವಣೆಗಳ ಬಹುಪಾಲು ಮನೆಗಳಿಗೆ ನೀರು ನುಗ್ಗಿದ್ದರಿಂದ ನಿವಾಸಿಗಳು ತೊಂದರೆ ಅನುಭವಿಸಿದರು. ಕೆಲ ಮನೆಗಳಲ್ಲಿ ಪೀಠೋಪಕರಣ ಹಾಗೂ ಎಲೆಕ್ಟ್ರಾನಿಕ್ ವಸ್ತುಗಳು ನೀರಿನಲ್ಲಿ ತೇಲಾಡುತ್ತಿದ್ದವು. ಮನೆಗೆ ನುಗ್ಗಿದ್ದ ನೀರು ಹೊರಹಾಕುವುದರಲ್ಲೇ ನಿವಾಸಿಗಳು ರಾತ್ರಿ ಕಳೆದರು.

‘ರಾಜಕಾಲುವೆ ಒತ್ತುವರಿ ಆಗಿದೆ. ನಾಗಸಂದ್ರ ಕಾಲೊನಿಗೆ ಹೊಂದಿಕೊಂಡಿರುವ ಜಾಗದಲ್ಲಿ ರಾಜಕಾಲುವೆ ಒಡೆದು, ನೀರು ಹೊರಗಡೆ ಹರಿಯುತ್ತಿದೆ. ಅದೇ ನೀರು ಮನೆಯೊಳಗೆ ನುಗ್ಗಿದ್ದರಿಂದ ಹಾನಿ ಆಗಿದೆ’ ಎಂದು ಸ್ಥಳೀಯ ನಿವಾಸಿಯೊಬ್ಬರು ಹೇಳಿದರು.

‘ಪ್ರತಿ ಬಾರಿ ಮಳೆ ಬಂದಾಗಲೂ ಇದೇ ಸಮಸ್ಯೆ ಆಗುತ್ತಿದೆ. ರಾಜಕಾಲುವೆ ಒತ್ತುವರಿ ತೆರವು ಮಾಡಿ, ಗುಣಮಟ್ಟದ ತಡೆಗೋಡೆ ನಿರ್ಮಿಸಬೇಕು’ ಎಂದೂ ಅವರು ಒತ್ತಾಯಿಸಿದರು.

ನಿವಾಸಿ ಗೋವಿಂದಪ್ಪ, ‘ಮನೆಯೊಳಗೆ ನಿಂತಿದ್ದ ನೀರನ್ನು ಮೋಟರ್ ಪಂಪ್ ಮೂಲಕ ಹೊರ ಹಾಕುತ್ತಿದ್ದೇವೆ. ನೀರಿನ ಜೊತೆಯಲ್ಲಿ ತ್ಯಾಜ್ಯವೂ ಮನೆಯೊಳಗೆ ಬಂದಿತ್ತು. ನೀರು ತೆರವಾದ ಬಳಿಕವೂ ದುರ್ವಾಸನೆ ಬರುತ್ತಿದೆ’ ಎಂದರು.

ಟಿ. ದಾಸರಹಳ್ಳಿ ಬಳಿ ಹರಿದ ನೀರು

ನಗರದ ಹಲವೆಡೆಯೂ ಮಳೆ: ಮೆಜೆಸ್ಟಿಕ್, ಗಾಂಧಿನಗರ, ಶೇಷಾದ್ರಿಪುರ, ಮಲ್ಲೇಶ್ವರ, ರಾಜಾಜಿನಗರ, ಬಸವೇಶ್ವರನಗರ, ವಿಜಯನಗರ, ದೀಪಾಂಜಲಿನಗರ, ನಾಯಂಡನಹಳ್ಳಿ, ರಾಜರಾಜೇಶ್ವರಿನಗರ, ಕೆಂಗೇರಿ, ಬನಶಂಕರಿ, ಕುಮಾರಸ್ವಾಮಿ ಲೇಔಟ್, ಗಿರಿನಗರ, ಜೆ.ಪಿ.ನಗರ, ಜಯನಗರ, ಬಸವನಗುಡಿ, ಹನುಮಂತನಗರ, ಶಂಕರಮಠ, ಚಾಮರಾಜಪೇಟೆ, ಸುತ್ತಮುತ್ತ ಪ್ರದೇಶಗಳಲ್ಲಿ ಸಂಜೆ ಉತ್ತಮ ಮಳೆ ಆಯಿತು.

ಎಚ್‌ಎಸ್‌ಆರ್ ಲೇಔಟ್, ಮಡಿವಾಳ, ಕೋರಮಂಗಲ, ಅಶೋಕನಗರ, ವಿವೇಕನಗರ, ಶಿವಾಜಿನಗರ, ಎಂ.ಜಿ. ರಸ್ತೆ, ಸಂಪಂಗಿರಾಮನಗರ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆಯಾಗಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಜಿ.ಕೆ.ವಿ.ಕೆ ಬಳಿ ಮೇಲ್ಸೇತುವೆಯಲ್ಲಿ ಧಾರಾಕಾರವಾಗಿ ನೀರು ಹರಿಯಿತು. ಮಳೆ ನೀರು, ಮೇಲ್ಸೇತುವೆಯಿಂದ ಕೆಳಗಿನ ರಸ್ತೆ ಮೇಲೆ ಬಿದ್ದಿದ್ದರಿಂದ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು.

‘ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿರುವುದರಿಂದ ಉತ್ತಮ ಮಳೆ ಆಗುತ್ತಿದೆ. ಶನಿವಾರವೂ ಜಿಟಿ ಜಿಟಿ ಮಳೆ ಆಗಿತ್ತು. ಆದರೆ, ಭಾನುವಾರ ಮಳೆ ಪ್ರಮಾಣ ಕಡಿಮೆ ಇತ್ತು. ನಗರದಲ್ಲಿ ಆಗಾಗ ಮಳೆ ಆಗುತ್ತಿದೆ. ರಸ್ತೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯುತ್ತಿದ್ದ ಬಗ್ಗೆ ಹೆಚ್ಚು ದೂರುಗಳು ಬರುತ್ತಿವೆ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ತಿರುಪತಿ: ನೀರಿನ ಸಂಗ್ರಹಾಗಾರದಲ್ಲಿ ಬಿರುಕು

ತಿರುಪತಿ (ಪಿಟಿಐ): ರಾಮಚಂದ್ರ ಮಂಡಲ್‌ನಲ್ಲಿರುವ 500 ವರ್ಷಗಳಷ್ಟು ಹಳೆಯದಾದ ರಾಯಲಚೆರುವು ಹೆಸರಿನ ಬೃಹತ್ ನೀರಿನ ಸಂಗ್ರಹಾಗಾರದ ಬದುವಿನಲ್ಲಿ ಬಿರುಕು ಕಾಣಿಸಿಕೊಂಡಿದ್ದು, ಸಮೀಪದ 16 ಗ್ರಾಮಗಳ ಜನರಿಗೆ ಎತ್ತರದ ಸ್ಥಳಗಳಿಗೆ ಸ್ಥಳಾಂತರಗೊಳ್ಳುವಂತೆ ಚಿತ್ತೂರು ಜಿಲ್ಲಾಡಳಿತ ಭಾನುವಾರ ಸಂಜೆ ಸೂಚನೆ ನೀಡಿದೆ.

ಕೆಲವು ದಿನಗಳಿಂದ ಸುರಿದ ಭಾರಿ ಮಳೆಯಿಂದ ಸಂಗ್ರಹಾಗಾರ ಭರ್ತಿಯಾಗಿದೆ. ಇದರಿಂದ ಕಾಣಿಸಿಕೊಂಡಿರುವ ಬಿರುಕುಗಳನ್ನು ಜಿಲ್ಲಾಡಳಿತ ಮುಚ್ಚುತ್ತಿದೆ.

ಕಾಂಗ್ರೆಸ್‌ಗೆ ನೇಮಕ

ರಾಜರಾಜೇಶ್ವರಿ ನಗರ: ಲಗ್ಗೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಎ.ಅಮರನಾಥ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ನೇಮಕ ಮಾಡಿದ್ದಾರೆ.

ಸುದ್ದಿ 2 ನಿಮಿಷ

ನಕಲಿ ಛಾಪಾ ಕಾಗದ; ವಿಧಾನಸೌಧ ಸಿಬ್ಬಂದಿ ವಿಚಾರಣೆ

ಬೆಂಗಳೂರು: ನಕಲಿ ಛಾಪಾ ಕಾಗದ ಮಾರಾಟ ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಶೇಷ ತನಿಖಾ ತಂಡದ (ಎಎಸ್‌ಟಿ) ಅಧಿಕಾರಿಗಳು, ವಿಧಾನಸೌಧದ ಸಿಬ್ಬಂದಿ ಬಾಬು ಎಂಬುವರನ್ನು ಭಾನುವಾರ ವಿಚಾರಣೆಗೆ ಒಳಪಡಿಸಿದರು.

ಹಲವು ವರ್ಷಗಳಿಂದ ಸಕ್ರಿಯವಾಗಿದ್ದ ಜಾಲವನ್ನು ಭೇದಿಸಿದ್ದ ಎಸ್‌ಐಟಿ, ವಿವೇಕನಗರದ ಹುಸೇನ್ ಮೋದಿ ಬಾಬು (58), ಬಾಪೂಜಿನಗರದ ಸೀಮಾ ಅಲಿಯಾಸ್ ಶಾವರ್ (45), ಶಾಮಣ್ಣ ನಗರದ ನಯಾಜ್ ಅಹಮ್ಮದ್ (45), ವಿಜಯನಗರದ ಶಬ್ಬೀರ್ ಅಹಮದ್ (38) ಹಾಗೂ ಬಸವೇಶ್ವರನಗರದ ಸಿ.ಎಸ್. ಹರೀಶ್ (55) ಎಂಬುವರನ್ನು ಈಗಾಗಲೇ ಬಂಧಿಸಿದೆ.

‘ಆರೋಪಿ ಸೀಮಾ ಪತಿಯಾಗಿರುವ ಬಾಬು, ವಿಧಾನಸೌಧದ ಸ್ವಚ್ಛತಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರಕರಣದಲ್ಲಿ ಅವರು ಭಾಗಿಯಾಗಿರುವ ಅನುಮಾನವಿದ್ದು, ಈಗಾಗಲೇ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಿಧಾನಸೌಧ ಆವರಣದಲ್ಲೇ ನಕಲಿ ಛಾಪಾ ಕಾಗದಗಳನ್ನು ಮಾರುತ್ತಿದ್ದ ಮಾಹಿತಿಯೂ ಲಭ್ಯವಾಗಿದೆ. ಈ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ. ಬಾಬು ವಿಚಾರಣೆಯಿಂದ ಮತ್ತಷ್ಟು ಮಾಹಿತಿ ಸಿಗಬೇಕಿದೆ’ ಎಂದೂ ತಿಳಿಸಿವೆ.

ಪ್ರಯಾಣಿಕರ ಸೋಗಿನಲ್ಲಿ ಕಳವು; ಇಬ್ಬರ ಬಂಧನ

ಬೆಂಗಳೂರು: ಬಿಎಂಟಿಸಿ ಬಸ್ಸಿನಲ್ಲಿ ಪ್ರಯಾಣಿಕರ ಸೋಗಿನಲ್ಲಿ ಸಂಚರಿಸಿ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದಾರೆ.

‘ಸೂರ್ಯ ಹಾಗೂ ರಾಜ್‌ಕುಮಾರ್ ಬಂಧಿತರು. ಮನೆಯಲ್ಲಿ ಕಳ್ಳತನ ಹಾಗೂ ವಾಹನ ಕಳವು ಪ್ರಕರಣದಲ್ಲೂ ಈ ಆರೋಪಿಗಳು ಭಾಗಿಯಾಗಿದ್ದರು. ಅವರಿಂದ ₹ 23.50 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ 4 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಮೆಜೆಸ್ಟಿಕ್‌ನಿಂದ ರಾಜರಾಜೇಶ್ವರಿನಗರಕ್ಕೆ ಬಿಎಂಟಿಸಿ ಬಸ್‌ನಲ್ಲಿ ಹೊರಟಿದ್ದ ಮಹಿಳೆಯೊಬ್ಬರ ವ್ಯಾನಿಟಿ ಬ್ಯಾಗ್ ಇತ್ತೀಚೆಗೆ ಕಳುವಾಗಿತ್ತು. ಬ್ಯಾಗ್‌ನಲ್ಲಿ ಚಿನ್ನಾಭರಣಗಳು ಇದ್ದವು. ಕಳ್ಳತನ ಸಂಬಂಧ ಮಹಿಳೆ ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡಾಗ ಆರೋಪಿಗಳ ಸುಳಿವು ಸಿಕ್ಕಿತ್ತು. ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡರು’ ಎಂದೂ ತಿಳಿಸಿದರು.

ನೂಕುನುಗ್ಗಲಿನಲ್ಲಿ ಓಡಾಡಿ ಕೃತ್ಯ: ‘ಮೆಜೆಸ್ಟಿಕ್‌ನಿಂದ ಹೊರಡುತ್ತಿದ್ದ ಬಸ್‌ಗಳಲ್ಲಿ ಹತ್ತುತ್ತಿದ್ದ ಆರೋಪಿಗಳು, ಪ್ರಯಾಣಿಕರ ನೂಕುನುಗ್ಗಲಿನಲ್ಲಿ ಓಡಾಡಿ ಬ್ಯಾಗ್, ಚಿನ್ನಾಭರಣ ಕದಿಯುತ್ತಿದ್ದರು. ಕೃತ್ಯದ ನಂತರ, ತಂಗುದಾಣದಲ್ಲಿ ಇಳಿದು ಪರಾರಿಯಾಗುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಜ್ಞಾನಭಾರತಿ, ಕೆಂಗೇರಿ, ಅನ್ನಪೂರ್ಣೇಶ್ವರಿನಗರ, ಉಪ್ಪಾರಪೇಟೆ, ರಾಮನಗರ ಹಾಗೂ ಬಿಜೂರು ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಕೃತ್ಯ ಎಸಗಿರುವ ಮಾಹಿತಿ ಇದೆ. ಎರಡು ಮನೆಗಳಲ್ಲೂ ಚಿನ್ನಾಭರಣ ಕದ್ದಿರುವ ಸಂಗತಿ ಗೊತ್ತಾಗಿದೆ’ ಎಂದೂ ವಿವರಿಸಿದರು.

ಇನ್‌ಸ್ಟಾಗ್ರಾಮ್; ₹ 45.31 ಲಕ್ಷ ಕಳೆದುಕೊಂಡ ಮಹಿಳೆ

ಬೆಂಗಳೂರು: ‘ಇನ್‌ಸ್ಟಾಗ್ರಾಮ್’ ಆ್ಯಪ್ ಮೂಲಕ ನಗರದ ಮಹಿಳೆಯೊಬ್ಬರನ್ನು ಪರಿಚಯ ಮಾಡಿಕೊಂಡಿದ್ದ ಸೈಬರ್ ವಂಚಕರು, ಉಡುಗೊರೆ ಆಮಿಷವೊಡ್ಡಿ ₹ 45.31 ಲಕ್ಷ ಪಡೆದು ವಂಚಿಸಿದ್ದಾರೆ.

30 ವರ್ಷದ ಮಹಿಳೆ, ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ. ಆರೋಪಿಗಳಾದ ಅಲೆಕ್ಸ್ ಎರಿಕ್, ವೀರ್ ಪಾಲ್, ಬೆನ್ ಹಾಗೂ ಮಥುರಾ ಅನಿವರ್ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ವರ್ತೂರು ನಿವಾಸಿಯಾದ ಮಹಿಳೆ ನೀಡಿರುವ ದೂರು ಆಧರಿಸಿ ತನಿಖೆ ಆರಂಭಿಸಲಾಗಿದೆ.’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಹಡಗು ಕ್ಯಾಪ್ಟನ್ ಸೋಗಿನಲ್ಲಿ ವಂಚನೆ: ‘ಮಹಿಳೆಯ ಇನ್‌ಸ್ಟಾಗ್ರಾಮ್ ಖಾತೆಗೆ ರಿಕ್ವೆಸ್ಟ್ ಕಳುಹಿಸಿದ್ದ ಆರೋಪಿ ಅಲೆಕ್ಸ್ ಎರಿನ್, ತಾನೊಬ್ಬ ಅಂತರರಾಷ್ಟ್ರೀಯ ಹಡಗಿನ ಕ್ಯಾಪ್ಟನ್ ಎಂಬುದಾಗಿ ಹೇಳಿಕೊಂಡಿದ್ದ. ಅದನ್ನು ನಂಬಿದ್ದ ಮಹಿಳೆ, ರಿಕ್ವೆಸ್ಟ್ ಸ್ವೀಕರಿಸಿದ್ದರು. ನಂತರ, ಇಬ್ಬರೂ ಪರಸ್ಪರ ಚಾಟಿಂಗ್ ಮಾಡಲಾರಂಭಿಸಿದ್ದರು.’

‘ಆರೋಪಿ, ಸ್ನೇಹದ ನೆನಪಿಗಾಗಿ ಉಡುಗೊರೆ ಕಳುಹಿಸುವುದಾಗಿ ಹೇಳಿದ್ದ. ಸೆ. 30ರಂದು ಮಹಿಳೆಗೆ ಕರೆ ಮಾಡಿದ್ದ ಮತ್ತೊಬ್ಬ ಆರೋಪಿ, ದೆಹಲಿ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಯೆಂದು ಪರಿಚಯಿಸಿಕೊಂಡು, ವಿದೇಶದಿಂದ ಬೆಲೆಬಾಳುವ ಡೈಮಂಡ್ ಉಡುಗೊರೆ ಬಂದಿರುವುದಾಗಿ ಹೇಳಿದ್ದ ಆತ, ಕೆಲ ಶುಲ್ಕ ಪಾವತಿಸುವಂತೆ ಹೇಳಿದ್ದ’

‘ಆರೋಪಿ ಮಾತು ನಂಬಿದ್ದ ಮಹಿಳೆ, ಆತನ ಖಾತೆಗಳಿಗೆ ₹ 45.31 ಲಕ್ಷ ಪಾವತಿಸಿದ್ದರು. ಹಣ ಪಡೆದ ಆರೋಪಿಗಳು ಉಡುಗೊರೆ ಕಳುಹಿಸಿರಲಿಲ್ಲ. ಮೊಬೈಲ್ ಸ್ವಿಚ್ ಆಫ್ ಮಾಡಿ ಆರೋಪಿಗಳು ನಾಪತ್ತೆಯಾಗಿದ್ದಾರೆ’ ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.

ಕೆಐಎ ರಸ್ತೆಯಲ್ಲಿ ಅಪಘಾತ ಹೆಚ್ಚಳ: ಪರಿಶೀಲನೆ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಪರ್ಕ ರಸ್ತೆಯಲ್ಲಿ ಅಪಘಾತಗಳು ಹೆಚ್ಚಾಗುತ್ತಿದ್ದು, ಕಾರಣ ಪತ್ತೆ ಮಾಡಲು ಅಧಿಕಾರಿಗಳ ತಂಡ ಭಾನುವಾರ ಸ್ಥಳ ಪರಿಶೀಲನೆ ನಡೆಸಿತು.

ಇತ್ತೀಚೆಗಷ್ಟೇ ರಸ್ತೆ ವಿಭಜಕ್ಕೆ ಕಾರು ಗುದ್ದಿದ್ದರಿಂದ ಮೂವರು ಮೃತಪಟ್ಟಿದ್ದರು. ಈ ಪ್ರಕರಣದ ತನಿಖೆ ಆರಂಭಿಸಿರುವ ಸಂಚಾರ ಪೊಲೀಸರು, ಅಪಘಾತಗಳು ಸಂಭವಿಸದಂತೆ ತಡೆಯಲು ಕ್ರಮ ಕೈಗೊಂಡಿದ್ದಾರೆ.

ಅಪಘಾತ ಸಂಭವಿಸಿದ ತಾಣಗಳಿಗೆ ಎಂಜಿನಿಯರ್‌ಗಳ ಜೊತೆ ಭೇಟಿ ನೀಡಿದ್ದ ಉತ್ತರ ವಿಭಾಗದ (ಸಂಚಾರ) ಡಿಸಿಪಿ ಎಸ್. ಸವಿತಾ, ಅಲ್ಲಿನ ಸ್ಥಿತಿಗತಿ ಕುರಿತು ಮಾಹಿತಿ ಪಡೆದುಕೊಂಡರು. ರಸ್ತೆಯ ಕೆಲವೆಡೆ ಕಾಮಗಾರಿ ಪ್ರಗತಿಯಲ್ಲಿದ್ದು, ಅಲ್ಲಲ್ಲಿ ವಿಭಜಕಗಳು ಸಮರ್ಪಕವಾಗಿಲ್ಲ. ಈ ಬಗ್ಗೆಯೂ ಚರ್ಚಿಸಿದರು.

ಬೈಕ್ ಗುದ್ದಿ ವೃದ್ಧ ಸಾವು

ಬೆಂಗಳೂರು: ಕೆ.ಜಿ. ಹಳ್ಳಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬೈಕೊಂದು ಗುದ್ದಿ ವೃದ್ಧ ಹುಸೇನ್ ಖಾನ್ (81) ಎಂಬುವರು ಮೃತಪಟ್ಟಿದ್ದಾರೆ.

‘ಸಗಾಯಪುರ ಮುಖ್ಯರಸ್ತೆಯ ಹಳೇ ಬಾಗಲೂರು ಲೇಔಟ್ ನಿವಾಸಿ ಹುಸೇನ್ ಖಾನ್, ಬಡಗಿ ಕೆಲಸ ಮಾಡುತ್ತಿದ್ದರು. ಶನಿವಾರ ರಾತ್ರಿ ಊಟಕ್ಕೆಂದು ತಮ್ಮ ಮನೆಯಿಂದ ಮಗನ ಮನೆಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಪಘಾತದಿಂದ ಹುಸೇನ್ ಖಾನ್ ತಲೆಗೆ ತೀವ್ರ ಪೆಟ್ಟು ಬಿದ್ದು, ರಕ್ತಸ್ರಾವವಾಗುತ್ತಿತ್ತು. ಅವರನ್ನು ನಿಮ್ಹಾನ್ಸ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ತಡರಾತ್ರಿ ಅವರು ಅಸುನೀಗಿದ್ದಾರೆ’ ಎಂದೂ ತಿಳಿಸಿವೆ.

‘ಅಪಘಾತದ ನಂತರ ಬೈಕ್ ಬಿಟ್ಟು, ಸವಾರ ಪರಾರಿಯಾಗಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದೂ ಮೂಲಗಳು ಹೇಳಿವೆ.

ಪೊಲೀಸರ ಮೇಲೆಯೇ ಹಲ್ಲೆ; ರೌಡಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ತನ್ನನ್ನು ಬಂಧಿಸಲು ಬಂದ ಪೊಲೀಸರ ಮೇಲೆಯೇ ಹಲ್ಲೆ ಮಾಡಿದ್ದ ಆರೋಪದಡಿ ರೌಡಿ ಅಸ್ಲಾಂ ಪಾಷಾನನ್ನು (50) ಸೆರೆ ಹಿಡಿಯಲಾಗಿದ್ದು, ಆತನಿಂದ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ.

‘ಮೊಬೈಲ್ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಇತ್ತೀಚೆಗಷ್ಟೇ ಮಾಗಡಿ ಠಾಣೆ ಪೊಲೀಸರು ಬಂಧಿಸಿದ್ದರು. ಕದ್ದ ಮೊಬೈಲ್‌ಗಳನ್ನು ಅಸ್ಲಾಂ ಪಾಷಾಗೆ ಮಾರುತ್ತಿದ್ದ ಸಂಗತಿಯನ್ನು ಆರೋಪಿ ಬಾಯ್ಬಿಟ್ಟಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಜಗಜೀವನ್‌ರಾಮ್ ನಿವಾಸಿ ಅಸ್ಲಾಂ ಪಾಷಾನನ್ನು ವಶಕ್ಕೆ ಪಡೆಯಲು ಪೊಲೀಸರ ತಂಡ, ಆತನ ಮನೆಗೆ ಹೋಗಿತ್ತು. ರೌಡಿ ಹಾಗೂ ಆತನ ಕುಟುಂಬದವರು, ಪೊಲೀಸರ ಜೊತೆಯೇ ಜಗಳ ತೆಗೆದು ಹಲ್ಲೆ ಮಾಡಿದ್ದರು. ಹೆಚ್ಚುವರಿ ಸಿಬ್ಬಂದಿ ಸ್ಥಳಕ್ಕೆ ಹೋಗಿ ರೌಡಿಯನ್ನು ಬಂಧಿಸಿ ಠಾಣೆಗೆ ಕರೆತಂದಿದ್ದಾರೆ’ ಎಂದೂ ತಿಳಿಸಿವೆ.

‘ಪೊಲೀಸರ ಮೇಲೆ ಹಲ್ಲೆ ಮಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಅಸ್ಲಂ ಪಾಷಾ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ಹೇಳಿವೆ.

ಹೊರ ರಾಜ್ಯಗಳಿಗೆ ಮಾರಾಟ: ‘ಅಸ್ಲಾಂ ಪಾಷಾ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ 15ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಕದ್ದ ಮೊಬೈಲ್‌ಗಳನ್ನು ಖರೀದಿಸುತ್ತಿದ್ದ ಆತ, ಹೊರ ರಾಜ್ಯಗಳಲ್ಲಿ ಅವುಗಳನ್ನು ಮಾರಾಟ ಮಾಡಿಸುತ್ತಿದ್ದ ಮಾಹಿತಿ ಇದೆ’ ಎಂದೂ ಮೂಲಗಳು ತಿಳಿಸಿವೆ.

ಮಹದೇವಪುರ ಕ್ಷೇತ್ರ: ಆಮ್ ಆದ್ಮಿ ಪಕ್ಷದ ಕಾರ್ಯಕರ್ತರ ಪ್ರತಿಭಟನೆ

ರಾಜಕಾಲುವೆ ಒತ್ತುವರಿ: ಲಿಂಬಾವಳಿ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್. ಪುರ: ಮಹದೇವಪುರ ಕ್ಷೇತ್ರದ ಜುನ್ನಸಂದ್ರದಲ್ಲಿ ಒತ್ತುವರಿ ತೆರವುಗೊಳಿಸಬೇಕು ಎಂದು ಒತ್ತಾಯಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಭಾನುವಾರ ಪ್ರತಿಭಟನೆ ನಡೆಸಿದರು.

ಪ್ರಭಾವಿಗಳಿಂದ ರಾಜಕಾಲುವೆ ಒತ್ತುವರಿಯಾಗಿದೆ. ಆದರೆ, ಶಾಸಕ ಅರವಿಂದ ಲಿಂಬಾವಳಿ ನಿರ್ಲಕ್ಷ್ಯ ವಹಿಸಿದ್ದಾರೆ. ಒತ್ತುವರಿಯ ಹೊಣೆ ಹೊತ್ತು ಲಿಂಬಾವಳಿ ಅವರು ರಾಜೀನಾಮೆ ನೀಡಬೇಕು ನೀಡಬೇಕು ಎಂದು ಒತ್ತಾಯಿಸಿದರು.

‘ಕ್ಷೇತ್ರದಲ್ಲಿನ ಇಂದಿನ ದುಃಸ್ಥಿತಿಗೆ ಶಾಸಕರ ನಿರ್ಲಕ್ಷ್ಯವೇ ಕಾರಣ. ಕಳೆದ 13 ವರ್ಷಗಳಿಂದ ಶಾಸಕರಾಗಿದ್ದರೂ ಕ್ಷೇತ್ರದ ಅಭಿವೃದ್ಧಿ ಕಡೆಗಣಿಸಿದ್ದಾರೆ. ರಸ್ತೆಗಳು ಹದಗೆಟ್ಟಿವೆ’ ಎಂದು ಬೆಂಗಳೂರು ನಗರ ಘಟಕದ ಅಧ್ಯಕ್ಷ ಆಮ್ ಆದ್ಮಿ ಪಕ್ಷದ ಅಧ್ಯಕ್ಷ ಮೋಹನ್ ದಾಸರಿ ದೂರಿದರು.

ಮಹದೇವಪುರದಲ್ಲಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

‘ಜುನ್ನಸಂದ್ರ ಹಾಗೂ ಹಾಲನಾಯಕನಹಳ್ಳಿ ರಾಜಕಾಲುವೆಗಳು ಒತ್ತುವರಿಯಾಗಿರುವುದರಿಂದ ಸುತ್ತಮುತ್ತ ಪ್ರದೇಶಗಳಲ್ಲಿ ಕೊಳಚೆ ನೀರು ಹರಿಯುತ್ತಿದೆ. ಜನರ ಹಿತಾಸಕ್ತಿ ಕಾಪಾಡಬೇಕಾದ ಶಾಸಕರು ಒತ್ತುವರಿದಾರರಿಗೆ ಬೆಂಬಲ ನೀಡುತ್ತಿದ್ದಾರೆ’ ಎಂದು ಆಮ್ ಆದ್ಮಿ ಪಕ್ಷದ ಮಹದೇವಪುರ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ಅಶೋಕ್ ಮೃತ್ಯುಂಜಯ ಆರೋಪಿಸಿದರು.

> **ಮಳೆಯಿಂದ ರಸ್ತೆಗಳಲ್ಲಿ ನೀರು ನಿಂತಿರಬಹುದು. ಒಂದು ವೇಳೆ ಒತ್ತುವರಿಯಾಗಿದ್ದರೆ, ಅದರ ಪಟ್ಟಿಯನ್ನು ನನಗೆ ನೀಡಲಿ**
> **ಅರವಿಂದ ಲಿಂಬಾವಳಿ,** ಶಾಸಕ, ಮಹದೇವಪುರ ಕ್ಷೇತ್ರ

‘ಮಳೆಗಾಲದಲ್ಲಿ ಈ ಭಾಗದ ರಸ್ತೆಗಳಲ್ಲಿ ಕನಿಷ್ಠ ಎರಡು ಅಡಿಗಳವರೆಗೆ ನೀರು ನಿಂತು, ಇಲ್ಲಿನ ಸಾರ್ವಜನಿಕರಿಗೆ ಸಮಸ್ಯೆಯಾಗುತ್ತದೆ. ನೀರು ನಿಂತ ಪರಿಣಾಮ ಆರೋಗ್ಯ ಸಮಸ್ಯೆಗಳೂ ಹೆಚ್ಚಾಗುತ್ತಿವೆ. ಒತ್ತುವರಿ ವಿಷಯವನ್ನು ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮಕೈಗೊಳ್ಳುತ್ತಿಲ್ಲ. ಒತ್ತುವರಿದಾರರನ್ನು ರಕ್ಷಿಸುವ ಪ್ರಯತ್ನಗಳು ನಡೆಯುತ್ತಿವೆ’ ಎಂದು ದೂರಿದರು.

‘ಶಾಸಕರ ವಿರುದ್ಧ ಸುಳ್ಳು ಆರೋಪ’

ಮಹದೇವಪುರ ಕ್ಷೇತ್ರದ ವ್ಯಾಪ್ತಿಯ ’ರೈನ್‌ಬೊ ಡ್ರೈವ್’ ಬಡಾವಣೆಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿ ನಿರ್ಮಿಸಿದ ಕಟ್ಟಡಗಳ ವಿಷಯಕ್ಕೆ ಸಂಬಂಧಿಸಿದಂತೆ ಶಾಸಕ ಅರವಿಂದ ಲಿಂಬಾವಳಿ ವಿರುದ್ಧ ಮಾನ ಹಾನಿಕರ ಮತ್ತು ಸುಳ್ಳು ಆರೋಪಗಳನ್ನು ಆಮ್ ಆದ್ಮಿ ಪಕ್ಷ ಮಾಡುತ್ತಿದೆ ಎಂದು ಮಹದೇವಪುರ ಬಿಜೆಪಿ ನಗರ ಮಂಡಲ ಅಧ್ಯಕ್ಷ ಮನೋಹರ್ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಅರವಿಂದ ಲಿಂಬಾವಳಿ ಅವರು 2008ರಲ್ಲಿ ಶಾಸಕರಾಗುವ ಮುನ್ನವೇ, ಹಾಲನಾಯಕನಹಳ್ಳಿ ಮತ್ತು ಜುನ್ನಸಂದ್ರ ಗ್ರಾಮದ ಕೆಲವು ಸರ್ವೇ ನಂಬರ್ ಜಮೀನುಗಳಲ್ಲಿ ಈ ರೈನ್ ಬೋ ಬಡಾವಣೆ ಇತ್ತು. ಈ ಪ್ರದೇಶದಲ್ಲಿ ರಾಜಕಾಲುವೆ ಒತ್ತುವರಿ ಆಗಿರುವುದು ವಾಸ್ತವ ಸಂಗತಿ. ಒತ್ತುವರಿಗಳನ್ನು ತೆರವುಗೊಳಿಸಲು ಬೆಂಗಳೂರು ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಅವರು 2014ರ ಜೂನ್ 27ರಂದು ಆದೇಶ ನೀಡಿದ್ದರು. ಆದರೆ, ಇದರ ವಿರುದ್ಧ ಕೆಲವರು ನ್ಯಾಯಾಲಯದ ಮೊರೆ ಹೋಗಿದ್ದರು. ಇದರಿಂದ, ತೆರವು ಕಾರ್ಯಾಚರಣೆ ವಿಳಂಬವಾಗಿತ್ತು ಎಂದು ತಿಳಿಸಿದರು.

‘ಬಿಟ್ ಕಾಯಿನ್’ ಹಗರಣ ಬೆಳಕಿಗೆ ಬಂದ ಬಳಿಕ ಜನರಲ್ಲಿ ಕುತೂಹಲ • ರಾಜ್ಯದಾದ್ಯಂತ ದೂರುಗಳ ಸಂಖ್ಯೆ ಹೆಚ್ಚಳ

ವಂಚನೆಗೆ ‘ಕ್ರಿಪ್ಟೊ ಕರೆನ್ಸಿ’ ಬಂಡವಾಳ

• ಸಂತೋಷ ಜಿಗಳಿಕೊಪ್ಪ

ಮುಖ್ಯಾಂಶಗಳು

- ವಾಟ್ಸ್‌ಆ್ಯಪ್ ಸಂದೇಶ ಕಳುಹಿಸುವ ಆರೋಪಿಗಳು
- ಎಂಜಿನಿಯರಿಂಗ್ ವಿದ್ಯಾರ್ಥಿಗೂ ವಂಚನೆ
- ಹಣ ಪಡೆದ ಬಳಿಕ ನಾಪತ್ತೆಯಾಗುವ ವಂಚಕರು

ಪ್ರಜಾವಾಣಿ ವಿಶೇಷ

ಬೆಂಗಳೂರು: ‘ಬಿಟ್ ಕಾಯಿನ್’ ಹಗರಣ ರಾಜ್ಯದಲ್ಲಿ ಸದ್ದು ಮಾಡುತ್ತಿದ್ದಂತೆ, ‘ಕ್ರಿಪ್ಟೊ ಕರೆನ್ಸಿ’ ಮೇಲೆ ಹೂಡಿಕೆ ಮಾಡುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಕಡಿಮೆ ಸಮಯದಲ್ಲಿ ಹೆಚ್ಚು ಹಣ ಸಂಪಾದಿಸಬಹುದೆಂಬ ಆಸೆಗೆ ಬಿದ್ದು ‘ಕ್ರಿಪ್ಟೊ ಕರೆನ್ಸಿ’ ಮೇಲೆ ಹೂಡಿಕೆ ಮಾಡುತ್ತಿರುವ ಸಾಕಷ್ಟು ಮಂದಿ, ವಂಚಕರ ಜಾಲಕ್ಕೆ ಸಿಲುಕಿ ಹಣ ಕಳೆದುಕೊಳ್ಳುತ್ತಿದ್ದಾರೆ.

ಚಾಲ್ತಿಯಲ್ಲಿರುವ ನೋಟುಗಳಿಗೆ ಪರ್ಯಾಯವಾಗಿ ವ್ಯವಹರಿಸಲು ಡಿಜಿಟಲ್ ರೂಪದಲ್ಲಿ ‘ಕ್ರಿಪ್ಟೊ ಕರೆನ್ಸಿ’ಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ. ಕೆಲ ಮಧ್ಯವರ್ತಿ ಏಜೆನ್ಸಿಗಳು, ಕಮಿಷನ್ ಆಧಾರದಲ್ಲಿ ಕ್ರಿಪ್ಟೊ ಕರೆನ್ಸಿ ಖರೀದಿ ಹಾಗೂ ಮಾರಾಟ ವ್ಯವಹಾರ ಮಾಡುತ್ತಿವೆ. ಜೊತೆಯಲ್ಲೇ ಕೆಲ ವಂಚಕ ಕಂಪನಿಗಳು, ಕ್ರಿಪ್ಟೊ ಕರೆನ್ಸಿಯನ್ನೇ ಬಂಡವಾಳ ಮಾಡಿಕೊಂಡು ಹೂಡಿಕೆ ಹೆಸರಿನಲ್ಲಿ ವಂಚಿಸುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ.

‘ಕ್ರಿಪ್ಟೊ ಕರೆನ್ಸಿ’ಗಳಲ್ಲಿ ಒಂದಾದ ‘ಬಿಟ್ ಕಾಯಿನ್’ ಹಗರಣದ ಸೂತ್ರಧಾರ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ಬಂಧನದ ನಂತರ ಜನರಲ್ಲೂ ಕುತೂಹಲ ಮೂಡಿದೆ. ಬಿಟ್ ಕಾಯಿನ್ ಮೇಲೆ ಹೂಡಿಕೆ ಮಾಡಲು ಯೋಚಿಸುತ್ತಿರುವ ಕೆಲವರು, ಅಂತರ್ಜಾಲದಲ್ಲಿ ಹುಡುಕಾಟ ನಡೆಸುತ್ತಿದ್ದಾರೆ. ಆ ಪೈಕಿ ಅನೇಕರು, ವಂಚಕ ಕಂಪನಿಗಳಿಂದ ಹಣ ಕಳೆದುಕೊಂಡು ನ್ಯಾಯಕ್ಕಾಗಿ ಪೊಲೀಸ್ ಠಾಣೆಗಳ ಮೆಟ್ಟಿಲೇರಿದ್ದಾರೆ.

‘ಬಹುತೇಕ ಜನರಿಗೆ ಕ್ರಿಪ್ಟೊ ಕರೆನ್ಸಿ ವ್ಯವಹಾರದ ಬಗ್ಗೆ ಮಾಹಿತಿ ಇಲ್ಲ. ಅಂತರ್ಜಾಲದ ಮಾಹಿತಿ ನಂಬಿ ಕಂಪನಿಗಳ ಪ್ರತಿನಿಧಿಗಳನ್ನು ಸಂಪರ್ಕಿಸುತ್ತಿರುವ ಸಾರ್ವಜನಿಕರು, ವೈಯಕ್ತಿಕ ಮಾಹಿತಿಗಳನ್ನು ಕೊಟ್ಟು ವಂಚನೆಗೀಡಾಗುತ್ತಿದ್ದಾರೆ. ಈ ಬಗ್ಗೆ ಠಾಣೆಗಳಲ್ಲಿ ನಿತ್ಯವೂ ಪ್ರಕರಣಗಳು ದಾಖಲಾಗುತ್ತಿವೆ’ ಎಂದು ಬೆಂಗಳೂರಿನ ಸೈಬರ್ ಕ್ರೈಂ ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

₹ 5.70 ಲಕ್ಷ ಕಳೆದುಕೊಂಡರು: ಬೆಂಗಳೂರು ದಕ್ಷಿಣ ಸೈಬರ್ ಕ್ರೈಂ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ನಾಗೇಂದ್ರ ಎಂಬುವರು, ಬಿಟ್ ಕಾಯಿನ್ ಮೇಲೆ ₹ 5.70 ಲಕ್ಷ ಹೂಡಿಕೆ ಮಾಡಿ ವಂಚನೆಗೆ ಒಳಗಾಗಿದ್ದಾರೆ. ಈ ಬಗ್ಗೆ ಅವರು ಠಾಣೆಗೆ ದೂರು ನೀಡಿದ್ದಾರೆ.

‘ಅಂತರ್ಜಾಲ ಹಾಗೂ ವಾಟ್ಸ್‌ಆ್ಯಪ್ ಮೂಲಕ ನಾಗೇಂದ್ರ ಅವರನ್ನು ಸಂಪರ್ಕಿಸಿದ್ದ ಆರೋಪಿಗಳು, ಬಿಟ್ ಕಾಯಿನ್ ಟ್ರೇಡಿಂಗ್ ಮಾಡುತ್ತಿರುವುದಾಗಿ ಹೇಳಿದ್ದರು. ‘ಹಣ ಹೂಡಿಕೆ ಮಾಡಿ ಬಿಟ್ ಕಾಯಿನ್ ಖರೀದಿಸಿ. ನೀವು ಯಾವಾಗ ಬೇಕಾದರೂ ಹೂಡಿಕೆಯನ್ನು ವಾಪಸು ಪಡೆಯಬಹುದು. ಮಾರುಕಟ್ಟೆ ದರವನ್ನೇ ವಾಪಸು ನೀಡಲಾಗುವುದು’ ಎಂದಿದ್ದರು. ಅದನ್ನು ನಂಬಿದ್ದ ನಾಗೇಂದ್ರ, ಹಂತ ಹಂತವಾಗಿ ₹ 5.70 ಲಕ್ಷ ಪಾವತಿಸಿದ್ದರು. ಬಿಟ್ ಕಾಯಿನ್ ನೀಡದೇ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

₹20.80 ಲಕ್ಷ ವಂಚನೆ: ಇಂದಿರಾನಗರದ ನಿವಾಸಿ ರಾಕೇಶ್ ಎಂಬುವರು ಸಹ ಕ್ರಿಪ್ಟೊ ಕರೆನ್ಸಿ ನಂಬಿ ₹ 20.80 ಲಕ್ಷ ಕಳೆದುಕೊಂಡಿದ್ದಾರೆ.

‘ಟೆಲಿಗ್ರಾಂ ಆ್ಯಪ್ ಮೂಲಕ ರಾಕೇಶ್ ಅವರನ್ನು ಸಂಪರ್ಕಿಸಿದ್ದ ಆರೋಪಿಗಳು, ಕಡಿಮೆ ದರದಲ್ಲಿ ಕ್ರಿಪ್ಟೊ ಕರೆನ್ಸಿ ಮಾರುವುದಾಗಿ ಹೇಳಿ ಹಣ ಹೂಡಿಕೆ ಮಾಡಿಸಿಕೊಂಡಿದ್ದರು. ಕರೆನ್ಸಿ ಮರು ಮಾರಾಟ ವೇಳೆ ಮಾರುಕಟ್ಟೆ ದರವನ್ನೇ ಪಾವತಿಸುವುದಾಗಿ ಹೇಳಿದ್ದ ಆರೋಪಿಗಳು, ಹಣವನ್ನೂ ವಾಪಸು ನೀಡದೇ ನಾಪತ್ತೆಯಾಗಿದ್ದಾರೆ. ಈ ಬಗ್ಗೆ ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಟ್ಟಿಗೇನಹಳ್ಳಿಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ 24 ವರ್ಷದ ವಿದ್ಯಾರ್ಥಿ ಅವಿಷೇಕ್ ಎಂಬುವರಿಗೂ ಕ್ರಿಪ್ಟೊ ಕರೆನ್ಸಿ ಹೆಸರಿನಲ್ಲಿ ₹ 1.07 ಲಕ್ಷ ವಂಚನೆಯಾಗಿದೆ. ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಕ್ರಿಪ್ಟೊ ಕರೆನ್ಸಿ’ ಬಗೆಗಳು

ಬಿಟ್ ಕಾಯಿನ್ (ಬಿಟಿಸಿ), ಎಥೆರಿಯಮ್ (ಇಟಿಎಚ್), ಬಿನಾನ್ಸ್ ಕಾಯಿನ್ (ಬಿಎನ್‌ಬಿ), ಕಾರ್ಡಾನೊ (ಎಡಿಎ), ಸೋಲಾನಾ (ಎಸ್‌ಒಎಲ್), ಎಕ್ಸ್‌ಆರ್‌ಪಿ, ಪೊಲ್ಕಡಾಟ್ (ಡಿಒಟಿ), ಯುಎಸ್‌ಡಿ ಕಾಯಿನ್ (ಯುಎಸ್‌ಡಿಸಿ), ಶಿಬಾ ಇನು (ಎಸ್‌ಎಚ್‌ಐಬಿ), ಟೆರ್ರಾ (ಎನ್‌ಯುಎನ್‌ಎ)

ಹೋಟೆಲ್ ಮೇಲೆ ದಾಳಿ ಮಾಡಿದ್ದ ಸಿಸಿಬಿ

‘ಕ್ರಿಪ್ಟೊ ಕರೆನ್ಸಿ’ ರೂಪದಲ್ಲಿ ಹಣ ಹೂಡಿಕೆ ಮಾಡಲು ಪ್ರಚೋದಿಸಲು ಕಾರ್ಯಕ್ರಮ ಆಯೋಜಿಸಿದ್ದ ಯಲಹಂಕದ ಹೋಟೆಲೊಂದರ ಮೇಲೆ ಸಿಸಿಬಿ ಪೊಲೀಸರು ಇತ್ತೀಚೆಗಷ್ಟೇ ದಾಳಿ ಮಾಡಿದ್ದರು. ‘ಪೋಮ್ ಎಕ್ಸ್’ ಕಂಪನಿಯ ರಾಘವೇಂದ್ರ, ನಾಗರಾಜು ಹಾಗೂ ಶಿವಮೂರ್ತಿ ಎಂಬುವರನ್ನು ಬಂಧಿಸಿದ್ದರು.

‘ಒಂದು ಕ್ರಿಪ್ಟೊ ಕರೆನ್ಸಿ ಮೇಲೆ 100 ಡಾಲರ್ ಹೂಡಿಕೆ ಮಾಡಿದರೆ ಶೇ 50 ರಷ್ಟು ಲಾಭ, 300 ಡಾಲರ್ ಹೂಡಿಕೆ ಮಾಡಿದರೆ ಶೇ 11, 500 ಡಾಲರ್ ಹೂಡಿದರೆ ಶೇ 12, 1,000 ಡಾಲರ್ ಹೂಡಿಕೆ ಮಾಡಿದರೆ ಶೇ 13, 5,000 ಸಾವಿರ ಡಾಲರ್ ಹೂಡಿಕೆ ಮಾಡಿದರೆ ಶೇ 14, ಹಾಗೂ 10,000 ಡಾಲರ್ ಹೂಡಿಕೆ ಮಾಡಿದರೆ ಶೇ 15ರಷ್ಟು ಲಾಭ ಕೊಡುವುದಾಗಿ ಜನರಿಗೆ ಆಮಿಷವೊಡ್ಡಿದ್ದರು’ ಎಂದೂ ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಕ್ರಿಪ್ಟೊ ಕರೆನ್ಸಿ’ ಸಂದೇಶ ನಂಬುವ ಮುನ್ನ ಎಚ್ಚರ

‘ಕ್ರಿಪ್ಟೊ ಕರೆನ್ಸಿ’ ವ್ಯವಹಾರದ ಬಗ್ಗೆ ಇ-ಮೇಲ್, ಟೆಲಿಗ್ರಾಂ, ವಾಟ್ಸ್‌ಆ್ಯಪ್ ಹಾಗೂ ಫೇಸ್‌ಬುಕ್ ಮೆಸೆಂಜರ್ ಮೂಲಕ ಸಂದೇಶ ಕಳುಹಿಸುವ ವಂಚಕರು, ಜನರನ್ನು ನಂಬಿಸಿ ಹಣ ಪಡೆದು ವಂಚಿಸುತ್ತಿದ್ದಾರೆ. ಇಂಥ ಸಂದೇಶಗಳನ್ನು ನಂಬುವ ಮುನ್ನ ಜನರು ಎಚ್ಚರಿಕೆ ವಹಿಸಬೇಕು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಸುದ್ದಿ 2 ನಿಮಿಷ

ವಿಧಾನ ಮಂಡಲಕ್ಕೆ ಆರ್ಥಿಕ ಸ್ವಾಯತ್ತತೆ: ಸಿಎಂ ಜೊತೆ ಚರ್ಚೆ– ಕಾಗೇರಿ

ಬೆಂಗಳೂರು: ‘ವಿಧಾನ ಮಂಡಲದ ಸಚಿವಾಲಯಗಳಿಗೆ ಆರ್ಥಿಕ ಸ್ವಾಯತ್ತತೆ ನೀಡಬೇಕೆಂಬ ಬಗ್ಗೆ ಮುಖ್ಯಮಂತ್ರಿ ಜತೆ ಶೀಘ್ರ ಚರ್ಚಿಸಲು ನಿರ್ಧರಿಸಿದ್ದೇನೆ’ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಭಾನುವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು, ‘ಎಲ್ಲ ರಾಜ್ಯಗಳ ವಿಧಾನ ಮಂಡಲ ಸಚಿವಾಲಯಗಳಿಗೆ ಆರ್ಥಿಕ ಸ್ವಾಯತ್ತತೆ ಕುರಿತಂತೆ ನ. 17ಮತ್ತು 18ರಂದು ಹಿಮಾಚಲ ಪ್ರದೇಶದಲ್ಲಿ ನಡೆದ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ನಿರ್ಣಯ ಸ್ವೀಕರಿಸಲಾಗಿದೆ’ ಎಂದರು.

‘ಶಾಸಕಾಂಗದ ಘನತೆ-ಗೌರವ ಕಾಪಾಡುವುದೂ ಮುಖ್ಯ. ಬಜೆಟ್ ಬಳಿಕ ಹೆಚ್ಚುವರಿ ಅನುದಾನಕ್ಕೆ ಇಲಾಖೆಗಳಂತೆ ಶಾಸಕಾಂಗವು ಆರ್ಥಿಕ ಇಲಾಖೆಗೆ ಅಂಗಲಾಚುವುದು ಸರಿಯಲ್ಲ. ಈ ಕಾರಣಕ್ಕೆ ಆರ್ಥಿಕ ಸ್ವಾಯತ್ತತೆ ಅಗತ್ಯವಾಗಿದೆ’ ಎಂದು ಪ್ರತಿಪಾದಿಸಿದರು.

‘ಸಂಸತ್‌ನ ಮಾದರಿಯನ್ನು ಪಾಲಿಸಲು ಪೀಠಾಸೀನಾಧಿಕಾರಿಗಳ ಸಮಾವೇಶದಲ್ಲಿ ನಿರ್ಣಯ ತೆಗೆದುಕೊಂಡ ತಕ್ಷಣ, ಹಿಮಾಚಲಪ್ರದೇಶ ಸರ್ಕಾರ ಒಪ್ಪಿದೆ. ರಾಜ್ಯ ಸರ್ಕಾರ ಕೂಡ ಸಮ್ಮತಿಸುವ ವಿಶ್ವಾಸವಿದೆ’ ಎಂದರು.

ಶಾಸಕರಿಗೆ ತರಬೇತಿ: ಸಾಮರ್ಥ್ಯ ವೃದ್ಧಿ, ವ್ಯವಸ್ಥೆಯ ಕುರಿತು ಹೊಸ ಶಾಸಕರಿಗೆ ತರಬೇತಿ ಕಡ್ಡಾಯಗೊಳಿಸಲು ಸಮಾವೇಶದಲ್ಲಿ ನಿರ್ಣಯ ಅಂಗೀಕರಿಸಲಾಗಿದೆ ಎಂದು ಅವರು ಹೇಳಿದರು.

ವರದಿ ಸಲ್ಲಿಕೆ: ‘ಪಕ್ಷಾಂತರ ನಿಷೇಧ ಕಾಯ್ದೆ (ಪರಿಚ್ಛೇದ 10) ಬಲವರ್ಧನೆ ಮತ್ತು ವಿಧಾನಸಭಾಧ್ಯಕ್ಷರ ಕಾರ್ಯವ್ಯಾಪ್ತಿಯ ಸ್ಪಷ್ಟತೆ ಕುರಿತು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ವರದಿ ಸಲ್ಲಿಸಲಾಗಿದೆ’ ಎಂದು ಕಾಗೇರಿ ಮಾಹಿತಿ ನೀಡಿದರು.



ಬಿಡಿಎ ಅಕ್ರಮ: ಯಾರನ್ನೂ ರಕ್ಷಿಸುವ ಪ್ರಶ್ನೆ ಇಲ್ಲ– ಮುಖ್ಯಮಂತ್ರಿ

ಬೆಂಗಳೂರು: ‘ಬಿಡಿಎ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ಮೇಲಿನ ಭ್ರಷ್ಟಾಚಾರ ಆರೋಪದಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ವರದಿ ಸಲ್ಲಿಸಿದ ನಂತರ ಶಿಫಾರಸ್ಸುಗಳನ್ನು ಚಾಚೂ ತಪ್ಪದೆ ಪಾಲಿಸಲಾಗುವುದು. ತಪ್ಪಿತಸ್ಥರು ಯಾರೇ ಆಗಿರಲಿ, ಎಷ್ಟೇ ಪ್ರಭಾವಿಗಳಿರಲಿ, ಅಧಿಕಾರಿಗಳಿರಲಿ ಕ್ರಮ ಜರುಗಿಸುತ್ತೇವೆ’ ಎಂದರು.

‘ಸಾರ್ವಜನಿಕರಿಂದಲೂ ಬಿಡಿಎ ಅಕ್ರಮಗಳ ಬಗ್ಗೆ ದೂರುಗಳು ಬಂದಿದ್ದವು. ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಕೂಡಾ ಗಮನ ಸೆಳೆದಿದ್ದರು. ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ತನಿಖೆ ಕೈಗೊಳ್ಳಲು ಸೂಚಿಸಲಾಗಿತ್ತು’ ಎಂದು ತಿಳಿಸಿದರು.

‘ಬಿಡಿಎ ಸ್ವಚ್ಛಗೊಳಿಸಬೇಕು. ಸಾಮಾನ್ಯ ಜನರಿಗೆ ಅಗತ್ಯವಿರುವ ಸೇವೆಗಳನ್ನು ದೊರಕಿಸುವ ದೃಷ್ಟಿಯಿಂದ ಬಿಡಿಎ ಸ್ವಚ್ಛಗೊಳಿಸಬೇಕಿದೆ’ ಎಂದೂ ಮುಖ್ಯಮಂತ್ರಿ ಅಭಿಪ್ರಾಯಪಟ್ಟರು.

ಚಿಕ್ಕಬಳ್ಳಾಪುರ: ಕಾಲುವೆ, ಕೆರೆ ವೀಕ್ಷಣೆಗಷ್ಟೇ ಸೀಮಿತವಾದ ಮಳೆ ಹಾನಿ ಪರಿಶೀಲನೆ

ಹಾಗೆ ಬಂದು, ಹೀಗೆ ಹೋದ ಸಿಎಂ!

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಒಂದು ವಾರದಿಂದ ಸುರಿಯುತ್ತಿರುವ ಮಳೆ ಸ್ವಲ್ಪ ಬಿಡುವು ನೀಡಿದ ಬೆನ್ನಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಜಿಲ್ಲೆಯ ಮಳೆ ಹಾನಿ ಸ್ಥಳಗಳಿಗೆ ಭೇಟಿ ನೀಡಿದರು. ಆದರೆ, ಈ ಭೇಟಿ ತರಾತುರಿಯಲ್ಲಿ ಮುಗಿದು ಹೋಯಿತು.

ಮಧ್ಯಾಹ್ನ 12.30ಕ್ಕೆ ಮುಖ್ಯಮಂತ್ರಿ ಭೇಟಿ ನೀಡಬೇಕಾಗಿತ್ತು. ನಂತರ ಸಮಯವನ್ನು ಸಂಜೆ 4ಕ್ಕೆ ಮುಂದೂಡಲಾಯಿತು. ಮುಖ್ಯಮಂತ್ರಿ ಬಂದಾಗ ಸಂಜೆ 4.30. ಬಿ.ಬಿ ರಸ್ತೆಯಲ್ಲಿ ಕಂದವಾರ ಕೆರೆಯಿಂದ ಅಮಾನಿ ಗೋಪಾಲಕೃಷ್ಣಕೆರೆಗೆ ನೀರು ಹರಿಯುತ್ತಿರುವ ಕಾಲುವೆಯನ್ನು ಪರಿಶೀಲಿಸಿದ ಅವರು, ಅಧಿಕಾರಿಗಳಿಂದ ಮಾಹಿತಿ ಪಡೆದರು. ಸುದ್ದಿಗಾರರ ಜತೆ ಮಾತನಾಡಿದರು. ಎಲ್ಲವೂ 30 ನಿಮಿಷಗಳಲ್ಲಿ ಮುಗಿಯಿತು.

ನಂತರ ಶಿಡ್ಲಘಟ್ಟ ತಾಲ್ಲೂಕಿನ ಆನೆಮಡಗು ಅಗ್ರಹಾರ ಕೆರೆ ಪರಿಶೀಲಿಸಿದರು. ಬಶೆಟ್ಟಹಳ್ಳಿಯಲ್ಲಿ ಅಧಿಕಾರಿಗಳು ತಂದಿಟ್ಟಿದ್ದ ಬೆಳೆಹಾನಿಯ ಮಾದರಿಗಳನ್ನು ವೀಕ್ಷಿಸಿದರು. ಕಾರ್ಯಕ್ರಮಗಳ ಪಟ್ಟಿಯಲ್ಲಿ ದೊಡ್ಡಬಂಧರಘಟ್ಟ ಗ್ರಾಮದ ಕೆರೆ ಹಾಗೂ ಗುಡಿಬಂಡೆ ಕೆರೆಗಳನ್ನು ವೀಕ್ಷಿಸಬೇಕಿತ್ತು. ಆದರೆ ಈ ಎರಡೂ ಕೆರೆಗಳನ್ನು ಅವರು ವೀಕ್ಷಿಸಲಿಲ್ಲ. ಕತ್ತಲಾದ ಕಾರಣ ಗುಡಿಬಂಡೆ ಕೆರೆ ಬಳಿ ಅಧಿಕಾರಿಗಳು ವಿದ್ಯುತ್ ವ್ಯವಸ್ಥೆ ಮಾಡಿ ಮುಖ್ಯಮಂತ್ರಿಗಾಗಿ ಕಾಯುತ್ತಿದ್ದರು. ಸಿ.ಎಂ ಭೇಟಿ ಕಾಲುವೆ ಮತ್ತು ಕೆರೆ ವೀಕ್ಷಣೆಗೆ ಸೀಮಿತವಾಗಿತ್ತು.

ಈ ವೇಳೆ ಮಾತನಾಡಿದ ಬೊಮ್ಮಾಯಿ, ‘ಕೆಲವು ಸಚಿವರು ಈಗಾಗಲೇ ಮಳೆ ಹಾನಿ ಸ್ಥಳಗಳಲ್ಲಿ ಇದ್ದು ಕೆಲಸ ಮಾಡುತ್ತಿದ್ದಾರೆ. ಇನ್ನೂ ಕೆಲವರು ಹೋಗಬೇಕಾಗಿದೆ. ಪ್ರಾಥಮಿಕ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ 5 ಲಕ್ಷ ಹೆಕ್ಟೇರ್ ಬೆಳೆ ನಾಶವಾಗಿದೆ. 40 ಸಾವಿರ ಮನೆಗಳಿಗೆ ಹಾನಿ ಆಗಿದೆ’ ಎಂದರು.

ಜಿಲ್ಲೆಯಲ್ಲಿ ಮಳೆಯಿಂದ ದೊಡ್ಡ ಮಟ್ಟದಲ್ಲಿ ಬೆಳೆಗಳಿಗೆ, ರಸ್ತೆಗಳಿಗೆ, ಕೆರೆಗಳಿಗೆ ಹಾನಿ ಆಗಿದೆ. ಚಿಕ್ಕಬಳ್ಳಾಪುರದಲ್ಲಿ ಕೆರೆಗಳು ತುಂಬಿ ಮನೆಗಳಿಗೆ ನೀರು ನುಗ್ಗಿದೆ. ಕಂದವಾರ ಕೆರೆಯಿಂದ ಅಮಾನಿಗೋಪಾಲಕೃಷ್ಣ ಕೆರೆಗೆ ರಾಜಕಾಲುವೆ ನಿರ್ಮಾಣಕ್ಕೆ ಸೂಚಿಸಲಾಗಿದೆ ಎಂದು ತಿಳಿಸಿದರು.

‘ಜಿಲ್ಲೆಯಲ್ಲಿ ಸಾವಿರಾರು ಹೆಕ್ಟೇರ್ ಬೆಳೆ ಹಾನಿಯಾಗಿದ್ದು ಅಪಾರ ನಷ್ಟ ಸಂಭವಿಸಿದೆ. 24 ಮನೆಗಳು ಪೂರ್ಣವಾಗಿ ಬಿದ್ದಿವೆ. 1078 ಮನೆಗಳಿಗೆ ಭಾಗಶಃ ಹಾನಿ ಆಗಿದೆ. ಪರಿಹಾರ ನೀಡಲು ಜಿಲ್ಲಾಡಳಿತಕ್ಕೆ ಸೂಚಿಸಿದ್ದೇನೆ’ ಎಂದರು.

ಚಿಕ್ಕಬಳ್ಳಾಪುರ ಬಳಿಯ ಕಂದವಾರ ಕೆರೆಯಿಂದ ಅಮಾನಿಗೋಪಾಲಕೃಷ್ಣ ಕೆರೆಗೆ ನೀರು ಹರಿಯುತ್ತಿರುವ ಕಾಲುವೆಯನ್ನು ಸಿಎಂ ಬಸವರಾಜ ಬೊಮ್ಮಾಯಿ ಭಾನುವಾರ ವೀಕ್ಷಿಸಿದರು. ಸಚಿವ ಡಾ.ಕೆ.ಸುಧಾಕರ್, ಸಂಸದ ಎಸ್.ಮುನಿಸ್ವಾಮಿ ಇದ್ದರು

ನೀತಿ ಸಂಹಿತೆ ಅಡ್ಡಿ!

‘ವಿಧಾನ ಪರಿಷತ್ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ವಿಡಿಯೊ ಸಂವಾದಕ್ಕೂ ಚುನಾವಣಾ ಆಯೋಗದಿಂದ ಅನುಮತಿ ಪಡೆಯಬೇಕಾಗಿದೆ. ಮಳೆ ಹಾನಿ ಸ್ಥಳಗಳಿಗೆ ಸಚಿವರು ಭೇಟಿ ನೀಡಿದಾಗ ಅಧಿಕಾರಿಗಳು ಬರಬೇಕು ಎಂದರೆ ಆಯೋಗಕ್ಕೆ ಲಿಖಿತವಾಗಿ ಮಾಹಿತಿ ನೀಡಿ ಅನುಮತಿ ಕೋರಬೇಕಾಗಿದೆ. ಆ ಕೆಲಸ ಮಾಡುತ್ತಿದ್ದೇವೆ. ಅನುಮತಿಗೆ ಕಾಯದೆ ನಾನು ಬಂದಿದ್ದೇನೆ. ನಾಳೆಯೂ ಕೆಲ ಜಿಲ್ಲೆಗಳಿಗೆ ಭೇಟಿ ನೀಡಲಿದ್ದೇನೆ’ ಎಂದು ಮುಖ್ಯಮಂತ್ರಿ ಹೇಳಿದರು.

ಕುಸಿದು ಬಿದ್ದ ಮನೆ: ಲಕ್ಷಾಂತರ ಮೌಲ್ಯದ ವಸ್ತುಗಳು ಹಾನಿ

ಶಿವಮೊಗ್ಗ: ಕಳೆದೊಂದು ವಾರದಿಂದ ಸುರಿದ ಭಾರಿ ಮಳೆಯಿಂದಾಗಿ ನಗರದ ಆಲ್ಕೊಳ ಸಮೀಪ ವಿಕಾಸ ಶಾಲೆ ಬಳಿ ಮನೆಯೊಂದು ಕುಸಿದು ಬಿದ್ದಿದ್ದು, ಭಾರಿ ಅಪಾಯ ತಪ್ಪಿದೆ.

ಬಸವರಾಜು ಎಂಬುವವರಿಗೆ ಸೇರಿದ ಮನೆ ಸಂಪೂರ್ಣ ಕುಸಿದಿವೆ. ಮಧ್ಯಾಹ್ನ ಜೋರು ಶಬ್ದವಾಗಿದೆ. ಆತಂಕದಲ್ಲೇ ಎಲ್ಲರೂ ಹೊರಗೆ ಓಡಿ ಬರುತ್ತಿದ್ದಂತೆ ಮನೆ ಗೋಡೆ ಕುಸಿದಿದೆ. ಮಕ್ಕಳು, ಹಿರಿಯರು ಸೇರಿ ಸುಮಾರು ಒಂಭತ್ತು ಮಂದಿ ಮನೆಯಲ್ಲಿದ್ದರು. ಕುಟಂಬದ ಸದಸ್ಯರು ಪ್ರಾಣಪಾಯದಿಂದ ಪಾರಾಗಿದ್ದಾರೆ. ಮನೆಯೊಳಗಿದ್ದ ಲಕ್ಷಾಂತರ ಮೌಲ್ಯದ ವಸ್ತುಗಳು ಹಾನಿಯಾಗಿವೆ.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ನಂದಿ ವಿಗ್ರಹ ಬಳಿಯ ರಸ್ತೆ ಕುಸಿತ ಮುಂದುವರಿದಿದೆ. ನಿತ್ಯವೂ ಮಣ್ಣು ಮತ್ತು ಕಲ್ಲು ಕೆಳಗೆ ಜಾರುತ್ತಿದ್ದು, ರಸ್ತೆಯ ಬಹುಭಾಗ ಕುಸಿದಿರುವುದು ಭಾನುವಾರ ಕಂಡು ಬಂತು ಪ್ರಜಾವಾಣಿ ಚಿತ್ರ: ಬಿ.ಆರ್.ಸವಿತಾ

ಮಳೆ: 3 ಜಿಲ್ಲೆಗಳಲ್ಲಿ ಬೆಳೆ ನಾಶ, ಸೇತುವೆ ಸಂಪರ್ಕ ಕಡಿತ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ರಾಯಚೂರು, ಕಲಬುರಗಿ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಶನಿವಾರ ರಾತ್ರಿ ಹಾಗೂ ಭಾನುವಾರ ಉತ್ತಮ ಮಳೆ ಸುರಿದಿದೆ. ಹಳ್ಳಗಳ ಮೇಲೆ ನೀರು ಹರಿಯುತ್ತಿದೆ. ಕಂಪ್ಲಿ–ಗಂಗಾವತಿ ಸಂಪರ್ಕ ಸೇತುವೆ ಜಲಾವೃತವಾಗಿದೆ. ಬೀದರ್, ಕಲಬುರಗಿ, ತೆಲಂಗಾಣದ ಹೈದರಾಬಾದ್, ಮಂತ್ರಾಲಯ ಸೇರಿ ಪ್ರಮುಖ ನಗರಗಳಿಗೆ ವಾಹನ ಸಂಪರ್ಕ ಕಡಿತಗೊಂಡಿದೆ.

ರಾಯಚೂರು ಜಿಲ್ಲೆಯ ಮಸ್ಕಿ ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ರಾತ್ರಿಯಿಡೀ ಮಳೆ ಸುರಿದಿದೆ. ಅಪಾರ ಪ್ರಮಾಣದಲ್ಲಿ ಭತ್ತ, ತೊಗರಿ, ಹತ್ತಿ ಬೆಳೆಗಳು ಹಾನಿಯಾಗಿವೆ. ಭತ್ತದ ಚೀಲ ಸಾಗಣೆಯ ಲಾರಿಯು ಸೊಸೈಟಿ ಕ್ಯಾಂಪ್ ಬಳಿ ಮಗುಚಿದ್ದು, ಭತ್ತದ ಚೀಲಗಳು ನೀರು ಪಾಲಾಗಿವೆ.

ಕಲಬುರಗಿ ನಗರದಲ್ಲಿ ಭಾನುವಾರ ಒಂದು ಗಂಟೆಗೂ ಅಧಿಕ ಕಾಲ ಮಳೆ ಸುರಿಯಿತು.

ತುಂಗಭದ್ರಾ ಜಲಾಶಯದಿಂದ ನದಿಗೆ ನೀರು ಬಿಟ್ಟಿರುವುದರಿಂದ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಹಂಪಿ ಪುರಂದರ ಮಂಟಪ, ವಿಜಯನಗರ ಕಾಲದ ಕಾಲು ಸೇತುವೆ, ಚಕ್ರತೀರ್ಥದ ಬಳಿ ಇನ್ನೂ ನೀರು ಕಡಿಮೆಯಾಗಿಲ್ಲ. ಹಂಪಿಯ ರಾಮ ಲಕ್ಷ್ಮಣ ದೇವಸ್ಥಾನದ ಅಂಗಳಕ್ಕೆ ನೀರು ಹೊಕ್ಕಿದೆ. ಜನರು ನದಿ ಪಾತ್ರದಲ್ಲಿ ಓಡಾಡದಂತೆ ಹಳ್ಳಿಗಳಲ್ಲಿ ಡಂಗೂರ ಸಾರಲಾಗಿದೆ.

ಮಸ್ಕಿ ತಾಲ್ಲೂಕಿನ ಚಿಲ್ಕರಾಗಿ– ಆನಂದಗಲ್ ಸಂಪರ್ಕಿಸುವ ಸೇತುವೆ ಮೇಲೆ ನೀರು ಹರಿಯುವುದು ಭಾನುವಾರ ಕಂಡುಬಂತು

ಬಳ್ಳಾರಿ: ಎಡೆಬಿಡದೇ ಸುರಿದ ಮಳೆ

ಬಳ್ಳಾರಿ: ಜಿಲ್ಲೆಯಾದ್ಯಂತ ಶನಿವಾರ ರಾತ್ರಿಯಿಂದ ಭಾನುವಾರ ಬೆಳಿಗ್ಗೆವರೆಗೂ ಸತತವಾಗಿ ಮಳೆಯಾಗಿದ್ದು, ಹಳ್ಳಕೊಳ್ಳಗಳು ಉಕ್ಕಿ ಹರಿಯುತ್ತಿದ್ದು, ಜಮೀನಿಗೆ ನೀರು ನುಗ್ಗಿದೆ. ಬೆಳೆ ಹಾನಿಯಿಂದ ರೈತರು ಕಂಗಾಲಾಗಿದ್ದು, ಪರಿಹಾರದ ಭರವಸೆಯನ್ನು ಜಿಲ್ಲಾಡಳಿತ ನೀಡಿದೆ.

ಭಾನುವಾರ ಬೆಳಿಗ್ಗೆ ಮುಕ್ತಾಯವಾದ 48 ಗಂಟೆಗಳಲ್ಲಿ ಬಳ್ಳಾರಿಯಲ್ಲಿ 14.6 ಸೆಂ.ಮೀ., ಕುರುಗೋಡಿನಲ್ಲಿ 5.2 ಸೆಂ.ಮೀ., ಸಂಡೂರಿನಲ್ಲಿ 5 ಸೆಂ.ಮೀ., ಕಂಪ್ಲಿಯಲ್ಲಿ 4.5ಸೆಂ.ಮೀ., ಸಿರುಗುಪ್ಪದಲ್ಲಿ 3.5 ಸೆಂ.ಮೀ. ಮಳೆಯಾಗಿದೆ. ‘ಜಿಲ್ಲೆಯಲ್ಲಿ ಕೃಷಿ, ತೋಟಗಾರಿಕೆ ಬೆಳೆಗಳು ವ್ಯಾಪಕವಾಗಿ ಹಾನಿಗೊಂಡಿವೆ. 230 ಮನೆಗಳು ಜಖಂಗೊಂಡಿವೆ. 107 ಜಾನುವಾರುಗಳು ಸತ್ತಿವೆ’ ಎಂದು ಜಿಲ್ಲಾಧಿಕಾರಿ ಕಚೇರಿ ಮೂಲಗಳು ತಿಳಿಸಿವೆ.

ಜಿಲ್ಲಾಧಿಕಾರಿ ಪವನಕುಮಾರ್ ಮಾಲಪಾಟಿ ಭಾನುವಾರ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಅಕಾಲಿಕ ಮಳೆಯಿಂದಾದ ಬೆಳೆ ಹಾನಿ ಪರಿಶೀಲಿಸಿದರು.

‘ಭತ್ತ, ಕಡಲೆ ಸೇರಿ 13 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಬೆಳೆದಿದ್ದ ಕೃಷಿ ಉತ್ಪನ್ನಗಳು ನಷ್ಟವಾಗಿವೆ. 10,032 ಹೆಕ್ಟೇರ್ ಮೆಣಸಿನಕಾಯಿ ಬೆಳೆ ಕೊಳೆತಿದೆ’ ಎಂದು ಜಿಲ್ಲಾಧಿಕಾರಿ ‘ಪ್ರಜಾವಾಣಿ’ಗೆ ತಿಳಿಸಿದರು.

571 ಜನರಿಗೆ ಆಶ್ರಯ: ಜಿಲ್ಲೆಯಲ್ಲಿ ಐದು ಕಡೆ ಕಾಳಜಿ ಕೇಂದ್ರಗಳನ್ನು ಜಿಲ್ಲಾಡಳಿತ ತೆರೆದಿದ್ದು, 571 ಜನರು ಆಶ್ರಯ ಪಡೆದಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	8,258	8,033
ಹಾರಂಗಿ	2,859	2,857.74	350	600
ಕಬಿನಿ	2,284	2,283.90	2,800	1,500
ಹೇಮಾವತಿ	2,922	2,910.74	3,851	690
ಲಿಂಗನಮಕ್ಕಿ	1,819	1,813.45	4,520	-
ಸೂಪಾ (ಮೀ)	564	555.25	518	1,035
ಮಾಣಿ	594.36	586.64	443	-
ತುಂಗಭದ್ರಾ	1,633	1,632.91	80,116	84,004
ಮಲಪ್ರಭಾ	2,079.50	2,077	3,924	869
ಘಟಪ್ರಭಾ	2,175	2,166.71	-	2,192
ಭದ್ರಾ	186	185.70	4,444	6,863
ಆಲಮಟ್ಟಿ (ಮೀ)	519.60	518.31	3,316	1,580
ನಾರಾಯಣಪುರ (ಮೀ)	492.25	491.70	6,159	521

* ನೆಲಮಟ್ಟದಿಂದ

ಈಜಲು ಹೋಗಿ ಯುವಕ ಸಾವು

ಹಿರಿಯೂರು: ತಾಲ್ಲೂಕಿನ ಜವನಗೊಂಡನಹಳ್ಳಿ ಸಮೀಪದ ಗಾಯತ್ರಿ ಜಲಾಶಯದ ಕೋಡಿ ಹರಿಯುತ್ತಿರುವ ನೀರಿನಲ್ಲಿ ಗೆಳೆಯರ ಜೊತೆ ಈಜಲು ಹೋಗಿದ್ದ ಯುವಕನೊಬ್ಬ ಭಾನುವಾರ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ.

ಜವನಗೊಂಡನಹಳ್ಳಿಯ ಕೆ.ಎಚ್. ಬಡಾವಣೆಯ ಮಹಮದ್ ಅನ್ವರ್ ಅವರ ಮಗ ಸಲ್ಮಾನ್ (24) ಮೃತಪಟ್ಟ ಯುವಕ.

ಅಣೆಕಟ್ಟೆಯಿಂದ ಧುಮ್ಮಿಕ್ಕುತ್ತಿದ್ದ ನೀರಿನಲ್ಲಿ ಮೂವರು ಗೆಳೆಯರ ಜೊತೆ ಸಲ್ಮಾನ್ ಈಜಲು ಹೋಗಿದ್ದು, ಸಲ್ಮಾನ್ ನೀರಿನಲ್ಲಿ ಮುಳುಗುತ್ತಿದ್ದಂತೆ ಹೆದರಿದ ಗೆಳೆಯರು ದಂಡೆಗೆ ಮರಳಿದ್ದಾರೆ. ಪೊಲೀಸ್ ಹಾಗೂ ಅಗ್ನಿಶಾಮಕ ಸೇವೆಯ ಸಿಬ್ಬಂದಿ ಪತ್ತೆ ಶೋಧ ನಡೆಸಿದ್ದರು.

ಹೊಸದುರ್ಗ ತಾಲ್ಲೂಕಿನ ಶ್ರೀರಾಂಪುರ ಬಳಿ ಹಿರೇಕೆರೆ 12 ವರ್ಷದ ಬಳಿಕ ಕೋಡಿ ಬಿದ್ದಿದೆ. ಮೊಳಕಾಲ್ಮುರು ತಾಲ್ಲೂಕು ಹೊಸೂರಿನಲ್ಲಿ ರಮೇಶ್ ಅವರಿಗೆ ಸೇರಿದ್ದ 5 ಎಕರೆಯಷ್ಟು ಬ್ಯಾಡಗಿ ಮೆಣಸಿನಕಾಯಿ ಬೆಳೆ ನೀರು ಪಾಲಾಗಿದೆ. ಹಲವೆಡೆ ಬೆಳೆ, ಇಟ್ಟಿಗೆಭಟ್ಟಿಗಳು ಹಾನಿಗೀಡಾಗಿವೆ.

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು ಬಸವಾಪಟ್ಟಣ ಹೋಬಳಿ ವ್ಯಾಪ್ತಿಗೆ ಸೇರಿದ ಸೂಳೆಕೆರೆಯ ಹಿನ್ನೀರಿನ ದಂಡೆಯಲ್ಲಿರುವ ರುದ್ರಾಪುರ ಗ್ರಾಮದ ಮನೆಗಳಿಗೆ ಭಾನುವಾರ ನೀರು ನುಗ್ಗಿದೆ. ನಾರಶೆಟ್ಟಿಹಳ್ಳಿ-ಹೊನ್ನೇಬಾಗಿ ಗ್ರಾಮಗಳಿಗೆ ಹೋಗುವ ಗ್ರಾಮೀಣ ರಸ್ತೆ ಶುಕ್ರವಾರ ಬಿದ್ದ ಭಾರಿ ಮಳೆಯಿಂದಾಗಿ ಕುಸಿದಿದ್ದು, ಗ್ರಾಮಗಳಿಗೆ ಹೋಗಲು ರಸ್ತೆ ಸಂಪರ್ಕ ಕಡಿತಗೊಂಡಿದೆ.

ಒಳನೋಟ

ಈ ಸಾವು ನ್ಯಾಯವೇ?

ಬೆಂಗಳೂರು: ‘ಸತ್ತವರ ನೆರಳಿನ ಹುಡುಕಾಟ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ನ.21) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ನೆರವು ಸಿಗಲಿ



ಕೋವಿಡ್ ಮಾರಿ ಜನಸಾಮಾನ್ಯರ ಬದುಕನ್ನೇ ಕಸಿದಿದೆ. ಇದರಿಂದ ಸಂಕಷ್ಟಕ್ಕೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡವರ ಅಂತ್ಯ ನ್ಯಾಯವಲ್ಲ. ನೊಂದವರ ಬದುಕು ಮೊದಲಿನಂತಾಗಲು ವರ್ಷಗಳೇ ಬೇಕು. ಬೆಲೆ ಏರಿಕೆ ದಾಳಿಯನ್ನೂ ಸರ್ಕಾರ ಜನರ ಮೇಲೆ ಮಾಡಿದೆ. ಜನರಿಗೆ ಮಾನಸಿಕ, ಆರ್ಥಿಕ ಸ್ಥೈರ್ಯ ತುಂಬುವ ಕೆಲಸವನ್ನು ಸರ್ಕಾರವೇ ಮಾಡಬೇಕಿದೆ. ಇದರಿಂದ ಆತ್ಮಹತ್ಯೆ ಪ್ರಕರಣಗಳು ನಿಲ್ಲಬಹುದೇನೋ?

ರಾಜೇಶ್ವರಿ ರಾವ್, ವಿಜಯನಗರ, ಬೆಂಗಳೂರು

ಬದುಕು ಮುಗಿಸದಿರಿ

ಸಾವು ಸಮಸ್ಯೆಗಳಿಗೆ ಪರಿಹಾರವಲ್ಲ. ಈ ಆಧುನಿಕ ಯುಗದಲ್ಲಿ ಆತ್ಮಹತ್ಯೆ ಸಾಮಾನ್ಯ ವಿಷಯ ಎಂದು ಭಾವಿಸಬಾರದು. ಕೋವಿಡ್ ಪೂರ್ವದಲ್ಲಿ ಆತ್ಮಹತ್ಯೆಗಳ ಪ್ರಮಾಣ ಕಡಿಮೆಯಿದ್ದು, ನಂತರ ಮಾನಸಿಕ ಖಿನ್ನತೆಯಿಂದ ಸಾಮೂಹಿಕ ಆತ್ಮಹತ್ಯೆಗಳು ಹೆಚ್ಚಾದವು. ಕೆಲ ಮಾಧ್ಯಮಗಳಲ್ಲಿ ಜನರಿಗೆ ಭಯ ಹುಟ್ಟಿಸುವ ವಿಚಾರಗಳ ಬದಲಿಗೆ ಆತ್ಮಸ್ಥೈರ್ಯ ಮೂಡಿಸುವ ಕಾರ್ಯಕ್ರಮಗಳನ್ನು ಪ್ರಸಾರ ಮಾಡಬೇಕಿತ್ತು. ಸಮಸ್ಯೆ ಬಂದಾಗ ಧೈರ್ಯದಿಂದ ಹೆಜ್ಜೆ ಇಡಬೇಕೇ ಹೊರತು, ಜೀವನದಿಂದ ಪಲಾಯನ ಮಾಡಬಾರದು.

ಚೈತ್ರಾ, ಚಿತ್ರದುರ್ಗ

ಆತ್ಮಹತ್ಯೆ ಹೇಡಿಗಳ ಕೆಲಸ

ಇಂದಿನ ವೇಗದ ಜೀವನದಲ್ಲಿ ಒತ್ತಡ, ಸಂಘರ್ಷ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಸರಿಯಾಗಿ ನಿಭಾಯಿಸುವಲ್ಲಿ ಕೆಲ ಸಂದರ್ಭಗಳಲ್ಲಿ ವಿಫಲರಾಗುವುದು ಸಾಮಾನ್ಯ. ಇದರಿಂದ ದುರ್ಬಲ ಮನಸ್ಥಿತಿಯವರು ಆತ್ಮಹತ್ಯೆಯಂತಹ ಆತುರದ ನಿರ್ಧಾರಕ್ಕೆ ಬರುತ್ತಾರೆ. ಇರುವುದು ಒಂದೇ ಜೀವನ. ಸಮಸ್ಯೆಗಳನ್ನು ಎದುರಿಸಲು ಸಶಕ್ತರಾಗಬೇಕು. ಹೇಡಿಗಳಂತೆ ಸೋಲಿಗೆ ಅಂಜಬಾರದು, ಆತ್ಮಹತ್ಯೆಗೆ ಶರಣಾಗಬಾರದು.

ಎಂ.ಎಚ್.ಮೊಕಾಶಿ, ವಿಜಯಪುರ

ಸರ್ಕಾರ ಕಷ್ಟಕ್ಕೆ ಮಿಡಿದಿಲ್ಲ

ಕೋವಿಡ್‌ನಿಂದ ಹೋಟೆಲ್ ಉದ್ಯಮದ ಮೇಲೆ ಭಾರಿ ಹೊಡೆತ ಬಿತ್ತು. ಇದರಿಂದ ಹೋಟೆಲ್ ಉದ್ಯಮವನ್ನು ಆಧರಿಸಿದ್ದ ಅದೆಷ್ಟೋ ಮಂದಿ ಆತ್ಮಹತ್ಯೆಗೆ ಶರಣಾದರು. ಕೆಲವರು ಈಗಲೂ ಜೀವನ ಸಾಗಿಸಲು ಪರದಾಡುತ್ತಿದ್ದಾರೆ. ಸರ್ಕಾರ ಹೋಟೆಲ್ ಉದ್ಯಮಕ್ಕೆ ಯಾವುದೇ ರೀತಿಯ ಪರಿಹಾರ ಕೊಡದಿರುವುದು ಖಂಡನೀಯ.

ಸಂತೋಷ್ ಪಿ.ಶೆಟ್ಟಿ, ಹುಬ್ಬಳ್ಳಿ

ಸಕಾರಾತ್ಮಕವಾಗಿ ಯೋಚಿಸಿ

ಕೋವಿಡ್, ನಿರುದ್ಯೋಗ, ಪ್ರೇಮ ವೈಫಲ್ಯ, ಮಾನಸಿಕ ಸಮಸ್ಯೆಗಳು ಸೇರಿದಂತೆ ಹಲವು ಕಾರಣಗಳಿಂದ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿವೆ. ಆಪ್ತರು ಹಾಗೂ ಕುಟುಂಬದ ಸದಸ್ಯರು ಕಳೆದುಕೊಂಡಿರುವ ನೋವು ಎಲ್ಲರಿಗೂ ಇದೆ. ಆದರೆ, ಸಮಸ್ಯೆಗಳಿಗೆ ಸಾವೊಂದೇ ಪರಿಹಾರವಲ್ಲ. ಏಕಾಂಗಿತನ ಕಾಡಿದಾಗ, ನಕಾರಾತ್ಮಕ ಯೋಚನೆಗಳು ಮೂಡಿದಾಗ ವೈದ್ಯರ ಬಳಿ ಸೂಕ್ತ ಸಮಾಲೋಚನೆ ನಡೆಸಬೇಕು. ಆಪ್ತರ ಬಳಿ ಮುಕ್ತ ಮಾತುಕತೆ ನಡೆಸುವುದು ಹಾಗೂ ಜೀವನಕ್ಕೆ ಸ್ಫೂರ್ತಿ ತುಂಬುವ ಪುಸ್ತಕಗಳನ್ನು ಓದಬೇಕು. ಸಕಾರಾತ್ಮಕವಾಗಿ ಯೋಚಿಸಬೇಕು.

ವಿದ್ಯಾಶ್ರೀ, ಬಳ್ಳಾರಿ

100 ಟನ್ ಪಡಿತರ ಅಕ್ಕಿ ವಶ

ಪ್ರಜಾವಾಣಿ ವಾರ್ತೆ

ಮಂಡ್ಯ: ನಗರ ಹೊರವಲಯದ ರೈಸ್ ಮಿಲ್‌ನಲ್ಲಿ ಸುಮಾರು 100 ಟನ್ ಪಡಿತರ ಅಕ್ಕಿ ತುಂಬಿದ ಲಾರಿಯನ್ನು ಶನಿವಾರ ರಾತ್ರಿ ಮಂಡ್ಯ ತಹಶೀಲ್ದಾರ್ ನೇತೃತ್ವದಲ್ಲಿ ದಾಳಿ ನಡೆಸಿ ವಶ ಪಡಿಸಿಕೊಳ್ಳಲಾಗಿದೆ.

ಆಂಧ್ರಪ್ರದೇಶದ ವಿಜಯವಾಡದಿಂದ ನಗರಕ್ಕೆ ಬಂದಿದ್ದ ಲಾರಿಗಳ ಮೇಲೆ ತಹಶೀಲ್ದಾರ್ ನೇತೃತ್ವದ ತಂಡ ದಾಳಿ ನಡೆಸಿತು. ಲಾರಿಗಳು ಕಿರಗಂದೂರು ಸಮೀಪದ ರೈಸ್‌ಮಿಲ್‌ವೊಂದಕ್ಕೆ ತೆರಳಿವೆ ಎಂಬ ಮಾಹಿತಿ ಸಿಕ್ಕಿತ್ತು. ದಾಳಿ ಮಾಡಿದಾಗ ಚಾಲಕರು ವಾಹನ ಬಿಟ್ಟು ಪರಾರಿಯಾಗಿದ್ದಾರೆ.

‘ಲಾರಿಗಳನ್ನು ಪರಿಶೀಲಿಸಿದಾಗ ಅದರಲ್ಲಿ ಪಡಿತರ ಅಕ್ಕಿ ತುಂಬಿದ್ದ ಚೀಲಗಳಿರುವುದು ಪತ್ತೆಯಾಗಿದೆ. ಲಾರಿಗಳನ್ನು ಜಪ್ತಿ ಮಾಡಿ ಪ್ರಕರಣ ದಾಖಲು ಮಾಡಲಾಗಿದೆ’ ಎಂದು ತಹಶೀಲ್ದಾರ್ ಚಂದ್ರಶೇಖರ್ ಶಂ. ಗಾಳಿ ತಿಳಿಸಿದರು.

ನಿಧನ ವಾರ್ತೆ

ಎಂ.ಬಿ.ಶ್ರೀನಿವಾಸ್

ಮಂಡ್ಯ: ದಲಿತ ಸಂಘರ್ಷ ಸಮಿತಿಯ ರಾಜ್ಯ ಘಟಕದ ಸಂಚಾಲಕ ಎಂ.ಬಿ. ಶ್ರೀನಿವಾಸ್ (61) ಭಾನುವಾರ ಹೃದಯಾಘಾತದಿಂದ ಮೈಸೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ನಗರದ ಅಂಬೇಡ್ಕರ್ ಭವನ ಆವರಣದಲ್ಲಿ ಪಾರ್ಥಿವ ಶರೀರವನ್ನು ಮಧ್ಯಾಹ್ನದವರೆಗೆ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ನಂತರ ಹುಟ್ಟೂರು, ಪಾಂಡವಪುರ ತಾಲ್ಲೂಕಿನ ಮೇಣಾಗರಕ್ಕೆ ಒಯ್ಯಲಾಯಿತು. ಸೋಮವಾರ ಬೆಳಿಗ್ಗೆ 11ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಲವು ದಶಕದಿಂದ ದಲಿತ ಪರ ಹೋರಾಟಗಾರರಾಗಿ ಗುರುತಿಸಿಕೊಂಡಿದ್ದ ಅವರು ‘ಸೀನಣ್ಣ’ ಎಂದೇ ಪ್ರಸಿದ್ಧಿ ಪಡೆದಿದ್ದರು. ಅವರಿಗೆ 60 ವರ್ಷ ತುಂಬಿದ ಹಿನ್ನೆಲೆಯಲ್ಲಿ ಈಚೆಗೆ ಅಭಿಮಾನಿಗಳು ‘ದಲಿತರ ಅಂತರಾಳದ ಧ್ವನಿ’ ಅಭಿನಂದನಾ ಗ್ರಂಥ ಪ್ರಕಟಿಸಿದ್ದರು.

ಜೆಡಿಎಸ್ ಬೆಂಬಲ ಕೋರಿದ ಯಡಿಯೂರಪ್ಪ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): 'ಮೇಲ್ಮನೆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಇಲ್ಲದ ಕಡೆ ಬಿಜೆಪಿಗೆ ಬೆಂಬಲಿಸಲು ಜೆಡಿಎಸ್ ವರಿಷ್ಠರಾದ ಎಚ್.ಡಿ.ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರಿಗೆ ಕೋರುತ್ತೇವೆ' ಎಂದು ಶಾಸಕ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಬಿಜೆಪಿ ಇಲ್ಲಿ ಭಾನುವಾರ ಆಯೋಜಿಸಿರುವ ಜನಸ್ವರಾಜ್ ಸಮಾವೇಶಕ್ಕಾಗಿ ಆಗಮಿಸಿದ್ದ ವೇಳೆ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷ ಇನ್ನೂ ಅಭ್ಯರ್ಥಿಗಳನ್ನೇ ಘೋಷಿಸದ ವಿಚಿತ್ರ ಸ್ಥಿತಿಯಲ್ಲಿದೆ. ಬಿಜೆಪಿ ನಾಯಕರು ಈಗಾಗಲೇ ನಾಲ್ಕು ತಂಡಗಳಲ್ಲಿ ಪ್ರಚಾರದಲ್ಲಿ ತೊಡಗಿದ್ದೇವೆ. ಮುಂದೆ ಕೇಂದ್ರದ ನಾಯಕರು ಪರ ಪ್ರಚಾರ ನಡೆಸಲಿದ್ದಾರೆ' ಎಂದರು.

'ಚಿಕ್ಕೋಡಿ ಜಿಲ್ಲೆ ರಚನೆ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸಿ, ನಾನು ಹಿಂದೆ ನೀಡಿದ್ದ ಭರವಸೆ ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ' ಎಂದು ತಿಳಿಸಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
ಪ್ರಜಾವಾಣಿ ಕನ್ನಡ ಧ್ವನಿ
Prajavani.net/podcast
ಬೆಳಿಗ್ಗೆ 7 : ವಚನವಾಣಿ, ಬೆಳಿಗ್ಗೆ 7.30: ದಿನದ ಸೂಕ್ತಿ, ಬೆಳಿಗ್ಗೆ 8: ಮಧ್ಯಾಹ್ನ 2: ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್,
ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ,
Prajavani.net
Prajavani Prajavani

ರಮೇಶ ಜಾರಕಿಹೊಳಿ ಯತ್ನ ಸಫಲ • ಬಿಜೆಪಿ ಸೇರ್ಪಡೆಗೆ ವಿವೇಕರಾವ್ ಪಾಟೀಲ ನಿರ್ಧಾರ

ಚುನಾವಣೆ ಹೊಸ್ತಿಲಲ್ಲಿ ನಾಯಕರ ಶಿಕಾರಿ!

• ಎಂ.ಮಹೇಶ

ಮುಖ್ಯಾಂಶಗಳು
- ಕಾಂಗ್ರೆಸ್ ಟಿಕೆಟ್ ಸಿಗದಿದ್ದಕ್ಕೆ ವಿವೇಕರಾವ್ ಬೇಸರ
- ಭರಮಗೌಡ ಕಾಗೆ ಜೊತೆಗೂ ಚರ್ಚಿಸಿರುವ ರಮೇಶ
- ಕಾಗೆ ಭೇಟಿಯಾದ ಲಕ್ಷ್ಮಿ

ರಮೇಶ ಜಾರಕಿಹೊಳಿ

ಲಕ್ಷ್ಮಿ ಹೆಬ್ಬಾಳಕರ

ವಿವೇಕರಾವ್ ಪಾಟೀಲ

> ವಿವೇಕರಾವ್‌ಗೆ ಕಾಂಗ್ರೆಸ್‌ನಿಂದ ಅನ್ಯಾಯವಾಗಿದೆ. ಹೀಗಾಗಿ, ನಮ್ಮೊಂದಿಗೆ ಬರುತ್ತಿದ್ದಾರೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿಸುವುದು ನನ್ನ ಗುರಿ
> **ರಮೇಶ ಜಾರಕಿಹೊಳಿ,** ಶಾಸಕ, ಗೋಕಾಕ

> ರಮೇಶ ಜಾರಕಿಹೊಳಿ ನನ್ನ ಸ್ನೇಹಿತರು. ಅರೋಗ್ಯ ವಿಚಾರಿಸಲು ಬಂದಿದ್ದರು. ಲಕ್ಷ್ಮಿ ಹೆಬ್ಬಾಳಕರ ಕೂಡ ಭೇಟಿಯಾಗಿದ್ದರು. ಕಾಂಗ್ರೆಸ್ ಪರ ಕೆಲಸ ಮಾಡುತ್ತೇನೆ
> **ಭರಮಗೌಡ ಕಾಗೆ,** ಮುಖಂಡ, ಕಾಗವಾಡ

ಬೆಳಗಾವಿ: ವಿಧಾನಪರಿಷತ್ ಚುನಾವಣೆ ಸಂದರ್ಭದಲ್ಲಿ ಗೋಕಾಕದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ 'ಶಿಕಾರಿ' ಆರಂಭಿಸಿದ್ದಾರೆ. ಕಾಂಗ್ರೆಸ್ ಮುಖಂಡರನ್ನು ಬಿಜೆಪಿಗೆ ಸೆಳೆಯುವ ಕಾರ್ಯಾಚರಣೆಗೆ ಇಳಿದಿದ್ದಾರೆ. ವಿಧಾನಪರಿಷತ್ ಹಾಲಿ ಸದಸ್ಯ ವಿವೇಕರಾವ್ ಪಾಟೀಲ ಬಿಜೆಪಿಗೆ ಸೇರ್ಪಡೆಯಾಗುವಂತೆ ಮನವೊಲಿಸಲು ಯಶಸ್ವಿಯಾಗಿದ್ದಾರೆ.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿದ್ದ ವಿವೇಕರಾವ್, ಆಗ ಕಾಂಗ್ರೆಸ್ ಶಾಸಕರಾಗಿದ್ದ ರಮೇಶ ಜಾರಕಿಹೊಳಿ ಬೆಂಬಲಿಸಿದ್ದರಿಂದ ಗೆಲುವು ಸಾಧಿಸಿದ್ದರು. ಈ ಸಲ ಕಾಂಗ್ರೆಸ್ ಟಿಕೆಟ್ ಕೇಳಿದ್ದರು. ಆದರೆ, ವರಿಷ್ಠರು ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಸಹೋದರ, ಉದ್ಯಮಿ ಚನ್ನರಾಜ ಹಟ್ಟಿಹೊಳಿ ಅವರಿಗೆ 'ಹಸಿರು ನಿಶಾನೆ' ತೋರಿದ್ದಾರೆ. ಇದರಿಂದ ಬೇಸರಗೊಂಡಿದ್ದ ವಿವೇಕರಾವ್ ಅವರನ್ನು ರಾಯಬಾಗ ತಾಲ್ಲೂಕಿನ ಬೆಕ್ಕೇರಿಯಲ್ಲಿರುವ ನಿವಾಸದಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದ ರಮೇಶ, ಬಿಜೆಪಿಗೆ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ಬೆಮುಲ್)ದ ಅಧ್ಯಕ್ಷರೂ ಆದ ವಿವೇಕರಾವ್, ಈ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮಹಾಂತೇಶ ಕವಟಗಿಮಠ ಪರ ಕೆಲಸ ಮಾಡುವುದಾಗಿ ತಿಳಿಸಿದ್ದಾರೆ. ಇದರಿಂದ ಕಾಂಗ್ರೆಸ್‌ಗೆ ಹಿನ್ನಡೆಯಾಗಬಹುದು ಎನ್ನಲಾಗುತ್ತಿದೆ.

ನನಗೆ ಮನ್ನಣೆ ಸಿಕ್ಕಿಲ್ಲ: 'ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಕೇಳಿದ್ದೆ. ಕೊಡಲಿಲ್ಲ. ನಮ್ಮ ನಾಯಕ ರಮೇಶ ಜಾರಕಿಹೊಳಿ ಆಹ್ವಾನದ ಮೇರೆಗೆ ಷರತ್ತಿಲ್ಲದೆ ಬಿಜೆಪಿ ಸೇರಲು ನಿರ್ಧರಿಸಿದ್ದೇನೆ. ಹಾಲಿ ಸದಸ್ಯನಾಗಿದ್ದರೂ ಕಾಂಗ್ರೆಸ್‌ನವರು ಟಿಕೆಟ್ ನೀಡಿಲ್ಲ. ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅವರು ಟಿಕೆಟ್ ಭರವಸೆ ನೀಡಿದ್ದರು. ಆದರೆ, ಅವರ ಕೈಮೀರಿ ಬೇರೆಯವರಿಗೆ (ಚನ್ನರಾಜ) ಟಿಕೆಟ್ ಸಿಕ್ಕಿದ್ದು ಬೇಸರವಾಗಿದೆ' ಎಂದು ವಿವೇಕರಾವ್ ತಿಳಿಸಿದರು.

ರಮೇಶ ಜಾರಕಿಹೊಳಿ ಈಚೆಗೆ, ಹಿಂದೆ ಬಿಜೆಪಿಯಲ್ಲಿದ್ದ, ಹಾಲಿ ಕಾಂಗ್ರೆಸ್ ಮುಖಂಡ ಕಾಗವಾಡದ ಭರಮಗೌಡ (ರಾಜು) ಕಾಗೆ ಅವರನ್ನೂ ಭೇಟಿಯಾಗಿದ್ದರು. ಇದಾಗಿ, ಕೆಲವೇ ದಿನಗಳಲ್ಲಿ ಅವರನ್ನು ಭೇಟಿಯಾಗಿದ್ದ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಚುನಾವಣೆಯಲ್ಲಿ ತಮ್ಮ ಚನ್ನರಾಜಗೆ ಬೆಂಬಲ ನೀಡುವಂತೆ ಕೋರಿದ್ದರು ಎಂದು ತಿಳಿದು ಬಂದಿದೆ.

ರಮೇಶ ಜಾರಕಿಹೊಳಿ ನಡೆ ಕಾಂಗ್ರೆಸ್‌ಗೆ ತಲೆನೋವು ಸೃಷ್ಟಿಸಿದೆ. ಅವರು ಭೇಟಿಯಾದವರನ್ನು ಲಕ್ಷ್ಮಿ ಕೂಡಾ ಭೇಟಿಯಾಗಿ ಚರ್ಚಿಸುತ್ತಿರುವುದರಿಂದ ನಾಮಪತ್ರ ಸಲ್ಲಿಕೆಗೂ ಮುನ್ನವೇ ಕಣ ರಂಗೇರಿದೆ.

ಮಹಾರುದ್ರಾಭಿಷೇಕ

ಮೈಸೂರಿನ ಚಾಮುಂಡಿಬೆಟ್ಟದ ಏಕಶಿಲಾ ನಂದಿ ವಿಗ್ರಹಕ್ಕೆ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ವತಿಯಿಂದ ಭಾನುವಾರ ಕಾರ್ತೀಕ ಮಾಸದ ಪ್ರಯುಕ್ತ ನಡೆದ ಮಹಾರುದ್ರಾಭಿಷೇಕದಲ್ಲಿ ವಿಗ್ರಹವು ಕಂಗೊಳಿಸಿದ ಬಗೆ ಇದು. -ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ 40 ಪರ್ಸೆಂಟ್ ಸರ್ಕಾರ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ತುಮಕೂರು: 'ಪ್ರಧಾನಿ ನರೇಂದ್ರ ಮೋದಿ ಅವರು ನಮ್ಮನ್ನು 10 ಪರ್ಸೆಂಟ್ ಸರ್ಕಾರ ಎನ್ನುತ್ತಿದ್ದರು. ಈಗ ರಾಜ್ಯದಲ್ಲಿ 40 ಪರ್ಸೆಂಟ್ ಸರ್ಕಾರ ಆಡಳಿತ ನಡೆಸುತ್ತಿದೆ' ಎಂದು ಕಾಂಗ್ರೆಸ್ ಮುಖಂಡರು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ನೇತೃತ್ವದ ಸರ್ಕಾರ ಈವರೆಗೆ ದೇಶದಲ್ಲಿ ಜಾರಿಗೊಳಿಸಿರುವ ಅಭಿವೃದ್ಧಿ ಕಾರ್ಯಗಳನ್ನು ಜನರಿಗೆ ತಿಳಿಸುವ ಸಲುವಾಗಿ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಜನಜಾಗೃತಿ ಅಭಿಯಾನಕ್ಕೆ ತುಮಕೂರಿನಲ್ಲಿ ಭಾನುವಾರ ಚಾಲನೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಬಿಜೆಪಿ ವಿರುದ್ಧ ಟೀಕಾಪ್ರಹಾರ ನಡೆಸಿದರು.

'ಅಭಿವೃದ್ಧಿ ಕಾಮಗಾರಿಗಳಲ್ಲಿ ಶೇ 35ರಿಂದ 40ರಷ್ಟು ಲಂಚ ಕೊಡಬೇಕಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಪ್ರಧಾನಿಗೆ ಪತ್ರ ಬರೆದಿದ್ದಾರೆ. ಈ ಬಗ್ಗೆ ಪ್ರಧಾನಿ ಬಾಯಿ ಬಿಡುತ್ತಿಲ್ಲ. ಬಿಜೆಪಿಯವರ ಭ್ರಷ್ಟಾಚಾರ ಬಿಚ್ಚಿಟ್ಟು, ಬೆತ್ತಲೆ ನಿಲ್ಲಿಸಬೇಕು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಮಾನ, ಮರ್ಯಾದೆ ಇದ್ದರೆ ತಕ್ಷಣ ಕ್ರಮ ಕೈಗೊಳ್ಳಬೇಕಿತ್ತು' ಎಂದು ಸಿದ್ದರಾಮಯ್ಯ ಹೇಳಿದರು

ಡಿ.ಕೆ.ಶಿವಕುಮಾರ್, 'ರಾಜ್ಯದಲ್ಲಿ ಟೆಂಡರ್ ಕಾಂಚಾಣ ಕುಣಿಯುತ್ತಿದೆ. ಗುತ್ತಿಗೆದಾರರು ಶೇ 58ರಷ್ಟು ಕಮಿಷನ್ ಕೊಡಬೇಕಾಗಿದೆ. ಬಿಜೆಪಿಯವರ ಭ್ರಷ್ಟಾಚಾರ ಬೀದಿಗೆ ಬಂದಿದ್ದರೂ ಪ್ರಧಾನಿ, ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ ಬಾಯಿ ಬಿಡುತ್ತಿಲ್ಲ. ಈ ಬಗ್ಗೆ ಜನತೆಗೆ ಉತ್ತರ ಕೊಡಬೇಕು' ಎಂದು 'ಪ್ರಜಾವಾಣಿ'ಯಲ್ಲಿ ಬಂದಿದ್ದ ವರದಿಯನ್ನು ತೋರಿಸಿ ಆಗ್ರಹಿಸಿದರು.

ತುಮಕೂರಿನಲ್ಲಿ ಭಾನುವಾರ ಕಾಂಗ್ರೆಸ್ ಜನಜಾಗೃತಿ ಅಭಿಯಾನದಲ್ಲಿ ಮುಖಂಡರಾದ ಶಫಿ ಅಹ್ಮದ್, ರಫೀಕ್ ಅಹಮ್ಮದ್, ಕೆ.ಎನ್.ರಾಜಣ್ಣ, ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಡಾ.ಜಿ.ಪರಮೇಶ್ವರ, ವೆಂಕಟರಮಣಪ್ಪ, ಟಿ.ಬಿ. ಜಯಚಂದ್ರ, ಎಸ್.ಪಿ.ಮುದ್ದಹನುಮೇಗೌಡ ಉಪಸ್ಥಿತರಿದ್ದರು

'ಜನಸ್ವರಾಜ್ ಅಲ್ಲ, ಜನಬರ್ಬಾದ್ ಯಾತ್ರೆ'

ಬೆಂಗಳೂರು: 'ಅಕಾಲಿಕ ಮಳೆಯಿಂದ ಅರ್ಧ ರಾಜ್ಯ ತತ್ತರಿಸಿದೆ. ಕೈಗೆ ಬಂದ ಬೆಳೆ, ಬಾಯಿಗೆ ಬರದೆ ಗದ್ದೆಯಲ್ಲಿ ಕೊಳೆಯುತ್ತಿದೆ. ಆದರೆ, ರಾಜ್ಯ ಸರ್ಕಾರ ಟೂರಿಂಗ್ ಟಾಕೀಸ್ ರೀತಿ, ಜನಸ್ವರಾಜ್ ಎಂಬ ನಾಟಕ ಪ್ರದರ್ಶನ ಮಾಡಿಕೊಂಡು ಹೊರಟಿದೆ. ಇದು ಜನಸ್ವರಾಜ್ ಅಲ್ಲ, ಜನಬರ್ಬಾದ್ ಯಾತ್ರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

'ಮಳೆ- ನೆರೆಗೆ ಸಿಲುಕಿ 20ಕ್ಕೂ ಹೆಚ್ಚು ಜನ ಸಾವಿಗೀಡಾಗಿದ್ದಾರೆ. 10 ಸಾವಿರ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಬೆಳೆ ನಾಶವಾಗಿದೆ. ನೆರವಿಗೆ ಧಾವಿಸಬೇಕಾದ ಸರ್ಕಾರ, ನಾಟಕ ಮಾಡುತ್ತಾ ತಿರುಗಾಡುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ, ನಿಮ್ಮ ಹನಿಮೂನ್ ಕಾಲ ಮುಗಿದಿದೆ. ಸಚಿವರ ಈ ನಾಟಕದ ಪ್ರದರ್ಶನದ ಯಾತ್ರೆಯನ್ನು ನಿಲ್ಲಿಸಿ. ಅವರನ್ನು ಮಳೆ ಪೀಡಿತ ಜಿಲ್ಲೆಗಳಿಗೆ ಓಡಿಸಿ. ಜನರ ಕಷ್ಟ ಆಲಿಸಿ ಪರಿಹಾರ ಕಾರ್ಯಕೈಗೊಳ್ಳಲು ಹೇಳಿ' ಎಂದು ಸಲಹೆ ನೀಡಿದ್ದಾರೆ.

'ಸಾವಿರಾರು ಎಕರೆಯಲ್ಲಿ ಭತ್ತ, ರಾಗಿ, ಜೋಳ, ತರಕಾರಿ, ಬಾಳೆ, ತೆಂಗು ಎಲ್ಲವೂ ನಾಶವಾಗಿದೆ. ರೈತರು ಕಣ್ಣೀರಿಡುತ್ತಿದ್ದಾರೆ. ಸಚಿವರು ಯಾತ್ರೆಯಲ್ಲಿದ್ದಾರೆ, ಅಧಿಕಾರಿಗಳು ಬೆಚ್ಚನೆ ಮನೆಯಲ್ಲಿದ್ದಾರೆ. ಜನ ಬೀದಿಪಾಲಾಗಿದ್ದಾರೆ. ಇಲ್ಲಿ ಸರ್ಕಾರ ಇದೆಯೇ' ಎಂದು ಪ್ರಶ್ನಿಸಿದ್ದಾರೆ.

'ಮೊದಲು ಅಧಿಕಾರಿಗಳ ತಂಡ ಕಟ್ಟಿಕೊಂಡು ಮಳೆಪೀಡಿತ ಪ್ರದೇಶಗಳಲ್ಲಿ ಮಳೆ ನಷ್ಟದ ಅಂದಾಜು ನಡೆಸಿ, ತಾತ್ಕಾಲಿಕ ಪರಿಹಾರ ನೀಡಲಿ. ಕಾಳಜಿ ಕೇಂದ್ರಗಳನ್ನು ತೆರೆಯಲಿ. ನಷ್ಟದ ಸಮೀಕ್ಷೆ ನಡೆಸಿ ಹೆಚ್ಚಿನ ಪರಿಹಾರ ನೀಡಲು ಕೇಂದ್ರಕ್ಕೆ ಮನವಿ ಮಾಡಿ' ಎಂದೂ ಸಲಹೆ ನೀಡಿದ್ದಾರೆ.

ಕೊಡಗಿನಲ್ಲಿ ನಡೆಯಬೇಕಿದ್ದ ಸಮಾವೇಶ

ಮೇಲ್ಮನೆ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಇಲ್ಲಿ ಹಮ್ಮಿಕೊಂಡಿದ್ದ ಜನ ಸ್ವರಾಜ್ ಸಮಾವೇಶದಲ್ಲಿ ಮುಖ್ಯಮಂತ್ರಿ ಅವರು ಪಾಲ್ಗೊಳ್ಳಬೇಕಿತ್ತು.

ಸಿ.ಎಂ ಪ್ರವಾಸ ದಿಢೀರ್ ರದ್ದು

ಮಡಿಕೇರಿ: ಬಿಜೆಪಿಯ ಜನ ಸ್ವರಾಜ್ ಸಮಾವೇಶಕ್ಕೆ ವಿರೋಧ ಪಕ್ಷಗಳಿಂದ ಟೀಕೆ ವ್ಯಕ್ತವಾದ ಹಿಂದೆಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕೊಡಗು ಪ್ರವಾಸ ದಿಢೀರ್ ರದ್ದುಗೊಂಡಿದೆ.


ಬೊಮ್ಮಾಯಿ

ಅನಿವಾರ್ಯ ಕಾರಣಗಳಿಂದ ಸೋಮವಾರದ ಕೊಡಗು ಪ್ರವಾಸ ರದ್ದುಪಡಿಸಲಾಗಿದೆ ಎಂದು ಮುಖ್ಯಮಂತ್ರಿ ವಿಶೇಷ ಕರ್ತವ್ಯಾಧಿಕಾರಿ ಬಿ.ಪಿ.ಚನ್ನಬಸವೇಶ ತಿಳಿಸಿದ್ದಾರೆ.

ಅಕಾಲಿಕ ಮಳೆಯಿಂದ ರಾಜ್ಯದ ವಿವಿಧೆಡೆ ಅಪಾರ ನಷ್ಟವಾಗಿರುವ ಸಂದರ್ಭದಲ್ಲಿ ಸಮಾವೇಶ ನಡೆಯುತ್ತಿರುವುದನ್ನು ವಿರೋಧ ಪಕ್ಷದ ಮುಖಂಡರು ಪ್ರಶ್ನಿಸಿದ್ದಾರೆ.

ಬೆಳಿಗ್ಗೆ 11ಕ್ಕೆ ಸಮಾವೇಶ ಆರಂಭವಾಗಲಿದೆ. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಚಿವರಾದ ಆರ್.ಅಶೋಕ, ಕೆ.ಎಸ್.ಈಶ್ವರಪ್ಪ, ಸಂಸದ ಪ್ರತಾಪ ಸಿಂಹ ಭಾಗವಹಿಸಿ, ಅಭ್ಯರ್ಥಿ ಪರ ಪ್ರಚಾರ ನಡೆಸಲಿದ್ದಾರೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

ಕಟೀಲ್ 'ಗುರು' ಕೇಳಿದರೆ ಉತ್ತರಿಸುವೆ: ಖರ್ಗೆ ತಿರುಗೇಟು

ಮಲ್ಲಿಕಾರ್ಜುನ ಖರ್ಗೆ

ಕಲಬುರಗಿ: 'ಖರ್ಗೆ ಲೂಟಿ ಅಂಗಡಿ ಬಂದ್ ಆಗಿದೆ' ಎಂಬ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಕಟು ಟೀಕೆಗೆ ಉತ್ತರಿಸಿರುವ ರಾಜ್ಯಸಭೆ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು, 'ದೆಹಲಿಯಲ್ಲಿ ಕುಳಿತಿರುವ ಅವರ ಗುರುಗಳು (ನರೇಂದ್ರ ಮೋದಿ) ಕೇಳಿದರೆ ಸೂಕ್ತ ಉತ್ತರ ನೀಡುತ್ತೇನೆ' ಎಂದು ತಿರುಗೇಟು ನೀಡಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಟೀಲ್ ಹೇಳಿಕೆ ಅವರ ಪಕ್ಷದ ಸಂಸ್ಕೃತಿಯನ್ನು ತೋರಿಸುತ್ತದೆ. ಏನಾದರೂ ಪ್ರಶ್ನಿಸಿದರೆ ವ್ಯಂಗ್ಯ ಮಾಡುವುದನ್ನೇ ಕಲಿತಿದ್ದಾರೆ. ಅವರಿಗೆ ನಮ್ಮ ಪಕ್ಷದ ರಾಜ್ಯ ನಾಯಕರು ಸೂಕ್ತ ಉತ್ತರ ನೀಡುತ್ತಾರೆ' ಎಂದರು.

ಚುನಾವಣೆ ಕಾರಣಕ್ಕೆ ಕೃಷಿ ಕಾಯ್ದೆ ವಾಪಸ್: 'ರೈತರ ಒತ್ತಡಕ್ಕೆ ಮಣಿದು ನರೇಂದ್ರ ಮೋದಿ ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆದಿಲ್ಲ. ಚುನಾವಣೆ ಬಂದಿದೆ ಎಂದು ಹಿಂಪಡೆಯುತ್ತಿದ್ದಾರೆ. ಈಗ ಏಕಾಏಕಿ ಬಂದಿರುವ ರೈತರ ಬಗೆಗಿನ ಕಾಳಜಿ 700 ರೈತರು ತೀರಿಕೊಂಡಾಗ ಎಲ್ಲಿ ಹೋಗಿತ್ತು. ಈಗ ವಾಪಸ್ ಪಡೆಯುವ ಘೋಷಣೆ ಮಾಡಿದ್ದಾರೆ. ಇದು ಏಕವ್ಯಕ್ತಿ ಪ್ರದರ್ಶನ. ಅವರಿಗೆ ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಗೌರವವೇ ಇಲ್ಲದಂತಾಗಿದೆ' ಎಂದು ಟೀಕಿಸಿದರು.

15 ವಿಚಾರಗಳ ಕುರಿತು ಚರ್ಚೆ: ಚಳಿಗಾಲದ ಅಧಿವೇಶನದಲ್ಲಿ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಕೊಡಿಸುವ ಕಾಯ್ದೆ ತರುವುದು, ಪೆಗಾಸಸ್ ಹಗರಣ ಸೇರಿ 15 ವಿಷಯಗಳ ಕುರಿತು ಚರ್ಚಿಸಲು ನಿರ್ಧರಿಸಿದ್ದೇವೆ. ಈ ಬಗ್ಗೆ ವಿಸ್ತೃತ ಚರ್ಚೆಗೆ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ 25ರಂದು ಸಭೆ ಕರೆದಿದ್ದಾರೆ ಎಂದರು.

ಕಸಾಪ ಶೇ 52 ರಷ್ಟು ಮತದಾನ

ಒಂದನೇ ಪುಟದಿಂದ...

ಕೆಲ ಬೆಂಬಲಿಗರು ಅಭ್ಯರ್ಥಿಯ ಹೆಸರು, ಕ್ರಮಸಂಖ್ಯೆ ಸೇರಿ ವಿವಿಧ ಮಾಹಿತಿಗಳಿರುವ ಪತ್ರಗಳನ್ನು ವಿತರಿಸಿ, ಮತ ಕೋರುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಕನ್ನಡದ ಶಾಲು ಧರಿಸಿ, ಬಾವುಟ ಹಿಡಿದು ಬರುವ ಮೂಲಕ ಗಮನಸೆಳೆದರು.

ಪರಿಷತ್ತು ನೀಡಿರುವ ಭಾವಚಿತ್ರ ಸಹಿತ ಗುರುತಿನ ಚೀಟಿ ತರದವರಿಗೆ ಆಧಾರ್ ಕಾರ್ಡ್, ಪಡಿತರ ಚೀಟಿ ಸೇರಿದಂತೆ ಮಾನ್ಯತೆ ಹೊಂದಿರುವ, ಭಾವಚಿತ್ರ ಇರುವ ಗುರುತಿನ ಚೀಟಿ ತೋರಿಸಿದ ನಂತರ ಮತದಾನಕ್ಕೆ ಅವಕಾಶ ಕಲ್ಪಿಸಲಾಯಿತು.

ಬೆಂಗಳೂರಿನ ಬಿ.ಎಂ.ಎಸ್ ಪದವಿಪೂರ್ವ ಕಾಲೇಜಿಗೆ ಮತದಾನ ಮಾಡಲು ಬಂದ ಲೇಖಕಿ ವಿಜಯಾ ಅವರ ಬಳಿ ಕಸಾಪ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಮಾಯಣ್ಣ ಹಾಗೂ ಸಿ.ಕೆ. ರಾಮೇಗೌಡ ಅವರು ಮತಕ್ಕಾಗಿ ಮನವಿ ಮಾಡಿಕೊಳ್ಳುತ್ತಿರುವುದು —ಪ್ರಜಾವಾಣಿ ಚಿತ್ರ

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕಗಳ ಅಧ್ಯಕ್ಷರು

ಯಾದಗಿರಿ	ಸಿದ್ದಪ್ಪ ಹೊಟ್ಟಿ (ಅವಿರೋಧ)
ಕಲಬುರಗಿ	ವಿಜಯಕುಮಾರ ಪಾಟೀಲ ತೇಗಲತಿಪ್ಪಿ
ಬೀದರ್	ಸುರೇಶ ಚನಶೆಟ್ಟಿ
ರಾಯಚೂರು	ರಂಗಣ್ಣ ಪಾಟೀಲ ಅಳ್ಳುಂಡಿ
ಕೊಪ್ಪಳ	ಶರಣೇಗೌಡ ಪೊಲೀಸ್ ಪಾಟೀಲ
ಚಿಕ್ಕಬಳ್ಳಾಪುರ	ಪ್ರೊ.ಕೋಡಿ ರಂಗಪ್ಪ
ಕೊಡಗು	ಎಂ.ಪಿ.ಕೇಶವ ಕಾಮತ್
ಹಾಸನ	ಎಚ್.ಎಲ್.ಮಲ್ಲೇಶ್ ಗೌಡ
ಮೈಸೂರು	ಮಡ್ಡೀಕೆರೆ ಗೋಪಾಲ್
ಚಾಮರಾಜನಗರ	ಶೈಲಕುಮಾರ್
ಮಂಡ್ಯ	ರವಿಕುಮಾರ್ ಚಾಮಲಾಪುರ
ದಾವಣಗೆರೆ	ಬಿ.ವಾಮದೇವಪ್ಪ
ಚಿತ್ರದುರ್ಗ	ಕೆ.ಎಂ.ಶಿವಸ್ವಾಮಿ
ಶಿವಮೊಗ್ಗ	ಡಿ. ಮಂಜುನಾಥ್
ದಕ್ಷಿಣ ಕನ್ನಡ	ಡಾ.ಎಂ.ಪಿ.ಶ್ರೀನಾಥ್
ಉಡುಪಿ	ನೀಲಾವರ ಸುರೇಂದ್ರ ಅಡಿಗ
ಚಿಕ್ಕಮಗಳೂರು	ಸೂರಿ ಶ್ರೀನಿವಾಸ್
ಧಾರವಾಡ	ಲಿಂಗರಾಜ ಅಂಗಡಿ
ಉತ್ತರ ಕನ್ನಡ	ಬಿ.ಎನ್.ವಾಸರೆ
ಬಾಗಲಕೋಟೆ	ಶಿವಾನಂದ ಶೆಲ್ಲಿಕೇರಿ
ವಿಜಯಪುರ	ಹಾಸಿಂಪೀರ ವಾಲಿಕಾರ
ಗದಗ	ವಿವೇಕಾನಂದಗೌಡ ಪಾಟೀಲ
ಹಾವೇರಿ	ಲಿಂಗಯ್ಯ ಹಿರೇಮಠ
ವಿಜಯನಗರ-ಬಳ್ಳಾರಿ	ನಿಷ್ಠಿ ರುದ್ರಪ್ಪ
ಬೆಳಗಾವಿ	ಮಂಗಲಾ ಮೆಟಗುಡ್ಡ
ಬೆಂಗಳೂರು ನಗರ	ಎಂ.ಪ್ರಕಾಶ್‌ಮೂರ್ತಿ
ಬೆಂಗಳೂರು ಗ್ರಾಮಾಂತರ	ಬಿ.ಎನ್.ಕೃಷ್ಣಪ್ಪ
ರಾಮನಗರ	ಬಿ.ಟಿ. ನಾಗೇಶ್
ತುಮಕೂರು	ಕೆ.ಎಸ್.ಸಿದ್ದಲಿಂಗಪ್ಪ
ಕೋಲಾರ	ಎನ್.ಬಿ.ಗೋಪಾಲಗೌಡ

ಮೂರು ರಾಜ್ಯಗಳಲ್ಲಿ ಎನ್‌ಸಿಬಿ ಕಾರ್ಯಾಚರಣೆ

ಚೂಯಿಂಗ್ ಗಮ್, ಚಾಕ್‌ಲೇಟ್‌ನಲ್ಲಿ ಡ್ರಗ್ಸ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕರ್ನಾಟಕ, ಆಂಧ್ರಪ್ರದೇಶ ಹಾಗೂ ಕೇರಳದಲ್ಲಿ ಕಾರ್ಯಾಚರಣೆ
- ಪಾರ್ಸೆಲ್ ನೀಡಿದ್ದ ಡ್ರಗ್ಸ್ ಸುಳಿವು

ಬೆಂಗಳೂರು: ಕರ್ನಾಟಕ, ಆಂಧ್ರಪ್ರದೇಶ ಹಾಗೂ ಕೇರಳ ರಾಜ್ಯಗಳಲ್ಲಿ ಪ್ರತ್ಯೇಕ ಕಾರ್ಯಾಚರಣೆ ನಡೆಸಿರುವ ಎನ್‌ಸಿಬಿ ಅಧಿಕಾರಿಗಳು, ಭಾರಿ ಪ್ರಮಾಣದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ಬೆಂಗಳೂರಿನಲ್ಲಿ ಸಿಕ್ಕ ಪ್ರಾಥಮಿಕ ಮಾಹಿತಿ ಆಧರಿಸಿ ಮೂರು ಪ್ರತ್ಯೇಕ ಸ್ಥಳಗಳ ಮೇಲೆ ದಾಳಿ ಮಾಡಲಾಗಿದೆ. 244 ಗ್ರಾಂ ಆ್ಯಂಫೆಟಮೈನ್, 25 ಎಲ್‌ಎಸ್‌ಡಿ ಕಾಗದ ಚೂರುಗಳು, 2 ಗ್ರಾಂ ಮೆಥಾಂಕ್ಯುಲೋನ್, 44 ಗ್ರಾಂ ಮೆಥಾಂಫೆಟಮೈನ್ ಹಾಗೂ 212 ಕೆ.ಜಿ 500 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಎನ್‌ಸಿಬಿ ವಲಯ ನಿರ್ದೇಶಕ ಅಮಿತ್ ಫಾವಟೆ ಹೇಳಿದರು.

'ಚಾಕ್‌ಲೇಟ್, ಚೂಯಿಂಗ್ ಗಮ್ ಹಾಗೂ ತೆಂಗಿನಕಾಯಿ ಸಸಿಗಳಲ್ಲಿ ಡ್ರಗ್ಸ್ ಬಚ್ಚಿಟ್ಟು ಸಾಗಿಸಲಾಗುತ್ತಿತ್ತು. ಈ ಕೃತ್ಯದಲ್ಲಿ ಭಾಗಿಯಾಗಿದ್ದ 6 ಮಂದಿ ಬಂಧಿಸಲಾಗಿದ್ದು, ತನಿಖೆ ಮುಂದುವರಿದಿದೆ' ಎಂದೂ ತಿಳಿಸಿದರು.

ಪಾರ್ಸೆಲ್ ಸುಳಿವು: 'ಬೆಂಗಳೂರಿನಿಂದ ತಿರುವನಂತಪುರಕ್ಕೆ ಕಳುಹಿಸಿದ್ದ ಪಾರ್ಸೆಲ್‌ನಲ್ಲಿ ಡ್ರಗ್ಸ್ ಬಚ್ಚಿಟ್ಟಿದ್ದ ಮಾಹಿತಿ ಸಿಕ್ಕಿತ್ತು. ಅದನ್ನು ಆಧರಿಸಿ ತಿರುವನಂತಪುರಕ್ಕೆ ಹೋದ ತಂಡ, ಸ್ಥಳವೊಂದರ ಮೇಲೆ ದಾಳಿ ಮಾಡಿ ಪಾರ್ಸೆಲ್ ಪತ್ತೆ ಮಾಡಿತು. ಪಾರ್ಸೆಲ್ ಪಡೆದವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡರು' ಎಂದೂ ಅಮಿತ್ ಫಾವಟೆ ಹೇಳಿದರು.

ಆರೋಪಿಗಳಿಂದ ಜಪ್ತಿ ಮಾಡಲಾದ ಡ್ರಗ್ಸ್

'ತಮಿಳುನಾಡು ಹಾಗೂ ಕೇರಳದಲ್ಲಿ ಹಲವು ದಿನಗಳಿಂದ ಮಳೆ ಆಗುತ್ತಿದೆ. ರೆಡ್ ಅಲರ್ಟ್ ಸಹ ಘೋಷಿಸಲಾಗಿದೆ. ಇದರ ನಡುವೆಯೂ ಪೆಡ್ಲರ್‌ಗಳು, ಡ್ರಗ್ಸ್ ಸಾಗಣೆ ಮಾಡುತ್ತಿದ್ದರು' ಎಂದೂ ಅವರು ವಿವರಿಸಿದರು.

'ತಮ್ಮದೇ ಗ್ಯಾಂಗ್ ಕಟ್ಟಿಕೊಂಡಿದ್ದ ಆರೋಪಿಗಳು, ವ್ಯವಸ್ಥಿತವಾಗಿ ಡ್ರಗ್ಸ್ ಸಾಗಣೆ ಹಾಗೂ ಮಾರಾಟ ಮಾಡುತ್ತಿದ್ದರು. ಕೃತ್ಯಕ್ಕೆ ಬಳಸಿದ್ದ ಎರಡೂ ವಾಹನಗಳನ್ನೂ ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

ಸೋತೆನೆಂದು ಕಾರು ಹತ್ತಿ ನಿರ್ಗಮಿಸಿದ್ದರು...

ಪ್ರಜಾವಾಣಿ ವಾರ್ತೆ

ಧಾರವಾಡ: ತೀವ್ರ ಕುತೂಹಲ ಕೆರಳಿಸಿದ್ದ ಇಲ್ಲಿನ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನದ ಚುನಾವಣೆ ಮತ ಎಣಿಕೆಯ ಪ್ರತಿ ಹಂತವೂ ಕುತೂಹಲಕಾರಿಯಾಗಿತ್ತು. ಗೆಲುವು ಪರಸ್ಪರ ಹೊಯ್ದಾಡುತ್ತಿತ್ತು.

ಮೂರನೇ ಬಾರಿ ಕಣಕ್ಕಿಳಿದಿದ್ದ ಲಿಂಗರಾಜ ಅಂಗಡಿ ಹಾಗೂ ಮೊದಲ ಬಾರಿಗೆ ಸ್ಪರ್ಧಿಸಿದ ರಾಮು ಮೂಲಗಿ ಅವರ ನಡುವೆ ಭಾರಿ ಪೈಪೋಟಿ ಇತ್ತು.

ಒಂದು ಹಂತದಲ್ಲಿ ರಾಮು ಮೂಲಗಿ ಅವರು ಲಿಂಗರಾಜ ಅಂಗಡಿ ಅವರಿಗಿಂತ 70 ಮತಗಳ ಮುನ್ನಡೆ ಕಾಯ್ದುಕೊಂಡಿದ್ದರು. ಆ ಸಂದರ್ಭದಲ್ಲಿ ಮತ ಎಣಿಕೆ ಕೇಂದ್ರದಿಂದ ಹೊರಬಂದ ಅಂಗಡಿ ಕಾರು ಹತ್ತಿ ಸ್ಥಳದಿಂದ ನಿರ್ಗಮಿಸಿದರು.

ಅಂತಿಮವಾಗಿ ಹುಬ್ಬಳ್ಳಿ ನಗರದ ಎರಡು ಮತಗಟ್ಟೆಗಳು ಲಿಂಗರಾಜ ಅಂಗಡಿ ಅವರ ಕೈಹಿಡಿದವು. ಕೇವಲ 24 ಮತಗಳ ಅಂತರದಿಂದ ಗೆಲುವು ಸಾಧಿಸಿದರು. ಲಿಂಗರಾಜ ಅಂಗಡಿ 1244, ರಾಮು ಮೂಲಗಿ 1220 ಮತಗಳನ್ನು ಪಡೆದರು. ಗೆಲುವು ಖಚಿತವಾದ ಮೇಲೆ ತಹಶೀಲ್ದಾರ್ ಕಚೇರಿಗೆ ಬಂದ ಅಂಗಡಿ ಗೆಲುವಿನ ನಗೆ ಬೀರಿದರು. ಸಪ್ಪೆ ಮುಖ ಹಾಕಿಕೊಂಡಿದ್ದ ಅವರ ಬೆಂಬಲಿಗರು ನಂತರ ಗೆಲುವಿನ ಕೇಕೆ ಹಾಕಿ ಸಂಭ್ರಮಿಸಿದರು.

ರೋಣ (ಗದಗ ಜಿಲ್ಲೆ): ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಗೆ ಅನೇಕ ಕಸಾಪ ಸದಸ್ಯರು ಮತ ಹಾಕಲು ಅಲೆದಾಡಿದರು.

ಯಾವಗಲ್ಲ ಗ್ರಾಮದ ಸದಸ್ಯರನ್ನು ಗಜೇಂದ್ರಗಡಕ್ಕೆ, ಅಲ್ಲಿನವರ ಹೆಸರನ್ನು ರೋಣ, ನರೇಗಲ್‌ಗೆ ಸೇರಿಸಲಾಗಿತ್ತು. ಮತದಾನಕ್ಕೆ ಅಲೆದಾಡಿದ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಬೆಲೆ ಏರಿಕೆ ಬಿಸಿ: ನೀರಾವರಿ ಕಾಮಗಾರಿಗಳು ಕುಂಠಿತ

ಒಂದನೇ ಪುಟದಿಂದ

ಕಾಮಗಾರಿಗಳ ಮೇಲೆ ಪರಿಣಾಮ:
- ಚಾಲ್ತಿಯಲ್ಲಿರುವ ನೀರಾವರಿ ಕಾಮಗಾರಿಗಳಲ್ಲಿ ವಿಶೇಷವಾಗಿ ನಾಲೆಗಳು, ಬ್ರಿಜ್ ಕಂ ಬ್ಯಾರೇಜ್, ಅಣೆಕಟ್ಟುಗಳಿಗೆ ಲಕ್ಷಗಟ್ಟಲೆ ಟನ್ ಬಲವರ್ಧಕ ಉಕ್ಕು ಬೇಕು. 6 ರಿಂದ 9 ತಿಂಗಳಲ್ಲಿ ಉಕ್ಕು ಬೆಲೆ ಟನ್‌ಗೆ ₹ 51 ಸಾವಿರದಿಂದ ₹ 75 ಸಾವಿರ ಅಂದರೆ, ಶೇ 32ರಷ್ಟು ಏರಿದೆ.
- ಏತ ನೀರಾವರಿ ಮತ್ತು ಹನಿ ನೀರಾವರಿ ಯೋಜನೆಗಳಿಗೆ ಎಂಎಸ್ ಪ್ಲೇಟ್ ಮತ್ತು ಎಂಎಸ್ ಪೈಪ್‌ಗಳು ಅತಿ ಅಗತ್ಯ. ಈ ಕಾಮಗಾರಿಗಳಿಗೆ ಲಕ್ಷಗಟ್ಟಲೆ ಟನ್ ಎಂಎಸ್ ಪೈಪ್‌ಗಳು ಬೇಕಾಗುತ್ತದೆ. ಎಂಎಸ್ ಪೈಪ್‌ಗಳಿಗೆ ಉಕ್ಕಿನಿಂದ ಮಾಡಿದ ಎಚ್‌ಆರ್ ಕಾಯಿಲ್‌ಗಳನ್ನು ಬಳಸಲಾಗುತ್ತದೆ. ಎಂಎಸ್ ಪ್ಲೇಟ್ ಮತ್ತು ಎಂಎಸ್ ಪೈಪ್‌ಗಳ ತಯಾರಕರು ತಮ್ಮ ಉತ್ಪನ್ನಗಳ ಬೆಲೆಯನ್ನು ಪ್ರತಿ ಟನ್‌ಗೆ ₹ 62 ಸಾವಿರದಿಂದ ₹ 98 ಸಾವಿರಕ್ಕೆ ಏರಿಕೆ ಮಾಡಿದ್ದಾರೆ. ಶೇ 58 ರಷ್ಟು ಏರಿಕೆ ಆಗಿದೆ.
- ಏತ ನೀರಾವರಿ ಮತ್ತು ಹನಿ ನೀರಾವರಿಗೆ ಬಳಸುವ ಪಿವಿಸಿ, ಎಚ್‌ಡಿಪಿಇ ಮತ್ತು ಡಿಐ ಪೈಪ್‌ಗಳ ಬೆಲೆಯೂ ಏರಿಕೆ ಆಗಿದೆ. ಎಲೆಕ್ಟ್ರೋ ಮೆಕ್ಯಾನಿಕಲ್ ಮತ್ತು ಹೈಡ್ರೋ ಮೆಕ್ಯಾನಿಕಲ್ ಉಪಕರಣಗಳ ದರವೂ ಏರಿಕೆಯಾಗಿದೆ. ಇವುಗಳ ಬೆಲೆ ಪ್ರತಿದಿನ ಏರಿಕೆ ಆಗುತ್ತಿರುವುದರಿಂದ ಯೋಜನೆಗಳನ್ನು ಪೂರ್ಣಗೊಳಿಸುವುದು ಕಷ್ಟ ಎಂಬುದು ಗುತ್ತಿಗೆದಾರರ ಅಳಲು.
- ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಕೂಡ ನಿರ್ಮಾಣ ಕಾಮಗಾರಿ ಮೇಲೆ ಗಂಭೀರ ಪರಿಣಾಮ ಬೀರಿದೆ. ಡೀಸೆಲ್ ಬೆಲೆ ₹ 102ಕ್ಕೆ ಏರಿಕೆ ಆಗಿತ್ತು. ಆ ಬಳಿಕ ₹ 85ಕ್ಕೆ ಇಳಿಸಲಾಗಿದೆ. ಆದರೂ ಶೇ 32 ರಷ್ಟು ಏರಿಕೆ ಆಗಿದೆ.
- ವಿವಿಧ ಇಲಾಖೆಗಳಲ್ಲಿ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುವುದನ್ನು ನಿಲ್ಲಿಸಲಾಗಿದೆ. ಇದು ಕಾಮಗಾರಿಯ ವೇಗವನ್ನು ಕುಂಠಿತಗೊಳಿಸಿದೆ.

ದೆಹಲಿ ಮಾಲಿನ್ಯ ತಡೆ: ಇಂದು ಪರಿಶೀಲನಾ ಸಭೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯಲ್ಲಿ ಹೆಚ್ಚುತ್ತಿರುವ ಮಾಲಿನ್ಯ ತಡೆಗಟ್ಟಲು ಜಾರಿಗೊಳಿಸಲಾಗಿರುವ ನಿರ್ಬಂಧಗಳು ಭಾನುವಾರ ಕೊನೆಗೊಂಡ ಕಾರಣ, ದೆಹಲಿ ಪರಿಸರ ಸಚಿವ ಗೋಪಾಲ್ ರಾಯ್ ಅವರು ಸೋಮವಾರ (ನ.22) ಪರಿಶೀಲನಾ ಸಭೆ ನಡೆಸಲಿದ್ದಾರೆ.

'ಈ ಉನ್ನತ ಮಟ್ಟದ ಸಭೆಯಲ್ಲಿ ಸಂಬಂಧಪಟ್ಟ ಇಲಾಖೆಗಳ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳುವರು' ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ದೆಹಲಿಯಲ್ಲಿ ವಾಯುಮಾಲಿನ್ಯ ತಡೆಗಟ್ಟುವ ಸಂಬಂಧ ಸರ್ಕಾರ ಕಳೆದ ಬುಧವಾರ ಹಲವಾರು ನಿರ್ಬಂಧಗಳನ್ನು ಜಾರಿಗೊಳಿಸಿತ್ತು. ಅಗತ್ಯವಲ್ಲದ ವಸ್ತುಗಳನ್ನು ಸಾಗಿಸುವ ಟ್ರಕ್‌ಗಳು ದೆಹಲಿ ಪ್ರವೇಶಿಸುವುದರ ಮೇಲೆ ನಿಷೇಧ ಹೇರಲಾಗಿತ್ತು. ಮುಂದಿನ ಆದೇಶದ ವರೆಗೆ ಶಾಲಾ–ಕಾಲೇಜುಗಳನ್ನು ಬಂದ್ ಮಾಡಲು ಸೂಚಿಸಲಾಗಿತ್ತು.

ಭಾನುವಾರದ ವರೆಗೆ ನೌಕರರು ಮನೆಯಿಂದಲೇ ಕಚೇರಿ ಕೆಲಸ ಮಾಡುವಂತೆಯೂ ದೆಹಲಿ ಸರ್ಕಾರ ಆದೇಶಿಸಿತ್ತು.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಪೌಷ್ಟಿಕ ಆಹಾರ ಸೇವಿಸಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001
ದೂ: 080–2558 6520/ 2558 9112 ಫ್ಯಾಕ್ಸ್: 080–2588 6321
ಇಮೇಲ್: ho@kspcb.gov.in ವೆಬ್‌ಸೈಟ್: www.kspcb.karnataka.gov.in
ಸಂಖ್ಯೆ: ಕರಾಮಾನಿಮಂ/22/ಹಿಪಅ/ಗಣಿ/ಪಸಾಸ/2021–22/4158 ದಿನಾಂಕ: 18.11.2021
ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ
ಮೆ. ಶ್ರೀ ಚೆನ್ನಕೇಶವ ಇಂಡಸ್ಟ್ರೀಸ್ ಇವರು ಸರ್ವೆ ನಂ. 116ಪಿ1(ಭಾಗ), 117 ಮತ್ತು 106, ಧರ್ಮಪುರ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 10.90 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 4,80,000 ಟನ್ ಸಾಮರ್ಥ್ಯದ ಕಬ್ಬಿಣ ಅದಿರು ಪ್ರತ್ಯೇಕೀಕರಣ ಘಟಕ ಮತ್ತು 15,000 ಟನ್ ಸಾಮರ್ಥ್ಯದ ಮ್ಯಾಂಗನೀಸ್ ಅದಿರು ಪ್ರತ್ಯೇಕೀಕರಣ ಘಟಕದ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯ ಉದ್ದಿಮೆದಾರರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ: SEIAA 05 IND 2021 ದಿನಾಂಕ: 01.07.2021 ಮತ್ತು ದಿನಾಂಕ: 18.08.2021 ರಂದು ಉದ್ದಿಮೆಯವರು ನೀಡಿದ ನಿವೇದನೆಯ ಪತ್ರದ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ.
ಯೋಜನೆಯ ವಿವರಗಳು ಕೆಳಕಂಡಂತಿವೆ:

1.	**ಕಂಪನಿಯ ಹೆಸರು ಮತ್ತು ವಿಳಾಸ:** ಮೆ. ಶ್ರೀ ಚೆನ್ನಕೇಶವ ಇಂಡಸ್ಟ್ರೀಸ್ ರಿಜಿಸ್ಟರ್ಡ್ ಕಛೇರಿ: ಮನೆ ನಂ. 101, ಹೆಚ್.ಆರ್.ಜಿ. ಎನ್‌ಕ್ಲೇವ್, ತಿಲಕ್ ನಗರ, ಕಂಟೋನ್ಮೆಂಟ್, ಬಳ್ಳಾರಿ ಜಿಲ್ಲೆ – 583 104
2.	**ಉದ್ದೇಶಿತ ಯೋಜನೆಯ ಸ್ಥಳ:** ಸರ್ವೆ ನಂ. 116ಪಿ1(ಭಾಗ), 117 ಮತ್ತು 106, ಧರ್ಮಪುರ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ
3.	**ಯೋಜನೆಯ ಕಾರ್ಯಚಟುವಟಿಕೆ:** ಪ್ರತಿ ವರ್ಷಕ್ಕೆ 4,80,000 ಟನ್ ಸಾಮರ್ಥ್ಯದ ಕಬ್ಬಿಣ ಅದಿರು ಪ್ರತ್ಯೇಕೀಕರಣ ಘಟಕ ಮತ್ತು 15,000 ಟನ್ ಸಾಮರ್ಥ್ಯದ ಮ್ಯಾಂಗನೀಸ್ ಅದಿರು ಪ್ರತ್ಯೇಕೀಕರಣ ಘಟಕದ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ.
4.	**ಮಾಲಿನ್ಯ ನಿಯಂತ್ರಣ ಕ್ರಮಗಳು:** ಕಛೇರಿಯಿಂದ ಬರುವ ಗೃಹ ಬಳಕೆಯ ತ್ಯಾಜ್ಯ ನೀರನ್ನು ಸೆಪ್ಟಿಕ್ ಟ್ಯಾಂಕ್ – ನೆನೆಸುವ ಹಳ್ಳದ ವ್ಯವಸ್ಥೆಗೆ ಬಿಡಲಾಗುತ್ತದೆ. ಸ್ಥಾವರದ ಹೊರಸೂಸುವಿಕೆಯನ್ನು ಸ್ಥಾವರದೊಳಗೆ ಮರುಬಳಕೆ ಮಾಡಲಾಗುತ್ತದೆ ಮತ್ತು ಸ್ಥಾವರವು ಶೂನ್ಯ ವಿಸರ್ಜನೆಯನ್ನು ಕಲ್ಪಿಸುತ್ತದೆ. ಸ್ಥಾವರ ವಿನ್ಯಾಸದ ಅವಿಭಾಜ್ಯ ಅಂಗವಾಗಿರುವ ಮಳೆನೀರು ಕೊಯ್ಲು ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಮೇಲ್ಛಾವಣಿ ಪ್ರದೇಶದಿಂದ ಮಳೆನೀರನ್ನು ಮಳೆನೀರಿನ ಚರಂಡಿಗಳಲ್ಲಿ ಹೊರಹಾಕಲಾಗುತ್ತದೆ, ಇವುಗಳನ್ನು ಅಂತರಿಕ ರಸ್ತೆಗಳಲ್ಲಿ ಮತ್ತು ತೆರೆದ ಸ್ಥಳಗಳಲ್ಲಿ ಪ್ರಸ್ತಾಪಿಸಲಾಗಿದೆ. ಉತ್ತಮ ಕಾರ್ಯಕಾರಿತ್ವ ಬ್ಯಾಗ್ ಫಿಲ್ಟರ್‌ಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಮಾಲಿನ್ಯಕಾರಕಗಳ ಸರಿಯಾದ ಪ್ರಸರಣಕ್ಕಾಗಿ ಸಾಕಷ್ಟು ಎತ್ತರದ ಸ್ಟ್ಯಾಕ್‌ಗಳನ್ನು ಪ್ರಸ್ತಾಪಿಸಲಾಗಿದೆ. ಧೂಳಿನ ಕಣಗಳನ್ನು ಕಡಿಮೆ ಮಾಡಲು ಸ್ಥಾವರದ ಪ್ರದೇಶದಲ್ಲಿ ಸಂಪೂರ್ಣ ಅಂತರಿಕ ರಸ್ತೆಯನ್ನು ಡಾಂಬರೀಕರಣ ಮಾಡಲಾಗುತ್ತದೆ. ಸ್ಥಾವರದ ಪರಧಿಯಲ್ಲಿ ಹಸಿರುಪಟ್ಟಿಯನ್ನು ಅಭಿವೃದ್ಧಿಪಡಿಸಲಾಗುವುದು.
5.	**ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ಉದ್ದೇಶಿತ ಯೋಜನಾ ಸ್ಥಳ, ಸರ್ವೆ ನಂ. 116ಪಿ1(ಭಾಗ), 117 ಮತ್ತು 106, ಧರ್ಮಪುರ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ದಿನಾಂಕ: 22.12.2021 (ಬುಧುವಾರ) ರಂದು ಪೂರ್ವಾಹ್ನ 11:30 ಗಂಟೆಗೆ**
6.	**ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ:** (ಅ) ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬಳ್ಳಾರಿ (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ (ಈ) ತಾಲ್ಲೂಕು ಪಂಚಾಯಿತಿ, ಸಂಡೂರು (ಉ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಧರ್ಮಾಪುರ (ಊ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ (ಋ) ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ. 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001 (ೠ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ / ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: www.kspcb.karnataka.gov.in** ನಲ್ಲಿ ಪಡೆಯಬಹುದು.
ಸಹಿ/–
ಸದಸ್ಯ ಕಾರ್ಯದರ್ಶಿ
ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ
ನನ್ನ ಧರ್ಮ ತುಂಬಾ ಸರಳವಾಗಿದೆ. ಅದೆಂದರೆ, ದಯಾಪರತೆ.
-ದಲೈಲಾಮ

ಅಧಿಕಾರ ಅವಧಿ ವಿಸ್ತರಣೆಗೆ ಸುಗ್ರೀವಾಜ್ಞೆ ಕೋರ್ಟ್ ಆಶಯಕ್ಕೆ ವಿರುದ್ಧ

ಕೇಂದ್ರ ತನಿಖಾ ದಳ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯದ (ಇ.ಡಿ.) ಮುಖ್ಯಸ್ಥರ ಅಧಿಕಾರ ಅವಧಿಯನ್ನು ವಿಸ್ತರಣೆ ಮಾಡುವ ಕೇಂದ್ರ ಸರ್ಕಾರದ ತೀರ್ಮಾನವು ಸರಿಯಲ್ಲ. ಇದರಿಂದ ಕೆಟ್ಟ ಪದ್ಧತಿಯೊಂದನ್ನು ಆರಂಭಿಸಿದಂತಾಗುವುದು. ಸುಪ್ರೀಂ ಕೋರ್ಟ್ ಈಚೆಗೆ ನೀಡಿರುವ ಒಂದು ತೀರ್ಪು ಹಾಗೂ ಹಿಂದೆ ನೀಡಿದ್ದ ಹಲವು ತೀರ್ಪುಗಳಿಗೆ ವಿರುದ್ಧವಾಗಿ ಇದೆ ಕೇಂದ್ರದ ಈ ತೀರ್ಮಾನ. ಈ ಎರಡು ತನಿಖಾ ಸಂಸ್ಥೆಗಳ ಮುಖ್ಯಸ್ಥರ ಅಧಿಕಾರ ಅವಧಿ ಎರಡು ವರ್ಷಗಳು. ಆದರೆ, ಅವರ ಅಧಿಕಾರ ಅವಧಿಯನ್ನು ಗರಿಷ್ಠ ಐದು ವರ್ಷಗಳಿಗೆ ವಿಸ್ತರಣೆ ಮಾಡುವ ಅಧಿಕಾರವನ್ನು ಕೇಂದ್ರ ಸರ್ಕಾರವು ಎರಡು ಸುಗ್ರೀವಾಜ್ಞೆಗಳ ಮೂಲಕ ತನಗೆ ತಾನೇ ಕೊಟ್ಟುಕೊಂಡಿದೆ. ಅತ್ಯಂತ ತುರ್ತು ಸಂದರ್ಭಗಳಲ್ಲಿ ಮಾತ್ರವೇ ಸುಗ್ರೀವಾಜ್ಞೆಯ ಮೂಲಕ ಕಾನೂನು ಜಾರಿಗೆ ತರಬೇಕು. ಅಂತಹ ಪರಿಸ್ಥಿತಿ ಇಲ್ಲ ಎಂದಾದರೆ, ಶಾಸನಸಭೆಗಳ ಮೂಲಕವೇ ಕಾನೂನು ರೂಪಿಸಬೇಕು. ಇ.ಡಿ. ಮುಖ್ಯಸ್ಥರ ಅಧಿಕಾರ ಅವಧಿಯು ಕೊನೆಗೊಳ್ಳಲಿತ್ತು ಎಂಬುದನ್ನು ಹೊರತುಪಡಿಸಿದರೆ, ಇಲ್ಲಿ ಯಾವುದೇ ತುರ್ತು ಸಂದರ್ಭ ಎದುರಾಗಿರಲಿಲ್ಲ. ಒಂದು ಸುಗ್ರೀವಾಜ್ಞೆಯಿಂದಾಗಿ ಅವರ ಅಧಿಕಾರ ಅವಧಿಯನ್ನು ವಿಸ್ತರಿಸಲು ಸಾಧ್ಯವಾಗುತ್ತದೆ. ಈ ತಿಂಗಳ ಅಂತ್ಯಕ್ಕೆ ಸಂಸತ್ತಿನ ಚಳಿಗಾಲದ ಅಧಿವೇಶನ ಆರಂಭವಾಗಲಿದೆ. ಹೀಗಿರುವಾಗ ಸುಗ್ರೀವಾಜ್ಞೆ ಮೂಲಕ ಕಾನೂನು ಜಾರಿಗೆ ತರುವ ಅಗತ್ಯ ಏನಿತ್ತು? ಸುಗ್ರೀವಾಜ್ಞೆಗಳನ್ನು ಅತ್ಯಂತ ಜರೂರಿನ ಸಂದರ್ಭಗಳಲ್ಲಿ ಮಾತ್ರ ಜಾರಿಗೆ ತರಬೇಕೇ ವಿನಾ, ರಾಜಕೀಯ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸುಗ್ರೀವಾಜ್ಞೆಯ ಮೊರೆ ಹೋಗಬಾರದು ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ಸ್ಪಷ್ಟವಾಗಿ ಹೇಳಿದೆ.

ಸಿಬಿಐ ಮತ್ತು ಇ.ಡಿ. ಮುಖ್ಯಸ್ಥರ ಅಧಿಕಾರ ಅವಧಿಯ ವಿಚಾರವಾಗಿ ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದ್ದರ ಹಿಂದೆ ಇರುವುದು ರಾಜಕೀಯ ಉದ್ದೇಶ ಸಾಧನೆಯಂತೆ ಭಾಸವಾಗುತ್ತಿದೆ

ಆದರೆ, ಕೇಂದ್ರ ಸರ್ಕಾರವು ಸಿಬಿಐ ಮತ್ತು ಇ.ಡಿ. ಮುಖ್ಯಸ್ಥರ ಅಧಿಕಾರ ಅವಧಿಯ ವಿಚಾರವಾಗಿ ಸುಗ್ರೀವಾಜ್ಞೆಗಳನ್ನು ಹೊರಡಿಸಿದ್ದರ ಹಿಂದೆ ಇರುವುದು ರಾಜಕೀಯ ಉದ್ದೇಶ ಸಾಧನೆಯೇ ಹೊರತು ಬೇರಾವ ಕಾರಣವೂ ಅಲ್ಲ ಎಂದು ಭಾಸವಾಗುತ್ತಿದೆ. ಇ.ಡಿ. ಮುಖ್ಯಸ್ಥ ಎಸ್.ಕೆ. ಮಿಶ್ರಾ ಅವರ ಅಧಿಕಾರ ಅವಧಿಯು ನವೆಂಬರ್ 18ರಂದು ಕೊನೆಗೊಳ್ಳಬೇಕಿತ್ತು. ಈಗ ಅದನ್ನು ವಿಸ್ತರಿಸಲಾಗಿದೆ. ಅವರನ್ನು 2018ರಲ್ಲಿ ಎರಡು ವರ್ಷಗಳ ಅವಧಿಗೆ ನೇಮಕ ಮಾಡಲಾಗಿತ್ತು. ಹಿಂದಿನ ವರ್ಷದ ನವೆಂಬರ್‌ನಲ್ಲಿ ಅವರ ಅಧಿಕಾರ ಅವಧಿಯನ್ನು ಒಂದು ವರ್ಷದ ಮಟ್ಟಿಗೆ ವಿಸ್ತರಣೆ ಮಾಡಲಾಗಿತ್ತು. ಆಗ ಸುಪ್ರೀಂ ಕೋರ್ಟ್ ಈ ವಿಸ್ತರಣೆಯ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿತ್ತು. ಅಪರೂಪದ ಸಂದರ್ಭಗಳಲ್ಲಿ ಮಾತ್ರವೇ ಅಧಿಕಾರ ಅವಧಿಯನ್ನು ವಿಸ್ತರಿಸಬೇಕು, ಅದನ್ನು ಕೂಡ ಅಲ್ಪ ಅವಧಿಗೆ ಮಾತ್ರ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಈಗಿನ ಸುಗ್ರೀವಾಜ್ಞೆಗಳು ಈ ನಿರ್ದೇಶನದ ಉಲ್ಲಂಘನೆಯಂತೆ ಇವೆ. ಕೇಂದ್ರದ ತೀರ್ಮಾನವು ವಿನೀತ್ ನಾರಾಯಣ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿದ್ದ ಆಶಯಗಳಿಗೆ ವಿರುದ್ಧವಾಗಿ ಇದೆ. ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಇ.ಡಿ. ಹಾಗೂ ಸಿಬಿಐ ನಿರ್ದೇಶಕರ ಅಧಿಕಾರ ಅವಧಿಯನ್ನು ಕನಿಷ್ಠ ಎರಡು ವರ್ಷಗಳಿಗೆ ನಿಗದಿ ಮಾಡಿತ್ತು. ಇದರಿಂದಾಗಿ ಆ ಹುದ್ದೆಯಲ್ಲಿ ಇರುವವರು ಸ್ವತಂತ್ರವಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ಕೋರ್ಟ್ ಆಶಿಸಿತ್ತು. ಆದರೆ, ಅಧಿಕಾರ ಅವಧಿಯನ್ನು ಐದು ವರ್ಷಗಳಿಗೆ ವಿಸ್ತರಣೆ ಮಾಡಲು ಈಗ ಸುಗ್ರೀವಾಜ್ಞೆಗಳ ಮೂಲಕ ಅವಕಾಶ ಮಾಡಿಕೊಂಡಿರುವುದರಿಂದ, ಅಧಿಕಾರ ಅವಧಿ ವಿಸ್ತರಣೆ ಪಡೆದುಕೊಂಡವರು ಸರ್ಕಾರಕ್ಕೆ ಕೃತಜ್ಞರಾಗಿ ಇರುವಂತಾಗಬಹುದು. ಇದರ ಪರಿಣಾಮವಾಗಿ ಈ ಎರಡು ತನಿಖಾ ಸಂಸ್ಥೆಗಳ ಸ್ವಾಯತ್ತೆಯು ಇನ್ನಷ್ಟು ತಗ್ಗಬಹುದು.

ಕೇಂದ್ರ ತನಿಖಾ ಸಂಸ್ಥೆಗಳಾದ ಸಿಬಿಐ, ಇ.ಡಿ. ಎನ್‌ಸಿಬಿ, ಆದಾಯ ತೆರಿಗೆ ಇಲಾಖೆಯನ್ನು ಆಡಳಿತಾರೂಢ ಪಕ್ಷದ ರಾಜಕೀಯ ವಿರೋಧಿಗಳನ್ನು ಬಗ್ಗುಬಡಿಯಲು, ಟೀಕಾಕಾರರ ಬಾಯಿ ಮುಚ್ಚಿಸಲು ಮತ್ತೆ ಮತ್ತೆ ಬಳಕೆ ಮಾಡಿಕೊಳ್ಳಲಾಗಿದೆ. ಇವುಗಳನ್ನು ಹೀಗೆ ದುರ್ಬಳಕೆ ಮಾಡಿಕೊಳ್ಳುವ ಚಾಳಿ ಹಿಂದಿನಿಂದಲೂ ನಡೆದುಬಂದಿದೆ. ಆದರೆ, ಇದು ಈಗಿನ ಸರ್ಕಾರದ ಅವಧಿಯಲ್ಲಿ ತೀರಾ ವ್ಯಾಪಕವಾಗಿಯೂ ಎಗ್ಗಿಲ್ಲದೆಯೂ ನಡೆಯುತ್ತಿದೆ. ಇ.ಡಿ. ಅಧಿಕಾರಿಗಳು ವಿರೋಧ ಪಕ್ಷಗಳ ಹಲವು ಮುಖಂಡರ ವಿರುದ್ಧ ತನಿಖೆ ನಡೆಸುತ್ತಿದ್ದಾರೆ. ಅವರ ವಿರುದ್ಧದ ಪ್ರಕರಣಗಳ ಹಿಂದಿನ ರಾಜಕೀಯ ಹಾಗೂ ಅವರ ಮೇಲಿನ ದಾಳಿಗಳ ಹಿಂದಿನ ರಾಜಕೀಯವು ತೀರಾ ಸ್ಪಷ್ಟವಾಗಿ ಗೋಚರವಾಗುತ್ತ ಇದೆ. ಈಗ ತನಿಖಾ ಸಂಸ್ಥೆಗಳ ಮುಖ್ಯಸ್ಥರ ಅಧಿಕಾರ ಅವಧಿಯನ್ನು ವಿಸ್ತರಿಸುತ್ತಿರುವುದು, ಅವರು ವೈಯಕ್ತಿಕವಾಗಿಯೂ ಆಸಕ್ತಿ ತೋರಿಸಿ ಇಂತಹ ದಾಳಿಗಳನ್ನು ಮುಂದುವರಿಸಲಿ ಎಂಬ ಕಾರಣಕ್ಕೂ ಇರಬಹುದು.

ದಿನದ ಟ್ವೀಟ್

ಇರಲಿ ಕ್ರೀಡಾ ಸೌಹಾರ್ದ

ಪಾಕಿಸ್ತಾನದ ಹಾಕಿ ತಂಡಕ್ಕೆ ಭುವನೇಶ್ವರಕ್ಕೆ ಆತ್ಮೀಯ ಸ್ವಾಗತ. ಭಾರತ ಮತ್ತು ಪಾಕಿಸ್ತಾನದ ನಡುವೆ ನಿಯಮಿತ ಕ್ರೀಡಾ ಚಟುವಟಿಕೆಗಳನ್ನು ಪ್ರಾರಂಭಿಸಬಾರದೇಕೆ? ಭಾರತದಲ್ಲಿ ಏಕೆ ಈ ಬಗೆಯ ಪಾಕ್-ಫೋಬಿಯಾ?

ಸುಧೀಂದ್ರ ಕುಲಕರ್ಣಿ, ಲೇಖಕ

ಕಿಡಿನುಡಿ

ಮನಮೋಹನ್ ಸಿಂಗ್ ಪ್ರಧಾನಿಯಾಗಿ ವಿದೇಶಗಳಿಗೆ ಭೇಟಿ ನೀಡಿದಾಗ ಅವರಿಗೆ ಗೌರವ ಸಿಗುತ್ತಿರಲಿಲ್ಲ, ಸ್ವಾಗತ ಕೋರಲು ಯಾರೂ ಬರುತ್ತಿರಲಿಲ್ಲ, ನಮಸ್ಕಾರ ಮಾಡುತ್ತಿರಲಿಲ್ಲ. ಎಲ್ಲೋ ಒಂದು ಮೂಲೆಯಲ್ಲಿ ನಿಂತು ಬರುತ್ತಿದ್ದರು. ಆದರೆ, ನರೇಂದ್ರ ಮೋದಿ ಅವರು ವಿದೇಶ ಪ್ರವಾಸಕ್ಕೆ ತೆರಳಿದರೆ ಇಡೀ ಜಗತ್ತು ಭಾರತದತ್ತ ತಿರುಗಿ ನೋಡುತ್ತದೆ.

ಶೋಭಾ ಕರಂದ್ಲಾಜೆ, ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವೆ

25 ವರ್ಷಗಳ ಹಿಂದೆ

ಶುಕ್ರವಾರ, 22-11-1996

- **ಪಂಚಾಯಿತಿ, ಸ್ಥಳೀಯ ಸಂಸ್ಥೆಗಳಿಗೆ ಶಾಶ್ವತ ನೆರವು ಸಂಭವ**

ಬೆಂಗಳೂರು, ನ. 21– ಪಂಚಾಯತ್ ವ್ಯವಸ್ಥೆ ಮತ್ತು ಸ್ಥಳೀಯ ಸಂಸ್ಥೆಗಳನ್ನು ಶಾಶ್ವತ ನೆರವಿನ ವ್ಯಾಪ್ತಿಯಲ್ಲಿ ತರಬೇಕೆಂದು ಡಾ. ಜಿ.ತಿಮ್ಮಯ್ಯ ಸಮಿತಿ ಮಾಡಿರುವ ಶಿಫಾರಸನ್ನು ರಾಜ್ಯ ಸರ್ಕಾರ ಪರಿಶೀಲಿಸುತ್ತಿದೆ. ಇದು ಜಾರಿಗೆ ಬಂದಲ್ಲಿ ರಾಜ್ಯದ ಆದಾಯದ ಶೇ 36ರಷ್ಟು ಹಣ ಪಂಚಾಯತ್ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ದೊರೆಯಲಿದೆ ಎಂದು ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಇಲ್ಲಿ ಹೇಳಿದರು.

- **ಪ್ರತಿಭಟನಕಾರರ ಜೊತೆ ಚರ್ಚೆಗೆ ಅಮಿತಾಭ್ ಅಪೇಕ್ಷೆ**

ಬೆಂಗಳೂರು, ನ. 21– ವಿಶ್ವಸುಂದರಿ ಸ್ಪರ್ಧೆಯನ್ನು ವಿರೋಧಿಸುತ್ತಿರುವ ಸಂಘ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಲು ತಾವು ಸಿದ್ಧ ಎಂದು ಪ್ರಕಟಿಸಿದ ಎಬಿಸಿಎಲ್ ಸಂಸ್ಥೆಯ ಅಧ್ಯಕ್ಷ ಹಾಗೂ ಬಾಲಿವುಡ್ ಸೂಪರ್‌ಸ್ಟಾರ್ ಅಮಿತಾಭ್ ಬಚ್ಚನ್, ಸ್ಪರ್ಧೆಯ ವಿರುದ್ಧ ನಡೆಸುತ್ತಿರುವ ಚಳವಳಿಯನ್ನು ಅಂತ್ಯಗೊಳಿಸುವಂತೆ ಪ್ರತಿಭಟನಕಾರರಲ್ಲಿ ಮನವಿ ಮಾಡಿದರು.

‘ತಪ್ಪು ತಿಳಿವಳಿಕೆಯಿಂದಾಗಿ ಕೆಲವರು ಸ್ಪರ್ಧೆಯನ್ನು ವಿರೋಧಿಸುತ್ತಿದ್ದಾರೆ. ಅಂಥವರು ಬಂದು ನನ್ನನ್ನು ಭೇಟಿ ಮಾಡಿ ಮಾತುಕತೆ ನಡೆಸಿದರೆ, ಸ್ಪರ್ಧೆಯ ಬಗ್ಗೆ ಅವರಲ್ಲಿರುವ ತಪ್ಪು ತಿಳಿವಳಿಕೆಯನ್ನು ನಿವಾರಿಸುತ್ತೇನೆ’ ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಸೋಮವಾರ, 22-11-1971

- **ಹಿಂದುಳಿದವರ ಕೊರತೆ ಪರಿಶೀಲನೆಗೆ ಆಯೋಗ ರಚಿಸಲು ಒತ್ತಾಯ**

ಬೆಂಗಳೂರು, ನ. 21– ರಾಜ್ಯದ ಅಲ್ಪಸಂಖ್ಯಾತರ ಹಾಗೂ ಹಿಂದುಳಿದ ವರ್ಗದವರ ಕುಂದುಕೊರತೆಗಳ ಪರಿಶೀಲನೆಗೆ ಆಂಧ್ರ ಮತ್ತು ತಮಿಳುನಾಡಿನ ಮಾದರಿಯಲ್ಲಿ ಆಯೋಗವೊಂದನ್ನು ರಚಿಸಬೇಕು ಎಂದು ಈ ವರ್ಗದ ರಾಜ್ಯ ಮಟ್ಟದ ಸಮ್ಮೇಳನವು ಸರ್ಕಾರವನ್ನು ಒತ್ತಾಯ ಪಡಿಸಿದೆ.

- **ಲೀಟರ್ ಹಾಲಿಗೆ 7 ರೂಪಾಯಿ!**

ಹುಬ್ಬಳ್ಳಿ, ನ. 21– ಹುಬ್ಬಳ್ಳಿಯಲ್ಲಿ ನಿನ್ನೆ ಒಂದು ಲೀಟರ್ ಹಾಲಿಗೆ ಏಳು ರೂಪಾಯಿಗಳಂತೆ ಮಾರಾಟವಾಯಿತು.

ಬೆಲೆ ಎಷ್ಟು ಏರಿದ್ದರೂ ಹೇಗಾದರೂ ಮಾಡಿ ಕಾಲು ಸೇರು ಹಾಲು ಪಡೆಯಬೇಕೆಂಬ ಇಚ್ಛೆಯಿಂದ ಜನರು ಹಾಲಿನ ಅಂಗಡಿಗಳ ಬಳಿ ಸಾಲುಗಟ್ಟಿ ನಿಂತಿದ್ದುದು ಕಂಡುಬಂತು. ಸರ್ಕಾರಿ ಡೈರಿಯಿಂದ ಸರಬರಾಜಾದ ಹಾಲು ಹುಳಿತುಹೋದ ಕಾರಣ ಬೆಳಿಗ್ಗೆ ಮತ್ತು ಸಂಜೆ ನಗರದ ಜನಕ್ಕೆ ಹಾಲು ಸಿಕ್ಕಲಿಲ್ಲ. ಬೆಳಿಗ್ಗೆ ಲೀಟರಿಗೆ 3 ರೂ.ನಂತೆ ಮಾರಾಟವಾದ ಹಾಲಿನ ದರ ಸಂಜೆ 7 ರೂ.ಗಳಿಗೆ ಏರಿತು.

ಮಹಿಳಾ ಉದ್ಯಮಿಗಳ ಸಬಲೀಕರಣಕ್ಕೆ ಆಗಬೇಕಾದ ಕೆಲಸಗಳು ಬಹಳಷ್ಟಿವೆ

ಮಹಿಳೆ ಮತ್ತು ಉದ್ಯಮಶೀಲತೆ

ವಿಶ್ಲೇಷಣೆ

ಡಾ. ಗೀತಾ ಕೃಷ್ಣಮೂರ್ತಿ

ನವೆಂಬರ್ 19, ಅಂತರರಾಷ್ಟ್ರೀಯ ಮಹಿಳಾ ಉದ್ಯಮಿಗಳ ದಿನ. ಅಂದು, ‘ಒಟ್ಟಿಗೆ ನಾವು ಬೆಳೆಯುತ್ತೇವೆ’ (ಟುಗೆದರ್ ವಿ ಗ್ರೋ) ಎಂಬ ಘೋಷವಾಕ್ಯದ ಅಡಿಯಲ್ಲಿ, ಮಹಿಳಾ ಉದ್ಯಮಿಗಳ ಸಂಸ್ಥೆ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮಹಿಳಾ ಉದ್ಯಮಿಗಳ ಕಿವಿಗಳಿಗೆ ಹಿತವಾದ ಆಶ್ವಾಸನೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿದ್ದಾರೆ.

‘ಮಹಿಳಾ ಉದ್ಯಮಿಗಳಿಗೆ ಹಣಕಾಸು ಸೌಲಭ್ಯ ಒದಗಿಸಲು ಒಂದು ಪ್ರತ್ಯೇಕ ಹಣಕಾಸು ಸಂಸ್ಥೆ ಸ್ಥಾಪಿಸಲು ಸರ್ಕಾರ ಚಿಂತನೆ ನಡೆಸಿದೆ. ಸ್ತ್ರೀಶಕ್ತಿ ಸಂಘಗಳು ಹಾಗೂ ಸ್ವಯಂ ಉದ್ಯಮಿಗಳಿಗೆ ನೆರವಾಗುವ ಯೋಜನೆಯಿದು’ ಎಂದಿದ್ದಾರೆ. ಸರ್ಕಾರದ ಸಹಾಯವನ್ನು ಕೋರಿ ಮಹಿಳಾ ಉದ್ಯಮಿಗಳು ಮಾಡಿದ ಮನವಿಗೂ ಅವರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಸರ್ಕಾರದ ಕೈಗಾರಿಕಾ ನೀತಿ–2025ರಲ್ಲಿ ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹಧನ ನೀಡುವ ಯೋಜನೆಯನ್ನು ಸೇರಿಸುವುದಾಗಿ ಭರವಸೆ ಕೊಟ್ಟಿದ್ದಾರೆ.

‘ಅತಿಹೆಚ್ಚು ತಲಾವಾರು ಆದಾಯ ಗಳಿಸುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕಕ್ಕೆ ಮೂರನೇ ಸ್ಥಾನವಿದೆ. ಜನಸಂಖ್ಯೆಯ ಸುಮಾರು ಶೇಕಡ 65ರಷ್ಟು ಮಂದಿ ಜಿಡಿಪಿಗೆ ಕೊಡುಗೆ ನೀಡುತ್ತಾರೆ. ಶೇಕಡ 35ರಷ್ಟು ಮಹಿಳೆಯರು ಆರ್ಥಿಕ ಚಟುವಟಿಕೆಯಲ್ಲಿ ತೊಡಗಿದರೆ ಮಹಿಳೆಯರ ಆರ್ಥಿಕ ಸ್ಥಿತಿಯೂ ಉತ್ತಮಗೊಳ್ಳುತ್ತದೆ ಮತ್ತು ಕರ್ನಾಟಕದ ತಲಾವಾರು ಆದಾಯವೂ ಹೆಚ್ಚುತ್ತದೆ’ ಎಂದು ಮುಖ್ಯಮಂತ್ರಿ ಅಭಿಪ್ರಾಯ ಪಟ್ಟಿದ್ದಾರೆ. ಇದು ಮಹಿಳಾ ಸಬಲೀಕರಣದ ದೃಷ್ಟಿಯಿಂದ ಸ್ವಾಗತಾರ್ಹ ಬೆಳವಣಿಗೆ.

‘ಒಬ್ಬಂಟಿಯಾಗಿ ಕೆಲಸ ಮಾಡಿದಲ್ಲಿ, ಮಾಡಲು ಸಾಧ್ಯವಾಗುವುದು ಅತ್ಯಂತ ಕಡಿಮೆ ಕೆಲಸ. ಆದರೆ, ಒಟ್ಟಿಗೆ ಸೇರಿ ಮಾಡಿದರೆ ನಾವು ಬೇಕಾದಷ್ಟು ಕೆಲಸವನ್ನು ಮಾಡಬಹುದು’ ಎಂಬ ಅಮೆರಿಕದ ಲೇಖಕಿ, ಹೆಲೆನ್ ಕೆಲ್ಲರ್ ಅವರ ಪ್ರಖ್ಯಾತ ಹೇಳಿಕೆ ಇಲ್ಲಿಗೆ ಅತ್ಯಂತ ಪ್ರಸ್ತುತ.

ಪ್ರಸ್ತುತ ಸಮಾಜದ ಸಂರಚನೆಯಲ್ಲಿ ಮಹಿಳೆಯರಿಗೆ ಕುಟುಂಬದ ಜವಾಬ್ದಾರಿಗಳು ಪುರುಷರಿಗಿಂತ ಹೆಚ್ಚು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಹೀಗಿರುವಾಗ, ಕಾರ್ಪೊರೇಟ್ ವಲಯದ ಕೆಲಸದ ಸಂಸ್ಕೃತಿಗೆ ಹೊಂದಿಕೊಂಡು, ಕುಟುಂಬದ ಮತ್ತು ಮಕ್ಕಳ ಜವಾಬ್ದಾರಿಯನ್ನೂ ನಿರ್ವಹಿಸುವುದು ಅವರಿಗೆ ಸವಾಲಿನ ಕೆಲಸ. ಇಂಥ ಪರಿಸ್ಥಿತಿಯಲ್ಲಿ, ಸ್ವಯಂ ಉದ್ಯಮವನ್ನು ಪ್ರಾರಂಭಿಸುವುದು ಸ್ವಾವಲಂಬಿಯಾಗಿರಲು ಬಯಸುವ ಮಹಿಳೆಯರಿಗೆ ಅತ್ಯಂತ ಸೂಕ್ತ ಆಯ್ಕೆ. ಆದರೆ ಅದಕ್ಕೆ ಬೇಕಾದ ಪರಿಸರವನ್ನು ಸೃಷ್ಟಿ ಮಾಡುವುದೂ ಸಮುದಾಯ, ಸಮಾಜ ಹಾಗೂ ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಅಷ್ಟೇ ಅಲ್ಲದೆ ಈಗಾಗಲೇ ಯಶಸ್ವಿಯಾಗಿರುವ ಉದ್ಯಮಿಗಳ ಜವಾಬ್ದಾರಿಯೂ ಆಗಿರುತ್ತದೆ.

ಕಳೆದ ಎರಡು ದಶಕಗಳಲ್ಲಿ ಮಹಿಳಾ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ವಿಶ್ವಬ್ಯಾಂಕ್ ಅಂದಾಜಿನ ಪ್ರಕಾರ, 2005ರಲ್ಲಿ, ದುಡಿಯುತ್ತಿದ್ದ ಮಹಿಳಾ ಕಾರ್ಮಿಕರ ಸಂಖ್ಯೆ ಶೇಕಡ 26. ಆದರೆ, 2019ರ ವೇಳೆಗೆ ಅದು ಶೇಕಡ 23.3ಕ್ಕೆ ಇಳಿದಿದೆ. ಇದಕ್ಕೆ ಕಾರಣ ಮಹಿಳೆಯರ ಮೇಲೆ ವಿಧಿಸಲಾಗುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ನಿರ್ಬಂಧಗಳು ಮತ್ತು ಅವರಿಗೆ ದೊರೆಯುವ ಸೀಮಿತ ಉದ್ಯೋಗಾವಕಾಶಗಳು. ‘ಜಾಗತಿಕವಾಗಿ ಸ್ತ್ರೀ-ಪುರುಷರಲ್ಲಿ ಇರುವ ಅಂತರ’ದ ಬಗೆಗಿನ ವಿಶ್ವ ಆರ್ಥಿಕ ವೇದಿಕೆಯ 2021ರ ವರದಿಯ ಪ್ರಕಾರ, 153 ದೇಶಗಳ ಪಟ್ಟಿಯಲ್ಲಿ ಭಾರತ 143ನೆಯ ಸ್ಥಾನದಲ್ಲಿದೆ! ಹಾಗಾಗಿಯೇ, ಜಿಡಿಪಿಗೆ ಮಹಿಳೆಯರ ಕೊಡುಗೆಯ ಜಾಗತಿಕ ಸರಾಸರಿ ಶೇ 37ರಷ್ಟಾದರೆ ಭಾರತದ ಮಹಿಳೆಯರ ಕೊಡುಗೆ ಕೇವಲ ಶೇ 18. ಇದಕ್ಕೆ ಕಾರಣ, ಉದ್ಯಮಿಗಳಾಗಿ ತಮ್ಮ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಮಹಿಳೆಯರ ಸಂಖ್ಯೆ ಕೇವಲ ಶೇ 14. ಕಾರಣ ಮತ್ತಲ್ಲಿಗೇ ಬಂದು ನಿಲ್ಲುತ್ತದೆ. ಹೆಚ್ಚಾದ ಕೌಟುಂಬಿಕ ಕರ್ತವ್ಯಗಳು, ಪ್ರಯಾಣಿಸಲು ಇರುವ ಸೀಮಿತ ಅವಕಾಶಗಳು, ಸಮುದಾಯ ಮತ್ತು ಸಮಾಜ ಮಹಿಳೆಯರ ಮೇಲೆ ಸತತವಾಗಿ ಇಡುವ ಕಣ್ಗಾವಲು. ಇವು, ಮಹಿಳೆಗೆ ತನ್ನ ಆಸಕ್ತಿಯ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಲು ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ಅಡ್ಡಿಯಾಗಿವೆ.

ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂರಚನೆಯ ಭಾಗವಾಗಿರುವ ಮತ್ತು ಆಳವಾಗಿ ಬೇರುಬಿಟ್ಟಿರುವ ಪಿತೃಪ್ರಧಾನ ಆಚರಣೆಗಳು ಮತ್ತು ಸಂಪ್ರದಾಯಗಳು, ಕೊರೊನಾದ ಈ ಸಂದರ್ಭದಲ್ಲಿ ಮಹಿಳೆಯರಿಗೆ ಮತ್ತಷ್ಟು ಅನಿರೀಕ್ಷಿತ ಸಂಕಷ್ಟಗಳನ್ನು ತಂದೊಡ್ಡಿವೆ. ರಾಷ್ಟ್ರೀಯ ಮಹಿಳಾ ಆಯೋಗದ ವರದಿಯ ಪ್ರಕಾರ, ಕಳೆದ ಆರು ವರ್ಷಗಳ ಪೈಕಿ 2020ರಲ್ಲಿ ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸಿ ಅತಿ ಹೆಚ್ಚು ದೂರುಗಳು ದಾಖಲಾಗಿವೆ.

ಭಾರತ ತನ್ನ ಐದು ಲಕ್ಷ ಕೋಟಿ ಡಾಲರುಗಳ ಆರ್ಥಿಕ ಗುರಿಯನ್ನು ತಲುಪಲು, ಮಹಿಳೆಯರು ತಮ್ಮ ಉದ್ಯಮಶೀಲ ಸಾಮರ್ಥ್ಯದಿಂದ ಗಣನೀಯ ಯೋಗದಾನವನ್ನು ಮಾಡಬಲ್ಲರು. ಆದರೆ, ಆರ್ಥಿಕತೆಗೆ ಮಹಿಳೆ ಮತ್ತು ಯುವತಿಯರ ಯಾವ ಕೆಲಸಗಳು ಪೂರಕವಾಗುತ್ತವೆ ಎಂಬ ಬಗ್ಗೆ ಮಾಡಿದ ಒಂದು ಅಧ್ಯಯನದ ಪ್ರಕಾರ, ಭಾರತದಲ್ಲಿ ಶೇಕಡ 91ರಷ್ಟು ಮಹಿಳೆಯರು ಅಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾರೆ. ಅವರಿಗೆ



ನಿಶ್ಚಿತವಾದ ವೇತನ ಮತ್ತು ಸುಭದ್ರ ಭವಿಷ್ಯ ಇರುವುದಿಲ್ಲ. ಸಾಮಾನ್ಯವಾಗಿ ಶೋಷಣೆಗೆ ಒಳಗಾಗುತ್ತಾರೆ. ತಮಗೆ ಇರುವ ಹಕ್ಕುಗಳ ಬಗ್ಗೆಯಾಗಲೀ ಸೌಲಭ್ಯಗಳ ಬಗ್ಗೆಯಾಗಲೀ ಇವರಿಗೆ ತಿಳಿದಿರುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಆರ್ಥಿಕ ಸೌಲಭ್ಯವನ್ನು ಬಳಸಿಕೊಳ್ಳಲು ಇರುವ ಅಡ್ಡಿ ಅವರ ಉದ್ಯಮಶೀಲತೆಗೆ ಅತಿ ದೊಡ್ಡ ತೊಡಕಾಗಿದೆ.

ಆದ್ದರಿಂದ, ಮಹಿಳೆಯರನ್ನು ಸಬಲರನ್ನಾಗಿಸಬೇಕು ಮತ್ತು ಸಮರ್ಥರನ್ನಾಗಿಸಬೇಕು ಎಂಬ ನಿಜವಾದ ಕಾಳಜಿಯಿದ್ದಲ್ಲಿ, ಸ್ತ್ರೀ ಅಥವಾ ಪುರುಷ ಎಂಬ ಕಾರಣಕ್ಕೆ ಅವರು ಇಂಥಿಂಥದ್ದೇ ಕೆಲಸ ಮಾಡಬೇಕು ಎಂದು ಸಮಾಜದಲ್ಲಿ ಬೇರೂರಿರುವ ಕಲ್ಪನೆಗಳನ್ನು ಮೊದಲು ತೊಡೆದುಹಾಕುವ ಪ್ರಯತ್ನಗಳನ್ನು ಮಾಡುವುದು, ವಿವಿಧ ಕೌಶಲಗಳಲ್ಲಿ ತರಬೇತಿ ನೀಡುವ ಮೂಲಕ ಅವರನ್ನು ಹುರಿದುಂಬಿಸುವುದು, ಆರ್ಥಿಕ ನೆರವು ಪಡೆಯಲು ಅವಕಾಶ ಕಲ್ಪಿಸುವುದು ಮತ್ತು ಅವರಿಗೆ ಲಭ್ಯವಿರುವ ಕಲ್ಯಾಣ ಯೋಜನೆಗಳನ್ನು ಪಡೆಯಲು ಇರುವ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು ಮಹಿಳಾ ಉದ್ಯಮಶೀಲತೆಯನ್ನು ಬೆಳೆಸುವ ದಿಸೆಯಲ್ಲಿ ಕೆಲಸ ಮಾಡುತ್ತಿರುವವರ ಮೊದಲ ಆದ್ಯತೆಯಾಗಬೇಕು. ಈ ದಿಕ್ಕಿನಲ್ಲಿ, ಮಹಿಳೆಯರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಮೂಲಕ ಅವರಿಗೆ ಬೆಂಬಲ ನೀಡಬೇಕು, ಅಸಂಘಟಿತ ಕ್ಷೇತ್ರದಲ್ಲಿನ ಮಹಿಳಾ ಉದ್ಯೋಗಿಗಳಿಗೆ ಸೌಲಭ್ಯಗಳು ಮತ್ತು ಆದಾಯ ಭದ್ರತೆಯನ್ನು ಒದಗಿಸುವತ್ತ ಗಮನ ಕೇಂದ್ರೀಕರಿಸಬೇಕು.

ಹೆಚ್ಚಿನ ಔಪಚಾರಿಕ ಶಿಕ್ಷಣವನ್ನು ಪಡೆಯದ ಅನೇಕ ಗ್ರಾಮೀಣ ಮಹಿಳೆಯರು ಇಂಥ ಬೆಂಬಲದ ಪ್ರಯೋಜನ ಪಡೆದು, ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ ಉದಾಹರಣೆಗಳು ಇವೆ. ಈ ಪ್ರಯತ್ನಗಳು ಫಲ ನೀಡಬೇಕಾದರೆ, ಉದ್ಯಮಶೀಲ ಮಹಿಳೆಯರು ಪರಸ್ಪರ ಸಂಪರ್ಕದಲ್ಲಿರಬೇಕು, ಪರಸ್ಪರರಿಂದ ಸ್ಫೂರ್ತಿ ಪಡೆಯಬೇಕು. ಆಗ ಮಾತ್ರ ಸಾಮರ್ಥ್ಯ ಸಂವರ್ಧನೆ, ಆಶಾವಾದಿತ್ವ, ಧೈರ್ಯ ಮತ್ತು ಸಹಾನುಭೂತಿಯ ಗುಣಗಳನ್ನು ಮೈಗೂಡಿಸಿಕೊಳ್ಳಲು ಸಾಧ್ಯವಾಗುತ್ತದೆ.

ಒಂದು ಸಮೀಕ್ಷೆಯ ಪ್ರಕಾರ, ಸ್ವಯಂ ಉದ್ಯಮದಲ್ಲಿ ತೊಡಗಿಸಿಕೊಂಡ ಮಹಿಳೆಯರಲ್ಲಿ ಶೇಕಡ 90ರಷ್ಟು ಮಂದಿ ಈ ನಿರ್ಧಾರದಿಂದ ತಮಗೆ ಅತ್ಯಂತ ಸಂತೋಷವಾಗಿರುವುದಾಗಿ ಹೇಳಿದ್ದಾರೆ. ಶೇ 80ರಷ್ಟು ಮಹಿಳೆಯರು ತಾವು ಉದ್ಯಮದಲ್ಲಿ ತೊಡಗಿದ ನಂತರ ತಮ್ಮ ಸಮುದಾಯ ಮತ್ತು ಕುಟುಂಬದಲ್ಲಿ ತಮ್ಮ ಸ್ಥಾನಮಾನ ಹೆಚ್ಚಿತೆಂದು ಹೇಳಿದ್ದರೆ, ಶೇ 73ರಷ್ಟು ಮಹಿಳೆಯರು ಆರ್ಥಿಕ ಸ್ವಾವಲಂಬನೆಯಿಂದಾಗಿ ತಮ್ಮ ಆತ್ಮವಿಶ್ವಾಸ ಹೆಚ್ಚಾಗಿದೆಯೆಂದು ಹೆಮ್ಮೆಪಟ್ಟಿದ್ದಾರೆ. ಮಹಿಳಾ ಸಬಲೀಕರಣ ಮತ್ತು ಉದ್ಯಮಶೀಲತೆ ಜೀವನದಲ್ಲಿ ಎಂಥ ಸಕಾರಾತ್ಮಕ ಬದಲಾವಣೆಯನ್ನು ತರಬಲ್ಲದು ಎಂಬುದನ್ನು ಈ ಅಂಕಿ ಅಂಶಗಳ ಮೂಲಕ ಮಹಿಳೆಯರಿಗೆ ಮನದಟ್ಟು ಮಾಡುವ ಕೆಲಸವೂ ಆಗಬೇಕು.

ಈ ಎಲ್ಲ ಪ್ರಯತ್ನಗಳಾದಾಗ ಮಾತ್ರ, ಮಹಿಳೆಯರಿಗೆ ಸಮಾಜೋ ಸಾಂಸ್ಕೃತಿಕ ಹಾಗೂ ಸಮಾಜೋ ಆರ್ಥಿಕ ಅಡಚಣೆಗಳನ್ನು ನಿವಾರಿಸಿಕೊಳ್ಳುವುದು ಸಾಧ್ಯವಾಗುತ್ತದೆ ಮತ್ತು ಆಗಮಾತ್ರ ಮಹಿಳಾ ಉದ್ಯಮಿಗಳಿಗಾಗಿ ಪ್ರತ್ಯೇಕ ಹಣಕಾಸು ಸಂಸ್ಥೆಯನ್ನು ಕಲ್ಪಿಸಲು ಉದ್ದೇಶಿಸಿರುವ ಸರ್ಕಾರದ ಪ್ರಯತ್ನ ಅರ್ಥಪೂರ್ಣ ಎನಿಸುತ್ತದೆ.

ಚುರುಮುರಿ

ಬೇತಾಳನ ಪ್ರಶ್ನೆ

• ಸುಮಂಗಲಾ

ರಾತ್ರಿ ಹೆಗ್ಗಣ ಹಿಡಿಯಲು ಹೊರಗೆ ಅಂಡಲೆಯುತ್ತಿದ್ದ ಬೆಕ್ಕಣ್ಣನ ಹೆಗಲಿನ ಮೇಲೆ ಯಾರೋ ಧೊಪ್ಪನೆ ಕೂತಂತೆ ಅನ್ನಿಸಿತು. ಬೆಕ್ಕಣ್ಣ ಮೈಕೊಡವಿಕೊಂಡಿತು. ಆದರೆ ಬೆನ್ನೇರಿದ ಬೇತಾಳ ಬಿಡುವುದುಂಟೇ?

‘ಎಲೈ ಬೆಕ್ಕಣ್ಣನೇ... ಪ್ರಶ್ನೆಗಳಿಗೆಲ್ಲ ಸರಿಯುತ್ತರ ಹೇಳದಿದ್ದರೆ ನಿನ್ನ ತಲೆ ಸಹಸ್ರ ಹೋಳಾದೀತು’ ಎಂದು ಬೇತಾಳ ಪ್ರಶ್ನಿಸಲು ಶುರುವಿಟ್ಟಿತು. ‘ಮಂಗಮಾಯ, ಮಟಾಮಾಯ ಈ ಪದಕ್ಕೆ ಸಮಾನಾರ್ಥಕ ಪದಗಳು ಯಾವುವು?’

‘ಬಿಟ್ ಕಾಯಿನ್, ಕೋಟ್ಯಂತರ ಹಣ ವರ್ಗಾವಣೆ, ಶ್ರೀಕಿ, ಈ ಮೂರೂ ಪದಗಳು ಮಂಗಮಾಯ, ಮಟಾಮಾಯ ಪದದ ಸಮಾನಾರ್ಥಕ ಪದಗಳು’.

‘ಭರತಖಂಡದಲ್ಲಿ ಎಲ್ಲರಿಗಿಂತ ಶಕ್ತಿಶಾಲಿ ಯಾರು?

‘ಕೊರೊನಣ್ಣನನ್ನು ಎರಡೇ ಅಲೆಗೆ ದೂಳೀಪಟ ಮಾಡಿದ ನಮ್ಮ ಮೋದಿಮಾಮನೇ ಶಕ್ತಿಶಾಲಿ. ಆದರೆ ಗಾಳಿಚಳಿಮಳೆ ಲೆಕ್ಕಿಸದೇ ಪ್ರತಿಭಟಿಸುತ್ತಿದ್ದ ರೈತರಿಗೂ ಮಣಿಯದ ಮೋದಿಮಾಮ ಕೊನೆಗೂ ಮೊನ್ನೆ ಮಂಡಿಯೂರಿದ. ಇನ್ನೊಂದು ಶಕ್ತಿಶಾಲಿ ಸಂಗತಿ ಇದೆ. ಅದೆಂದರೆ ಚುನಾವಣೆ... ಇದೀಗ ಬರಲಿರುವ ವಿಧಾನಸಭೆ ಚುನಾವಣೆಗಳು ಮತ್ತು ಮುಂಬರಲಿರುವ ಲೋಕಸಭೆ ಚುನಾವಣೆಯೇ ಎಲ್ಲರಿಗಿಂತ ಶಕ್ತಿಶಾಲಿ’.

‘ಭಲೇ ಬೆಕ್ಕಣ್ಣನೇ... ಮೆಚ್ಚಿದೆ ನಿನ್ನ ವಾದಸರಣಿಯನ್ನು. ಭರತಖಂಡದ ಮುಂದಿನ ಚಂದ್ರಯಾನ ಯಾವಾಗ?’

‘ಚಂದ್ರಯಾನ ಈಗಾಗಲೇ ಶುರುವಾಗಿದೆ, ಗ್ಯಾಸು, ಪೆಟ್ರೋಲ್, ಡೀಸೆಲ್ ಇತ್ಯಾದಿ ಬೆಲೆಗಳು ಈಗಾಗಲೇ ಭೂಕಕ್ಷೆಯನ್ನು ಬಿಟ್ಟು ಮೇಲೆ ಹಾರಿವೆ’ ಎಂದು ಬೆಕ್ಕಣ್ಣ ಪಕಪಕನೆ ನಕ್ಕಿತು.

‘ಎರಡು ಭಾರತಗಳಿವೆಯಂತೆ, ನೀನೆಲ್ಲಿಯವ? ವಿವಾದದ ವಾಸನೆಯನ್ನು ಥಟ್ಟನೆ ಗ್ರಹಿಸಿದ ಬೆಕ್ಕಣ್ಣ, ‘ನಾನೀಗ ಏಕ ಭಾರತದಲ್ಲಿ ಬದುಕುತ್ತಿರುವೆ. ಆದರೆ ನೀನಿನ್ನೂ ಜನರ ಬೆನ್ನೇರುವುದ ಕಂಡರೆ ಎರಡಿವೆ ಎಂಬುದರಲ್ಲಿ ಅನುಮಾನವಿಲ್ಲ. ನಿನ್ನ ವಟವೃಕ್ಷವು ಈ ಎರಡರಲ್ಲಿ ಯಾವುದರಲ್ಲಿದೆ?’ ಎಂದು ಮರಳಿ ಪ್ರಶ್ನೆ ಕೇಳಲಾಗಿ, ಬೇತಾಳವು ಬೆಕ್ಕಣ್ಣನ ಬೆನ್ನು ಬಿಟ್ಟು, ಎದ್ದು ಬಿದ್ದು ಓಡಿಹೋಯಿತು!

ಸಂಗತ

ಕುಲದ ಬಗ್ಗೆ ಕನಕನ ಬಗೆ

ಸಮಾಜವನ್ನು ಪ್ರಶ್ನಿಸುವಲ್ಲಿಯೇ ಪರಿಹಾರವನ್ನೂ ಸೂಚಿಸಿರುವುದು ಕನಕದಾಸರ ಜಾಣ್ಮೆ

• ಎಂ.ಪಿ.ಕುಮಾರಸ್ವಾಮಿ

ಭಾರತದ ಮಹಾಕಾವ್ಯ ಸಂಸ್ಕೃತದ ಮಹಾಭಾರತವನ್ನು ಅನುಸರಿಸಿ ಕನ್ನಡದಲ್ಲಿ ಆದಿಕವಿ ಪಂಪ ಬರೆದ ‘ವಿಕ್ರಮಾರ್ಜುನ ವಿಜಯ’ದಲ್ಲಿ ಎರಡು ಪ್ರಸಂಗಗಳಿವೆ. ಒಂದು, ಕರ್ಣನು ತನ್ನ ಅಸ್ತ್ರವಿದ್ಯಾ ಪ್ರೌಢಿಮೆಯನ್ನು ಪ್ರದರ್ಶಿಸುವಾಗ ದ್ರೋಣನು, ‘ನಿನ್ನ ತಾಯಿ ತಂದೆಯ ವಿಷಯವನ್ನು ವಿಚಾರಿಸಿ ಮಾತನಾಡುವುದಾದರೆ, ನಿನಗೂ ಅರಿಕೇಸರಿಗೂ (ಅರ್ಜುನ) ಯಾವ ಸಮಾನತೆಯಿದೆ?’ ಎಂದಾಗ ದುರ್ಯೋಧನನು, ‘ಕುಲಮೆಂಬುದುಂಟೆ ಬೀರಮೆ ಕುಲಮಲ್ಲದೆ’ (ಶೌರ್ಯವೇ ಕುಲವಲ್ಲದೆ ಕುಲವೆಂಬುದು ಬೇರೆಯುಂಟೇ?) ಎಂದು ತೀಕ್ಷ್ಣವಾಗಿ ಪ್ರಶ್ನಿಸುತ್ತಾನೆ. ಇನ್ನೊಂದು, ವೀರಪಟ್ಟದ ವಿಚಾರದಲ್ಲಿ ಭೀಷ್ಮನಿಂದ ಕುಲನಿಂದೆಗೆ ಒಳಗಾದ ಕರ್ಣನು, ‘ಕುಲಂ ಕುಲಮಲ್ತು ಚಲಂ ಕುಲಂ ಗುಣಂ ಕುಲಮಭಿಮಾನಮೊಂದೆ ಕುಲಮಣ್ಮು ಕುಲಂ’ ಎಂದು ನನ್ನಿಯನ್ನು ನುಡಿಯುತ್ತಾನೆ. ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಕುಲವನ್ನು ತಿರಸ್ಕರಿಸುವ, ಒಪ್ಪಿಕೊಳ್ಳುವ, ಆಚರಿಸುವ ಸಂಕೀರ್ಣ ಪರಂಪರೆ ಬೆಳೆದುಬಂದಿದೆ.

ಈ ಹಿನ್ನೆಲೆಯನ್ನಿಟ್ಟು ಕುಲದ ವಿಚಾರವನ್ನು ದಾಸ ಪರಂಪರೆಯಿಂದ ನೋಡುವುದಾದರೆ, ಭಕ್ತಿಪಂಥವಾಗಿ ಹುಟ್ಟಿಕೊಂಡ ಹರಿದಾಸ ಸಾಹಿತ್ಯವು ವಚನ ಚಳವಳಿಯ ಮುಂದುವರಿದ ಭಾಗವಾಗಿ ಪಂಡಿತ ಭಾಷೆಯನ್ನು ತಿರಸ್ಕರಿಸಿ, ಜನಸಾಮಾನ್ಯರ ಭಾಷೆಯಾದ ಕನ್ನಡದಲ್ಲಿ ವೈಚಾರಿಕ ಸಂಗತಿಗಳನ್ನು ಆಧ್ಯಾತ್ಮಿಕ ನೆಲೆಯಲ್ಲಿ ಬಿತ್ತುತ್ತಾ ಹೋಯಿತು. ಈ ಮೂಲಕ ದಾಸರು ವ್ಯಕ್ತಿಯ ಅಂತರಂಗವನ್ನು ಶುದ್ಧೀಕರಿಸಲು ಪ್ರಥಮ ಆದ್ಯತೆ ಕೊಟ್ಟರು. ಸಮಾಜದ ಕೊಳೆಯನ್ನು ತೊಳೆಯಲು ಶ್ರಮಿಸಿದರು. ಅಂತಹವರಲ್ಲಿ ಸಂತಕವಿ ಕನಕದಾಸ ಕೂಡ ಒಬ್ಬರು.



ತಿಮ್ಮಪ್ಪನು ವಿಜಯನಗರ ಸಾಮ್ರಾಜ್ಯದಲ್ಲಿ ದಂಡನಾಯಕನಾಗಿ ಬೆಳೆದು, ಆಧ್ಯಾತ್ಮಿಕ ನವಚೈತನ್ಯ ಹರಿದಂತೆ ಕನಕದಾಸರಾದರು, ಕುಲದ ಹಂಗನ್ನು ತೊರೆದರು.

ಒಮ್ಮೆ, ಕನಕದಾಸರನ್ನು ಎಂದೂ ನೋಡದ ಚಿನ್ನಪ್ಪನು ಭಿಕ್ಷುಕನಂತೆ ಬರುತ್ತಿದ್ದ ಕನಕದಾಸರನ್ನೇ, ‘ಏ ದಾಸಯ್ಯ, ನಿನಗೇನಾದರೂ ಕನಕದಾಸರು ಯಾರೆಂಬುದು ಗೊತ್ತೇ? ಅವರೀಗ ಎಲ್ಲಿದ್ದಾರೆ ಹೇಳು’ ಎಂದು ಕೇಳಲು, ಕನಕದಾಸರು ‘ಅದನ್ನು ನಾನು ಹೇಗೆ ಬಲ್ಲೆ? ಆತ ಹಿಂದೆ ಬರುವ ಯಾತ್ರಿಕರ ಮುಂದೆ ಮತ್ತು ಮುಂದೆ ಹೋಗುವ ಯಾತ್ರಿಕರ ಹಿಂದೆ ಇದ್ದಾನೆ’ ಎಂದು ಉತ್ತರಿಸಿ ಮುಂದೆ ನಡೆದರು. ಈ ಘಟನೆ ಕನಕದಾಸರ ಇಡೀ ವ್ಯಕ್ತಿತ್ವವನ್ನು ಹಿಡಿದಿಟ್ಟಿದೆ. ‘ಯಾತ್ರಿಕರು’ ಎಂದಾಗ ಕುಲದ ಮಾತೇ ಬರುವುದಿಲ್ಲ. ಅಲ್ಲದೆ ಇಲ್ಲಿ ‘ನಾಯಕ’ ಮತ್ತು ‘ಅನುಯಾಯಿ’ಗಳಿಗೆ ಸ್ಥಾನವೇ ಇಲ್ಲ.

ಭಾರತದ ಮಟ್ಟಿಗೆ ಧಾನ್ಯಗಳಿಗೆ ಜೀವತುಂಬಿ ರೂಪಕಾತ್ಮಕ ಚಿತ್ರಣ ಮಾಡಿರುವುದು ಕನಕದಾಸರೊಬ್ಬರೆ. ಅವರು ತಮ್ಮ ‘ರಾಮಧಾನ್ಯ ಚರಿತ್ರೆ’ಯಲ್ಲಿ ವ್ರೀಹಿ (ಭತ್ತ) ಮತ್ತು ರಾಗಿಯ ನಡುವಿನ ಸಂಘರ್ಷದ ಕತೆ ಹೇಳುವ ಮೂಲಕ ‘ಕುಲ’ದ ವಿಚಾರವನ್ನು ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆ. ಪವಿತ್ರ ಕಾರ್ಯಗಳಲ್ಲಿ ರಾಗಿಯನ್ನು ಉಪಯೋಗಿಸಲಾಗದ್ದೆಂದು ಭತ್ತವು (ಮೇಲ್ವರ್ಗ) ರಾಗಿಯನ್ನು (ಕೆಳವರ್ಗ) ಮೂದಲಿಸಿ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಾಗ, ರಾಮನ ನೇತೃತ್ವದಲ್ಲಿ ರಾಗಿಗೆ ಜಯ ಸಿಕ್ಕುತ್ತದೆ. ‘ರಾಮಧಾನ್ಯ’ ಎಂದು ಹೆಸರಾಗುತ್ತದೆ. ಪ್ರತಿಭೆ, ಗುಣ, ನಡತೆಗಳ ಮೂಲಕ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಅಳೆಯಬೇಕೇ ಹೊರತು ಆತನ ಜಾತಿಯಿಂದಲ್ಲ ಎಂಬುದು ‘ರಾಮಧಾನ್ಯ ಚರಿತ್ರೆ’ಯ ರೂಪಕಾತ್ಮಕ ಅರಿವು.

ಸಮಾಜದಲ್ಲಿರುವ ತರತಮಗಳನ್ನು ಕನಕದಾಸರು ತಮ್ಮ ಸಾತ್ವಿಕ ಕೋಪದಿಂದ ತಿದ್ದಲು ಪ್ರಯತ್ನಿಸಿದ್ದಾರೆ. ತಮ್ಮ ಕೀರ್ತನೆಗಳಲ್ಲಿ ಸರಳ ಭಾಷೆಯ ಮೂಲಕ ಆಧ್ಯಾತ್ಮಿಕ ವಿಷಯಗಳೊಂದಿಗೆ ವೈಜ್ಞಾನಿಕ ವಿಚಾರಗಳನ್ನು ಬಿತ್ತಿ ಕುಲದ ಬಗ್ಗೆ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ‘ಕುಲಕುಲ ಕುಲವೆನ್ನುತಿಹರು ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ’, ‘ಆತ್ಮ ಯಾವ ಕುಲ, ಜೀವ ಯಾವ ಕುಲ ತತ್ವೇಂದ್ರಿಯಗಳ ಕುಲ ಪೇಳಿರಯ್ಯ’ ಎಂದು ಸಮಾಜವನ್ನು ಪ್ರಶ್ನಿಸುವಲ್ಲಿಯೇ ಪರಿಹಾರವನ್ನೂ ಸೂಚಿಸಿರುವುದು ಕನಕದಾಸರ ಜಾಣ್ಮೆಯೂ ಆಗಿದೆ. ಅಲ್ಲದೆ, ‘ಕುಲಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ’ ಎಂದು ಗಂಭೀರವಾದ ಪ್ರಶ್ನೆಯನ್ನು ಕುಲದ ಹೆಸರಿನಲ್ಲಿ ಸಂಘರ್ಷ ಮಾಡುವ ಸಮಾಜಘಾತುಕರಿಗೆ ಕೇಳಿದ್ದಾರೆ. ಆದರೆ, ಉತ್ತರ...?

ನಾಗರಿಕ ಸಮಾಜ ಬೆಳೆದಂತೆ ನಮ್ಮ ಅವಿವೇಕ ಹೆಚ್ಚಾಗುತ್ತಿರುವ ಈ ಹೊತ್ತಿನಲ್ಲಿ ಪುನಃ ಪುನಃ ನಮಗೆ ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆಗಳಿವೆ. ಸಮಾಜದ ತರತಮಗಳ ನಿವಾರಣೆಗೆ ಕಾನೂನಿನಲ್ಲಿ ಕಠಿಣ ನಿಯಮಗಳಿದ್ದರೂ ‘ಹೃದಯದ ನಿಯಮ’ ಬಹಳ ಮುಖ್ಯ. ಆದರೆ ಅಜ್ಞಾನ, ಅಂಧಕಾರ, ಅಧಿಕಾರ, ಅಹಂಕಾರ, ಅಂತಸ್ತು, ಜಾತಿಪ್ರತಿಷ್ಠೆಗಳೇ ಮುನ್ನೆಲೆಗೆ ಬರುತ್ತಿರುವುದು ದುರಂತ. ಕುಲದ ಪರಿಣಾಮ ದ್ರೋಣ- ಭೀಷ್ಮರಿಂದ ಕರ್ಣನು ನಿಂದೆಗೆ ಒಳಗಾದದ್ದು, ಗುರು ದ್ರೋಣರು ಏಕಲವ್ಯನ ಬೆರಳನ್ನು ಕಸಿದುಕೊಂಡದ್ದು, ಮೇಲ್ವರ್ಗದ ಸಮಾಜವು ಅಂಬೇಡ್ಕರ್ ಅವರನ್ನು ಅಪಮಾನಗಳಿಗೆ ಗುರಿಮಾಡಿದ್ದು, ಈ ಎಲ್ಲವೂ ಸಮಾಜವು ತಿದ್ದಿಕೊಳ್ಳಲು ಇರುವ ಮಹತ್ವದ ನಿದರ್ಶನಗಳು. ಆದರೆ ಇವುಗಳತ್ತ ಲಕ್ಷ್ಯಮಾಡದ ಅದೆಷ್ಟೋ ಕುಲನಿಂದಕರು ಈ ಸಮಾಜದಲ್ಲಿದ್ದಾರೆ. ಇವರನ್ನು ಜಯಿಸುತ್ತಲೇ ಸಾಧಕರ ಸಾಲಿನಲ್ಲಿ, ಕೊನೆಪಕ್ಷ ಉತ್ತಮ ಮನುಷ್ಯರಾಗಿ ಬದುಕಲು ಕಲಿಯಬೇಕು, ಬದುಕಲು ಬಿಡಬೇಕು. ಆಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಆಗುತ್ತದೆ.

ಕೇವಲ ಸಂಕೇತಗಳಿಗಾಗಿ ಜಯಂತಿಗಳನ್ನು ಆಚರಿಸುವ ಬದಲು ಒಳ್ಳೆಯ ಸಂಕಲ್ಪ ಮಾಡಲು ಜಯಂತಿಗಳನ್ನು ಆಚರಿಸಬೇಕು.

ಲೇಖಕ: ಶಾಸಕ, ಮೂಡಿಗೆರೆ ವಿಧಾನಸಭಾ ಕ್ಷೇತ್ರ

ವಾಚಕರ ವಾಣಿ

ಕಿತ್ತೂರು ಕರ್ನಾಟಕದಿಂದ ಹೊರತಾಗಲಿ

ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ವಿಜಯಪುರ, ಬಾಗಲಕೋಟೆ, ಗದಗ ಮತ್ತು ಹಾವೇರಿ ಜಿಲ್ಲೆಗಳನ್ನು ಒಳಗೊಂಡ ಪ್ರಾಂತ್ಯಕ್ಕೆ ಕಿತ್ತೂರು ಕರ್ನಾಟಕ ಎಂದು ನಾಮಕರಣ ಮಾಡುವ ನಿರ್ಣಯವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಆದರೆ ಇದು ವೈಜ್ಞಾನಿಕವಾಗಿ ಸಮಂಜಸವಲ್ಲ. ಉತ್ತರ ಕನ್ನಡವನ್ನು ಹೊರತುಪಡಿಸಿ ಉಳಿದ ಆರು ಜಿಲ್ಲೆಗಳ ಭಾಷೆ, ಆಹಾರ, ಸಂಸ್ಕೃತಿ, ಪ್ರಾದೇಶಿಕತೆ, ಬೆಳೆ ಎಲ್ಲವೂ ಹೆಚ್ಚುಕಡಿಮೆ ಒಂದೇ ಆಗಿದ್ದು ಅವುಗಳನ್ನು ‘ಕಿತ್ತೂರು ಕರ್ನಾಟಕ’ದ ವ್ಯಾಪ್ತಿಗೆ ಒಳಪಡಿಸುವುದು ಸಮಂಜಸ. ಆದರೆ ಉತ್ತರ ಕನ್ನಡ ಒಂದು ವಿಶಿಷ್ಟ ಜಿಲ್ಲೆಯಾಗಿದೆ. ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ ಇವು ಕರಾವಳಿ ಭಾಗಕ್ಕೆ ಸೇರಿವೆ. ಶಿರಸಿ, ಸಿದ್ದಾಪುರ, ಯಲ್ಲಾಪುರ, ದಾಂಡೇಲಿ, ಹಳಿಯಾಳ, ಮುಂಡಗೋಡ ಮತ್ತು ಸುಪಾ ಮಲೆನಾಡಿಗೆ ಒಳಪಡುತ್ತವೆ. ಇಲ್ಲಿನ ಜನರ ಆಹಾರ ಪದ್ಧತಿ, ಭಾಷೆ, ಸಂಸ್ಕೃತಿ, ಚಿಂತನೆ, ಬೆಳೆ ಎಲ್ಲವೂ ಬೆಳಗಾವಿ, ಧಾರವಾಡ, ವಿಜಯಪುರ, ಬಾಗಲಕೋಟೆ, ಗದಗ ಮತ್ತು ಹಾವೇರಿಗಿಂತ ಭಿನ್ನವಾಗಿವೆ.

ಉತ್ತರ ಕನ್ನಡಕ್ಕೆ ಮಲೆನಾಡು ಮತ್ತು ಕರಾವಳಿಯ ಇತರ ತಾಲ್ಲೂಕುಗಳ ಜತೆ ನಂಟು ಜಾಸ್ತಿ. ಈ ಜಿಲ್ಲೆಯ ಅಭಿವೃದ್ಧಿಗೆ ಸೂಕ್ತವಾದ ಯೋಜನೆಗಳನ್ನು ರೂಪಿಸಬೇಕು. ಇಲ್ಲಿಯ ಬೆಟ್ಟ, ಗುಡ್ಡ, ಕೆರೆ, ನದಿ, ಪೈರು, ಪ್ರಾಣಿ, ಪಕ್ಷಿ ಎಲ್ಲವನ್ನೂ ರಕ್ಷಣೆ ಮಾಡುವ ಯೋಜನೆ ರೂಪಿಸಿ ಜಾರಿಗೆ ತರಬೇಕು.

ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

ಈ ಭಸ್ಮಾಸುರರಿಂದ ಬಚಾವಾಗುವುದು ಹೇಗೆ?

ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಕಾಮಗಾರಿ ಮೊತ್ತದ ಶೇ 40ರಷ್ಟು ಭಾಗವನ್ನು ಲಂಚದ ರೂಪದಲ್ಲಿ ಪಡೆಯುತ್ತಾರೆ ಎನ್ನುವ ಗುತ್ತಿಗೆದಾರರ ಆರೋಪ (ಪ್ರ.ವಾ., ನ. 19) ಓದಿ ಸಂಕಟವಾಯಿತು. ಶಿವನಿಂದ ವರ ಪಡೆದ ಭಸ್ಮಾಸುರ ತಕ್ಷಣವೇ ವರವನ್ನು ಶಿವನ ಮೇಲೇ ಪ್ರಯೋಗಿಸುವ ಪ್ರಯತ್ನದ ಪ್ರಸಂಗ ನೆನಪಾಯಿತು. ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಭಸ್ಮಾಸುರರಂತೆ ಆಗಿದ್ದಾರೆ. ವೋಟು ಕೊಟ್ಟು ಗೆಲ್ಲಿಸಿದ ಪ್ರಜೆಗಳು ಈ ಭಸ್ಮಾಸುರರಿಂದ ಬಚಾವಾಗುವ ಬಗೆ ಹೇಗೆ ಎಂಬುದೇ ಈಗಿನ ಪ್ರಶ್ನೆ.

ಲಂಚ ಪಡೆಯುವುದು ತಮ್ಮ ಅಧಿಕಾರವೆಂಬಂತೆ ಎಲ್ಲಾ ಪಕ್ಷದ ಚುನಾಯಿತ ಪ್ರತಿನಿಧಿಗಳು ಹಪಹಪಿಸುತ್ತಾರೆ. ಅಧಿಕಾರಿವರ್ಗ ಇವರ ಕೃಪಾಕಟಾಕ್ಷದಲ್ಲಿ ದುಂಡಗಾಗುತ್ತದೆ. ರಾಜಕಾರಣಿಗಳು, ಅಧಿಕಾರಿಗಳ ರಾತ್ರೋರಾತ್ರಿ ಶ್ರೀಮಂತಿಕೆಗೆ ಪುಟಗಟ್ಟಲೆ ಉದಾಹರಣೆಗಳಿವೆ, ಯಾವುದೇ ಕಡಿವಾಣವಿಲ್ಲ. ಸದಾ ಭ್ರಷ್ಟಾಚಾರರಹಿತ ಆಡಳಿತದ ಭರವಸೆ ನೀಡುತ್ತಿರುವ ಪ್ರಧಾನಿ ನರೇಂದ್ರ ಮೋದಿಯವರಿಗೆ ದೂರು ಸಲ್ಲಿಸಿರುವುದು ಸರಿಯಾದ ಮಾರ್ಗವಾಗಿದೆ. ಈ ಬಗ್ಗೆ ವಿಸ್ತೃತ ತನಿಖೆಯಾಗಿ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು ತಿಂದಿರುವುದನ್ನು ಕಕ್ಕಿಸುವುದು ಮತ್ತು ಅಪರಾಧಿಗಳನ್ನು ಜೈಲಿಗಟ್ಟುವುದು ಅವಶ್ಯವಾಗಿದೆ.

ರಿಪ್ಪನ್‌ಪೇಟೆ ನಟರಾಜ್, ಬೆಂಗಳೂರು

ಅಸಂಸ್ಕೃತರ ನಡೆ ದೇಶ ಪ್ರತಿನಿಧಿಸದು

ವಿಡಂಬನಕಾರ ವೀರ್ ದಾಸ್ ಅವರು ಭಾರತದ ಬಗ್ಗೆ ಅಮೆರಿಕದಲ್ಲಿ ನೀಡಿದ್ದ ಹೇಳಿಕೆಗೆ ‘ಇದು ಜನರಂಜನೆಯೇ?’ ಎಂಬ ಹೆಸರಿನ ಶೀರ್ಷಿಕೆಯ ನನ್ನ ಪತ್ರ ಕುರಿತು ಎಚ್.ವಿ.ನಟರಾಜ್ ಅವರು ಪ್ರತಿಕ್ರಿಯಿಸಿ (ವಾ.ವಾ., ನ. 20), ‘ಎರಡು ಭಾರತ ಇರುವುದು ಸುಳ್ಳೇ’ ಎಂದು ಪ್ರಶ್ನಿಸಿದ್ದಾರೆ. ವೀರ್ ದಾಸ್ ತಮ್ಮ ತಾಯ್ನಾಡು ಭಾರತದ ಬಗ್ಗೆ ಅಮೆರಿಕದ ಪ್ರೇಕ್ಷಕರ ಮುಂದೆ ಆಡಿದ ಮಾತುಗಳು ಸತ್ಯವಾದುವು, ಆತ ಹೇಳಿದ್ದು ಸರಿಯಾಗಿದೆ ಎನ್ನುವುದು ಅವರ ಅಭಿಪ್ರಾಯವಾಗಿದೆ.

ಭಾರತದಲ್ಲಿ ಒಂದಷ್ಟು ಮಂದಿ ಅಸಂಸ್ಕೃತರಂತೆ ನಡೆದುಕೊಂಡರೆ ಇಡೀ ದೇಶದ ಲಕ್ಷಣವೇ ಅದು ಎಂಬ ತೀರ್ಮಾನ ಎಷ್ಟು ಸರಿ? ಆ ಒಂದಷ್ಟು ಮಂದಿಯೇ ಇಡೀ ದೇಶ ಅಲ್ಲ; ದೇಶವನ್ನು ಪ್ರತಿನಿಧಿಸುವುದಿಲ್ಲ. ಒಂದು ದೇಶದ ಪ್ರಜೆಯು ವಿದೇಶದ ನೆಲದಲ್ಲಿ ಅಲ್ಲಿನ ಜನರ ಮುಂದೆ ತನ್ನ ದೇಶ ಬರ್ಬರ ಎಂದು ಬಿಂಬಿಸಿದರೆ ಅದನ್ನು ನಾವು ಅನುಮೋದಿಸಬೇಕೆ? ಇದು ಉಚಿತವೇ?

ಸಾಮಗ ದತ್ತಾತ್ರಿ, ಬೆಂಗಳೂರು

ಅರಿಯಬೇಕಿದೆ ಕೃಷಿ ಸರಪಳಿಯ ಸಂಬಂಧ

ರಾಜ್ಯದಾದ್ಯಂತ ಅಕಾಲಿಕ ಮಳೆ ಸುರಿಯುತ್ತಿದ್ದು ರೈತರು ಬೆಳೆದ ಬೆಳೆಗಳು ಹಾಳಾಗಿವೆ. ಈ ಅಕಾಲಿಕ ಮಳೆಗೆ ಕಾರಣ ಹವಾಮಾನ ವೈಪರೀತ್ಯ ಎಂಬುದು ವಿಜ್ಞಾನಿಗಳು ಕಂಡುಕೊಂಡ ಸತ್ಯವಾಗಿದೆ. ಆದರೆ ಬಹುತೇಕ ರೈತರಿಗೆ ಈ ಕುರಿತು ತಿಳಿವಳಿಕೆ ಬಹಳ ಕಡಿಮೆ ಇದೆ. ಈ ಅತಿವೃಷ್ಟಿ ಪರಿಸರದ ಮೇಲೆ ಆಗುತ್ತಿರುವ ಮನುಷ್ಯನ ದೌರ್ಜನ್ಯದ ಪ್ರತಿಫಲವಷ್ಟೇ. ಇಂತಹ ಸಂದರ್ಭದಲ್ಲಿ ರೈತರ ಪರವಾಗಿ ಸಾಮಾನ್ಯ ವ್ಯಕ್ತಿಯಾಗಿ ನಾವು ಮಾಡಬೇಕಾದ ಕೆಲಸಗಳು ಹಲವಿವೆ. ಅವುಗಳಲ್ಲಿ ಮುಖ್ಯವಾಗಿ ರಸ್ತೆಯ ಇಕ್ಕೆಲ, ಬಯಲು ಪ್ರದೇಶ, ಸ್ಮಶಾನ ಜಾಗ ಮುಂತಾದ ಪ್ರದೇಶಗಳಲ್ಲಿ ಸಸಿಗಳನ್ನು ನೆಟ್ಟು ಮಣ್ಣಿನ ಸವಕಳಿ ತಡೆಯುವುದು, ವಿವಿಧ ಕಾರಣಗಳಿಗಾಗಿ ಮರ ಕಡಿಯುವುದು, ವನ್ಯಜೀವಿಗಳ ಬೇಟೆಯಾಡುವುದನ್ನು ತಡೆಯುವುದು, ಕೆರೆಗಳು ಮತ್ತು ಗೋಮಾಳಗಳನ್ನು ರಕ್ಷಿಸುವುದು, ರೈತರನ್ನು ಸಾವಯವ ಕೃಷಿಗೆ ಹೊರಳಲು ಪ್ರೇರೇಪಿಸುವುದು ಮತ್ತು ಪಾರಿಸರಿಕ ಸಮಸ್ಯೆಗಳಲ್ಲಿ ಹೆಚ್ಚು ಹೆಚ್ಚು ಸಾಕ್ಷರರಾಗುವಂತೆ ಮಾಡಬೇಕಿರುವುದು ಇಂದಿನ ರೈತರಿಗೆ ಅವಶ್ಯಕ ಮಾತ್ರವಲ್ಲ ಅನಿವಾರ್ಯವೂ ಆಗಿದೆ.

ಕೃಷಿಯೆಂಬುದು ಹಲವು ಸಂಕೀರ್ಣಗಳ ಸರಪಳಿಯೊಂದಿಗೆ ಹೆಣೆದುಕೊಂಡಿದೆ. ಸಣ್ಣ ಸಣ್ಣ ಕೀಟಗಳು, ಹಕ್ಕಿಗಳು, ಪ್ರಾಣಿಗಳು ಸಹ ಯಶಸ್ವಿ ಕೃಷಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ನಿಸರ್ಗದಲ್ಲಿ ಇವುಗಳ ಪರಸ್ಪರ ಸಂಬಂಧ ಅರಿಯದ ಹೊರತು ಕೃಷಿಯಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗುರಿ ಮೀರಿದ ತೆರಿಗೆ ಆದಾಯ

ಕೇಂದ್ರ ಸರ್ಕಾರವು 2021–22ರ ಬಜೆಟ್‌ನಲ್ಲಿ ಹಾಕಿಕೊಂಡಿದ್ದ ತೆರಿಗೆ ಸಂಗ್ರಹ ಗುರಿಯನ್ನೂ ಮೀರಿ ಹೆಚ್ಚಿನ ಆದಾಯ ಸಂಗ್ರಹವಾಗಲಿದೆ ಎಂದು ಕೇಂದ್ರ ಸರ್ಕಾರದ ರೆವೆನ್ಯೂ ಕಾರ್ಯದರ್ಶಿ ಭಾನುವಾರ ಹೇಳಿದ್ದಾರೆ. ಕೇಂದ್ರ ಸರ್ಕಾರವು ಈ ಆರ್ಥಿಕ ವರ್ಷದಲ್ಲಿ ನೇರ ಮತ್ತು ಪರೋಕ್ಷ ತೆರಿಗೆ ಆದಾಯದ ರೂಪದಲ್ಲಿ ₹22.17 ಲಕ್ಷ ಕೋಟಿಯನ್ನು ಸಂಗ್ರಹಿಸುವ ಗುರಿ ಹಾಕಿಕೊಂಡಿತ್ತು. ಸರ್ಕಾರದ ಈ ತೆರಿಗೆಗಳ ಆದಾಯವು ಈ ಗುರಿಯನ್ನೂ ಮೀರುತ್ತದೆ ಎಂದು ರೆವೆನ್ಯೂ ಕಾರ್ಯದರ್ಶಿ ಹೇಳಿದ್ದಾರೆ. ಜಿಎಸ್‌ಟಿ ಸಂಗ್ರಹದಲ್ಲಿ ಆಗಿರುವ ಏರಿಕೆ ಮತ್ತು ಇಂಧನಗಳ ಮೇಲಿನ ಎಕ್ಸೈಸ್ ಸುಂಕದಲ್ಲಿನ ಏರಿಕೆಯಿಂದಾಗಿ (ನವೆಂಬರ್ ಆರಂಭದಲ್ಲಿ ಇದನ್ನು ಇಳಿಕೆ ಮಾಡಿದ್ದರೂ, ಅದು ಹಿಂದಿದ್ದ ಪ್ರಮಾಣಕ್ಕಿಂತ ಹೆಚ್ಚೇ ಇದೆ) ಸರ್ಕಾರದ ತೆರಿಗೆ ಮೂಲದ ಆದಾಯ ಏರಿಕೆಯಾಗಿದೆ

ಏಳು ತಿಂಗಳಲ್ಲೇ ಗುರಿ ದಾಟಿದ ಜಿಎಸ್‌ಟಿ



ಒಂದು ಪಟ್ಟು ಹೆಚ್ಚಾಗುವ ನಿರೀಕ್ಷೆ

ಕೇಂದ್ರ ಸರ್ಕಾರವು ಜಿಎಸ್‌ಟಿ ಮೂಲಕ ಈ ಆರ್ಥಿಕ ವರ್ಷದಲ್ಲಿ ₹6.3 ಲಕ್ಷ ಕೋಟಿ ಆದಾಯವನ್ನು ಸಂಗ್ರಹಿಸುವ ಗುರಿ ಹಾಕಿಕೊಂಡಿತ್ತು. ಆದರೆ ಈ ಆರ್ಥಿಕ ವರ್ಷದ ಮೊದಲ ಆರು ತಿಂಗಳಲ್ಲೇ ಈ ಗುರಿಯನ್ನೂ ಮೀರಿ ಹೆಚ್ಚಿನ ಆದಾಯವನ್ನು ಕೇಂದ್ರ ಸರ್ಕಾರವು ಸಂಗ್ರಹಿಸಿದೆ. ಅಕ್ಟೋಬರ್ ವರೆಗಿನ ತೆರಿಗೆ ಸಂಗ್ರಹ ₹8 ಲಕ್ಷ ಕೋಟಿಗೂ ಹೆಚ್ಚು. ಮುಂದಿನ ಐದು ತಿಂಗಳಲ್ಲಿ, ಪ್ರತೀ ತಿಂಗಳೂ ₹1 ಲಕ್ಷ ಕೋಟಿಗಿಂತ ಹೆಚ್ಚು ಜಿಎಸ್‌ಟಿ ಸಂಗ್ರಹಿಸುವ ಗುರಿ ಸರ್ಕಾರಕ್ಕಿದೆ. ಸರ್ಕಾರದ ನಿರೀಕ್ಷೆ ಕೈಗೂಡಿದರೆ, ಈ ಆರ್ಥಿಕ ವರ್ಷದ ಅಂತ್ಯಕ್ಕೆ ಜಿಎಸ್‌ಟಿ ಸಂಗ್ರಹದ ಮೊತ್ತವು ₹12.5 ಲಕ್ಷ ಕೋಟಿಯಷ್ಟಾಗಲಿದೆ. ಇದು ಜಿಎಸ್‌ಟಿ ಮೂಲದ ಆದಾಯದ ಗುರಿಗಿಂತ ಶೇ 100ಕ್ಕಿಂತಲೂ ಹೆಚ್ಚು

₹6.3 ಲಕ್ಷ ಕೋಟಿ — 2021–22ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸರ್ಕಾರವು ಹಾಕಿಕೊಂಡಿದ್ದ ಜಿಎಸ್‌ಟಿ ಸಂಗ್ರಹ ಗುರಿ

₹8.06 ಲಕ್ಷ ಕೋಟಿ — 2021–22ನೇ ಸಾಲಿನ ಏಪ್ರಿಲ್–ಅಕ್ಟೋಬರ್‌ವರೆಗೆ ಏಳು ತಿಂಗಳಲ್ಲಿ ಸರ್ಕಾರವು ಸಂಗ್ರಹಿಸಿರುವ ಜಿಎಸ್‌ಟಿ

₹5 ಲಕ್ಷ ಕೋಟಿ — 2021–22ನೇ ಸಾಲಿನ ನವೆಂಬರ್–ಮಾರ್ಚ್‌ವರೆಗಿನ ಐದು ತಿಂಗಳಲ್ಲಿ ಸರ್ಕಾರವು ಹಾಕಿಕೊಂಡಿರುವ ಜಿಎಸ್‌ಟಿ ಸಂಗ್ರಹ ಗುರಿ

₹12.5 ಲಕ್ಷ ಕೋಟಿ — 2021–22ನೇ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕೆ ಸರ್ಕಾರವು ಈಗ ನಿರೀಕ್ಷಿಸಿರುವ ಜಿಎಸ್‌ಟಿ ಆದಾಯದ ಒಟ್ಟು ಮೊತ್ತ

3 ತಿಂಗಳಲ್ಲಿ ಶೇ 30ರಷ್ಟು ಆದಾಯ

ಕೇಂದ್ರ ಸರ್ಕಾರವು ಈ ಆರ್ಥಿಕ ವರ್ಷದ ಅಂತ್ಯಕ್ಕೆ ಎಕ್ಸೈಸ್ ಸುಂಕ ಮತ್ತು ಕಸ್ಟಮ್ಸ್ ಸುಂಕದ ರೂಪದಲ್ಲಿ ಒಟ್ಟು ₹4.71 ಲಕ್ಷ ಕೋಟಿ ಆದಾಯ ಸಂಗ್ರಹಿಸುವ ಗುರಿಯನ್ನು ಹಾಕಿಕೊಂಡಿತ್ತು. ಆದರೆ ಈ ವರ್ಷದ ಮೊದಲ ಮೂರು ತಿಂಗಳಲ್ಲಿ ಈ ಗುರಿಯ ಶೇ 30.36ರಷ್ಟು ಆದಾಯವನ್ನು ಸಂಗ್ರಹಿಸಿದೆ. ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಈ ಆದಾಯದ ಮೊತ್ತವು ₹ 6 ಲಕ್ಷ ಕೋಟಿಯನ್ನು ದಾಟುವ ಸಾಧ್ಯತೆ ಇದೆ ಎಂದು ತಜ್ಞರು ಅಂದಾಜಿಸಿದ್ದಾರೆ.

‘ಇದೇ ಏಪ್ರಿಲ್‌ನಿಂದ ಅಕ್ಟೋಬರ್ ಅಂತ್ಯದವರೆಗೆ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಕೇಂದ್ರ ಸರ್ಕಾರವು ₹2.26 ಲಕ್ಷ ಕೋಟಿ ತೆರಿಗೆ ಸಂಗ್ರಹಿಸಿದೆ’ ಎಂದು ವಿರೋಧ ಪಕ್ಷಗಳು ಹೇಳಿವೆ. ಕಾಂಗ್ರೆಸ್ ನಾಯಕ ಪಿ.ಚಿದಂಬರಂ ಅವರು ಈ ಬಗ್ಗೆ ಟ್ವೀಟ್ ಮಾಡಿದ್ದರು. ಆದರೆ, ಎಷ್ಟು ಸಂಗ್ರಹ ಆಗಿದೆ ಎಂಬುದನ್ನು ಸರ್ಕಾರವು ದೃಢಪಡಿಸಿಲ್ಲ.

ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಧಿಸಲಾಗುತ್ತಿರುವ ಕೇಂದ್ರ ಎಕ್ಸೈಸ್ ಸುಂಕವನ್ನು ಕೇಂದ್ರ ಸರ್ಕಾರವು ಇದೇ ತಿಂಗಳ ಆರಂಭದಲ್ಲಿ ಇಳಿಕೆ ಮಾಡಿತ್ತು. ಇದರಿಂದ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಒಟ್ಟು ಆದಾಯದಲ್ಲಿ ₹75,000 ಕೋಟಿಯಿಂದ ₹80,000 ಕೋಟಿ ಖೋತಾ ಆಗಲಿದೆ ಎಂದು ಸರ್ಕಾರ ಹೇಳಿದೆ.

ಇದೇ ಏಪ್ರಿಲ್‌ನಿಂದ ಅಕ್ಟೋಬರ್ ಅಂತ್ಯದವರೆಗೆ ದೇಶದಲ್ಲಿ ಬಿಕರಿಯಾದ ಪೆಟ್ರೋಲ್ ಮತ್ತು ಡೀಸೆಲ್‌ನ ಲೆಕ್ಕಾಚಾರದಲ್ಲಿ ಒಟ್ಟು ₹2.26 ಲಕ್ಷ ಕೋಟಿ ಎಕ್ಸೈಸ್ ಸುಂಕ ಸಂಗ್ರಹವಾಗಿದೆ. ಇದರಲ್ಲಿ ವಿಮಾನದ ಇಂಧನ, ಎಲ್‌ಪಿಜಿ, ಎಲ್‌ಎನ್‌ಜಿ, ಸೀಮೆಎಣ್ಣೆ ಮತ್ತಿತರ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಸಂಗ್ರಹವಾದ ಎಕ್ಸೈಸ್ ಸುಂಕದ ಮಾಹಿತಿ ಇಲ್ಲ. ಈ ಸಾಲಿನ್ ಬಜೆಟ್‌ನಲ್ಲಿ ಒಟ್ಟು ₹3.35 ಲಕ್ಷ ಕೋಟಿ ಎಕ್ಸೈಸ್ ಸುಂಕ ಸಂಗ್ರಹ ಗುರಿ ಹಾಕಿಕೊಂಡಿದ್ದು, ಆರ್ಥಿಕ ವರ್ಷದ ಮೊದಲ ಆರು ತಿಂಗಳಲ್ಲಿ ಶೇ 68ರಷ್ಟು ತೆರಿಗೆ ಸಂಗ್ರಹ ಗುರಿ ತಲುಪಲಾಗಿದೆ. ಈಗ ಎರಡೂ ಇಂಧನದ ಮೇಲಿನ ಎಕ್ಸೈಸ್ ಸುಂಕವನ್ನು ಸ್ವಲ್ಪ ಇಳಿಸಲಾಗಿದೆ. ಹೀಗಿದ್ದರೂ ಆರ್ಥಿಕ ವರ್ಷದ ಅಂತ್ಯದ ವೇಳೆಗೆ, ಬಜೆಟ್‌ನಲ್ಲಿ ಹಾಕಿಕೊಂಡಿರುವ ಗುರಿಗಿಂತಲೂ ಹೆಚ್ಚು ಎಕ್ಸೈಸ್ ಸುಂಕ ಸಂಗ್ರಹವಾಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.



ಆಧಾರ: ಪಿಟಿಐ, ಕೇಂದ್ರ ರೆವೆನ್ಯೂ ಇಲಾಖೆ, ಆದಾಯ ತೆರಿಗೆ ಇಲಾಖೆ, ಜಿಎಸ್‌ಟಿ ಮಂಡಳಿ

ನೇರ ತೆರಿಗೆ: ಗಮನಾರ್ಹ ಪ್ರಗತಿ

ಕೇಂದ್ರ ಸರ್ಕಾರ ಸಂಗ್ರಹ ಮಾಡುವ ನೇರ ತೆರಿಗೆಯಲ್ಲಿ ಕಾರ್ಪೊರೇಟ್ ಹಾಗೂ ಆದಾಯ ತೆರಿಗೆಗಳು ಸೇರಿದ್ದು, 2021-22ನೇ ಆರ್ಥಿಕ ವರ್ಷದ ಎರಡನೇ ತ್ರೈಮಾಸಿಕ (ಜುಲೈ-ಸೆಪ್ಟೆಂಬರ್) ಮುಗಿಯುವ ಮುನ್ನ ಗಮನಾರ್ಹ ಪ್ರಗತಿ ಕಂಡುಬಂದಿದೆ. ಬಜೆಟ್ ಅಂದಾಜಿನ ಪ್ರಕಾರ, ಆರ್ಥಿಕ ವರ್ಷ ಮುಗಿಯುವ ಹೊತ್ತಿಗೆ ಕಾರ್ಪೊರೇಟ್ ಹಾಗೂ ಆದಾಯ ತೆರಿಗೆ ವಿಭಾಗಗಳಿಂದ ಒಟ್ಟು ₹11 ಲಕ್ಷ ಕೋಟಿ ಸಂಗ್ರಹವಾಗಬೇಕು. ಸೆ.22ರ ಮಾಹಿತಿ ಪ್ರಕಾರ, ಕೇಂದ್ರ ಸರ್ಕಾರವು ₹6.45 ಲಕ್ಷ ಕೋಟಿ ಸಂಗ್ರಹಿಸಿದೆ. ಆ ಮೂಲಕ ಗುರಿಯ ಅರ್ಧಕ್ಕಿಂತ ಹೆಚ್ಚಿನ ಮೊತ್ತವನ್ನು ಸಂಗ್ರಹಿಸಿದಂತಾಗಿದೆ. ಕೋವಿಡ್ ಎರಡನೇ ಅಲೆಯ ತೀವ್ರ ಹೊಡೆತವಿದ್ದರೂ ತೆರಿಗೆ ಸಂಗ್ರಹಕ್ಕೆ ಯಾವುದೇ ಅಡ್ಡಿಯಾಗಿಲ್ಲ.

ನೇರ ತೆರಿಗೆ ಸಂಗ್ರಹ ವರ್ಷವಾರು

(ಆದಾಯ ತೆರಿಗೆ ಮತ್ತು ಕಾರ್ಪೊರೇಟ್ ತೆರಿಗೆ ಸೇರಿ)

ಕಳೆದ ಆರ್ಥಿಕ ವರ್ಷಕ್ಕೆ (2020-21) ಹೋಲಿಸಿದರೆ, ಈ ಆರ್ಥಿಕ ವರ್ಷದಲ್ಲಿ ಶೇ 47ರಷ್ಟು ಪ್ರಗತಿ ದಾಖಲಾಗಿದೆ. ಕಳೆದ ವರ್ಷಕ್ಕಿಂತ ಈ ಬಾರಿ ₹2 ಲಕ್ಷ ಕೋಟಿಗಿಂತ ಹೆಚ್ಚು ತೆರಿಗೆ ಸಂಗ್ರವಾಗಿದೆ. ಕೋವಿಡ್ ಮೊದಲ ಅಲೆ ಕಾಣಿಸಿದ್ದ 2019-20ನೇ ಆರ್ಥಿಕ ವರ್ಷಕ್ಕೆ ಹೋಲಿಸಿದರೆ, ಈ ಸಾಲಿನಲ್ಲಿ ಶೇ 16ರಷ್ಟು ಪ್ರಗತಿ ಕಂಡುಬಂದಿದೆ.

(2021ರ ಸೆ.22ರವರೆಗೆ)

₹5.53 ಲಕ್ಷ ಕೋಟಿ — 2019-20

₹4.39 ಲಕ್ಷ ಕೋಟಿ — 2020-21

₹6.45 ಲಕ್ಷ ಕೋಟಿ — 2021-22



ವರದಿ: ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ.

ಕುಮುದನ ರಕ್ಷಿಸಿದ ಸುಬ್ರಹ್ಮಣ್ಯ

ತಾರಕನು ಸತ್ತ ನಂತರ ಅವನ ಕಡೆಯವನಾದ ಬಾಣಾಸುರನು ಯುದ್ಧದಿಂದ ಹಿಮ್ಮೆಟ್ಟಿ ಓಡಿಹೋಗಿ ತನ್ನ ಅಪಾರವಾದ ಸೇನೆಯೊಂದಿಗೆ ಕ್ರೌಂಚಪರ್ವತದಲ್ಲಿ ನೆಲೆಸಿ ಅದನ್ನು ಹಿಂಸಿಸುತ್ತಿದ್ದನು. ಬಾಣಾಸುರನ ಕಾಟ ತಡೆಯಲಾರದೆ ಕ್ರೌಂಚಪರ್ವತವು ಸುಬ್ರಹ್ಮಣ್ಯನ ಕಡೆ ಆರ್ತನಾದದಿಂದ ರಕ್ಷಿಸು ಅಂತ ಭಕ್ತಿಯಿಂದ ಬೇಡಿತು. ‘ಸ್ಕಂದನೇ, ನೀನು ದೇವತೆಗಳಿಗೆ ಪ್ರಭುವಾಗಿ ತಾರಕಾಸುರನ ಕೊಂದೆ. ಯುದ್ಧದಲ್ಲಿ ನಿನ್ನ ಏಟನ್ನು ತಾಳಲಾರದೇ ಓಡಿ ಹೋದ ಬಾಣಾಸುರ ನನ್ನಲ್ಲಿಗೆ ಬಂದು ನನ್ನ ಹಿಂಸಿಸುತ್ತಿದ್ದಾನೆ. ನನ್ನನ್ನು ಕಾಪಾಡು. ಕರುಣಾಕರನಾದ ನೀನು ನನ್ನಲ್ಲಿ ದಯವಿಡು’ ಎಂದು ಕ್ರೌಂಚಪರ್ವತ ಕೋರಿತು.

ಕ್ರೌಂಚನೋವನ್ನು ಆಲಿಸಿದ ಭಕ್ತಪಾಲಕನಾದ ಸುಬ್ರಹ್ಮಣ್ಯ ತನ್ನ ತಂದೆ ಶಿವನನ್ನು ಮನದಲ್ಲಿ ಧ್ಯಾನಿಸಿ, ಮಹತ್ತರವಾದ ಶಕ್ತ್ಯಾಯುಧವನ್ನು ತೆಗೆದುಕೊಂಡು ಬಾಣಾಸುರನ ಮೇಲೆರಗುವಂತೆ ಹೊಡೆದ. ಶಕ್ತ್ಯಾಯುಧದ ಪ್ರಯೋಗದಿಂದ ಮಹಾಶಬ್ದವಾಗಿ ದಶದಿಕ್ಕುಗಳು, ಆಕಾಶ ಪ್ರಜ್ವಲಿಸಿದವು. ಗುಹನ ಶಕ್ತ್ಯಾಯುಧವು ಬಾಣಾಸುರ ಮತ್ತವನ ಸೈನಿಕರನ್ನೂ ಸುಟ್ಟು ಭಸ್ಮಮಾಡಿ ಪುನಃ ಗುಹನ ಸಮೀಪಕ್ಕೆ ಬಂದಿತು. ಆಗ ಸುಬ್ರಹ್ಮಣ್ಯ ಕ್ರೌಂಚಪರ್ವತಕ್ಕೆ ’ನೀನು ನಿರ್ಭಯನಾಗಿ ನಿನ್ನ ಮನೆಗೆ ಹೋಗು. ಬಾಣಾಸುರನೂ ಅವನ ಸೈನಿಕರು ಸತ್ತುಹೋದರು’ ಎಂದು ಹೇಳಿದ. ಗಿರಿರಾಜನು ಸುಬ್ರಹ್ಮಣ್ಯನ ಮಾತು ಕೇಳಿ ಸಂತೋಷದಿಂದ ಗುಹನನ್ನು ಸ್ತುತಿಸುತ್ತಾ ತನ್ನ ಮನೆಗೆ ಹೊರಟುಹೋದ.

ಅನಂತರ ಸ್ಕಂದನು ಆ ಸ್ಥಳದಲ್ಲಿ ಪ್ರತಿಜ್ಞೇಶ್ವರ, ಕಪಾಲೇಶ್ವರ, ಕುಮಾರೇಶ್ವರ ಎಂಬ ಮೂರು ಲಿಂಗಗಳನ್ನು ಪ್ರತಿಷ್ಠಾಪಿಸಿದನು. ಇವು ಪಾಪವನ್ನು ನಾಶಮಾಡಿ ಸರ್ವೇಷ್ಟಾರ್ಥಗಳನ್ನೂ ಕೊಡುವುದು ಎಂದನು. ಪುನಃ ಸರ್ವೇಶ್ವರನಾದ ಕುಮಾರನು ಸ್ತಂಭೇಶ್ವರವೆಂಬ ಲಿಂಗವನ್ನು ಜಯಸ್ತಂಭದ ಸಮೀಪದಲ್ಲಿ ಸ್ಥಾಪಿಸಿದನು. ವಿಷ್ಣುವೇ ಮೊದಲಾದ ದೇವತೆಗಳೂ ಸಹ ದೇವದೇವನಾದ ಪರಮೇಶ್ವರನ ಲಿಂಗವನ್ನು ಅಲ್ಲಿ ಸ್ಥಾಪಿಸಿದರು. ಅಲ್ಲಿ ಪ್ರತಿಷ್ಠೆ ಮಾಡಿದ ಶಿವಲಿಂಗಗಳೆಲ್ಲಾ ಅದ್ಭುತ ಮಹಿಮೆಯಿಂದ ಕೂಡಿ ಇಷ್ಟಾರ್ಥದಾಯಕವಾಗಿದ್ದವು. ಭಕ್ತರಿಗೆ ಮುಕ್ತಿಯನ್ನೂ ಉಂಟುಮಾಡುತ್ತಿದ್ದವು. ಹೀಗೆ ಎಲ್ಲ ಕಾರ್ಯ ಮುಗಿದ ನಂತರ ವಿಷ್ಣು ಮೊದಲಾದ ದೇವತೆಗಳೆಲ್ಲರೂ ಸಂತೋಷದಿಂದ ಗುಹನನ್ನು ಕರೆದುಕೊಂಡು ಕೈಲಾಸಪರ್ವತಕ್ಕೆ ಹೋಗಬೇಕೆನ್ನುವಷ್ಟರಲ್ಲಿ ಆದಿಶೇಷನ ಮಗನಾದ ಕುಮುದ ಎಂಬುವವನು ರಾಕ್ಷಸರ ಬಾಧೆಯನ್ನು ತಾಳಲಾರದೇ ಓಡಿಬಂದು ಶಿವಕುಮಾರನ ಕಾಲಿಡಿದು ಕಾಪಾಡು ಅಂತ ಪ್ರಾರ್ಥಿಸಿದ.

ಬಾಣಾಸುರನಂತೆ ಪ್ರಲಂಬನೆಂಬ ರಾಕ್ಷಸನು ಸಹ ಯುದ್ಧದಲ್ಲಿ ತಾರಕನು ಮೃತನಾದ ನಂತರ ಓಡಿ ಹೋಗಿ, ಅಮಾಯಕ ಕುಮುದನನ್ನು ಹಿಂಸಿಸುತ್ತಿದ್ದ. ಕುಮುದ ಫಣೀಂದ್ರನಾದ ಆದಿಶೇಷನ ಮಗ. ಸುಬ್ರಹ್ಮಣ್ಯನ ಬಳಿ ತನಗೆ ರಕ್ಷಣೆ ನೀಡುವಂತೆ ಕೋರಿದ. ಕುಮುದನಿಗೆ ಅಭಯ ಹಸ್ತ ನೀಡಿದ ಸುಬ್ರಹ್ಮಣ್ಯ ಕೈಲಾಸಯಾತ್ರೆಯನ್ನು ಕೆಲಕಾಲ ಮುಂದೂಡಿ ಪ್ರಲಂಬಾಸುರನ ಸಂಹಾರಕ್ಕೆ ನಿರ್ಧಾರ ಮಾಡಿದ. ತನ್ನ ತಂದೆ ಶಿವನ ಚರಣಕಮಲವನ್ನು ಧ್ಯಾನಿಸುತ್ತಾ, ಶಕ್ತ್ಯಾಯುಧವನ್ನು ಕೈಗೆ ತೆಗೆದುಕೊಂಡು ಪ್ರಲಂಬಾಸುರನ ಕಡೆಗೆ ಹೊಡೆದನು. ಆಗ ಮಹಾಶಬ್ದವುಂಟಾಗಿ ದಶದಿಕ್ಕುಗಳೂ ಪ್ರಜ್ವಲಿಸಿದವು. ಆ ಶಕ್ತ್ಯಾಯುಧವು ಪ್ರಲಂಬಾಸುರನನ್ನು ಸೈನ್ಯ ಸಮೇತವಾಗಿ ಸುಟ್ಟು ಭಸ್ಮಮಾಡಿ, ನಂತರ ಗುಹನ ಬಳಿಗೆ ಬಂದು ಸೇರಿತು.

ಕುಮಾರನು ’ಆ ಪ್ರಲಂಬಾಸುರನು ಸೈನ್ಯಸಮೇತನಾಗಿ ಮಡಿದ. ನೀನು ನಿರ್ಭಯನಾಗಿ ಮನೆಗೆ ಹೋಗು’ ಎಂದಾಗ ಶೇಷಸುತನಾದ ಕುಮುದನು ವಂದಿಸಿ, ತನ್ನ ಪಾತಾಳಲೋಕಕ್ಕೆ ಹೋದ. ತಾರಕವಧೆ ಮತ್ತು ಕುಮಾರನ ವಿಜಯದ ಕತೆಗಳನ್ನು ಕೇಳಿದವರಿಗೆ ಸರ್ವಪಾಪವೂ ನಾಶವಾಗುವುದು, ಇಷ್ಟಾರ್ಥಗಳೆಲ್ಲವೂ ನೆರವೇರುವುದು. ಸತ್ಪುರುಷರಿಗೆ ಕೀರ್ತಿಯ, ಆಯುಸ್ಸು, ಭುಕ್ತಿ, ಮುಕ್ತಿ ಉಂಟಾಗುವುದು. ದಿವ್ಯವಾದ ಶಿವಕುಮಾರನ ಚರಿತ್ರೆಯನ್ನು ಶ್ರದ್ಧೆಯಿಂದ ಆಲಿಸಿದವರು, ಇಹಲೋಕದಲ್ಲಿ ಪರಮಸುಖವನ್ನನುಭವಿಸಿ, ಪರಲೋಕದಲ್ಲಿ ಶ್ರೇಷ್ಠವಾದ ಶಿವಲೋಕವನ್ನು ಪಡೆಯುವರು ಎಂದು ಬ್ರಹ್ಮ ತನ್ನ ಮಗ ನಾರದ ಮತ್ತಿತರ ಮುನಿವರ್ಯರಿಗೆ ತಿಳಿಸಿದ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ಇತ್ತೀಚೆಗೆ ಮಣಿಪುರದಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಕರ್ನಲ್ ವಿಪ್ಲವ್ ತ್ರಿಪಾಠಿ, ಅವರ ಪತ್ನಿ ಹಾಗೂ ಮಗು ಮೃತಪಟ್ಟಿದ್ದರು. ಇದು ಇತ್ತೀಚಿನ ದಿನಗಳಲ್ಲಿ ನಡೆದ ಭೀಕರ ಉಗ್ರ ದಾಳಿಗಳಲ್ಲಿ ಒಂದು. ಈ ದಾಳಿಗೆ ಸಂಬಂಧಿಸಿದ ಎರಡು ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಒಂದು ಚಿತ್ರದಲ್ಲಿ ಸೇನಾ ಬೆಂಗಾವಲು ವಾಹನವು ಸುಟ್ಟಿರುವ ಚಿತ್ರಣವಿದೆ. ಜೊತೆಗೆ ಮೃತ ಕರ್ನಲ್ ಹಾಗೂ ಅವರ ಪತ್ನಿ ಮಗು ಇರುವ ಚಿತ್ರವನ್ನು ಕೊಲಾಜ್ ಮಾಡಲಾಗಿದೆ. ರಸ್ತೆಗೆ ಅಡ್ಡಲಾಗಿ ಬಿದ್ದಿರುವ ಮರದ ಕೊಂಬೆಗಳನ್ನು ಸೇನಾ ಸಿಬ್ಬಂದಿ ತೆರವುಗೊಳಿಸುವ ಮತ್ತೊಂದು ಚಿತ್ರವೂ ಇದೆ.

✓ ಈ ಎರಡೂ ಚಿತ್ರಗಳು ಮಣಿಪುರದಲ್ಲಿ ಇತ್ತೀಚೆಗೆ ನಡೆದ ದಾಳಿಗೆ ಸಂಬಂಧಿಸಿಲ್ಲ ಎಂದು ಇಂಡಿಯಾಟುಡೇ ವರದಿ ಮಾಡಿದೆ. 2015ರಲ್ಲಿ ಮಣಿಪುರದ ಚಾಂದೇಲ್ ಜಿಲ್ಲೆಯಲ್ಲಿ ನಡೆದ ಉಗ್ರರ ದಾಳಿಯಲ್ಲಿ ಸೇನಾ ಬಸ್ ಸುಡಲಾಗಿತ್ತು. ಈ ಘಟನೆಯಲ್ಲಿ 18 ಸೈನಿಕರು ಹುತಾತ್ಮರಾಗಿದ್ದರು. ಎರಡನೇ ಚಿತ್ರವು 2014ರಿಂದಲೂ ರಾಯಿಟರ್ಸ್ ಸುದ್ದಿ ಸಂಸ್ಥೆಯ ತಾಣದಲ್ಲಿದೆ. ರಾಯಿಟರ್ಸ್ ಪ್ರಕಾರ, ಅಸ್ಸಾಂ ಮತ್ತು ನಾಗಾಲ್ಯಾಂಡ್‌ನ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆ ವೇಳೆ ಈ ಚಿತ್ರವನ್ನು ಸೆರೆಹಿಡಿಯಲಾಗಿದೆ.

ಗುಂಡಣ್ಣ

ದಿನ ಭವಿಷ್ಯ

ಸೋಮವಾರ ನವೆಂಬರ್ 22, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಅನೂರಾಧಾ ತೃತೀಯಾ ಗಂ. 31-4 (ಸಾ. 6-53) ಸೋಮವಾರ ನಿತ್ಯ ನಕ್ಷತ್ರ ಮೃಗಶಿರ ಗಂ. 5-24 (ಬೆ. 8-37) ಸಾಧ್ಯ ನಾಮ ಯೋಗ ಗಂ. 56-54 ಭದ್ರೆ ಕರಣ ಗಂ. 31-4 ವಿಷ ಗಂ. 28-32 ಅಮೃತ ಗಂ 54-59 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-24 ಸೂರ್ಯಾಸ್ತ: 5-46 ಅದೃಷ್ಟ ಸಂಖ್ಯೆ 2 6

ಮೇಷ: ಬಹುದಿನಗಳಿಂದ ಬಾಕಿ ಇರುವ ಹಣವು ಹಿಂದಿರುಗಿ ಬಂದು ನಿಮ್ಮ ಕಾರ್ಯಕ್ಕೆ ಸಹಕಾರಿಯಾಗುವುದು. ಸಹಧರ್ಮಿಣಿಯ ಆರೋಗ್ಯದ ಬಗ್ಗೆ ಗಮನ ಅಗತ್ಯ. ಅಂದುಕೊಂಡ ಕೆಲಸ ಕಾರ್ಯಗಳು ನಿರ್ವಿಘ್ನವಾಗಿ ನಡೆಯುವವು.

ವೃಷಭ: ಆರ್ಥಿಕ ಹಿನ್ನಡೆಯ ನಡುವೆಯೂ ಮನೆಯಲ್ಲಿನ ಬಿನ್ನಾಭಿಪ್ರಾಯಗಳು ದೂರವಾಗಿ ತಿಳಿಯಾದ ವಾತಾವರಣ ಮೂಡಲಿದೆ. ಸಂಗಾತಿಯ ಸಲಹೆಗಳಿಗೆ ಆದ್ಯತೆ ನೀಡಿ. ಮಕ್ಕಳ ವಿದ್ಯಾಭ್ಯಾಸಕ್ಕೆ ಬಗ್ಗೆ ಹೆಚ್ಚಿನ ವೆಚ್ಚ.

ಮಿಥುನ: ಆರ್ಥಿಕ ಸಮತೋಲನ ಕಂಡುಬರುವುದು. ನಿಮ್ಮ ಮೇಲಿನ ಆಪಾದನೆಗಳಿಂದ ಮುಕ್ತರಾಗಿ ಗೌರವಕ್ಕೆ ಪಾತ್ರರಾಗಲಿದ್ದೀರಿ. ಕೆಲಸಕಾರ್ಯಗಳಲ್ಲಿ ಉತ್ಸಾಹ ಮೂಡಿ ಬರಲಿದೆ.

ಕರ್ಕಾಟಕ: ಸಹೋದ್ಯೋಗಿಗಳಿಂದ ಸಕಾರಾತ್ಮಕ ಸಹಾಯ ದೊರಕಲಿದೆ. ಸಮಾಜದಲ್ಲಿ ನಿಮ್ಮ ಪರಿಶ್ರಮದ ಫಲವನ್ನು ಬೇರೆಯವರು ಸವಿಯುವ ಸಾಧ್ಯತೆ. ನಿಮ್ಮ ಶ್ರಮದ ಅರಿವಾಗಿ ಗೌರವವು ನಿಮ್ಮ ಪಾಲಿಗೆ ಒದಗಿ ಬರಲಿದೆ.

ಸಿಂಹ: ವಿಪರೀತ ಕಾರ್ಯಬಾಹುಳ್ಯದಿಂದಾಗಿ ಬೇಸರ. ಸಮಾಧಾನದಿಂದ ವರ್ತಿಸುವುದು ಉತ್ತಮ. ಚುರುಕಿನ ಕಾರ್ಯಕ್ಷಮತೆಯಿಂದ ಕೆಲಸ ಪೂರೈಸಿ ಮನಸ್ಸಿಗೆ ನಿರಾಳತೆ ದೊರಕಲಿದೆ.

ಕನ್ಯಾ: ವ್ಯವಹಾರದಲ್ಲಿ ಚೇತರಿಕೆ ಕಂಡುಬರಲಿದೆ. ವೈದ್ಯ ವೃತ್ತಿಯಲ್ಲಿರುವವರಿಗೆ ಆದಾಯದಲ್ಲಿ ಹೆಚ್ಚಳ. ಅತಿಯಾದ ಮಾತಿನಿಂದಾಗಿ ವೃಥಾ ವೈಮನಸ್ಯ ಉಂಟಾಗುವ ಸಾಧ್ಯತೆ. ಶಾರದೆಯ ಆರಾಧನೆ ಯಶಸ್ಸನ್ನು ನೀಡುವುದು.

ತುಲಾ: ಬೇರೆಯವರ ವ್ಯವಹಾರದಿಂದ ಮೋಸಹೋಗುವ ಸಾಧ್ಯತೆ. ಹಿತಶತೃಗಳ ಬಗ್ಗೆ ಎಚ್ಚರಿಕೆಯಿಂದ ಸಮಾಧಾನದಿಂದ ಮುಂದುವರೆಯುವುದು ಸೂಕ್ತ. ಬೇರೆಯವರ ಟೀಕೆಗಳಿಗೆ ಕಿವಿಗೊಡದೆ ಧೈರ್ಯದಿಂದ ಮುನ್ನುಗ್ಗಿ.

ವೃಶ್ಚಿಕ: ನೀವು ಯೋಜಿಸಿದ ಯೋಜನೆಗಳನ್ನು ನಿಮ್ಮವರೊಂದಿಗೆ ವಿವರಿಸಿ. ತಜ್ಞರಿಂದ ಸೂಕ್ತ ಸಲಹೆ, ಸಹಾಯಗಳನ್ನು ಪಡೆಯುವುದು ಉತ್ತಮ. ದಾಂಪತ್ಯದಲ್ಲಿ ಸುಖಾನುಭವ ಉಂಟಾಗಲಿದೆ.

ಧನು: ವಾಹನ, ಆಸ್ತಿ ಖರೀದಿ ಸಾಧ್ಯತೆ. ಗುರುಹಿರಿಯರ ಆಶೀರ್ವಾದ ದೊರೆಯಲಿದೆ. ಬಹುದಿನಗಳ ಬಯಕೆ ಈಡೇರುವ ಸಾಧ್ಯತೆ. ಪತ್ನಿಯ ಆರೋಗ್ಯದ ಬಗ್ಗೆ ಗಮನ ಅಗತ್ಯ. ದೂರದ ಪ್ರಯಾಣದ ಸಾಧ್ಯತೆ.

ಮಕರ: ಬಂಡವಾಳ ಹೂಡಿಕೆಗೆ ಅತ್ಯಂತ ಪ್ರಶಸ್ತ ಸಮಯವಾಗಿದೆ. ನಿಮ್ಮ ನಿರೀಕ್ಷೆಗೂ ಮೀರಿದ ಆದಾಯ ಹರಿದು ಬಂದು ವ್ಯವಹಾರದಲ್ಲಿ ಹೆಚ್ಚಿನ ಆಸಕ್ತಿ ಮೂಡುವುದು. ವ್ಯವಹಾರದ ಭರದಲ್ಲಿ ಕುಟುಂಬ ಕಡೆಗಣನೆ ಸರಿಯಲ್ಲ.

ಕುಂಭ: ಕುಟುಂಬದವರೊಡನೆ ಧಾರ್ಮಿಕ ಕ್ಷೇತ್ರ ದರ್ಶನ. ಮಹಿಳೆಯರ ಇಷ್ಟಾರ್ಥ ಸಿದ್ಧಿಯಾಗುವ ಕಾಲ. ದೈನಂದಿನ ವ್ಯವಹಾರಗಳಲ್ಲಿ ಉತ್ಸಾಹ ಮೂಡಿ ಆದಾಯ. ಗೃಹ ನಿರ್ಮಾಣ ಯೋಜನೆ ಸಿದ್ಧವಾಗುವ ಸಾಧ್ಯತೆ.

ಮೀನ: ಆರ್ಥಿಕ ಸಂಪನ್ಮೂಲಗಳು ಅಭಿವೃದ್ಧಿಯಾಗಲಿದೆ. ಅಲಂಕಾರಿ ವಸ್ತುಗಳನ್ನು ಖರೀದಿಸುವ ಸಾಧ್ಯತೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡುಬರುವುದು. ಕುಟುಂಬಕ್ಕೊಂದು ವಿಶೇಷ ಗೌರವ ತಂದುಕೊಡಲಿದ್ದಾರೆ.

ನಿಮ್ಮ ಜನ್ಮದಿನ 22-ನವೆಂಬರ್ ಈ ದಿನವು ಅತ್ಯಂತ ಶುಭಕರವಾಗಿದ್ದು, ರಾಜಕೀಯ ಮುತ್ಸದ್ದಿಗಳಿಗೆ ಬಿಡುವಿಲ್ಲದ ಕೆಲಸಗಳೊಂದಿಗೆ ಗೌರವ ಪ್ರಾಪ್ತಿ. ಸ್ತ್ರೀಯರಿಗೆ ಉತ್ತಮ ಆರೋಗ್ಯದೊಂದಿಗೆ ಸಂತಾನ ಭಾಗ್ಯ. ಮಕ್ಕಳಿಗೆ ಶ್ರೇಯಸ್ಸನ್ನುಂಟು ಮಾಡುವವು. ರೈತಾಪಿ ವರ್ಗದವರಿಗೆ ಅನಿಶ್ಚಿತತೆ ತಲೆದೋರಬಹುದು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಏನ ಬೇಡಲಿ?

ಸೃಷ್ಟಿಯದ್ಭುತಶಕ್ತಿಯುಳ್ಳೊರ್ವನಿರಲು ನ - |
ಮ್ಮಿಷ್ಟಗಳನರಿತು ನೀಡುವುದವನಿಗರಿದೇಂ ? ||
ಇಷ್ಟವಾತನೊಳುದಿಸುವಂತೆ ಚೋದಿಪುದೆಂತು ? |
ಕಷ್ಟ ನಮಗಿಹುದಷ್ಟೆ - ಮಂಕುತಿಮ್ಮ || 502 ||

ಪದ ಅರ್ಥ: ಸೃಷ್ಟಿಯದ್ಭುತಶಕ್ತಿಯುಳ್ಳೊರ್ವನಿರಲು = ಸೃಷ್ಟಿಯ + ಅದ್ಭುತಶಕ್ತಿ + ಉಳ್ಳ + ಓರ್ವನು + ಇರಲು, ನೀಡುವುದವನಿಗರಿದೇಂ = ನೀಡುವುದು + ಅವನಿಗೆ + ಅರಿದೇಂ (ತಿಳಿಯದೇ), ಇಷ್ಟವಾತನೊಳುದಿಸುವಂತೆ- ಇಷ್ಟವು + ಆತನೊಳು + ಉದಿಸುವಂತೆ, ಚೋದಿಪುದೆಂತು = ಚೋದಿಪುದು (ಪ್ರಚೋದಿಸುವುದು) + ಎಂತು

ವಾಚ್ಯಾರ್ಥ: ಸೃಷ್ಟಿಯನ್ನು ನಿರ್ಮಿಸಿದ, ಅದ್ಭುತ ಶಕ್ತಿಯುಳ್ಳವನು ಒಬ್ಬನಿರಲು, ನಮ್ಮ ಅಪೇಕ್ಷೆಗಳನ್ನು ತಿಳಿದುಕೊಂಡು ಕೊಡುವುದು ಅವನಿಗೆ ತಿಳಿಯದೇನು? ನಮ್ಮ ಇಷ್ಟಗಳನ್ನು ಆತ ತಿಳಿದುಕೊಳ್ಳುವಂತೆ ಪ್ರಚೋದಿಸುವುದು ಹೇಗೆ? ಇದೇ ನಮಗೆ ಬಂದಿರುವ ಕಷ್ಟ.

ವಿವರಣೆ: ಸೃಷ್ಟಿಯೇ ಅದ್ಭುತ. ಈ ಅಪರಂಪಾರ ವಿಶ್ವವನ್ನು ಸೃಷ್ಟಿ ಮಾಡಿದವನು ಇನ್ನೆಷ್ಟು ಅದ್ಭುತ ಶಕ್ತಿಯುಳ್ಳವನಾಗಿರಬೇಕು? ಅವನು ಸರ್ವಾಂತರ್ಯಾಮಿಯೂ ಹೌದು, ಸರ್ವಶಕ್ತನೂ ಹೌದು. ಆದ್ದರಿಂದ ನಮಗೆ ಯಾವುದು ಬೇಕು, ಎಷ್ಟು ಬೇಕು ಎನ್ನುವುದು ಅವನಿಗೆ ತಿಳಿದಿರಬೇಕಲ್ಲವೆ? ಅವನೇನು ಸರ್ಕಾರಿ ಅಧಿಕಾರಿಯೇ, ಏನು ಬೇಕೆನ್ನುವುದನ್ನು ಅರ್ಜಿ ಹಾಕಿ ಕೇಳಿಕೊಳ್ಳಲು? ಅವನಿಗೆ ತಿಳಿದಿದ್ದರೆ ಯಾಕೆ ಅವನು ಬೇಡದೆ ಎಲ್ಲರಿಗೂ ಹಂಚುತ್ತಿಲ್ಲ? ಅಥವಾ ನಮಗೇ ಬೇಡಲು ಬರುವುದಿಲ್ಲವೊ? ಗೋಪಾಲದಾಸರು ಅದನ್ನೇ ಕೇಳುತ್ತಾರೆ.

‘ಏನ ಬೇಡಲಿ ನಿನ್ನ ಬಳಿಗೆ ಬಂದು? ನೀನಿತ್ತ ಸೌಭಾಗ್ಯ ನಿಬಿಡವಾಗಿರಲಾಗಿ’. ಈ ಕೀರ್ತನೆಯಲ್ಲಿ ಬೇಡಿ ವಿಫಲರಾದವರ ಪಟ್ಟಿಯನ್ನೇ ಕೊಡುತ್ತಾರೆ. ತಾಯಿಯನ್ನು ಬೇಡಿದರೆ ತಾಯಿ ಸುರುಚಿ ಧ್ರುವನಿಗೆ ಏನು ಕೊಟ್ಟಳು? ಅವನನ್ನು ಕಾಡಿಗಟ್ಟಿದಳು. ತಂದೆಯನ್ನು ಬೇಡಿದ ಪ್ರಲ್ಹಾದನಿಗೆ ತಂದೆಯಾದ ಹಿರಣ್ಯಕಶಿಪು ಎಷ್ಟು ಚಿತ್ರಹಿಂಸೆ ಕೊಟ್ಟ? ಸಹೋದರನನ್ನು ಬೇಡಿದರೆ ತಮ್ಮ ಸುಗ್ರೀವನೇ ಅಣ್ಣ ವಾಲಿಯ ವಧೆ ಮಾಡಿಸಲಿಲ್ಲವೆ? ಇದೊಂದು ಸಂದಿಗ್ಧ ಪರಿಸ್ಥಿತಿ. ಅವನು ನಾವು ಬೇಡಿದ್ದನ್ನು ಕೊಡುವುದಿಲ್ಲ, ನಮಗೆ ಬೇಡಲು ಗೊತ್ತಿಲ್ಲ. ಯಾಕೆಂದರೆ ಮನುಷ್ಯ ಬೇಡಿದ್ದನ್ನೆಲ್ಲ ದೇವರು ಕೊಟ್ಟರೆ ಅದು ಹಿತವೇ ಆದೀತು ಎನ್ನುವಂತಿಲ್ಲ. ಹಾಗಾದರೆ ನಮ್ಮ ಇಷ್ಟಗಳನ್ನು ಪೂರೈಸುವಂತೆ ಭಗವಂತನನ್ನು ಪ್ರಚೋದಿಸುವುದು ಹೇಗೆ? ಅಥವಾ ಬೇಡಿದರೆ ಏನು ಬೇಡಬೇಕು. ಇದೇ ನಮಗಿರುವ ಕಷ್ಟ. ಅದಕ್ಕೂ ಗೋಪಾಲದಾಸರು ಉತ್ತರ ನೀಡಿದ್ದಾರೆ, ತಮ್ಮ ಕೀರ್ತನೆಯ ಕೊನೆಯ ಸೊಲ್ಲಿನಲ್ಲಿ. ‘ಬೇಡುವೆನು ನಾ ನಿನ್ನ ಬೇಡತಕ್ಕುದ ದೇವ ನೀಡೆನೆಂಬುದು ನಿನ್ನ ಮನದಿಚ್ಛೆಯೈ ಮೂಡಲಾದ್ರೀಶ ಶ್ರೀ ಗೋಪಾಲವಿಠಲ ಬೇಡದಂತೆ ಪರರ ಮಾಡೆನ್ನ ದೊರೆಯೇ’

ಭಗವಂತ, ಬೇಡುವುದು ನನ್ನ ಕರ್ಮ, ಕೊಡುವುದು, ಬಿಡುವುದು ನಿನ್ನಿಚ್ಛೆ ಎಂದು ಹೇಳುತ್ತ, ಕೊನೆಗೊಂದು ಅತ್ಯಂತ ಮಾರ್ಮಿಕವಾದ ಮಾತನ್ನು ಹೇಳುತ್ತಾರೆ. ಭಗವಂತ, ಪರರನ್ನು ಬೇಡದಂತೆ, ಅವರ ಮುಂದೆ, ನಿನ್ನ ಮುಂದೆ, ಕೈ ಚಾಚದಂಥ ಬುದ್ಧಿ ಕೊಡು’ ಎಂದು ಹೇಳುತ್ತಾರೆ. ಬೇಡದಿರುವ ಮನಸ್ಸೇ ಭಗವಂತನನ್ನು ನೀಡುವಂತೆ ಪ್ರಚೋದಿಸೀತು. ❖

ಪದಬಂಧ 4785 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ದಾರ ಹಿಡಿದಿರುವ ಬಾಧ್ಯಸ್ಥ (4)
3.ಜೊತೆಯಲ್ಲಿ ವಾಸಿಸುವಿಕೆ (4)
5.ಜಾತಿಯಲ್ಲಿರುವ ರೇಖಾಗಣಿತ (3)
6.ಕುರಿಗಳನ್ನು ಕಾಯುವವನು (3)
8.ಸನ್ಯಾಸ ಪಡೆದವನದ್ದುಈ ರಚನೆ! (3)
9. ಹಣವನ್ನು ಮಣ್ಣು ಮಾಡುವುದು (3)
10.ನಕಲು ಎಂದಿದ್ದಕ್ಕೇ ಈ ಕೋಪವೇ! (3)
11.ಲಕ್ಷ್ಯ ತೋರದೇ ಈ ಅನಾದರ (3)
12.ದಾಯಾದಿಯನ್ನು ಬೀಳ್ಕೊಡುವುದು (3)
13.ಚಡಪಡಿಸುತ್ತಾ ಹಾಕಿದ ಹಾಸುಗಲ್ಲು (3)
14. ಮುಸಲ್ಮಾನರ ಪ್ರಾರ್ಥನಾ ಮಂದಿರ (3)
16.ಶಕೆ ಕಾಲದಲ್ಲಿ ಮುತ್ತುವ ಸೊಳ್ಳೆ (3)
18.ಕನ್ನಡಿಗನಿಗೆ ದೊರೆತ ಟ್ರೈನಿಂಗ್! (3)
19.ಈತ ನಗಿಸಲೆಂದು ಬಂದವ (4)

ಮೇಲಿಂದ ಕೆಳಕ್ಕೆ

1.ಲಾಯಕ್ಕು ಎನ್ನಿಸಿದ್ದೆಲ್ಲಾ ಬರೀ ನಷ್ಟ! (3)
2.ಜಾಗರಣೆ ಮಾಡಲೆಂದೇ ಈ ಬಿಡುವು! (2)
3.ಸಮಿತಿಯಲ್ಲಿರುವ ಹೆಂಡತಿ (2)
4.ತಿಂಗಳ ಕೊನೆಯಲ್ಲಿ ಒಂದಾಗಿ ಸೇರಿಸಿದುದು! (3)
7.ಬಯಲು ಜಾಗದಲ್ಲಿ ನೀಡಿದ ಪ್ರತ್ಯುತ್ತರ (5)
8.ಬ್ರಹ್ಮನ ಕಟ್ಟಳೆಯಿದು (5)
13.ಅಗಿದು ನುರಿಸಿದುದು (3)
15.ಅಂಕಣದಲ್ಲಿ ಕಾಣಿಸಿದ ತೇದಿ (3)
16.ಕುಶಾಗ್ರಮತಿಯ ಬುದ್ಧಿ (2)
17.ಕವನವನ್ನು ಬರೆದವನು (2)



4784ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮನ್ವಂತರ 3.ಪಿಳ್ಳಂಗೋವಿ 5.ತಿಲಕ 7.ಮಿತ್ರ 9.ವನಪಾಲಕ 11.ಸ್ಥಳಪುರಾಣ 13.ತರಿ 16.ಗಾಯಕ 18.ಸನ್ನಿಧಾನ 19.ಸರಿತ್ವತಿ

ಮೇಲಿಂದ ಕೆಳಕ್ಕೆ:
1.ಮರುಭೂಮಿ 2.ರತಿ 3.ಪಿಕ 4.ವಿದ್ವಾಂಸ 6.ಬೆಳ್ಳುಳ್ಳಿ 8.ತ್ರಯಸ್ಥ 10.ಕಡಿತ 12.ರಾಧೇಯ 14.ರಿಯಾಯಿತಿ 15.ಪ್ರಯಾಸ 16.ಗಾನ 17.ಕಸ

ಸುಡೊಕು 5171

2		6					5	
	4	7	5		6	3		2
3	8			2			6	
	2							4
			2	4	7			6
	7					5		
7		9			8		4	
4				3			8	1
	6		4		2	7		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5170 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಗೆಹಲೋತ್ ನೇತೃತ್ವದ ಸಂಪುಟಕ್ಕೆ 12 ಮಂದಿ ಸೇರ್ಪಡೆ: ಮೂವರಿಗೆ ಬಡ್ತಿ, ಮೂವರಿಗೆ ಕೊಕ್

ರಾಜಸ್ಥಾನ: ಪೈಲಟ್ ನಿಷ್ಠರಿಗೆ ಸ್ಥಾನ

ಪ್ರಜಾವಾಣಿ ವಾರ್ತೆ

ಕಾಂಗ್ರೆಸ್ ಮುಖಂಡರಾದ ಮಹೇಶ್ ಜೋಶಿ (ಎಡ), ರಾಮ್‌ಲಾಲ್ ಜಾಟ್ (ಮಧ್ಯ) ಮತ್ತು ಸಚಿನ್ ಪೈಲಟ್ (ಬಲ) ಅವರು ಸಚಿವ ಸಂಪುಟ ವಿಸ್ತರಣೆ ಕಾರ್ಯಕ್ರಮದಲ್ಲಿ ಮಾತುಕತೆಯಲ್ಲಿ ತೊಡಗಿದ ಕ್ಷಣ– ಪಿಟಿಐ ಚಿತ್ರ

ನವದೆಹಲಿ: ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ನೇತೃತ್ವದ ಸಚಿವ ಸಂಪುಟಕ್ಕೆ 12 ಮಂದಿಯನ್ನು ಸೇರಿಸಿಕೊಳ್ಳಲಾಗಿದೆ, ರಾಜ್ಯ ಖಾತೆಯ ಸಚಿವರಾಗಿದ್ದ ಮೂವರಿಗೆ ಸಂಪುಟ ದರ್ಜೆಗೆ ಬಡ್ತಿ ನೀಡಲಾಗಿದೆ ಮತ್ತು ಸಚಿವ ಸಂಪುಟದಲ್ಲಿದ್ದ ಮೂವರನ್ನು ಕೈಬಿಡಲಾಗಿದೆ. ಗೆಹಲೋತ್ ಮತ್ತು ಮಾಜಿ ಉಪಮುಖ್ಯಮಂತ್ರಿ ಸಚಿನ್ ಪೈಲಟ್ ನಡುವೆ ಬದಲಾವಣೆಗಳಿಗೆ ಸಂಬಂಧಿಸಿ ಸಹಮತ ಮೂಡಿದ ಬಳಿಕ ಭಾನುವಾರ ಸಚಿವ ಸಂಪುಟ ವಿಸ್ತರಣೆ ನಡೆಯಿತು.

ಹೊಸದಾಗಿ ಸೇರ್ಪಡೆಯಾದ 12 ಮಂದಿ ಮತ್ತು ಬಡ್ತಿ ಪಡೆದ ಮೂವರಿಗೆ ರಾಜ್ಯಪಾಲ ಕಲ್‌ರಾಜ್ ಮಿಶ್ರಾ ಅವರು ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮಾಣವಚನ ಬೋಧಿಸಿದರು.

ಸೇರ್ಪಡೆಯಾದ 12 ಸಚಿವರಲ್ಲಿ ಐವರು ಪೈಲಟ್ ಅವರ ನಿಷ್ಠರು. 2020ರಲ್ಲಿ ಪೈಲಟ್ ಅವರೊಂದಿಗೆ ಸಂಪುಟದಿಂದ ಕೈಬಿಡಲಾಗಿದ್ದ ವಿಶ್ವೇಂದ್ರ ಸಿಂಗ್ ಮತ್ತು ರಮೇಶ್ ಮೀನಾ ಅವರು ಸಚಿವ ಸಂಪುಟಕ್ಕೆ ಮರಳಿದ್ದಾರೆ. ಗೆಹಲೋತ್ ಅವರ ಪದಚ್ಯುತಿಗೆ ಯತ್ನಿಸಿದ ಕಾರಣಕ್ಕೆ ಪೈಲಟ್ ಮತ್ತು ಅವರ ನಿಷ್ಠರನ್ನು ಸಚಿವ ಸ್ಥಾನದಿಂದ ವಜಾ ಮಾಡಲಾಗಿತ್ತು.

ಗೋವಿಂದ್ ಸಿಂಗ್ ಡೋಟಾಸ್ರ, ಹರೀಶ್ ಚೌಧರಿ ಮತ್ತು ರಘು ಶರ್ಮಾ ಅವರನ್ನು ಸಚಿವ ಸಂಪುಟದಿಂದ ಕೈಬಿಡಲಾಗಿದೆ. 'ಒಬ್ಬ ವ್ಯಕ್ತಿಗೆ ಒಂದು ಹುದ್ದೆ' ಎಂಬ ಪಕ್ಷದ ನಿಯಮದಂತೆ ಇವರನ್ನು ಕೈಬಿಡಲಾಗಿದೆ. ಡೋಟಾಸ್ರ ಅವರು ರಾಜಸ್ಥಾನ ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿದ್ದಾರೆ. ಚೌಧರಿ ಅವರಿಗೆ ಚುನಾವಣೆ ಸಮೀಪಿಸುತ್ತಿರುವ ರಾಜ್ಯವಾದ ಪಂಜಾಬ್‌ನ ಉಸ್ತುವಾರಿ ಹೊಣೆಯನ್ನು ಇತ್ತೀಚೆಗೆ ವಹಿಸಲಾಗಿದೆ. ಉತ್ತರಾಖಂಡ ಚುನಾವಣೆ ಮೇಲೆ ಗಮನ ಕೇಂದ್ರೀಕರಿಸಬೇಕಿರುವ ಕಾರಣ, ಪಂಜಾಬ್ ಉಸ್ತುವಾರಿಯಾಗಿದ್ದ ಹರೀಶ್ ರಾವತ್ ಅವರನ್ನು ಈ ಹೊಣೆಯಿಂದ ಬಿಡುಗಡೆ ಮಾಡಲಾಗಿದೆ. ಗುಜರಾತ್ ಉಸ್ತುವಾರಿಯಾಗಿದ್ದ ರಾಜೀವ್ ಸತಾವ್ ಅವರ ಮರಣದಿಂದಾಗಿ ಆ ಹುದ್ದೆ ತೆರವಾಗಿತ್ತು. ಹಾಗಾಗಿ, ಈ ಹುದ್ದೆಗೆ ಶರ್ಮಾ ಅವರನ್ನು ನೇಮಿಸಲಾಗಿದೆ.

ಸಂಪುಟ ಪುನರ್ ರಚನೆಗೆ ಅವಕಾಶ ಕೊಡುವುದಕ್ಕಾಗಿ ಎಲ್ಲ ಸಚಿವರು ತಮ್ಮ ರಾಜೀನಾಮೆಗಳನ್ನು ಗೆಹಲೋತ್ ಅವರಿಗೆ ಶನಿವಾರವೇ ಸಲ್ಲಿಸಿದ್ದರು. ಕೇಂದ್ರದ ನಾಯಕರ ಜತೆಗೆ ಚರ್ಚಿಸಿದ ಬಳಿಕ, ಮೂವರು ಸಚಿವರ ರಾಜೀನಾಮೆ ಪತ್ರಗಳನ್ನು ಮಾತ್ರ ರಾಜ್ಯಪಾಲರ ಅಂಗೀಕಾರಕ್ಕೆ ಕಳುಹಿಸಲು ಗೆಹಲೋತ್ ನಿರ್ಧರಿಸಿದರು.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಕಾಂಗ್ರೆಸ್ ಮುಖಂಡರಾದ ಪ್ರಿಯಾಂಕಾ ಗಾಂಧಿ ವಾದ್ರಾ, ಕೆ.ಸಿ. ವೇಣುಗೋಪಾಲ್ ಮತ್ತು ಅಜಯ್ ಮಾಕನ್ ಅವರನ್ನು ಗೆಹಲೋತ್ ಮತ್ತು ಪೈಲಟ್ ಅವರು ಪ್ರತ್ಯೇಕವಾಗಿ ಇತ್ತೀಚೆಗೆ ಭೇಟಿಯಾಗಿ ಸಂಪುಟ ಪುನರ್ ರಚನೆಯ ಬಗ್ಗೆ ಚರ್ಚೆ ನಡೆಸಿದ್ದರು.

ಪೈಲಟ್ ಅವರು ಕೆಲವು ಶಾಸಕರನ್ನು ಕಳೆದ ವರ್ಷ ದೆಹಲಿ ಮತ್ತು ಇತರ ಸ್ಥಳಗಳಿಗೆ ಕರೆದೊಯ್ದಿದ್ದರು. ಗೆಹಲೋತ್ ನೇತೃತ್ವದ ಸರ್ಕಾರವನ್ನು ಬಿಜೆಪಿ ನೆರವಿನಿಂದ ಪತನಗೊಳಿಸುವ ಯತ್ನ ಇದು ಎಂದು ಆಗ ಹೇಳಲಾಗಿತ್ತು. ಆದರೆ, ಅತ್ಯಂತ ಚುರುಕಾಗಿ ಕಾರ್ಯನಿರ್ವಹಿಸಿದ್ದ ಗೆಹಲೋತ್, ಸರ್ಕಾರ ಉರುಳದಂತೆ ನೋಡಿಕೊಂಡಿದ್ದರು.

ಬಿಕ್ಕಟ್ಟು ಸುಮಾರು ಒಂದು ತಿಂಗಳು ಮುಂದುವರಿದಿತ್ತು. ಇದರಿಂದಾಗಿ, ಸರ್ಕಾರ ಉರುಳಿಸುವ ಯತ್ನದಲ್ಲಿ ಯಶಸ್ಸು ಸಿಗುವ ಬಗ್ಗೆ ಪೈಲಟ್ ಬೆಂಬಲಕ್ಕಿದ್ದ ಶಾಸಕರಿಗೆ ಅನುಮಾನ ಉಂಟಾಗಿತ್ತು.

ಅಲ್ಪ ಅಪಸ್ವರ

ಸಂಪುಟ ಪುನರ್‌ರಚನೆಯು ಹೆಚ್ಚಿನ ಅತೃಪ್ತಿ ಅಥವಾ ಪ್ರತಿಭಟನೆಗೆ ಕಾರಣವಾಗಿಲ್ಲ. ಟೀಕಾರಾಂ ಜಲ್ಲಿ ಅವರಿಗೆ ರಾಜ್ಯ ದರ್ಜೆಯಿಂದ ಸಂಪುಟ ದರ್ಜೆಗೆ ಬಡ್ತಿ ನೀಡಿದ್ದಕ್ಕೆ ಕಾಂಗ್ರೆಸ್ ಶಾಸಕ ಜೊಹಾರಿ ಲಾಲ್ ಮೀನಾ ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಅವರನ್ನು ರಾಜ್ಯ ದರ್ಜೆಯ ಸಚಿವ ಸ್ಥಾನದಿಂದಲೂ ಕೈಬಿಡಬೇಕು ಎಂದು ಪಕ್ಷದ ನಾಯಕರನ್ನು ಕೋರಿದ್ದೆ. ಅದರ ಬದಲಿಗೆ ಅವರಿಗೆ ಬಡ್ತಿ ನೀಡಲಾಗಿದೆ' ಎಂದು ಅವರು ಹೇಳಿದ್ದಾರೆ.

ಕೆಟ್ಟ ಹೆಸರು ಇದ್ದವರನ್ನು ಕೈಬಿಟ್ಟಿದ್ದರೆ ಸಚಿವ ಸಂಪುಟವು ಇನ್ನಷ್ಟು ಚೆನ್ನಾಗಿರುತ್ತಿತ್ತು. 'ಒಟ್ಟಾರೆಯಾಗಿ, ಸಚಿವ ಸಂಪುಟವು ಉತ್ತಮ ಸಂದೇಶವನ್ನೇನೂ ನೀಡುತ್ತಿಲ್ಲ. ಮಹಿಳೆಯರಿಗೆ ಶೇ 33ರಷ್ಟು ಪ್ರಾತಿನಿಧ್ಯ ಸಿಕ್ಕಿಲ್ಲ' ಎಂದು ಶಾಸಕಿ ಶಫಿಯಾ ಝುಬೈರ್ ಹೇಳಿದ್ದಾರೆ.

ಪಕ್ಷೇತರರಿಗಿಲ್ಲ ಮಣೆ

13 ಪಕ್ಷೇತರ ಶಾಸಕರ ಪೈಕಿ 12 ಮಂದಿ ಸರ್ಕಾರವನ್ನು ಬೆಂಬಲಿಸಿದ್ದಾರೆ. ಆದರೆ, ಅವರಲ್ಲಿ ಯಾರೊಬ್ಬರಿಗೂ ಸಚಿವ ಸ್ಥಾನ ಸಿಕ್ಕಿಲ್ಲ. ಬಿಎಸ್‌ಪಿ ತೊರೆದು ಕಾಂಗ್ರೆಸ್ ಸೇರಿದ್ದ ಆರು ಶಾಸಕರ ಪೈಕಿ ರಾಜೇಂದ್ರ ಗುಧ್ಧ ಅವರನ್ನು ರಾಜ್ಯ ಸಚಿವರನ್ನಾಗಿ ಮಾಡಲಾಗಿದೆ. 200 ಸದಸ್ಯರ ವಿಧಾನಸಭೆಯಲ್ಲಿ 108 ಕಾಂಗ್ರೆಸ್ ಶಾಸಕರಿದ್ದಾರೆ.

ಪಕ್ಷೇತರ ಶಾಸಕರು ಮತ್ತು ಸಚಿವ ಸ್ಥಾನ ಆಕಾಂಕ್ಷಿಗಳಾಗಿದ್ದ ಕಾಂಗ್ರೆಸ್ ಶಾಸಕರಿಗೆ ರಾಜಕೀಯ ನೇಮಕಗಳ ಮೂಲಕ ಸ್ಥಾನ ಒದಗಿಸಲಾಗುವುದು. 15 ಮಂದಿ ಸಂಸದೀಯ ಕಾರ್ಯದರ್ಶಿಗಳ ನೇಮಕ ಆಗಲಿದೆ. ಹಾಗೆಯೇ, ಮುಖ್ಯಮಂತ್ರಿಯ ಸಲಹೆಗಾರರನ್ನಾಗಿ ಏಳು ಮಂದಿಯನ್ನು ನೇಮಿಸಲಾಗುವುದು ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಸಮೀರ್ ವಾಂಖೆಡೆ ವಿರುದ್ಧ ಬಾಂಬೆ ಹೈಕೋರ್ಟ್‌ಗೆ ಅರ್ಜಿ

ಮುಂಬೈ: ನಕಲಿ ಜಾತಿ ಪ್ರಮಾಣಪತ್ರ ಸಲ್ಲಿಸಿರುವ ಕಾರಣಕ್ಕೆ ಎನ್‌ಸಿಬಿ ಮುಂಬೈ ವಲಯದ ನಿರ್ದೇಶಕ ಸಮೀರ್ ವಾಂಖೆಡೆ ಅವರನ್ನು ಕೇಂದ್ರ ಸೇವೆಯಿಂದ ವಜಾಗೊಳಿಸಬೇಕು ಎಂದು ಕೋರಿ ಬಾಂಬೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಜಾತಿ ಪ್ರಮಾಣಪತ್ರ ಪರಿಶೀಲನಾ ಸಮಿತಿಯು ವಾಂಖೆಡೆ ಅವರ ಜಾತಿ ಮತ್ತು ಧರ್ಮದ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಸಾಮಾಜಿಕ ಕಾರ್ಯಕರ್ತ ಅಶೋಕ ಕಾಂಬ್ಳೆ ಅವರು ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಯಲ್ಲಿ ಕೋರಿದ್ದಾರೆ. ಹಿರಿಯ ವಕೀಲ ನಿತಿನ್ ಸತ್ಪುಟೆ ಅವರು ಕಾಂಬ್ಳೆ ಪರವಾಗಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯಲ್ಲಿ ಯುಪಿಎಸ್‌ಸಿ ಮತ್ತು ಕೇಂದ್ರ ಸರ್ಕಾರವನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ವಾಂಖೆಡೆ ಅವರು ತಾನು ಮುಸ್ಲಿಂ ಎನ್ನುವ ಅಂಶವನ್ನು ಮರೆಮಾಚುವ ಮೂಲಕ ಕೆಲಸ ಗಿಟ್ಟಿಸಿಕೊಂಡಿದ್ದಾರೆ. ತಾವು ಹಿಂದೂ ಮತ್ತು ಪರಿಶಿಷ್ಟ ಜಾತಿಗೆ ಸೇರಿದವರು ಎಂದೂ ಹೇಳಿದ್ದಾರೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಬಿಜೆಪಿ: ಪದಾಧಿಕಾರಿಗಳ ನೇಮಕ

ನವದೆಹಲಿ/ಮುಂಬೈ (ಪಿಟಿಐ): ಮಹಾರಾಷ್ಟ್ರದ ಬಿಜೆಪಿ ಮುಖಂಡ ವಿನೋದ್ ತಾವ್ಡೆ ಅವರನ್ನು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ರುತುರಾಜ್ ಸಿನ್ಹ, ಆಶಾ ಲಖ್ರಾ ಅವರನ್ನು ರಾಷ್ಟ್ರೀಯ ಕಾರ್ಯದರ್ಶಿಯನ್ನಾಗಿ ಭಾನುವಾರ ನೇಮಕ ಮಾಡಲಾಗಿದೆ.

ಪಶ್ಚಿಮ ಬಂಗಾಳದ ಮಾಜಿ ಐಪಿಎಸ್ ಅಧಿಕಾರಿ ಭಾರತಿ ಘೋಷ್ ಮತ್ತು ಶಹಜಾದ್ ಪೂನಾವಾಲಾ ಅವರನ್ನು ಪಕ್ಷದ ನೂತನ ವಕ್ತಾರರನ್ನಾಗಿ ನೇಮಿಸಲಾಗಿದೆ.

ರಾಜಕೀಯವಾಗಿ ನಿರ್ಣಾಯಕವೆನಿಸಿರುವ ಉತ್ತರ ಪ್ರದೇಶ, ಪಂಜಾಬ್, ಉತ್ತರಾಖಂಡ ಸೇರಿದಂತೆ ಐದು ರಾಜ್ಯಗಳ ವಿಧಾನಸಭೆ ಚುನಾವಣೆಗೂ ಮುನ್ನ ನೇಮಕ ಮಾಡಲಾಗಿದೆ.

ಇದರಿಂದ ಚುನಾವಣೆ ಎದುರಿಸಲು ಪಕ್ಷಕ್ಕೆ ಮತ್ತಷ್ಟು ಬಲ ಬಲಬಂದಂತಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

'ಸಂಯಮ ಮತ್ತು ತಾಳ್ಮೆ ಇದ್ದರೆ ರಾಜಕೀಯ ನಾಯಕರು ಉತ್ತಮ ಅವಕಾಶ ಪಡೆಯಬಹುದು ಎಂಬುದಕ್ಕೆ ಇದು ಉದಾಹರಣೆ' ಎಂದು ತಾವ್ಡೆ ಹೇಳಿದ್ದಾರೆ.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಈ ನೇಮಕ ಮಾಡಿದ್ದಾರೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರು ಅಧಿಕೃತ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಮಸೂದೆಗೆ ಬುಧವಾರ ಒಪ್ಪಿಗೆ?

ಒಂದನೇ ಪುಟದಿಂದ

ಆದರೆ, ಗುರು ನಾನಕ್ ಅವರ ಜನ್ಮದಿನದಂದು, ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಪ್ರಧಾನಿ ಘೋಷಿಸಿದ್ದರು.

ಸಂಪುಟದ ಸಹೋದ್ಯೋಗಿಗಳ ಜತೆಗೆ ಕೂಡ ಚರ್ಚೆ ನಡೆಸದೇ ಕಾಯ್ದೆಗಳನ್ನು ರಚಿಸಲಾಗುತ್ತಿದೆ ಮತ್ತು ಅವುಗಳನ್ನು ಹಿಂದಕ್ಕೆ ಪಡೆಯಲಾಗುತ್ತಿದೆ ಎಂದು ಕಾಂಗ್ರೆಸ್ ನಾಯಕ ಪಿ. ಚಿದಂಬರಂ ಹೇಳಿದ್ದಾರೆ.

'ಸಚಿವ ಸಂಪುಟದ ಸಭೆಯನ್ನೇ ನಡೆಸದೇ ಪ್ರಧಾನಿಯವರು ಘೋಷಣೆ ಮಾಡಿದ್ದನ್ನು ನೀವು ಗಮನಿಸಿದ್ದೀರಾ? ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಮಾತ್ರ ಸಚಿವ ಸಂಪುಟದ ಒಪ್ಪಿಗೆಯೂ ಇಲ್ಲದೆ ಮಸೂದೆಗಳನ್ನು ರೂಪಿಸುವ ಮತ್ತು ಅವುಗಳನ್ನು ಹಿಂದಕ್ಕೆ ಪಡೆಯುವ ಪ್ರಕ್ರಿಯೆ ಸಾಧ್ಯ' ಎಂದು ಅವರು ಹೇಳಿದ್ದಾರೆ.

ಮೂರೂ ಕಾಯ್ದೆಗಳನ್ನು 2020ರ ಜೂನ್‌ನಲ್ಲಿ ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲಾಗಿತ್ತು. ಬಳಿಕ, ವಿರೋಧ ಪಕ್ಷಗಳ ತೀವ್ರ ವಿರೋಧದ ನಡುವೆಯೂ ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕಾರ ಮಾಡಲಾಗಿತ್ತು.

ಪ್ರಧಾನಿ ಅವರ ಸುಳ್ಳು ಭಾಷಣಗಳಿಂದ ಜನರು ಕಷ್ಟ ಅನುಭವಿಸಿದ್ದಾರೆ. ಕೃಷಿ ಕಾನೂನುಗಳನ್ನು ಹಿಂಪಡೆಯಲಾಗುವುದು ಎಂಬ ಘೋಷಣೆ ನಂಬಲು ಜನ ತಯಾರಿಲ್ಲ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ರೈತರ ಪ್ರಮುಖ ಬೇಡಿಕೆಗಳು, ಲಖಿಂಪುರ ಖೇರಿ ಪ್ರಕರಣದ ವಿಸ್ತೃತ ಚರ್ಚೆ

ಎಂಎಸ್‌ಪಿಯತ್ತ ರೈತ ಪಂಚಾಯಿತಿ ಚಿತ್ತ

ಪ್ರಜಾವಾಣಿ ವಾರ್ತೆ

ಲಖನೌ: ಇಲ್ಲಿ ಸೋಮವಾರ ನಡೆಯಲಿರುವ ರೈತ ಮಹಾಪಂಚಾಯಿತಿಯಲ್ಲಿ ಕನಿಷ್ಠ ಬೆಂಬಲ ಬೆಲೆ ಖಾತರಿ, ವರ್ಷವಿಡೀ ನಡೆದ ರೈತ ಪ್ರತಿಭಟನೆಯಲ್ಲಿ ಮೃತಪಟ್ಟ ರೈತರ ಕುಟುಂಬದವರಿಗೆ ಪರಿಹಾರ, ರೈತರ ವಿರುದ್ಧದ ಪ್ರಕರಣ ಹಿಂತೆಗೆದುಕೊಳ್ಳಲು ಆಗ್ರಹಿಸುವ ಪ್ರಮುಖ ವಿಷಯಗಳು ಚರ್ಚೆಗೆ ಬರಲಿವೆ.

ಮಹಾ ಪಂಚಾಯಿತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸುವಂತೆ ಕರೆ ನೀಡಿರುವ ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಮುಖಂಡ ರಾಕೇಶ್ ಟಿಕಾಯತ್, ಕನಿಷ್ಠ ಬೆಂಬಲ ಬೆಲೆ, ರೈತರಿಗೆ ಪರಿಹಾರ ಹಾಗೂ ರೈತರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ಹಿಂದೆಗೆದುಕೊಳ್ಳುವ ಸಂಬಂಧ ಚರ್ಚೆ ನಡೆಸಲಾಗುವುದು ಎಂದಿದ್ದಾರೆ.

ಎನ್‌ಡಿಎ ಸರ್ಕಾರ ಪ್ರಚುರಪಡಿಸಿದ್ದ ಕೃಷಿ ಸುಧಾರಣೆಗಳೆಲ್ಲ ಸುಳ್ಳಾಗಿದ್ದವು ಮತ್ತು ಯಾವುದೇ ತೆರನಾಗಿಯೂ ರೈತರಿಗೆ ಪ್ರಯೋಜನಕಾರಿಯಾಗುವಂತೆ ಇರಲಿಲ್ಲ ಎಂದು ಅವರು ಹೇಳಿದರು.

ಪಂಜಾಬ್, ಹರಿಯಾಣ, ಪಶ್ಚಿಮ ಉತ್ತರ ಪ್ರದೇಶ ಭಾಗ ಸೇರಿದಂತೆ ದೇಶದ ವಿವಿಧೆಡೆಯಿಂದ ಕೃಷಿಕರು ಮಹಾ ಪಂಚಾಯಿತಿಯಲ್ಲಿ ಭಾಗವಹಿಸುತ್ತಿದ್ದಾರೆ. ಈ ಬೃಹತ್ ಸಮಾವೇಶದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ರೈತರು ಸೇರುವ ನಿರೀಕ್ಷೆ ಇದೆ ಎಂದು ಬಿಕೆಯು ಸ್ಥಳೀಯ ಮುಖಂಡರೊಬ್ಬರು ತಿಳಿಸಿದರು.

ಲಖಿಂಪುರ ಖೇರಿಯಲ್ಲಿನ ಪ್ರತಿಭಟನೆ–ಹಿಂಸಾಚಾರ ಪ್ರಕರಣದಲ್ಲಿ ಆರೋಪಿಯಾಗಿರುವ ಆಶಿಶ್ ಮಿಶ್ರಾ ತಂದೆ, ಕೇಂದ್ರ ಸಚಿವ ಅಜಯ್ ಮಿಶ್ರಾ ಇನ್ನೂ ಸಚಿವರಾಗಿಯೇ ಮುಂದುವರಿದಿದ್ದಾರೆ. ಈ ಬಗ್ಗೆಯೂ ಮಹಾ ಪಂಚಾಯಿತಿಯಲ್ಲಿ ಚರ್ಚೆಯಾಗಲಿದೆ ಎಂದೂ ಅವರು ಹೇಳಿದರು.

ತಮ್ಮ ಹೋರಾಟದಲ್ಲಿ ರೈತರು ರಾಜಕೀಯ ಪಕ್ಷಗಳ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿಲ್ಲ ಹಾಗೂ ತಮ್ಮದು ರಾಜಕೀಯಕ್ಕೆ ಹೊರತಾದ ಹೋರಾಟ ಎಂದು ಹೇಳಿದ್ದಾರೆ. ಆದರೆ, ರೈತರ ಈ ಹೋರಾಟಕ್ಕೆ ವಿರೋಧ ಪಕ್ಷಗಳು ಸಂಪೂರ್ಣ ಬೆಂಬಲ ನೀಡಿದ್ದು, ಅವರು ಆಯೋಜಿಸುವ ಮಹಾ ಪಂಚಾಯಿತಿಗಳಲ್ಲಿ ಪ್ರೇಕ್ಷಕರಾಗಿಯಷ್ಟೇ ಭಾಗವಹಿಸಿದ್ದಾರೆ.

ಮಹಾ ಪಂಚಾಯಿತಿ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿರುವ ಇಲ್ಲಿನ ಬಿಜೆಪಿ ಮುಖಂಡರು, 'ಕೃಷಿ ಕಾಯ್ದೆಗಳ ಹಿಂದಕ್ಕೆ ಪಡೆಯಬೇಕು ಎಂಬ ರೈತರ ಪ್ರಮುಖ ಬೇಡಿಕೆಗೆ ಸಮ್ಮತಿಸಲಾಗಿದೆ. ಅದಾದ ಮೇಲೂ ಪ್ರತಿಭಟನೆ ಮುಂದುವರಿಸುವುದು ಸಮರ್ಥನೀಯವಲ್ಲ' ಎಂದು ಹೇಳಿದರು.

ಚುನಾವಣೆ ಬಳಿಕ ಕೃಷಿ ಕಾನೂನು ಜಾರಿ: ಎಸ್‌ಪಿ ಆತಂಕ

ಲಖನೌ (ಪಿಟಿಐ): 2022ರ ವಿಧಾನಸಭೆ ಚುನಾವಣೆಗಳು ನಡೆದ ಬಳಿಕ, ಮೂರು ಕೃಷಿ ಕಾಯ್ದೆಗಳನ್ನು ಸರ್ಕಾರ ಪುನಃ ಜಾರಿ ಮಾಡುತ್ತದೆ ಎಂಬ ಆತಂಕವನ್ನು ಸಮಾಜವಾದಿ ಪಕ್ಷ ಭಾನುವಾರ ವ್ಯಕ್ತಪಡಿಸಿದೆ.

ರಾಜಸ್ಥಾನದ ರಾಜ್ಯಪಾಲ ಕಲ್‌ರಾಜ್ ಮಿಶ್ರಾ ಮತ್ತು ಬಿಜೆಪಿ ಸಂಸದ ಸಾಕ್ಷಿ ಮಹಾರಾಜ್ ಅವರು ಅಗತ್ಯ ಬಂದರೆ ಕೃಷಿ ಕಾಯ್ದೆಗಳನ್ನು ಮರಳಿ ಜಾರಿ ಮಾಡಲಾಗುವುದು ಎಂಬರ್ಥದಲ್ಲಿ ಶನಿವಾರವಷ್ಟೇ ಮಾತನಾಡಿದ್ದರು. ಈ ಹಿನ್ನೆಲೆಯಲ್ಲಿ ಸಮಾಜವಾದಿ ಪಕ್ಷ ಅನುಮಾನ ವ್ಯಕ್ತಪಡಿಸಿದೆ.

'ಅವರ ಹೃದಯ ಶುದ್ಧವಾಗಿಲ್ಲ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಚುನಾವಣೆಗಳು ಮುಗಿದ ಬಳಿಕ ಅವರು ಕೃಷಿ ಕಾನೂನುಗಳನ್ನು ಪುನಃ ಜಾರಿ ಮಾಡುತ್ತಾರೆ. ಸಾಂವಿಧಾನಿಕ ಸ್ಥಾನಗಳಲ್ಲಿ ಇರುವ ಸಾಕ್ಷಿ ಮಹಾರಾಜ್ ಮತ್ತು ಕಲ್‌ರಾಜ್ ಮಿಶ್ರಾ ಅವರೇ ಕೃಷಿ ಕಾನೂನುಗಳನ್ನು ಪುನಃ ಜಾರಿ ಮಾಡಬಹುದು ಎಂದು ಹೇಳಿದ್ದಾರೆ' ಎಂದು ಎಸ್‌ಪಿ ಟ್ವೀಟ್ ಮಾಡಿದೆ.

'ರೈತರ ಬಳಿ ಹುಸಿ ಕ್ಷಮೆ ಕೇಳುತ್ತಿರುವವರ ಸತ್ಯ ಇದು. 2022ರ ವೇಳೆಗೆ ರೈತರು ಬದಲಾವಣೆ ತರುತ್ತಾರೆ' ಎಂದು ಎಸ್‌ಪಿ ಹೇಳಿದೆ.

ಮೋದಿ ಅವರು ಯೋಗಿ ಆದಿತ್ಯನಾಥ ಅವರ ಹೆಗಲ ಮೇಲೆ ಕೈ ಇರಿಸಿರುವುದು —ಪಿಟಿಐ ಚಿತ್ರ

ಯೋಗಿ ಭುಜದ ಮೇಲೆ ಕೈಇಟ್ಟು ಮೋದಿ ಹೆಜ್ಜೆ

ಲಖನೌ: ಪ್ರಧಾನಿ ನರೇಂದ್ರ ಮೋದಿ ತಮ್ಮ ಹೆಗಲ ಮೇಲೆ ಕೈಇಟ್ಟು ಹೆಜ್ಜೆ ಹಾಕುತ್ತಿರುವ ಚಿತ್ರವನ್ನು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಟ್ವಿಟರ್‌ನಲ್ಲಿ ಭಾನುವಾರ ಹಂಚಿಕೊಂಡಿದ್ದಾರೆ.

ಆದಿತ್ಯನಾಥ ಜೊತೆಗೆ ಹೆಜ್ಜೆ ಹಾಕುತ್ತ ಪ್ರಧಾನಿಯು ಗಹನ ಚರ್ಚೆಯಲ್ಲಿ ತೊಡಗಿರುವಂತೆ ಈ ಚಿತ್ರವಿದೆ.

ತಮ್ಮ ಹಾಗೂ ಪ್ರಧಾನಿ ಮೋದಿ ನಡುವೆ ವೈಮನಸ್ಯ ಉಂಟಾಗಿದೆ ಎಂಬ ಊಹಾಪೋಹಗಳಿಗೆ ಇತಿಶ್ರೀ ಹಾಡುವ ಪ್ರಯತ್ನವಾಗಿ, ಅವರು ಈ ಚಿತ್ರವನ್ನು ಹಂಚಿಕೊಂಡಿದ್ದಾರೆ ಎನ್ನಲಾಗಿದೆ.

ಚಿತ್ರದೊಂದಿಗೆ, 'ಹಮ್ ನಿಕಲ್ ಪಢೇ ಹೈ ಪ್ರಣ ಕರ್‌ಕೆ...ಅಪನಾ ತನ್–ಮನ್ ಅರ್ಪಣ್ ಕರ್‌ಕೆ...ಅಂಬರ್ ಸೇ ಊಂಚಾ ಜಾನಾ ಹೈ... ಏಕ್ ಭಾರತ್ ನಯಾ ಬನಾನಾ ಹೈ' (ಆಕಾಶವನ್ನೂ ಮೀರಿ ನಿಲ್ಲುವ ಹೊಸ ಬೆಳಕಿನ ಹೊಸ ಭಾರತ ಕಟ್ಟಲು ನಮ್ಮೆಲ್ಲವನ್ನೂ ನಾವು ಸಮರ್ಪಿಸಿದ್ದೇವೆ) ಎಂಬ ಸಾಲುಗಳನ್ನೂ ಹಂಚಿಕೊಂಡಿದ್ದಾರೆ.

ಡಿಜಿಪಿ–ಐಜಿಪಿಗಳ ಸಮಾವೇಶದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಕ್ಕಾಗಿ ಮೋದಿ ಹಾಗೂ ಆದಿತ್ಯನಾಥ ಇಬ್ಬರೂ ಇಲ್ಲಿನ ಪೊಲೀಸ್ ಕೇಂದ್ರ ಕಚೇರಿಯಲ್ಲಿದ್ದರು. ಸಮಾವೇಶವು ಭಾನುವಾರ ಮುಕ್ತಾಯಗೊಂಡಿತು.

'ಮೋದಿ ಅವರ ಸಂಪೂರ್ಣ ಬೆಂಬಲ ತಮಗಿದೆ ಎಂದು, ಪಕ್ಷದೊಳಗೇ ಇರುವ ಆದಿತ್ಯನಾಥ ವಿರೋಧಿಗಳಿಗೆ ನೀಡಿದ ಸಂದೇಶವಿದು' ಎನ್ನುತ್ತಾರೆ ಲಖನೌದ ರಾಜಕೀಯ ವಿಶ್ಲೇಷಕರೊಬ್ಬರು.

ಆದರೆ, ವಿರೋಧ ಪಕ್ಷಗಳು ಮಾತ್ರ ಇದನ್ನು 'ರಾಜಕೀಯ ಅನಿವಾರ್ಯ' ಎಂದು ಹೇಳಿವೆ.

'ರಾಜಕೀಯಕ್ಕಾಗಿ ಕೆಲವೊಮ್ಮೆ ಮನಸ್ಸಿಲ್ಲದಿದ್ದರೂ ಇನ್ನೊಬ್ಬರ ಹೆಗಲ ಮೇಲೆ ಕೈಇಟ್ಟು ಅವರೊಂದಿಗೆ ನಡೆಯಬೇಕಾಗುತ್ತದೆ' ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಹೇಳಿದ್ದಾರೆ.

ಮಧ್ಯಪ್ರದೇಶ: ಕೂಲಿ ಕೇಳಿದ್ದಕ್ಕೆ ಕೈ ಕತ್ತರಿಸಿದ ಮಾಲೀಕ, ಮೂವರ ಬಂಧನ

ರೇವಾ, ಮಧ್ಯಪ್ರದೇಶ (ಪಿಟಿಐ): ಮಧ್ಯಪ್ರದೇಶದ ರೇವಾ ಜಿಲ್ಲೆಯಲ್ಲಿ ಕಾರ್ಮಿಕನೊಬ್ಬ ಬಾಕಿ ಕೂಲಿಯನ್ನು ಕೇಳಿದ್ದಕ್ಕೆ ಮಾಲೀಕ ಆತನ ಕೈ ಕತ್ತರಿಸಿದ್ದಾರೆ. ಈ ಸಂಬಂಧ ಮೂವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ಹೇಳಿದ್ದಾರೆ.

ರೇವಾ ಜಿಲ್ಲಾ ಕೇಂದ್ರದಿಂದ 40 ಕಿ.ಮೀ. ದೂರದಲ್ಲಿರುವ ಸಿರ್ಮೌರ್ ಪೊಲೀಸ್ ಠಾಣಾ ವ್ಯಾಪ್ತಿಯ ಡೊಲ್ಮಾವು ಗ್ರಾಮದಲ್ಲಿ ಶನಿವಾರ ನಡೆದಿದೆ ಎಂದು ಪೊಲೀಸರು ಹೇಳಿದರು.

ಶಾಲೆಯಿಂದ 300 ಅಡಿ ಸುತ್ತ ಈ ವ್ಯಾಪ್ತಿ

ಬೆಂಗಳೂರಿನ ಸೇಂಟ್ ಜೋಸೆಫ್ಸ್ ಹೈಸ್ಕೂಲ್, ಚಾಮರಾಜಪೇಟೆಯಲ್ಲಿರುವ ಕೋಟೆ ಹೈಸ್ಕೂಲ್‌ನಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ

'ಸುರಕ್ಷಿತ ಶಾಲಾ ವಲಯ': ಬೆಂಗಳೂರು ಸೇರಿ 5 ನಗರಗಳಲ್ಲಿ ಪ್ರಯೋಗ

ನವದೆಹಲಿ: ಶಾಲೆಗಳ ಸಮೀಪದಲ್ಲಿರುವ ರಸ್ತೆಗಳಲ್ಲಿ ಸುರಕ್ಷತಾ ನಿಯಮಗಳನ್ನು ಮತ್ತಷ್ಟು ಕಟ್ಟುನಿಟ್ಟಾಗಿ ಜಾರಿಗೊಳಿಸಲು 'ಸುರಕ್ಷಿತ ಶಾಲಾ ವಲಯ'ಗಳನ್ನು ಸ್ಥಾಪಿಸಲಾಗಿದೆ. ಈ ಪರಿಕಲ್ಪನೆಯನ್ನು ಬೆಂಗಳೂರು ಸೇರಿದಂತೆ ದೇಶದ ಐದು ನಗರಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುತ್ತಿದೆ.

ಬೆಂಗಳೂರಿನ ಸೇಂಟ್ ಜೋಸೆಫ್ ಹೈಸ್ಕೂಲ್, ಚಾಮರಾಜಪೇಟೆಯಲ್ಲಿರುವ 116 ವರ್ಷಗಳ ಹಳೆಯ ಕೋಟೆ ಹೈಸ್ಕೂಲ್ ಈ ಯೋಜನೆಯ ಪ್ರಾಯೋಗಿಕ ಅನುಷ್ಠಾನಕ್ಕೆ ಆಯ್ಕೆಯಾಗಿವೆ.



ಬಹುರಾಷ್ಟ್ರೀಯ ಕಂಪನಿಯಾದ '3ಎಂ ಇಂಡಿಯಾ'ದ ಕಾರ್ಯಕ್ರಮವಾದ 'ಯಂಗ್ ಚೇಂಜ್ ಏಜೆಂಟ್ಸ್ ಫಾರ್ ರೋಡ್ ಸೇಫ್ಟಿ' ಹಾಗೂ 'ಕನ್ಸರ್ನ್ಸ್ ಫಾರ್ ರೋಡ್ ಆ್ಯಂಡ್ ಪೆಡೆಸ್ಟ್ರಿಯನ್ ಸೇಫ್ಟಿ' ಸಹಯೋಗದಲ್ಲಿ ಬೆಂಗಳೂರಿನ ಸೇಂಟ್ ಜೋಸೆಫ್ಸ್ ಹೈಸ್ಕೂಲ್‌ನಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

'ಸುರಕ್ಷಿತ ಶಾಲಾ ವಲಯ' ಎಂದು ಗುರುತಿಸಲಾದ ಪ್ರದೇಶಗಳಲ್ಲಿ ಶಾಲೆಗಳ ಸಮೀಪ ಇರುವ ರಸ್ತೆಗಳಲ್ಲಿ ಸುರಕ್ಷಿತ ಸಂಚಾರಕ್ಕಾಗಿ ಹೆಚ್ಚುವರಿ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಅದರಲ್ಲೂ ಶಾಲಾ ಮಕ್ಕಳು, ಸಿಬ್ಬಂದಿ ಹಾಗೂ ಪಾಲಕರ ಸಂಚಾರ, ಶಾಲಾ ವಾಹನಗಳ ಓಡಾಟ ಈ ರಸ್ತೆಗಳಲ್ಲಿ ಹೆಚ್ಚಾಗಿರುವ ಕಾರಣ ಇಂತಹ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಶಾಲೆಗಳಿಗೆ ಸಂಬಂಧಿಸಿದ ಆಸ್ತಿಯಿಂದ 300 ಅಡಿ ದೂರದವರೆಗೆ ಅಥವಾ ಶಾಲೆಯಿಂದ 300 ಅಡಿ ದೂರದ ವರೆಗೆ ಈ ವಲಯ ವ್ಯಾಪ್ತಿ ಹೊಂದಿರುತ್ತದೆ.

ಈ ವಲಯದಲ್ಲಿ ಸಂಚರಿಸುವ ವಾಹನಗಳಿಗೆ ನಿಗದಿ ಮಾಡಲಾಗಿರುವ ವೇಗದ ಮಿತಿಯನ್ನು ಸೂಚಿಸುವ ಫಲಕಗಳನ್ನು ಶಾಲಾ ವಲಯ ಆರಂಭಕ್ಕೂ ಮುನ್ನವೇ ಅಳವಡಿಕೆ ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ದೆಹಲಿಯ ಮಂದಿರ ಮಾರ್ಗದಲ್ಲಿರುವ ಎನ್.ಪಿ.ಬಾಯ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ಪುಣೆಯ ಜ್ಞಾನ ಪ್ರಬೋಧಿನಿ ಪಾಠಶಾಲಾ, ಗುರುಗ್ರಾಮದ ಸಿಲ್ವರ್ ಕ್ರೆಸ್ಟ್ ಸ್ಕೂಲ್ ಹಾಗೂ ಮುಂಬೈನ ಕ್ರೈಸ್ಟ್ ಚರ್ಚ್ ಸ್ಕೂಲ್ ಹಾಗೂ ಸೇಂಟ್ ಆಗ್ನೇಸ್ ಹೈಸ್ಕೂಲ್ ಸಹ ಆಯ್ಕೆಯಾಗಿವೆ.

'ಡ್ರಗ್ಸ್ ಪ್ರಕರಣ ಬಾಲಿವುಡ್ ಗುರಿ'

ಮುಂಬೈ: ಬಾಲಿವುಡ್ ತಾರೆ ಶಾರುಕ್ ಖಾನ್ ಮಗ ಆರ್ಯನ್ ಖಾನ್‌ಗೆ ಡ್ರಗ್ಸ್ ಪ್ರಕರಣದಲ್ಲಿ ಬಾಂಬೆ ಹೈಕೋರ್ಟ್ ಜಾಮೀನು ನೀಡಿದ ಬಳಿಕ ಈ ಪ್ರಕರಣ ಕುರಿತು ಬಾಲಿವುಡ್ ಮಾತನಾಡಲು ಆರಂಭಿಸಿದೆ. ಚಿತ್ರರಂಗವನ್ನು ಹೇಗೆ ಗುರಿ ಮಾಡಲಾಗುತ್ತಿದೆ ಎಂದು ಬಾಲಿವುಡ್ ಮಂದಿ ಮಾತನಾಡಿದ್ದಾರೆ.

ಕಾಂಗ್ರೆಸ್ ಹಿರಿಯ ನಾಯಕ ಮತ್ತು ನಟ ರಾಜ್ ಬಬ್ಬರ್ ಈ ಕುರಿತು ಪ್ರತಿಕ್ರಿಯಿಸಿದ್ದಾರೆ. 'ಆರ್ಯನ್ ಖಾನ್ ಪ್ರಕರಣದಲ್ಲಿ ಸಾಕ್ಷಿಗಳು ಇಲ್ಲ ಎಂದು ಬಾಂಬೆ ಹೈಕೋರ್ಟ್ ಹೇಳಿತು. ಆ ವೇಳೆ ನಾನು, ಹಡಗಿನ ಪ್ರಕರಣ ಸೇರಿ ಸಿನಿಮಾ ಮಂದಿಯ ಮಾನಹಾನಿ ಮಾಡಲು ಪ್ರಸಾರ ಮಾಡಿದ್ದ ಸುದ್ದಿಗಳು ಮತ್ತು ವಿಡಿಯೊಗಳನ್ನು ಪುನಃ ನೋಡಿದೆ. ಅವುಗಳಲ್ಲಿ ವೃತ್ತಿಜೀವನಕ್ಕೆ ಪೆಟ್ಟು, ಮುಖದಲ್ಲಿ ಬೇಸರದ ಛಾಯೆ, ಶಾರುಕ್ ಖಾನ್‌ರ ಮೌನ ಇತ್ತು. ಜನ ಎಲ್ಲವನ್ನೂ ಅರ್ಥ ಮಾಡಿಕೊಳ್ಳುತ್ತಾರೆ' ಎಂದು ಬಬ್ಬರ್ ಹೇಳಿದ್ದಾರೆ.

'ಆರ್ಯನ್ ಖಾನ್ ಮತ್ತು ಇತರರ ವಿರುದ್ಧದ ಡ್ರಗ್ಸ್ ಮೊಕದ್ದಮೆಯನ್ನು ಹೆಚ್ಚು ಅತಿರಂಜಕಗೊಳಿಸಲಾಗಿದೆ ಎಂದು ಬಾಂಬೆ ಹೈಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಆತ 25 ದಿನಗಳ ಕಾಲ ಅನ್ಯಾಯವಾಗಿ ಕಷ್ಟ ಅನುಭವಿಸಿದ. ಆರೋಪಿಯಿಂದ ಸುಲಿಗೆ ಮಾಡಲು ಸಂಚು ರೂಪಿಸಲಾಗಿತ್ತೇ ಎಂಬ ಅನುಮಾನಗಳು ಇದರಿಂದ ಹೆಚ್ಚಾಗುತ್ತಿವೆ' ಎಂದು ಬಿಜೆಪಿ ರಾಜ್ಯಸಭೆ ಸದಸ್ಯ ಮತ್ತು ವಕೀಲ ಮಹೇಶ್ ಜೇಠ್ಮಲಾನಿ ಟ್ವೀಟ್ ಮಾಡಿದ್ದಾರೆ.

ಮೂವರು ನಾಗರಿಕರ ಹತ್ಯೆ ಖಂಡಿಸಿ ಪಿಡಿಪಿ ರ್‍ಯಾಲಿ

'ಲೆಫ್ಟಿನೆಂಟ್ ಗವರ್ನರ್ ಕ್ಷಮೆಯಾಚಿಸಲಿ'

ಪ್ರಜಾವಾಣಿ ವಾರ್ತೆ

ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿ ನಾಗರಿಕರ ಹತ್ಯೆಯನ್ನು ಖಂಡಿಸಿ ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ಭಾನುವಾರ ನಡೆಯಿತು

ಶ್ರೀನಗರ: ಇಲ್ಲಿನ ಹೊರವಲಯದ ಹೈದರ್‌ಪೋರಾದಲ್ಲಿ ಭದ್ರತಾಪಡೆಗಳ ಕಾರ್ಯಾಚರಣೆ ವೇಳೆ ಮೂವರ ನಾಗರಿಕರು ಹತ್ಯೆಯಾಗಿರುವ ಘಟನೆಗೆ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಕ್ಷಮೆ ಯಾಚಿಸಬೇಕು ಎಂದು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಹಾಗೂ ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಒತ್ತಾಯಿಸಿದರು.

ನಾಗರಿಕರ ಹತ್ಯೆ ಪ್ರಕರಣವನ್ನು ಖಂಡಿಸಿ ಭಾನುವಾರ ಗುಪ್ಕಾರ್ ರಸ್ತೆಯಿಂದ ರಾಜಭವನದವರೆಗೆ ಹಮ್ಮಿಕೊಂಡಿದ್ದ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಜಮ್ಮು ಕಾಶ್ಮೀರದ ಆಡಳಿತದ ಮುಖ್ಯಸ್ಥರಾಗಿರುವುದರಿಂದ ಸಂತ್ರಸ್ತ ಕುಟುಂಬಗಳು ಹಾಗೂ ಕಾಶ್ಮೀರದ ಜನರ ಕ್ಷಮೆಯಾಚಿಸಬೇಕು. ಘಟನೆಯನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಿ, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿದರು.

ನ.15ರಂದು ದಾಳಿ ನಡೆಸಲಾದ ಕಟ್ಟಡದ ಕಚೇರಿಯೊಂದರ ಸಹಾಯಕನಾಗಿದ್ದ ರಂಬಾನ್ ಜಿಲ್ಲೆಯ ಅಮಿರ್ ಮಗ್ರೆ ಎಂಬ ಯುವಕ ಮೃತಪಟ್ಟಿದ್ದು, ಆ ಯುವಕನ ಶವವನ್ನು ಅಂತ್ಯಸಂಸ್ಕಾರ ನಡೆಸಲು ಕುಟುಂಬಸ್ಥರಿಗೆ ನೀಡಿಲ್ಲ. ಹಾಗಾಗಿ ಆ ಯುವಕನ ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಬೇಕು. ಸರ್ಕಾರದಿಂದ ಸೂಕ್ತ ಪರಿಹಾರವನ್ನು ನೀಡಬೇಕು ಎಂದು ಒತ್ತಾಯಿಸಿದರು.

ಉಗ್ರ ಎಂದು ಹಣೆಪಟ್ಟಿ ಕಟ್ಟಿರುವ ನಾಲ್ಕನೇ ವ್ಯಕ್ತಿಯ ಮೃತದೇಹವನ್ನು ನಾವ್ಯಾರೂ ನೋಡಿಲ್ಲ. ಹಾಗಾಗಿ ಪೊಲೀಸರು ಹೇಳುವಂತೆ ಸತ್ತ ವ್ಯಕ್ತಿಯು ನಿಜವಾಗಿಯೂ ಉಗ್ರ ಎನ್ನುವ ಬಗ್ಗೆ ಅನುಮಾನವಿದೆ. ಸುಖಾಸುಮ್ಮನೆ ಮೂವರ ನಾಗರಿಕರನ್ನು ಕೊಂದಿರುವ ಸಾಧ್ಯತೆಯಿದ್ದು, ಇಡೀ ಘಟನೆಯು ದೊಡ್ಡ ಸಂದೇಹವನ್ನು ಮೂಡಿಸಿದೆ ಎಂದು ಶಂಕೆ ವ್ಯಕ್ತಪಡಿಸಿದರು.

ಕೊಲೆ ಯತ್ನ ಆರೋಪ: ಸಯಾನಿ ಬಂಧನ

ಪ್ರಜಾವಾಣಿ ವಾರ್ತೆ

ಅಗರ್ತಲಾ: ಪಶ್ಚಿಮ ಬಂಗಾಳದ ತೃಣ ಮೂಲ ಕಾಂಗ್ರೆಸ್‌ನ ಯುವ ಘಟಕದ ಕಾರ್ಯದರ್ಶಿ ಸಯಾನಿ ಘೋಷ್ ಅವರನ್ನು ತ್ರಿಪುರಾ ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಸಭೆ ನಡೆಯುತ್ತಿರುವಾಗ ಮುಖ್ಯಮಂತ್ರಿ ವಿಪ್ಲವ್ ಕುಮಾರ್ ದೇವ್ ಅವರಿಗೆ ಬೆದರಿಕೆ ಹಾಕಿರುವ ಆರೋಪದ ಮೇಲೆ ಕೊಲೆ ಯತ್ನ ಪ್ರಕರಣ ದಾಖಲಿಸಿರುವುದಾಗಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಐಪಿಸಿ ಸೆಕ್ಷನ್ 307 (ಕೊಲೆ ಯತ್ನ) ಮತ್ತು 153ಎ (ಗುಂಪುಗಳ ದ್ವೇಷ ಮೂಡಿಸುವುದು) ಅಡಿಯಲ್ಲಿ ಸಯಾನಿ ಘೋಷ್ ಅವರನ್ನು ಬಂಧಿಸಿರುವುದಾಗಿ ಪೊಲೀಸ್ ಅಧಿಕಾರಿ ರಮೇಶ್ ಯಾದವ್ ಹೇಳಿದ್ದಾರೆ.

ಮುಖ್ಯಮಂತ್ರಿ ಭಾಗವಹಿಸಿದ್ದ ಸಭೆಯತ್ತ ಸಯಾನಿ ಅವರ ಜೊತೆಗಿದ್ದ ಕೆಲವರು ಕಲ್ಲು ತೂರಿರುವುದಾಗಿ ರಮೇಶ್ ಯಾದವ್ ತಿಳಿಸಿದ್ದಾರೆ.

ಶನಿವಾರ ರಾತ್ರಿ ನಡೆಯುತ್ತಿದ್ದ ಸಭೆಯಲ್ಲಿ ಮುಖ್ಯಮಂತ್ರಿ ವಿಪ್ಲವ್ ದೇವ್ ಅವರು ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಆ ಸಭೆಗೆ ಬಂದ ಸಯಾನಿ ಘೋಷ್, 'ಖೇಲಾ ಹೋಬೆ' (ಆಟ ಶುರು) ಎಂದು ಘೋಷಣೆ ಕೂಗಿದರು ಎಂದು ಬಿಜೆಪಿ ಕಾರ್ಯಕರ್ತರೊಬ್ಬರು ಪೊಲೀಸ್ ದೂರಿನಲ್ಲಿ ತಿಳಿಸಿದ್ದಾರೆ.

ಈ ವರ್ಷ ಪಶ್ಚಿಮ ಬಂಗಾಳದಲ್ಲಿ ಮಾರ್ಚ್–ಏಪ್ರಿಲ್‌ನಲ್ಲಿ ನಡೆದ ವಿಧಾನ ಸಭೆ ಚುನಾವಣೆಯ ವೇಳೆ ಟಿಎಂಸಿ 'ಖೇಲಾ ಹೋಬೆ' ಘೋಷ ವಾಕ್ಯವಾಗಿ ಬಳಸಿಕೊಂಡಿತ್ತು. ಪೂರ್ವ ಅಗರ್ತಲಾದ ಮಹಿಳಾ ಪೊಲೀಸ್ ಠಾಣೆಯ ಹೊರಗೆ ಬಿಜೆಪಿ ಬೆಂಬಲಿಗರು ತಮ್ಮ ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿರುವುದಾಗಿ ಟಿಎಂಸಿ ಮುಖಂಡರು ಆರೋಪಿಸಿದ್ದಾರೆ.

ಗಡಿಯ ಮುಂಚೂಣಿ ರಕ್ಷಣಾ ನೆಲೆ ಸಿಬ್ಬಂದಿಗಳ ಜೀವನ ಗುಣಮಟ್ಟ ಉತ್ತಮಗೊಳಿಸಲು ಕ್ರಮ

ಉಕ್ಕಿನಿಂದ ನಿರ್ಮಿತ ತಂಗುದಾಣ ಶೀಘ್ರ

ನವದೆಹಲಿ (ಪಿಟಿಐ): ಗಡಿ ನಿಯಂತ್ರಣ ರೇಖೆಗೆ (ಎಲ್‌ಒಸಿ) ಹೊಂದಿಕೊಂಡು ಎತ್ತರದ, ಸೂಕ್ಷ್ಮ ಪ್ರದೇಶದಲ್ಲಿ ನಿಯೋಜಿಸಲಾದ ಗಡಿ ಭದ್ರತಾ ಪಡೆ ಸಿಬ್ಬಂದಿಯು, ಜೀವನ ಗುಣಮಟ್ಟ ಉತ್ತಮಪಡಿಸುವ ನಿಟ್ಟಿನಲ್ಲಿ ಉಕ್ಕಿನಿಂದ ನಿರ್ಮಿಸಿದ ತಂಗುದಾಣ ಪಡೆಯಲಿದ್ದಾರೆ.

ಈ ತುಕಡಿಗಳನ್ನು ಮುಂಚೂಣಿ ರಕ್ಷಣಾನೆಲೆ (ಎಫ್‌ಡಿಎಲ್) ಎಂದು ಗುರುತಿಸಲಿದ್ದು, ಬಿಎಸ್‌ಎಫ್ ಸಿಬ್ಬಂದಿ ಸ್ವತಂತ್ರವಾಗಿ ಅಥವಾ ಸೇನೆ ಜೊತೆಗೂಡಿ ಕಾರ್ಯ ನಿರ್ವಹಿಸಲಿದ್ದಾರೆ. ಗಡಿ ನಿಯಂತ್ರಣ ರೇಖೆಯ ವ್ಯಾಪ್ತಿ ಒಟ್ಟು 772 ಕಿ.ಮೀ ಆಗಿದ್ದು, ಈ ಪೈಕಿ ಸುಮಾರು 430 ಕಿ.ಮೀ ಉದ್ದದ ಅಂತರವು ಜಮ್ಮು ಮತ್ತು ಕಾಶ್ಮಿರದ ವ್ಯಾಪ್ತಿಯಲ್ಲಿದೆ.

ಎಂಟು ಸಾವಿರದಿಂದ 16 ಸಾವಿರ ಅಡಿ ಎತ್ತರದಲ್ಲಿ ಈ ಸಿಬ್ಬಂದಿಯು ಪ್ರಸ್ತುತ, ಕಬ್ಬಿಣದ ಹಾಳೆಗಳನ್ನು (ಸಿಜಿಐ) ಬಳಸಿ ರೂಪಿಸಿದ ತಂಗುದಾಣದಲ್ಲಿ ಪಡಿತರ, ಶಸ್ತ್ರಾಸ್ತ್ರಗಳ ಜೊತೆಗೆ ನೆಲೆಸಿದ್ದಾರೆ. ಹವಾಮಾನ ಬದಲಾವಣೆಯ ಪರಿಣಾಮಗಳಿಗೆ ಗುರಿಯಾಗುತ್ತಾರೆ.

ಗಡಿ ನಿಯಂತ್ರಣ ರೇಖೆ ದಾಟಿ ದೇಶದ ಒಳನುಸುಳುವ ಭಯೋತ್ಪಾದಕರ ಯತ್ನ ವಿಫಲಗೊಳಿಸುವಲ್ಲಿ ಮುಂಚೂಣಿ ರಕ್ಷಣಾ ನೆಲೆಗಳಲ್ಲಿ (ಎಫ್‌ಡಿಎಲ್) ನಿಯೋಜಿತರಾದ ಸಿಬ್ಬಂದಿಯ ಪಾತ್ರ ಮಹತ್ವದ್ದಾಗಿದೆ.

ಬಿಎಸ್‌ಎಫ್‌ನ ಅಧಿಕಾರಿ ಮೂಲಗಳ ಪ್ರಕಾರ, ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಇರುವ ಇಂತಹ ಸುಮಾರು 115 ಎಫ್‌ಡಿಎಲ್‌ಗಳ ತಂಗುದಾಣಗಳನ್ನು ಉಕ್ಕಿನಿಂದ ನಿರ್ಮಿಸಿದ ವಿಶಾಲ ತಂಗುದಾಣಗಳಾಗಿ ₹ 35 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಗುರಿ ಇದೆ.

ಉಕ್ಕಿನ ಹಾಳೆಗಳನ್ನು ಬಳಸಿ ನಿರ್ಮಿಸಲಾದ ಶೌಚಾಲಯ, ಅಡುಗೆಕೋಣೆ, ವಿರಾಮಕೋಣೆಯ ಮಾದರಿಗಳನ್ನು ಈ ಎಫ್‌ಡಿಎಲ್‌ಗಳಲ್ಲಿ ಅಳವಡಿಸಲಾಗುತ್ತದೆ. ಮೊದಲ ಹಂತದ ಜಾರಿ ನಂತರ ಇನ್ನು ಹೆಚ್ಚಿನ ಎಫ್‌ಡಿಎಲ್‌ಗಳಿಗೆ ಈ ಸೌಲಭ್ಯ ವಿಸ್ತರಿಸಲಾಗುತ್ತದೆ.

ಬಿಎಸ್‌ಎಫ್ ಮಹಾನಿರ್ದೇಶಕ (ಡಿ.ಜಿ) ಪಂಕಜ್ ಕುಮಾರ್ ಸಿಂಗ್ ಅವರು ಒಟ್ಟಾರೆ ಕಾರ್ಯನಿರ್ವಹಣೆ ಪರಿಶೀಲನೆಗಾಗಿ ಇತ್ತೀಚೆಗೆ ಕಾಶ್ಮೀರಕ್ಕೆ ಭೇಟಿ ನೀಡಿದ್ದ ಅವಧಿಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಸಿಬ್ಬಂದಿ ಜೊತೆಗೆ ಚರ್ಚಿಸಿದ ಬಳಿಕ ಜೀವನ ಗುಣಮಟ್ಟ ಸುಧಾರಣೆಗಾಗಿ ಎಫ್‌ಡಿಎಲ್‌ಗಳ ಪರಿವರ್ತನೆಗೆ ಕ್ರಿಯಾಯೋಜನೆ ರೂಪಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಪ್ರಧಾನ ನಿರ್ದೇಶಕರು ಈ ಬಗ್ಗೆ ಮರುಬಳಕೆ ಇಂಧನ ಸಚಿವಾಲಯದ ಅಧಿಕಾರಿಗಳನ್ನು ಭೇಟಿಯಾಗಿ, ಈ ಎಫ್‌ಡಿಎಲ್‌ಗಳಿಗೆ ಸೋಲಾರ್ ಆಧಾರಿತ ವಿದ್ಯುತ್ ಯೋಜನೆ ಮಂಜೂರಾತಿ ಕೋರಿದ್ದು, ಇದಕ್ಕೆ ಔಪಚಾರಿಕ ಸಮ್ಮತಿ ದೊರೆತಿದೆ. ಈ ತಂಗುದಾಣಗಳಲ್ಲಿ ಸದ್ಯ ಅಡುಗೆ, ಇನ್ನಿತರ ಉದ್ದೇಶಗಳಿಗೆ ಸೀಮೆಎಣ್ಣೆ ಮತ್ತು ಡೀಸೆಲ್ ಅವಲಂಬಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಮಾರ್ಟ್‌ಫೋನ್ ಕೊಳ್ಳಲು ರೈತರಿಗೆ ₹1,500 ನೆರವು

ಅಹಮದಾಬಾದ್ (ಪಿಟಿಐ): ರಾಜ್ಯದಲ್ಲಿನ ರೈತರಿಗೆ ಸ್ಮಾರ್ಟ್‌ಫೋನ್ ಖರೀದಿಸಲು ₹1,500 ಆರ್ಥಿಕ ನೆರವು ನೀಡಲು ಗುಜರಾತ್ ಸರ್ಕಾರ ನಿರ್ಧರಿಸಿದೆ.

ಕೃಷಿ ಕ್ಷೇತ್ರದಲ್ಲಿ ಡಿಜಿಟಲ್ ಸೇವೆಗಳ ಪ್ರಭುತ್ವ ಬೆಳೆಯುತ್ತಿರುವ ಈ ಸಮಯದಲ್ಲಿ ತಮ್ಮ ಕೃಷಿ ಆದಾಯವನ್ನು ಹೆಚ್ಚಿಸಲು ವಿವಿಧ ಉದ್ದೇಶಗಳ ಬಳಕೆಗೆ ಸ್ಮಾರ್ಟ್‌ಫೋನ್ ಖರೀದಿಸುವಂತೆ ರೈತರನ್ನು ಉತ್ತೇಜಿಸುವುದು ಈ ಯೋಜನೆಯ ಉದ್ದೇಶವಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಗುಜರಾತ್‌ನಲ್ಲಿ ಭೂಮಿಯನ್ನು ಹೊಂದಿರುವ ಯಾವುದೇ ರೈತರು ಈ ಯೋಜನೆಯ ಪ್ರಯೋಜನ ಪಡೆಯಬಹುದು. ಸ್ಮಾರ್ಟ್‌ಫೋನ್‌ನ ಒಟ್ಟು ಮೊತ್ತದ ಶೇ 10ರಷ್ಟು ಅಂದರೆ ₹1,500 ಪಡೆಯಲು ಐ-ಖೆಡುತ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಹಿಂಸೆಗೆ ಶಿಕ್ಷಣವೇ ಮದ್ದು

ಓದು ಕಲಿಸುವ ಸಮಯ

ಓದು ಒಂದು ಜೀವನಾವಶ್ಯಕ ಕೌಶಲ. ಭಾಷಾ ಕೌಶಲವನ್ನು ಅಭಿವೃದ್ಧಿಪಡಿಸಿಕೊಳ್ಳಲು ಓದುವಿಕೆ ತುಂಬಾ ಅಗತ್ಯ. ಮಕ್ಕಳು ಒಂದು ಅಥವಾ ಎರಡನೇ ತರಗತಿಯಿಂದ ಅಕ್ಷರ/ಪದಗಳನ್ನು ಧ್ವನಿಸುತ್ತಾರೆ. ನಂತರ ಹಂತ ಹಂತವಾಗಿ ಪದ, ಪದಪುಂಜ ಹಾಗೂ ವಾಕ್ಯಗಳನ್ನು ಓದಿ ಅರ್ಥ ಗ್ರಹಿಸಲು ಪ್ರಾರಂಭಿಸುತ್ತಾರೆ.

ಆರ್.ಬಿ.ಗುರುಬಸವರಾಜ

'ನಮ್ಮ ಮಗು ಯಾವಾಗ್ಲೂ ಬರೀತಲೇ ಇರುತ್ತೆ. ಓದೋದೇ ಇಲ್ಲ'- ಇದು ಬಹಳ ಪೋಷಕರ ಮನದಾಳದ ನೋವು.

ಹೌದು ಇತ್ತೀಚಿನ ಮಕ್ಕಳು ಬರವಣಿಗೆಯಲ್ಲಿಯೇ ಹೆಚ್ಚು ಕಾಲ ಕಳೆಯುತ್ತಾರೆ. ಆದರೆ ಓದು ಎಂದರೆ ಅವರಿಗೆ ಒಂದು ರೀತಿಯ ಅಲರ್ಜಿ ಇದ್ದಂತೆ. ಬಹುತೇಕ ಮಕ್ಕಳು ತಮ್ಮ ತರಗತಿಯ ಪಠ್ಯವನ್ನು ಓದಲು ಹಿಂಜರಿಯುತ್ತಿರುವುದನ್ನು ಕಾಣಬಹುದು. ಇದಕ್ಕೆ ಕಾರಣಗಳು ಸ್ಪಷ್ಟ. ಪಠ್ಯದೊಂದಿಗಿನ ಅಂದರೆ ಅಕ್ಷರ/ಪದಗಳೊಂದಿಗಿನ ಸೀಮಿತ ಅನುಭವ, ಮಾತು ಮತ್ತು ಶ್ರವಣ ಸಮಸ್ಯೆಗಳು ಓದಿನ ಅನಾಸಕ್ತಿಗೆ ಕಾರಣವಾಗಿರಬಹುದು. ಇವುಗಳ ಜೊತೆಗೆ ಧ್ವನ್ಯಾಂಗಗಳ (ಗಂಟಲು, ತುಟಿ, ನಾಲಿಗೆಯಂತಹ ಅಂಗಗಳಿಂದ ಧ್ವನಿ ಉತ್ಪತ್ತಿಯಾಗುವುದು) ಪದಗಳ ಸ್ಪಷ್ಟತೆ ಇಲ್ಲದಿರುವುದೂ ಓದಿನ ಹಿನ್ನಡೆಗೆ ಕಾರಣವಾಗಿರುತ್ತದೆ. ಅಂದರೆ ಯಾವ ಅಕ್ಷರವನ್ನು ಹೇಗೆ ಉಚ್ಚರಿಸಬೇಕು? ಅಕ್ಷರಗಳ ಗುಚ್ಛವನ್ನು ಹೇಗೆ ಸಂಯೋಜಿಸಿಕೊಳ್ಳಬೇಕು? ಪದಗಳ ಜೋಡಣೆ ಹೇಗೆ ಮಾಡಿಕೊಳ್ಳಬೇಕು? ಧ್ವನಿ ಏರಿಳಿತದ ತಂತ್ರಗಾರಿಕೆ ಹೇಗೆ? ಎಂಬ ಮೂಲ ಸಂಗತಿಗಳು ಗೊತ್ತಿಲ್ಲದಿದ್ದಾಗ ಮಗು ಓದಿನ ಬಗ್ಗೆ ಸಹಜವಾಗಿ ನಿರಾಸಕ್ತಿ ಹೊಂದುತ್ತದೆ.

ಓದುವಿಕೆ ಎಂದರೆ?

ಓದುವಿಕೆ ಎಂದರೆ ಕೈಬರಹ ಅಥವಾ ಮುದ್ರಿತ ರೂಪದ ಅಕ್ಷರ/ಪದಗಳಿಗೆ ಧ್ವನಿ ರೂಪ ನೀಡುವುದು. ಓದುವಿಕೆಯು ಅಕ್ಷರ/ಪದಗಳ ಗುರುತಿಸುವಿಕೆ, ಗ್ರಹಿಕೆ, ನಿರರ್ಗಳತೆ ಮತ್ತು ಪ್ರೇರಣೆಯನ್ನು ಒಳಗೊಂಡ ಬಹುಮುಖಿ ಪ್ರಕ್ರಿಯೆಯಾಗಿದೆ. ಓದುವಿಕೆ ಕೇವಲ ಒಮ್ಮುಖ ಪ್ರಕ್ರಿಯೆಯಲ್ಲ. ಅದೊಂದು ಸಂಕೀರ್ಣ ಪ್ರಕ್ರಿಯೆ. ಓದುವಿಕೆಗೆ ಮಾತನಾಡುವ ಕೌಶಲ ಬೇಕಾಗುತ್ತದೆ. ಕೈಬರಹ ಅಥವಾ ಮುದ್ರಿತ ರೂಪದ ಅಕ್ಷರ/ಪದಗಳಿಗೆ ಉಚ್ಚಾರಣೆ ನೀಡುವುದು. ಓದುವಿಕೆ ಒಂದು ಉತ್ಪಾದಕ ಕೌಶಲ. ಇಲ್ಲಿ ಮಾಹಿತಿಯನ್ನು ವೈಯಕ್ತಿಕವಾಗಿ ಸ್ವೀಕರಿಸುತ್ತೇವೆ ಮತ್ತು ಮಾಹಿತಿಯನ್ನು ಸಾಮೂಹಿಕವಾಗಿ ರವಾನಿಸುತ್ತೇವೆ.

ಓದು ಯಾಕೆ ಮುಖ್ಯ?

ಓದು ಒಂದು ಜೀವನಾವಶ್ಯಕ ಕೌಶಲ. ಹಾಗಂತ ಓದಲು ಬಾರದವರೆಲ್ಲ ದಡ್ಡರಲ್ಲ. ಓದಲು ಬಾರದ ಅನೇಕರು ವಿಶ್ವವಿಖ್ಯಾತರಾದ ಉದಾಹರಣೆಗಳಿವೆ. ಆದಾಗ್ಯೂ ವೈಯಕ್ತಿಕ ಕಲಿಕೆಯ ಭಾಗವಾಗಿ ಓದುಗಾರಿಕೆ ತುಂಬಾ ಮಹತ್ವ ಪಡೆದಿದೆ. ಭಾಷಾ ಕೌಶಲವನ್ನು ಅಭಿವೃದ್ಧಿಪಡಿಸಿಕೊಳ್ಳಲು ಓದುವಿಕೆ ತುಂಬಾ ಅಗತ್ಯವಾಗಿದೆ. ಸ್ವಯಂ ಚಿತ್ರಣ ಅಭಿವೃದ್ಧಿಪಡಿಸಿಕೊಳ್ಳಲು ಓದುವಿಕೆ ಮೂಲಭೂತ ಕೌಶಲವಾಗಿದೆ. ಭವಿಷ್ಯದಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಓದು ತುಂಬಾ ಮುಖ್ಯ.

ಮಗು ಓದಲು ಕಲಿಯುವ ವಯಸ್ಸು

ಪ್ರತಿ ಮಗುವಿನ ಗ್ರಹಿಸುವ ಸಾಮರ್ಥ್ಯ ಬೇರೆ ಬೇರೆಯಾಗಿರುವುದರಿಂದ ಓದು ಕಲಿಯುವ ವಯಸ್ಸೂ ಸಹ ಮಗುವಿನಿಂದ ಮಗುವಿಗೆ ಭಿನ್ನವಾಗಿ-ರುತ್ತದೆ. ಹಾಗಾಗಿ ಪ್ರತಿ ಮಗುವೂ ತನ್ನದೇ ಆದ ವೇಗದಲ್ಲಿ ಓದುವ ಕೌಶಲವನ್ನು ಅಭಿವೃದ್ಧಿಪಡಿಸಿಕೊಳ್ಳುತ್ತದೆ. ಕೆಲವು ಮಕ್ಕಳು ಇತರರಿಗಿಂತ ವೇಗವಾಗಿ ಓದಲು ಕಲಿಯುತ್ತಾರೆ.

ಮಗು ಸಾಮಾನ್ಯವಾಗಿ ಎರಡನೇ ವಯಸ್ಸಿಗೆ ಕೆಲವು ಪದಗಳನ್ನು ಮಾತನಾಡುವ ಕೌಶಲ ಕಲಿತಿರುತ್ತದೆ. ಪಾಲಕರು ಕೇಳುವ ಸರಳ ಪ್ರಶ್ನೆಗಳಿಗೆ ಉತ್ತರಿಸುತ್ತದೆ. ಶಿಶುವಿಹಾರ ಅಥವಾ ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ ಕೆಲವು ಅಕ್ಷರಗಳನ್ನು ಗುರುತಿಸುವ ಕೌಶಲ ಇರುತ್ತದೆ. ಆದರೆ ಸ್ಪಷ್ಟವಾಗಿ ಓದಲು ಸಾಧ್ಯವಾಗುವುದಿಲ್ಲ. ಒಂದು ಅಥವಾ ಎರಡನೇ ತರಗತಿಯಲ್ಲಿ ಬಹುತೇಕ ಮಕ್ಕಳು ಅಕ್ಷರ/ಪದಗಳನ್ನು ಧ್ವನಿಸುತ್ತಾರೆ. ಇದು ಓದಿನ ಮೊದಲ ಹಾಗೂ ಯಾಂತ್ರಿಕ ಹಂತ ಎನ್ನಬಹುದು. ಇಲ್ಲಿಂದ ಮಗು ಹಂತ ಹಂತವಾಗಿ ಪದ, ಪದಪುಂಜ ಹಾಗೂ ವಾಕ್ಯಗಳನ್ನು ಓದಿ ಅರ್ಥ ಗ್ರಹಿಸಲು ಪ್ರಾರಂಭಿಸುತ್ತದೆ.

ಓದಲು ತೊಂದರೆ ಏಕೆ?

ಓದು ವೈವಿಧ್ಯಮಯ ಭಾಷಾ ಚಟುವಟಿಕೆಯಾಗಿದೆ. ಕೆಲವು ಮಕ್ಕಳಿಗೆ ಓದು ತುಂಬಾ ಸವಾಲಾಗಿರುತ್ತದೆ. ಹಾಗಂತ ಅವರು ದಡ್ಡರೆಂದಲ್ಲ. ಅವರ ಓದಿನ ನ್ಯೂನತೆಗೆ ಅನೇಕ ಕಾರಣಗಳಿರುತ್ತವೆ. ಮನೆ ಭಾಷೆ ಹಾಗೂ ಶಾಲಾ ಭಾಷೆ ಬೇರೆ ಬೇರೆಯಾಗಿರುವುದು, ಉಚ್ಚಾರ ದೋಷ, ಅಕ್ಷರ ಗುರುತಿಸಲು ತೊಂದರೆ, ಅಕ್ಷರಗಳಿಗೆ ಶಬ್ದ ಹೊಂದಿಸುವಲ್ಲಿ ವಿಫಲತೆ, ಕಾಗುಣಿತಗಳ ಸ್ಪಷ್ಟತೆ ಇಲ್ಲದಿರುವುದು, ಗ್ರಹಿಸುವ ಸಾಮರ್ಥ್ಯದ ಕೊರತೆ, ನಿರರ್ಗಳತೆ ಇಲ್ಲದಿರುವುದು, ಮನೆಯಲ್ಲಿ ಪೂರಕ ವಾತಾವರಣ ಇಲ್ಲದಿರುವುದು ಸೇರಿದಂತೆ ಮುಂತಾದ ಕಾರಣಗಳಿಗಾಗಿ ಕೆಲವು ಮಕ್ಕಳು ಓದುವ ಪ್ರಕ್ರಿಯೆಯಲ್ಲಿ ಹಿಂದೆ ಬೀಳುತ್ತಾರೆ.

ಓದು ಕಲಿಕೆಗೆ ಹೀಗಿರಲಿ ಸಹಾಯ..

ಮಕ್ಕಳು ಓದು ಕಲಿಯಲು ಪಾಲಕರ ಸಹಾಯ ತುಂಬಾ ಅತ್ಯಗತ್ಯ. ಇದಕ್ಕೆ ಪಾಲಕರು ಸಾಕ್ಷರರು ಆಗಿರಬೇಕೆಂದೇನಿಲ್ಲ. ಸಾಮಾನ್ಯ ಜ್ಞಾನ ಇದ್ದರೆ ಸಾಕು. ಮಕ್ಕಳಲ್ಲಿ ಓದುವ ಹವ್ಯಾಸವನ್ನು ಅಭಿವೃದ್ಧಿಗೊಳಿಸಬಹುದು. ಅದು ಹೇಗೆ? ಇಲ್ಲಿದೆ ಟಿಪ್ಸ್.

- ಪ್ರಾರಂಭದಲ್ಲಿ ಮಕ್ಕಳಿಗೆ ಕೆಲವು ಸರಳ ಚಿತ್ರಗಳನ್ನು ತೋರಿಸಿ ಹೆಸರಿಸಲು ಹೇಳಿ. ನಂತರ ಅಕ್ಷರಗಳನ್ನು ತಿಳಿಸಿ.
- ಮೂಲ ಅಕ್ಷರಗಳಿಂದ ಸರಳ ಪದಗಳನ್ನು ರಚಿಸಿ ಓದಲು ತಿಳಿಸಿ. ನಂತರ ಸಂಕೀರ್ಣ ಪದಗಳಿರಲಿ.
- ಮಕ್ಕಳಿಗೆ ಓದಲು ಹೇಳುವ ಮೊದಲು ಪಾಲಕರು ಪುಸ್ತಕ ಹಿಡಿದು ಕೂತರೆ, ಮಕ್ಕಳು ಓದಲು ಪ್ರಾರಂಭಿಸುತ್ತಾರೆ.
- ಮಕ್ಕಳಿಗೆ ಓದುವ ವಿವಿಧ ಆಟಗಳನ್ನು ಆಡಿಸಿರಿ. ಕೆಲಸ ಮಾಡುವಾಗ, ರಸ್ತೆಯಲ್ಲಿ ನಡೆಯುವಾಗ, ಮಗು ಗಮನಿಸುವ ನಕ್ಷೆ, ಸೂಚನಾ ಫಲಕ, ಅಂಗಡಿಗಳ ನಾಮಫಲಕ ಹೀಗೆ ವಿವಿಧ ಫಲಕಗಳನ್ನು ಓದಲು ಪ್ರೇರೇಪಿಸಿ.
- ಮಗುವಿನೊಡನೆ ಪಠ್ಯದಲ್ಲಿನ ಪ್ರಾಸಬದ್ಧ ಪದ ಹುಡುಕುವ ಆಟ ಆಡಿರಿ.
- ವಿವಿಧ ಸ್ವರೂಪದ ಕೈಬರಹಗಳನ್ನು ನೀಡಿ ಓದಲು ಪ್ರೇರೇಪಿಸಿ.
  - ಕಾರ್ಟೂನ್/ಕಾಮಿಕ್ಸ್‌ನಂತಹ ಕಥೆ ಪುಸ್ತಕಗಳನ್ನು ತಂದು ಕೊಟ್ಟು ಓದಲು ತಿಳಿಸಿ.
  - ಮಗುವಿನ ಓದುವ ಸಾಮರ್ಥ್ಯ ಬೆಳೆದಂತೆಲ್ಲಾ ವಿವಿಧ ಕಥೆ, ಕಾವ್ಯ, ಕಿರು ನಾಟಕ, ಜೀವನಚರಿತ್ರೆಗಳನ್ನು ಓದಿಸುವ ಮೂಲಕ ಹೆಚ್ಚುವರಿ ಓದಿನ ಪ್ರೋತ್ಸಾಹ ನೀಡಿ.
  - ಮಕ್ಕಳಲ್ಲಿ ಉಚ್ಚಾರ ದೋಷವಿದ್ದರೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಕೊಡಿಸಿ.
- ದ್ವಂದ್ವ ಓದಿನ ಸಮಸ್ಯೆ(ಡಿಸ್ಲೆಕ್ಸಿಯಾ) ಇರುವ ಮಕ್ಕಳಿಗೆ ಅಕ್ಷರ/ಪದಗಳ ಸ್ಪಷ್ಟತೆ ಮೂಡಿಸಿ.
- ವಾಕ್ಯಗಳನ್ನು ಸರಾಗವಾಗಿ ಹಾಗೂ ಧ್ವನಿಯ ಏರಿಳಿತದೊಂದಿಗೆ ಓದಲು ಉತ್ತೇಜಿಸಿ.
- ಧ್ವನಿಯ ಏರಿಳಿತಕ್ಕೆ ವಿವಿಧ ಲೇಖನ ಚಿಹ್ನೆಗಳ ಪರಿಚಯ ಮಾಡಿಸಿ, ಅವುಗಳ ಬಳಕೆಯ ವಿಧಾನ ತಿಳಿಸಿ.
- ಸಾಧ್ಯವಾದರೆ ಶಾಲೆಯ ಭಾಷೆಯನ್ನು ಮನೆಯಲ್ಲಿ ಅನುಸರಿಸಿ.

ಪಿಎಚ್‌ಡಿ ಮಾಡುವುದು ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

1. ನಾನು ಎಂಬಿಎ (ಎಚ್‌ಆರ್ ಮತ್ತು ಫೈನಾನ್ಸ್) ಮುಗಿಸಿದ್ದೇನೆ. ಪಿಎಚ್‌ಡಿ ಮಾಡಬೇಕು ಎಂದುಕೊಂಡಿದ್ದೇನೆ. ಪಿಎಚ್‌ಡಿ ಪ್ರಕ್ರಿಯೆ ಹೇಗೆ? ಅರ್ಹತೆ ಏನು? ದಯವಿಟ್ಟು ತಿಳಿಸಿ.

ಚಂದನ್ ಕೆ., ಶಿವಮೊಗ್ಗ

ಸಾಮಾನ್ಯವಾಗಿ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಶೇ 55 ಅಂಕಗಳನ್ನು ಪಡೆದಿರಬೇಕು ಅಥವಾ ಪಿಎಚ್‌ಡಿ ಮಾಡುವ ವಿಶ್ವವಿದ್ಯಾಲಯದ ನಿಯಮಕ್ಕೆ ಒಳಪಟ್ಟಿರಬೇಕು. ನೀವು ಪಿಎಚ್‌ಡಿ ಮಾಡುವ ಕ್ಷೇತ್ರ (ಎಚ್‌ಆರ್, ಫೈನಾನ್ಸ್, ಮ್ಯಾನೇಜ್‌ಮೆಂಟ್ ಇತ್ಯಾದಿ) ಮತ್ತು ಸಂಶೋಧನಾ ವಿಷಯದ ಬಗ್ಗೆ ಸಂಪೂರ್ಣವಾದ ಮಾಹಿತಿ ಮತ್ತು ಕಲ್ಪನೆಯಿರಬೇಕು. ಪಿಎಚ್‌ಡಿ ಮಾಡಲು ಬಯಸುವ ವಿಶ್ವವಿದ್ಯಾಲಯದ ಅಧಿಸೂಚನೆಯಂತೆ ಅಗತ್ಯವಿರುವ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು. ಕೆಲವು ವಿಶ್ವವಿದ್ಯಾಲಯಗಳು ಅಭ್ಯರ್ಥಿಗಳು ತಮ್ಮ ಅರ್ಜಿಯೊಂದಿಗೆ ಸಂಶೋಧನಾ ಪ್ರಸ್ತಾವನೆಯನ್ನು ಸಲ್ಲಿಸಬೇಕು ಎಂದು ಸೂಚಿಸುತ್ತವೆ.

ಪಿಎಚ್‌ಡಿ ಕೋರ್ಸ್ ಅರ್ಜಿಯ ಪರಿಶೀಲನೆಯ ನಂತರ ಪ್ರವೇಶ ಪರೀಕ್ಷೆ ಮತ್ತು ಇನ್ನಿತರ ಪ್ರಕ್ರಿಯೆಗಳ ಮುಖಾಂತರ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಸಂಶೋಧನೆಯಲ್ಲಿ ನಿಮಗೆ ಬೆಂಬಲ ಮತ್ತು ಮಾರ್ಗದರ್ಶನ ನೀಡಲು ಮಾರ್ಗದರ್ಶಕರನ್ನು ನಿಯೋಜಿಸಲಾಗುತ್ತದೆ. ಸಾಮಾನ್ಯವಾಗಿ, 3 ರಿಂದ 5 ವರ್ಷಗಳಲ್ಲಿ ಪಿಎಚ್‌ಡಿ ಮುಗಿಸಬಹುದು.

2. ನಾನು ಎಂಕಾಂ ಮುಗಿಸಿದ್ದೇನೆ. ಎಸ್‌ಎಸ್‌ಸಿ ನೇಮಕಾತಿ ಮಾಡುವ ಅಕೌಂಟೆಂಟ್ ಮತ್ತು ಆಡಿಟ್ ಹುದ್ದೆಗಳ ಮಾಹಿತಿ, ಪರೀಕ್ಷೆಯ ಪಠ್ಯಕ್ರಮ ಮತ್ತು ತಯಾರಿ ಹೇಗೆ ನಡೆಸಬೇಕು ಎಂದು ತಿಳಿಸಿ.

ಸುಭಾಷ್ ಪವಾರ, ಬೀದರ್

ಭಾರತ ಸರ್ಕಾರದ ವಿವಿಧ ಸಚಿವಾಲಯಗಳು, ಇಲಾಖೆಗಳು, ಸಂಸ್ಥೆಗಳ ಗ್ರೂಪ್ ಬಿ ಮತ್ತು ಸಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್‌ಎಸ್‌ಸಿ) ನಡೆಸುವ ರಾಷ್ಟ್ರೀಯ ಮಟ್ಟದ ಅತ್ಯಂತ ಜನಪ್ರಿಯ ಪರೀಕ್ಷೆಯ ಮಾದರಿ, ತಯಾರಿ ಮತ್ತು ಹೆಚ್ಚಿನ ವಿವರಗಳಿಗೆ ಗಮನಿಸಿ: https://www.shiksha.com/exams/ssc-cgl-exam-preparation

3. ಅರಣ್ಯ ರಕ್ಷಕ ಹುದ್ದೆಗಳ ಲಿಖಿತ ಪರೀಕ್ಷೆಗೆ ಋಣಾತ್ಮಕ ಅಂಕಗಳು ಇರುತ್ತವೆಯೇ ಎಂಬುದನ್ನು ತಿಳಿಸಿ.

ವಿಶ್ವನಾಥ್, ಊರು ತಿಳಿಸಿಲ್ಲ

ನಮಗಿರುವ ಮಾಹಿತಿಯಂತೆ ತಪ್ಪಾದ ಉತ್ತರಗಳಿಗೆ 0.25 ಋಣಾತ್ಮಕ ಅಂಕಗಳಿರುತ್ತದೆ.

4. ನಾನು ದ್ವಿತೀಯ ಪಿಯುಸಿ (ವಿಜ್ಞಾನ) ಮುಗಿಸಿದ್ದೇನೆ. ಈಗ ನಾನು ಸೇನೆಗೆ ಸೇರಬೇಕು ಎಂದು ಬಯಸಿದ್ದೇನೆ. ಅದಕ್ಕಾಗಿ ಏನು ಮಾಡಬೇಕು ಎಂದು ತಿಳಿಯುತ್ತಿಲ್ಲ. ಹೇಗೆ ಸೇರಬೇಕೆಂದು ದಯಮಾಡಿ ತಿಳಿಸಿ.

ರಾಧಿಕಾ ಬಿ, ರಾಯಚೂರು

ರಕ್ಷಣಾ ಪಡೆಗೆ ಸೇರಿ ದೇಶಸೇವೆ ಮಾಡಬೇಕೆನ್ನುವ ನಿಮ್ಮ ಆಸೆ ಶ್ಲಾಘನೀಯ. ಪಿಯುಸಿ ನಂತರ ಎನ್‌ಡಿಎ ಪರೀಕ್ಷೆ ಅಥವಾ ಟೆಕ್ನಿಕಲ್ ಎಂಟ್ರಿ ಸ್ಕೀಮ್ ಮುಖಾಂತರ ರಕ್ಷಣಾ ಪಡೆಯನ್ನು ಸೇರಬಹುದು.

ಹೆಚ್ಚಿನ ವಿವರಗಳಿಗೆ ಗಮನಿಸಿ: https://indianarmy.nic.in/home

5. ಬಿಪಿಇಡಿ, ಎಂಪಿಇಡಿ ಮುಗಿಸಿದ್ದೇನೆ. ಮುಂದೇನು ಮಾಡಬಹುದು?

ಶಶಿಕುಮಾರ್, ಕೊಪ್ಪಳ

ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ದೈಹಿಕ ಶಿಕ್ಷಣ ಅತ್ಯಗತ್ಯ. ಎಂಪಿಇಡಿ ನಂತರ ಶಾಲಾ ಕಾಲೇಜುಗಳು, ಜಿಮ್ ಮತ್ತು ಫಿಟ್‌ನೆಸ್ ಸಂಸ್ಥೆಗಳು, ಕ್ರೀಡೆ ಮತ್ತು ಸಂಬಂಧಿತ ಸಂಸ್ಥೆಗಳು, ಮಾಧ್ಯಮ ಸಂಸ್ಥೆಗಳು, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಎನ್‌ಜಿಒ ಸಂಸ್ಥೆಗಳು ಇತ್ಯಾದಿ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳಿವೆ. ಇನ್ನೂ ಹೆಚ್ಚಿನ ತಜ್ಞತೆಯ ಅಗತ್ಯವಿದ್ದರೆ, ಪಿಎಚ್‌ಡಿ ಕೂಡ ಮಾಡಬಹುದು.

6. ನಾನು ಪಿಯುಸಿ ಮುಗಿಸಿದ್ದೇನೆ. ಪೊಲೀಸ್ ಕಾನ್‌ಸ್ಟೇಬಲ್ ಆಗಲು ಇಚ್ಛಿಸಿದ್ದೇನೆ. ನನಗೆ ಸೂಕ್ತವಾದ ಸಲಹೆ ಮತ್ತು ಉತ್ತಮ ಪುಸ್ತಕಗಳನ್ನು ತಿಳಿಸಿ.

ವೀರೇಶ್, ಕಲಬುರ್ಗಿ

ಕರ್ನಾಟಕ ಪೊಲೀಸ್ ನೇಮಕಾತಿ ಪ್ರಕ್ರಿಯೆ, ಪರೀಕ್ಷೆಗಳ ವಿವರ, ದೈಹಿಕ ಮಾನದಂಡಗಳು ಮತ್ತು ವಿಷಯಸೂಚಿಗೆ ಗಮನಿಸಿ: https://prepp.in/karnataka-police-exam

7. ನಾನು ಬಿಎ ಕೊನೆಯ ವರ್ಷದಲ್ಲಿ ಓದುತ್ತಿದ್ದೇನೆ. ನನಗೆ ಐಎಫ್‌ಎಸ್ ಅಧಿಕಾರಿ ಆಗಬೇಕು ಎಂಬ ಆಸೆ ಇದೆ. ನಾನು ಮುಂದೇನು ಮಾಡಬೇಕು?

ಹೆಸರು, ಊರು ತಿಳಿಸಿಲ್ಲ

ಯಾವುದೇ ಪದವಿಯ ನಂತರ ಯುಪಿಎಸ್‌ಸಿ ಮುಖ್ಯ ಪರೀಕ್ಷೆಯ ಮುಖಾಂತರ ಐಎಫ್‌ಎಸ್ ಅಧಿಕಾರಿಯಾಗಬಹುದು. ನೀವು ಪದವಿ ಕೋರ್ಸ್‌ನ ಅಂತಿಮ ವರ್ಷದಲ್ಲಿರುವುದರಿಂದ ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆಯಲ್ಲಿ ಭಾಗವಹಿಸಬಹುದು.

8. ನಾನು ಈಗ ಬಿಕಾಂ ಮುಗಿಸಿದ್ದೇನೆ. ನನಗೆ ಮುಂದೆ ಓದಲು ತುಂಬಾ ಆಸೆ. ಆದರೆ, ಮನೆಯಲ್ಲಿ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ. ಆದ್ದರಿಂದ ಮುಂದೆ ಓದಲು ಆಗುವುದಿಲ್ಲ. ಹಾಗಾಗಿ, ನಾನು ಮುಂದೆ ಯಾವ ತರಹದ ಕೆಲಸಕ್ಕೆ ಸೇರಬಹುದು?

ಹೆಸರು, ಊರು ತಿಳಿಸಿಲ್ಲ

ಆರ್ಥಿಕ ಸಮಸ್ಯೆಯ ಕಾರಣದಿಂದ ನಿಮ್ಮ ಭವಿಷ್ಯದ ಕನಸುಗಳನ್ನು ಕಾಣದೆ ಮುಂದಿನ ಬದುಕಿನ ಬಗ್ಗೆ ರಾಜಿಯಾಗದಿರಿ; ಏಕೆಂದರೆ, ಆರ್ಥಿಕ ಸಮಸ್ಯೆಗಳು ತಾತ್ಕಾಲಿಕ.

ಬ್ಯಾಂಕಿಗ್, ಫೈನಾನ್ಸ್, ಇನ್ವೆಸ್ಟ್‌ಮೆಂಟ್, ಇನ್‌ಶೂರೆನ್ಸ್, ರೀಟೇಲ್, ಮಾರ್ಕೆಟಿಂಗ್, ಎಫ್‌ಎಂಜಿಸಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ನೀವು ವೃತ್ತಿಯನ್ನು ಅರಸಬಹುದು ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ಕೆಲಸಗಳನ್ನೂ ಪಡೆಯಬಹುದು. ಜೊತೆಗೆ, ನಿಮ್ಮ ಆಸಕ್ತಿಯ ಅನುಸಾರ ದೂರ ಶಿಕ್ಷಣದ ಮುಖಾಂತರ ಎಂಬಿಎ ಮುಂತಾದ ಸ್ನಾತಕೋತ್ತರ ಕೋರ್ಸ್‌ಗಳನ್ನು ಮಾಡಬಹುದು. ಹಾಗಾಗಿ, ಈಗಿನ ಪರಿಸ್ಥಿತಿಯಿಂದ ಎದೆಗುಂದದೆ ನಿಮ್ಮ ದೀರ್ಘಾವಧಿ ಕನಸುಗಳನ್ನು ಸಾಕಾರಗೊಳಿಸುವ ಬಗ್ಗೆ ಸಕಾರಾತ್ಮಕವಾಗಿ ಯೋಚಿಸಿ.

9. ನಾನು ಬಿಕಾಂ ಮಾಡಿ ಎಂಬಿಎ ಮಾಡಿದ್ದೇನೆ. ನನಗೆ ಬಿಎ ಓದುವ ಆಸಕ್ತಿ ಇದೆ. ರೆಗ್ಯುಲರ್ ಬಿಎ ಕೋರ್ಸ್ ಮಾಡಬೇಕು. ಹೇಗೆ ಮಾಡಬೇಕು ತಿಳಿಸಿ.

ತ್ರಿವೇಣಿ, ಬೆಳಗಾವಿ

ಸಾಮಾನ್ಯವಾಗಿ ಪದವಿಯ ನಂತರ ಸ್ನಾತಕೋತ್ತರ ಕೋರ್ಸ್‌ಗಳನ್ನು ಮಾಡುವುದು ವಾಡಿಕೆ. ಎಂಬಿಎ ಕೋರ್ಸ್ ನಂತರ ವೃತ್ತಿಯ ಉತ್ತಮ ಅವಕಾಶಗಳಿವೆ. ಹಾಗಾಗಿ, ಈ ಅವಕಾಶಗಳನ್ನು ಸದುಪಯೋಗಿಸಿಕೊಂಡು ದೂರ ಶಿಕ್ಷಣದ ಮುಖಾಂತರ ನಿಮಗಿಷ್ಟವಿರುವ ವಿಷಯದಲ್ಲಿ ಬಿಎ ಮಾಡಬಹುದು.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ಒಎಂಆರ್ ಹಾಳೆಯಲ್ಲಿ ಹೀಗೆ ಉತ್ತರಿಸಿ...

ವೆಂಕಟ ಸುಬ್ಬರಾವ್. ವಿ.

ಭಾಗ- 5

ಸಿಬಿಎಸ್‌ಇ ಪರೀಕ್ಷೆ

ನಾವು ಈ ಸಂಚಿಕೆಯ ಭಾಗ-1 ರಲ್ಲಿ, ಈ ಬಾರಿಯ ಸಿ.ಬಿ.ಎಸ್.ಇ. ಪರೀಕ್ಷೆಗಳ ಬಗ್ಗೆ ಹಾಗೂ ಈ ಪರೀಕ್ಷೆಗಳ ರಚನೆಯ ಬಗ್ಗೆ ತಿಳಿದಿದ್ದೇವೆ. ಈ ಬಾರಿಯ ಮೊದಲನೆಯ ಅವಧಿಯ ಪರೀಕ್ಷೆ, ಅಂಕಗಳು ಹಾಗೂ ಇತರ ವಿವರಗಳ ಬಗ್ಗೆಯೂ ಭಾಗ-1 ರಲ್ಲಿ ವಿವರಣೆಯನ್ನು ಕೊಟ್ಟಿದೆ.

ನಿಮಗೆ ಈಗಾಗಲೇ ತಿಳಿದಿರುವಂತೆ ಈ ಬಾರಿಯ ಮೊದಲನೆಯ ಅವಧಿಯ ಸಿಬಿಎಸ್‌ಇ ಪರೀಕ್ಷೆಯಲ್ಲಿ ಎಲ್ಲ ಪ್ರಶ್ನೆಗಳೂ ಬಹು ಆಯ್ಕೆ ಉತ್ತರದ ಪ್ರಶ್ನೆಗಳಾಗಿರುತ್ತವೆ. ಹಾಗಾಗಿ, ಈ ಪ್ರಶ್ನೆಗಳಿಗೆ ಉತ್ತರಿಸಲು ಸಿ.ಬಿ.ಎಸ್. ಇ. ಯು ಇದೇ ಮೊದಲ ಬಾರಿಗೆ, ಈ ಮೊದಲನೆಯ ಅವಧಿಯ ಪರೀಕ್ಷೆಯಲ್ಲಿ ಒಎಂಆರ್ ಹಾಳೆಗಳನ್ನು ಪರಿಚಯಿಸುತ್ತಿದೆ. ವಿದ್ಯಾರ್ಥಿಗಳು ಇದೇ ಮೊದಲ ಬಾರಿಗೆ ಈ ಪರೀಕ್ಷೆಯಲ್ಲಿ ಒಎಂಆರ್ ಹಾಳೆಗಳನ್ನು ಉಪಯೋಗಿಸುತ್ತಿರುವುದರಿಂದ ಅದರ ಬಗ್ಗೆ ಸಂಪೂರ್ಣ ತಿಳಿವಳಿಕೆ ನೀಡಲು ಸಿಬಿಎಸ್‌ಇ ಯು ತನ್ನ ಸುತ್ತೋಲೆಯಲ್ಲಿ ಈ ಕೆಳಕಂಡ ವಿವರಗಳನ್ನು ಒದಗಿಸಿದೆ.

1. ವಿದ್ಯಾರ್ಥಿಗಳ ವಿವರಗಳನ್ನು (ಹೆಸರು, ತಂದೆಯ ಹೆಸರು, ವಿಷಯ, ಕ್ರಮ ಸಂಖ್ಯೆ ಇತ್ಯಾದಿ) ಮೊದಲೇ ತುಂಬಲಾಗಿರುತ್ತದೆ.
2. ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯ ಸಂಖ್ಯೆಯನ್ನು ಒಎಂಆರ್ ಹಾಳೆಯ ಮೇಲಿನ ಬಲ ತುದಿಯಲ್ಲಿ ಮೀಸಲಿಟ್ಟ ಸ್ಥಳದಲ್ಲಿ ಬರೆಯಬೇಕು.



3. ಒಎಂಆರ್ ಹಾಳೆಯ ಕೆಳಭಾಗದಲ್ಲಿ ನಿಗಧಿಪಡಿಸಿರುವ ಸ್ಥಳದಲ್ಲಿ ವಿದ್ಯಾರ್ಥಿಯು ತನ್ನ ಸ್ವಹಸ್ತದ ಬರವಣಿಗೆಯಲ್ಲಿ ಈ ಕೆಳಗೆ ಕೊಟ್ಟಿರುವ ವಾಕ್ಯವನ್ನು ಬರೆಯಬೇಕು ಮತ್ತು ಸಹಿ ಮಾಡಬೇಕು.

"I Confirm that all particulars given above are correct"



4. ಒಎಂಆರ್ ಹಾಳೆಯನ್ನು ತುಂಬಲು ನೀಲಿ ಅಥವಾ ಕಪ್ಪು ಬಣ್ಣದ ಬಾಲ್ ಪಾಯಿಂಟ್ ಪೆನ್ನನ್ನು ಮಾತ್ರಾ ಉಪಯೋಗಿಸಬೇಕು.
5. ಒಎಂಆರ್ ಹಾಳೆಯಲ್ಲಿ ಯಾವುದೇ ಕಾರಣಕ್ಕೂ ಪೆನ್ಸಿಲ್ ಅನ್ನು ಉಪಯೋಗಿಸಿ ಬರೆಯುವಂತಿಲ್ಲ. ಹಾಗೇನಾದರೂ ಬರೆದರೆ, ಅದನ್ನು ಪರೀಕ್ಷಾ ನೀತಿಯ ಉಲ್ಲಂಘನೆ ಎಂದು ಪರಿಗಣಿಸಿ, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಸಿಬಿಎಸ್‌ಇ ಯು ತನ್ನ ಸುತ್ತೋಲೆಯಲ್ಲಿ ತಿಳಿಸಿದೆ.

ಒಎಂಆರ್ ಹಾಳೆಯಲ್ಲಿ ಉತ್ತರಿಸುವಾಗ ಈ ಕೆಳಕಂಡ ಮುಖ್ಯ ಅಂಶಗಳನ್ನು ಗಮನಿಸಿ, ಅಳವಡಿಸಿಕೊಳ್ಳಿ.

1. ಯಾವುದೇ ವಿಷಯದ ಪರೀಕ್ಷೆಯಾದರೂ, ಒಎಂಆರ್ ಹಾಳೆಯಲ್ಲಿ 60 ಪ್ರಶ್ನೆಗಳಿಗೆ ಉತ್ತರಿಸಲು ಸ್ಥಳಾವಕಾಶವಿರುತ್ತದೆ. ವಿದ್ಯಾರ್ಥಿಗಳು ಆ ವಿಷಯಕ್ಕೆ ಅನ್ವಯವಾಗುವ ಗರಿಷ್ಠಪ್ರಶ್ನೆಗಳಿಗೆ ಇಲ್ಲಿ ಕ್ರಮವಾಗಿ ಉತ್ತರಿಸಬೇಕು.
2. ವಿದ್ಯಾರ್ಥಿಗಳು ಕ್ರಮ ಸಂಖ್ಯೆ ಹಾಗೂ ಗರಿಷ್ಠ ಉತ್ತರಗಳ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟು ಉತ್ತರಿಸಬೇಕು. ಏಕೆಂದರೆ, ಅಗತ್ಯಕ್ಕಿಂತ ಹೆಚ್ಚು ಪ್ರಶ್ನೆಗಳಿಗೆ ಉತ್ತರಿಸಿದರೆ (ಸರಿಯಾದ ಉತ್ತರವಿದ್ದರೂ) ಅದನ್ನು ಮೌಲ್ಯಮಾಪನಕ್ಕಾಗಿ ಪರಿಗಣಿಸಲಾಗುವುದಿಲ್ಲ.

ಉದಾಹರಣೆ: ಒಂದು ವಿಷಯದ ಪರೀಕ್ಷೆಯಲ್ಲಿ ಗರಿಷ್ಠ 40 ಪ್ರಶ್ನೆಗಳಿಗೆ ಉತ್ತರಿಸಬೇಕು ಎಂದಿಟ್ಟುಕೊಳ್ಳಿ, ಇಲ್ಲಿ ಒಬ್ಬ ವಿದ್ಯಾರ್ಥಿಯು 45 ಪ್ರಶ್ನೆಗಳಿಗೆ ಉತ್ತರಿಸಿದರೂ, ಮೊದಲ 40 ಪ್ರಶ್ನೆಗಳ ಉತ್ತರವನ್ನು ಮಾತ್ರ ಪರಿಗಣಿಸಲಾಗುತ್ತದೆ.

ಹೀಗೆ, ಉತ್ತರಿಸುವಾಗ, ಒಂದುವೇಳೆ, ವಿದ್ಯಾರ್ಥಿಯ ಮೊದಲ 3 ಉತ್ತರಗಳು ತಪ್ಪಾಗಿದ್ದು (ಉದಾ: ಪ್ರಶ್ನೆ 1,3,7 ಎಂದುಕೊಳ್ಳೋಣ) 41,42,43 ಕ್ರಮ ಸಂಖ್ಯೆಯ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿದ್ದರೂ ಈ ಉತ್ತರಗಳನ್ನು (ಅಂದರೆ 41,42,43 ಪ್ರಶ್ನೆಗಳ ಉತ್ತರಗಳನ್ನು) ಪರಿಗಣಿಸುವುದಿಲ್ಲ (ಏಕೆಂದರೆ ಇಲ್ಲಿ, ಮೊದಲ 40 ಉತ್ತರಗಳನ್ನು ಮಾತ್ರ ಪರಿಗಣಿಸಲಾಗುತ್ತದೆ)

ಹಾಗಾಗಿ, ವಿದ್ಯಾರ್ಥಿಗಳು ಸರಿಯಾಗಿ ಯೋಚಿಸಿ, ಎಷ್ಟು ಪ್ರಶ್ನೆಗಳಿಗೆ ಉತ್ತರಿಸಬೇಕೋ ಅಷ್ಟಕ್ಕೆ ಮಾತ್ರಾ ಕ್ರಮಾನುಗತವಾಗಿ ಉತ್ತರಿಸಿ.



3. ಪ್ರತಿಯೊಂದು ಪ್ರಶ್ನೆಯ ಕ್ರಮ ಸಂಖ್ಯೆಯ ಮುಂದೆ, ಉತ್ತರಿಸಲು 4 ವೃತ್ತಗಳನ್ನು ಕೊಟ್ಟಿರುತ್ತದೆ. ವಿದ್ಯಾರ್ಥಿಯು ಸರಿಯಾದ ಆಯ್ಕೆಯ ವೃತ್ತವನ್ನು ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಸರಿಯಾಗಿ ತುಂಬಬೇಕು.
4. ಈ ನಾಲ್ಕೂ ವೃತ್ತಗಳ ನಂತರ, ಒಂದು ಚೌಕಾಕೃತಿಯ (ಆಯತ) ಖಾಲಿ ಸ್ಥಳವನ್ನು ಕೊಟ್ಟಿರುತ್ತದೆ. ಇಲ್ಲಿ ಸರಿಯಾದ ಆಯ್ಕೆಯನ್ನು ಬರೆಯಬೇಕು.

ಯಾವುದೋ ಒಂದು ಪ್ರಶ್ನೆಗೆ ಸರಿ ಉತ್ತರ c ಎಂದುಕೊಳ್ಳೋಣ, ಆಗ c ಯ ವೃತ್ತವನ್ನು ಸರಿಯಾಗಿ ತುಂಬಬೇಕು ಹಾಗೂ ಈ ಚೌಕದಲ್ಲಿ c ಎಂದೂ ಬರೆಯಬೇಕು.

ಒಂದುವೇಳೆ, ಕೇವಲ ವೃತ್ತವನ್ನು ತುಂಬಿ ಈ ಚೌಕವನ್ನು ತುಂಬದಿದ್ದರೆ ಆ ಪ್ರಶ್ನೆ ಮತ್ತು ಉತ್ತರವನ್ನು ಪರಿಗಣಿಸಲಾಗುವುದಿಲ್ಲ ಮತ್ತು ವಿದ್ಯಾರ್ಥಿಯು ಈ ಪ್ರಶ್ನೆಗೆ ಉತ್ತರಿಸಿಲ್ಲ ಎಂದು ಪರಿಗಣಿಸಲಾಗುತ್ತದೆ.

ಒಂದುವೇಳೆ, ವೃತ್ತವನ್ನು ತುಂಬದೇ, ಚೌಕದಲ್ಲಿ ಮಾತ್ರಾ ಉತ್ತರಿಸಿದ್ದರೆ ಆ ಪ್ರಶ್ನೆಯನ್ನು ಪರಿಗಣಿಸಲಾಗುತ್ತದೆ.

ಹಾಗಾಗಿ, ವೃತ್ತವನ್ನು ತುಂಬುವುದು ಮತ್ತು ಚೌಕದಲ್ಲಿ ಸರಿ ಉತ್ತರವನ್ನು ಬರೆಯುವುದು ಎರಡೂ ಮುಖ್ಯ.

ಒಂದೊಮ್ಮೆ ವಿದ್ಯಾರ್ಥಿಯು ತಪ್ಪು ವೃತ್ತವನ್ನು ತುಂಬಿದ್ದರೆ ಸರಿಪಡಿಸಿಕೊಳ್ಳಲು ಸಹಾಯಕವಾಗಲು ಈ ಚೌಕವನ್ನು ಕೊಡಲಾಗಿದೆ.

ಚೌಕದಲ್ಲಿರುವ ಉತ್ತರವೇ ಅಂತಿಮ ಎಂದು ಪರಿಗಣಿಲಾಗುತ್ತದೆ. ಹಾಗಾಗಿ ವಿದ್ಯಾರ್ಥಿಗಳು ವೃತ್ತವನ್ನು ಮೊದಲು ತುಂಬಿ ನಂತರ ಆ ಉತ್ತರವು ಸರಿಯಾಗಿದೆ ಎಂದು ಮತ್ತೊಮ್ಮೆ ಖಚಿತಪಡಿಸಿಕೊಂಡ ಮೇಲೆ ಈ ಚೌಕವನ್ನು ತುಂಬಿ.

5. ಈ ನಾಲ್ಕೂ ವೃತ್ತಗಳು ಮತ್ತು ಚೌಕದ ನಂತರ ಮತ್ತೊಂದು ವೃತ್ತವನ್ನು ಕೊಡಲಾಗಿದೆ. ಯಾವ ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲವೋ ಆ ಪ್ರಶ್ನೆಗಳ ಕ್ರಮಾಂಕಗಳಿಗೆ ಈ ವೃತ್ತವನ್ನು ತುಂಬಬೇಕು.

ಉದಾಹರಣೆಗೆ: 4 ನೆಯ ಪ್ರಶ್ನೆಗೆ ಉತ್ತರಿಸದಿದ್ದರೆ ಆಗ 4ನೆಯ ಪ್ರಶ್ನೆಯ ಈ ವೃತ್ತವನ್ನು ತುಂಬಬೇಕು. ಅಂದರೆ, ವಿದ್ಯಾರ್ಥಿಯು ನಾಲ್ಕನೆಯ ಪ್ರಶ್ನೆಗೆ ಉತ್ತರಿಸಿಲ್ಲ ಎಂದು ಅರ್ಥ.

6. ಒಂದುವೇಳೆ, ಪ್ರಶ್ನೆಯ ನಾಲ್ಕೂ ವೃತ್ತಗಳು, ಚೌಕ ಮತ್ತು ಐದನೆಯ ವೃತ್ತ ಎಲ್ಲವನ್ನೂ ಖಾಲಿ ಬಿಟ್ಟಿದ್ದರೆ, ಆ ಪ್ರಶ್ನೆಗೆ ವಿದ್ಯಾರ್ಥಿಯು ಉತ್ತರಿಸಿಲ್ಲ ಎಂದು ಪರಿಗಣಿಸಲಾಗುತ್ತದೆ.

ಹೀಗೆ, ಈ ಮೇಲಿನ ಎಲ್ಲ ವಿಷಯಗಳನ್ನೂ ಸರಿಯಾಗಿ ತಿಳಿದುಕೊಂಡು ಇನ್ನೇನಾದರೂ ಸಂದೇಹಗಳಿದ್ದರೆ ನಿಮ್ಮ ಶಿಕ್ಷಕರಿಂದ ತಿಳಿದುಕೊಂಡು ಒಎಂಆರ್ ಹಾಳೆಗಳಲ್ಲಿ ಸರಿಯಾಗಿ ಆತ್ಮ ವಿಶ್ವಾಸದಿಂದ ಉತ್ತರಿಸಿ. ಶುಭವಾಗಲಿ.

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್ ಪ್ರೈವೇಟ್ ಲಿಮಿಟೆಡ್)

ವಿದ್ಯಾರ್ಥಿ ವೇತನ ಕೈಪಿಡಿ

ಆಕ್ಸಿಲೋಸ್ ಎಡೆವೇಟ್ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021-22

ವಿವರ: ಆಕ್ಸಿಲೋ ಫಿನ್ಸರ್ವ್ ಕಂಪನಿಯು 9ರಿಂದ 12ನೇ ತರಗತಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: ಕೋವಿಡ್ ಕಾರಣದಿಂದಾಗಿ ಕುಟುಂಬದ ದುಡಿಯುವ ಸದಸ್ಯನನ್ನು ಕಳೆದುಕೊಂಡಿದ್ದರೆ ಅಥವಾ ಕೆಲಸ ಕಳೆದುಕೊಂಡಿದ್ದರೆ ಅಂಥ ಕುಟುಂಬದ ಮಕ್ಕಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಕುಟುಂಬದ ವಾರ್ಷಿಕ ಆದಾಯವು ₹6 ಲಕ್ಷವನ್ನು ಮೀರಿರಬಾರದು.

ಆರ್ಥಿಕ ಸಹಾಯ: ₹30 ಸಾವಿರದವರೆಗೆ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15 ಡಿಸೆಂಬರ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/AUES1

ಎಸ್‌ಟಿಎಫ್‌ಸಿ ಇಂಡಿಯಾ ಮೆರಿಟೋರಿಯಸ್ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021

ವಿವರ: ಕಷ್ಟದಲ್ಲಿರುವ ವಾಣಿಜ್ಯ ಸಾರಿಗೆ ಚಾಲಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ (ಎಸ್‌ಟಿಎಫ್‌ಸಿ) ಲಿಮಿಟೆಡ್ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: ಡಿಪ್ಲೊಮೊ/ಐಟಿಐ/ಪಾಲಿಟೆಕ್ನಿಕ್, ಪದವಿ, ಎಂಜಿನಿಯರಿಂಗ್ (3-4ನೇ ವರ್ಷ) ಓದುತ್ತಿರುವ ವಾಣಿಜ್ಯ ಸಾರಿಗೆ ಚಾಲಕರ ಮಕ್ಕಳು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. 10 ಮತ್ತು 12ನೇ ತರಗತಿಯಲ್ಲಿ ಕನಿಷ್ಠ ಶೇ 60 ರಷ್ಟು ಅಂಕ ಪಡೆದಿರಬೇಕು. ಕುಟುಂಬ ವಾರ್ಷಿಕ ಆದಾಯವು ₹4 ಲಕ್ಷ ಮೀರಿರಬಾರದು.

ಆರ್ಥಿಕ ಸಹಾಯ: ಐಟಿಐ/ಪಾಲಿಟೆಕ್ನಿಕ್/ಡಿಪ್ಲೊಮೊ ವಿದ್ಯಾರ್ಥಿಗಳಿಗೆ ₹15 ಸಾವಿರ (1 ವರ್ಷ) ಪದವಿ/ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ₹35 ಸಾವಿರ (4 ವರ್ಷ)

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ನವೆಂಬರ್, 2021

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/praja/SIMD4

ಕೃಪೆ:buddy4study.com

KMAT - 2021
MBA & MCA
The Karnataka Private Post Graduate Colleges Association which includes 169+ university affiliated & AICTE approved colleges across Karnataka for admission into MBA & MCA courses, Conducts the KMAT-2021.The test is open for all categories for students throughout country is conducted through Online Remote Proctored Internet Based Test.
Test Date : 28-11-2021
MCA : 10am to 12pm | MBA : 2pm to 4pm
How to apply :
Application form can be filled and submitted on www.kmatindia.com
Last Date for Application submission 23rd Nov 2021
Log on to : www.kmatindia.com
Helpline : +91 9513270139 & +91 9513271046

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

7ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಮರಿಲಿಂಗಯ್ಯ

ಜನನ: 08-02-1942 ಮರಣ: 22-11-2014

ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು

LOOKING TO BUILD, BUY OR SELL A PROPERTY

Please refer Classifieds on Sunday

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಎಸ್.ಎಂ.ಶಿವರಾಮು
ಸದಸ್ಯರು, ಜನತಾ ಶಿಕ್ಷಣ ಸಂಸ್ಥೆ
14.07.1958 - 11.11.2021

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ಆಡಳಿತ ಮಂಡಳಿ, ಜನತಾ ಶಿಕ್ಷಣ ಸಂಸ್ಥೆ ಪ್ರಾಂಶುಪಾಲರು,ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗ ವಿವೇಕಾನಂದ ಶಾಲಾ ಕಾಲೇಜುಗಳು ಬೆಂಗಳೂರು–560055

ಎಂಎಫ್: ಮತ್ತೆ ಮತ್ತೆ ಕೇಳುವ ಪ್ರಶ್ನೆಗಳು!

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

‘ಮ್ಯೂಚುವಲ್ ಫಂಡ್ ಹೂಡಿಕೆಗಳು ಮಾರುಕಟ್ಟೆ ರಿಸ್ಕ್‌ಗಳಿಗೆ ಒಳಪಟ್ಟಿವೆ’ ಎನ್ನುವ ಘೋಷಣೆ ಕೇಳಿದ ಕೂಡಲೇ ಅನೇಕರು ಮ್ಯೂಚುವಲ್ ಫಂಡ್ ಹೂಡಿಕೆಯ ಸಹವಾಸವೇ ಬೇಡ ಎನ್ನುವ ನಿರ್ಣಯಕ್ಕೆ ಬಂದುಬಿಡುತ್ತಾರೆ. ಆದರೆ ನೆನಪಿರಲಿ, ದೀರ್ಘಾವಧಿಯಲ್ಲಿ ಸಂಪತ್ತು ವೃದ್ಧಿಸಿಕೊಳ್ಳಲು ಇರುವ ಉತ್ತಮ ಹೂಡಿಕೆ ಆಯ್ಕೆಗಳಲ್ಲಿ ಮ್ಯೂಚುವಲ್ ಫಂಡ್‌ಗಳು ಒದಗಿಸುವ ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಪ್ರಮುಖವಾದದ್ದು. ಹಣದುಬ್ಬರದ ಪ್ರಮಾಣವನ್ನು ಮೀರಿ ಲಾಭ ಕೊಡುವ ಸಾಮರ್ಥ್ಯ ಮ್ಯೂಚುವಲ್ ಫಂಡ್ ಎಸ್‌ಐಪಿಗೆ ಇದೆ.

ಎಸ್‌ಐಪಿಯಲ್ಲಿ ಸಿಗುವ ಲಾಭ ಎಷ್ಟು?: ಅಂಕಿ- ಅಂಶಗಳನ್ನು ಗಮನಿಸಿದಾಗ, ಮ್ಯೂಚುವಲ್ ಫಂಡ್ ಹೂಡಿಕೆಗಳು ಬ್ಯಾಂಕ್ ಎಫ್.ಡಿ.ಗಿಂತ (ನಿಶ್ಚಿತ ಠೇವಣಿ) ಹೆಚ್ಚು ಲಾಭವನ್ನು ಖಂಡಿತವಾಗಿಯೂ ತಂದುಕೊಟ್ಟಿವೆ ಎಂಬುದು ಅರಿವಾಗುತ್ತದೆ. 2008ರ ಜಾಗತಿಕ ಆರ್ಥಿಕ ಬಿಕ್ಕಟ್ಟು, 2011ರ ಐರೋಪ್ಯ ರಾಷ್ಟ್ರಗಳ ಸಾಲ ಬಿಕ್ಕಟ್ಟು, 2016ರ ನೋಟು ರದ್ದತಿ, 2020ರ ಕೋವಿಡ್ ತಲ್ಲಣ... ಹೀಗೆ ವಿವಿಧ ಸಂದರ್ಭಗಳಲ್ಲಿ ಮಾರುಕಟ್ಟೆಗಳ ಏಳುಬೀಳಿನ ನಡುವೆಯೂ ದೀರ್ಘಾವಧಿಯಲ್ಲಿ ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರನಿಗೆ ಸಂಪತ್ತು ಗಳಿಸಿಕೊಟ್ಟಿವೆ. ಮ್ಯೂಚುವಲ್ ಫಂಡ್ ಹೂಡಿಕೆಗಳಲ್ಲಿ ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್, ಸ್ಮಾಲ್ ಕ್ಯಾಪ್ ಮತ್ತು ಮಲ್ಟಿಕ್ಯಾಪ್ ಎಂಬ ವಿವಿಧ ಮಾದರಿಗಳಿವೆ.

ಒಂದೊಂದು ಮಾದರಿಯ ಹೂಡಿಕೆಗಳು ಒಂದೊಂದು ರೀತಿಯ ಲಾಭಾಂಶ ಕೊಟ್ಟಿದ್ದರೂ ಸರಾಸರಿ ಪರಿಗಣಿಸಿದಾಗ ಮ್ಯೂಚುವಲ್ ಫಂಡ್ ಎಸ್‌ಐಪಿಗಳು ಶೇ 8ರಿಂದ ಶೇ 20ರವರೆಗೆ ಲಾಭ ಕೊಟ್ಟಿವೆ.

ಎಸ್‌ಐಪಿಯಲ್ಲಿ ಎಷ್ಟು ಹೂಡಿಕೆ ಮಾಡಬೇಕು?: ನೀವು ಎಷ್ಟು ಹಣ ಒಗ್ಗೂಡಿಸುವ ಗುರಿ ಹೊಂದಿದ್ದೀರಿ, ಪ್ರತಿ ತಿಂಗಳು ಎಷ್ಟು ಹೂಡಿಕೆ ಮಾಡಬಹುದು, ಎಷ್ಟು ಅವಧಿಗೆ ಹೂಡಿಕೆ ಮಾಡಬೇಕು ಮತ್ತು ನಿರೀಕ್ಷೆ ಮಾಡುವ ಲಾಭಾಂಶ ಎಷ್ಟು ಎನ್ನುವ ನಾಲ್ಕು ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡ ಬಳಿಕ ಮ್ಯೂಚುವಲ್ ಫಂಡ್ ವ್ಯವಸ್ಥಿತ ಹೂಡಿಕೆ ಯೋಜನೆಯಲ್ಲಿ (ಎಸ್‌ಐಪಿ) ಎಷ್ಟು ಹೂಡಿಕೆ ಮಾಡಬೇಕು ಎನ್ನುವುದನ್ನು ತೀರ್ಮಾನಿಸಬೇಕಾಗುತ್ತದೆ.

ಉದಾಹರಣೆಗೆ ನಿಮಗೆ 15 ವರ್ಷಗಳ ನಂತರ ಮಕ್ಕಳ ಶಿಕ್ಷಣಕ್ಕಾಗಿ ₹25 ಲಕ್ಷ ಅಗತ್ಯವಿದ್ದು ಹೂಡಿಕೆ ಮೊತ್ತಕ್ಕೆ ಶೇ 12ರಷ್ಟು ಲಾಭಾಂಶ ಸಿಗುತ್ತದೆ ಎಂದು ಭಾವಿಸಿದಲ್ಲಿ ಪ್ರತಿ ತಿಂಗಳು ₹5 ಸಾವಿರವನ್ನು ಎಸ್‌ಐಪಿ ಹೂಡಿಕೆಗೆ ಮೀಸಲಿಡಬೇಕಾಗುತ್ತದೆ.

ಎಸ್‌ಐಪಿ ಮೂಲಕ ಹೂಡಿಕೆ ಹೇಗೆ?: ಮ್ಯೂಚುವಲ್ ಫಂಡ್ ಏಜೆಂಟರ ಮೂಲಕ, ಬ್ಯಾಂಕ್ ಶಾಖೆಗಳ ಮೂಲಕ ಮ್ಯೂಚುವಲ್ ಫಂಡ್ ಎಸ್‌ಐಪಿಗಳಲ್ಲಿ ಹೂಡಿಕೆ ಮಾಡಲು ಸಾಧ್ಯವಿದೆ. ಡಿಜಿಟಲ್ ವೇದಿಕೆಗಳ ಮೂಲಕ ಅಂದರೆ, ಬ್ಯಾಂಕ್ ಜಾಲತಾಣಗಳು, ಮ್ಯೂಚುವಲ್ ಫಂಡ್ ಹೂಡಿಕೆ ಆ್ಯಪ್‌ಗಳಾದ ಗ್ರೋ, ಪೇಟಿಎಂ ಮನಿ ಮುಂತಾದ ವೇದಿಕೆಗಳನ್ನು ಬಳಸಿಕೊಂಡು ಕೂಡ ಹೂಡಿಕೆ ಮಾಡಬಹುದು. ಮ್ಯೂಚುವಲ್ ಫಂಡ್ ಪರಿಭಾಷೆಯಲ್ಲಿ ಬ್ಯಾಂಕ್ ಅಥವಾ ಏಜೆಂಟರ ಮೂಲಕ ಹೂಡಿಕೆ ಮಾಡುವ ಮ್ಯೂಚುವಲ್ ಫಂಡ್‌ಅನ್ನು ‘ರೆಗ್ಯೂಲರ್’ ಮ್ಯೂಚುವಲ್ ಫಂಡ್ ಎಂದು, ನೇರವಾಗಿ ನೀವೇ ಹೂಡಿಕೆ ಮಾಡುವ ಫಂಡ್‌ಅನ್ನು ‘ಡೈರೆಕ್ಟ್ ಮ್ಯೂಚುವಲ್ ಫಂಡ್’ ಎಂದು ಕರೆಯುತ್ತಾರೆ. ಕಡಿಮೆ ವೆಚ್ಚದಲ್ಲಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬೇಕು ಅಂದರೆ ‘ಡೈರೆಕ್ಟ್ ಮ್ಯೂಚುವಲ್ ಫಂಡ್’ ಒಳ್ಳೆಯ ಆಯ್ಕೆ.

ಸಣ್ಣ ಮೊತ್ತದ ಹೂಡಿಕೆಯೋ, ದೊಡ್ಡ ಮೊತ್ತದ ಹೂಡಿಕೆಯೋ?: ಮ್ಯೂಚುವಲ್ ಫಂಡ್ ಹೂಡಿಕೆ ಮಾಡುವಾಗ ಒಂದೇ ಬಾರಿಗೆ ದೊಡ್ಡ ಮೊತ್ತದ ಹೂಡಿಕೆ ಮಾಡುವುದು ಒಳಿತೋ ಅಥವಾ ಹಂತ ಹಂತವಾಗಿ ಎಸ್‌ಐಪಿ ಮೂಲಕ ಹಣ ತೊಡಗಿಸುವುದು ಉತ್ತಮವೋ ಎಂಬ ಪ್ರಶ್ನೆ ಎದುರಾಗುತ್ತದೆ. ಎಸ್‌ಐಪಿ ಮೂಲಕ ಹೂಡಿಕೆ ಮಾಡುವಾಗ ನೀವು ಮಾರುಕಟ್ಟೆಯ ಏರಿಳಿತಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಬೇಕಿಲ್ಲ. ನಿಯಮಿತವಾಗಿ ನಿರ್ದಿಷ್ಟ ಮೊತ್ತ ಹೂಡಿಕೆ ಮಾಡುತ್ತಾ ಹೋದರೆ ದೀರ್ಘಾವಧಿಯಲ್ಲಿ ದೊಡ್ಡ ಮೊತ್ತ ಪೇರಿಸಲು ಸಾಧ್ಯವಾಗುತ್ತದೆ. ಆದರೆ ದೊಡ್ಡ ಮೊತ್ತದ ಹೂಡಿಕೆ ಮಾಡಬೇಕಾದರೆ ಷೇರು ಮಾರುಕಟ್ಟೆಯಲ್ಲಿ ಗೂಳಿ ಓಟವಿದೆಯೋ, ಕರಡಿ ಹಿಡಿತವಿದೆಯೋ ಎಂದು ಅರಿತು ನಿರ್ಧಾರ ಕೈಗೊಳ್ಳುವುದು ಮುಖ್ಯ. ಷೇರು ಮಾರುಕಟ್ಟೆಯಲ್ಲಿ ಗೂಳಿ ಓಟವಿರುವಾಗ ದೊಡ್ಡ ಮೊತ್ತದ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಗಳಿಸಬಹುದು. ಹಾಗಾಗಿ ಯಾವ ಸಮಯದಲ್ಲಿ ದೊಡ್ಡ ಮೊತ್ತದ ಹೂಡಿಕೆ ಮಾಡುತ್ತೀರಿ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಷೇರುಪೇಟೆಯಲ್ಲಿ ಕೊನೆಗೊಂಡಿತೇ ಗೂಳಿ ಓಟ?

ಷೇರುಪೇಟೆಯಲ್ಲಿ ಗೂಳಿ ಓಟ ಸದ್ಯಕ್ಕೆ ನಿಂತಂತೆ ಕಾಣುತ್ತಿದೆ. ನವೆಂಬರ್ 18ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಕುಸಿತ ದಾಖಲಿಸಿವೆ. 59,636 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.73ರಷ್ಟು ಕುಸಿತ ಕಂಡಿದೆ. 17,764 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.87ರಷ್ಟು ಇಳಿಕೆಯಾಗಿದೆ. ಲಾಭ ಗಳಿಕೆಯ ಉದ್ದೇಶಕ್ಕೆ ಷೇರುಗಳ ಮಾರಾಟ, ಹಣದುಬ್ಬರ ಸೇರಿ ಹಲವು ಅಂಶಗಳು ಸೂಚ್ಯಂಕಗಳು ತಗ್ಗಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ, ನಿಫ್ಟಿ ವಾಹನ ವಲಯ ಮಾತ್ರ ಶೇ 0.35ರಷ್ಟು ಗಳಿಕೆ ಕಡಿದೆ. ಉಳಿದಂತೆ ನಿಫ್ಟಿ ಲೋಹ ಶೇ 5.32ರಷ್ಟು, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 3.43ರಷ್ಟು, ರಿಯಲ್ ಎಸ್ಟೇಟ್ ಶೇ 3.26ರಷ್ಟು, ಮಾಧ್ಯಮ ಶೇ 2.14ರಷ್ಟು, ಫಾರ್ಮಾ ಶೇ 2.13ರಷ್ಟು, ಮಿಡ್ ಕ್ಯಾಪ್ 100 ಶೇ 2.05ರಷ್ಟು, ನಿಫ್ಟಿ ಬ್ಯಾಂಕ್ ಶೇ 1.95ರಷ್ಟು, ಮಾಹಿತಿ ತಂತ್ರಜ್ಞಾನ ಶೇ 0.90ರಷ್ಟು ಮತ್ತು ಎಫ್‌ಎಂಸಿಜಿ ಶೇ 0.12ರಷ್ಟು ಕುಸಿದಿವೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಮಾರುತಿ ಶೇ 9ರಷ್ಟು, ಪವರ್ ಗ್ರಿಡ್ ಶೇ 6ರಷ್ಟು, ಏಷ್ಯನ್ ಪೇಂಟ್ಸ್ ಶೇ 3ರಷ್ಟು ಮತ್ತು ಐಟಿಸಿ ಶೇ 2ರಷ್ಟು ಗಳಿಕೆ ಕಂಡಿವೆ. ಕೋಲ್ ಇಂಡಿಯಾ ಶೇ 8ರಷ್ಟು, ಟಾಟಾ ಸ್ಟೀಲ್ ಶೇ 8ರಷ್ಟು, ಶ್ರೀ ಸಿಮೆಂಟ್ ಶೇ 7ರಷ್ಟು ಮತ್ತು ಹಿಂಡಾಲ್ಕೋ ಶೇ 6ರಷ್ಟು ಕುಸಿತ ದಾಖಲಿಸಿವೆ.

ಮುನ್ನೋಟ: ಕಳೆದ ವಾರ ನಿಫ್ಟಿ 20 ದಿನಗಳ ಸರಾಸರಿ ಏರಿಳಿತ ಮತ್ತು 50 ದಿನಗಳ ಸರಾಸರಿ ಏರಿಳಿತಕ್ಕಿಂತ ಕೆಳಮಟ್ಟಕ್ಕೆ ಕುಸಿತಕಂಡಿದೆ. ಅಕ್ಟೋಬರ್‌ನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 40 ಸಾವಿರ ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಈ ವಾರ ವಿದೇಶಿ ಹೂಡಿಕೆ ಯಾವ ರೀತಿ ಹರಿದು ಬರಲಿದೆ, ಡಾಲರ್ ಸೂಚ್ಯಂಕ ಯಾವ ದಿಕ್ಕಿನಲ್ಲಿ ಸಾಗಲಿದೆ ಮತ್ತು ಜಾಗತಿಕ ಮಾರುಕಟ್ಟೆಗಳಲ್ಲಿ ಎಷ್ಟು ಸಕಾರಾತ್ಮಕತೆ ಇರಲಿದೆ ಎನ್ನುವ ಮೂರು ಪ್ರಮುಖ ಅಂಶಗಳು ದೇಶಿ ಮಾರುಕಟ್ಟೆಯ ದಿಕ್ಕು ನಿರ್ಧರಿಸಲಿವೆ. ನವೆಂಬರ್ 22ರಂದು ಭಾರತ- ಅಮೆರಿಕ ವ್ಯಾಪಾರದ ಕುರಿತು ಮಾತುಕತೆ ನಡೆಯಲಿದೆ. ನವೆಂಬರ್ 23ರಂದು ಅಮೆಜಾನ್ ಮತ್ತು ಫ್ಯೂಚರ್ ಗ್ರೂಪ್ ನಡುವಿನ ವಿವಾದದ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯಲಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹460
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹455

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹200-511
ದ್ವಿತಳಿ (ಬಿ.ವಿ)
₹275-666

ಸಾಲ ಕೊಡಲು 600 ಅಕ್ರಮ ಆ್ಯಪ್

• ವಿಜಯ್ ಜೋಷಿ

ಬೆಂಗಳೂರು: ಡಿಜಿಟಲ್ ವೇದಿಕೆಗಳ ಮೂಲಕ ಸಾಲ ವಿತರಣೆ ಮಾಡುವ 600 ಅಕ್ರಮ ಆ್ಯಪ್‌ಗಳು ದೇಶದಲ್ಲಿ ಇವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರಚಿಸಿದ್ದ ಕಾರ್ಯಕಾರಿ ಸಮಿತಿಯೊಂದು ಹೇಳಿದೆ. ಈ ಆ್ಯಪ್‌ಗಳು 81 ಬೇರೆ ಬೇರೆ ಆ್ಯಪ್ ಸ್ಟೋರ್‌ಗಳಲ್ಲಿ ಲಭ್ಯವಿವೆ.

ಡಿಜಿಟಲ್ ವೇದಿಕೆಗಳ ಮೂಲಕ ಸಾಲ ನೀಡುವುದು ಹೆಚ್ಚಳ ಆಗುತ್ತಿರುವುದು ಹಾಗೂ ಆ ವೇದಿಕೆಗಳ ಮೂಲಕ ಸಾಲ ಪಡೆದವರ ಹಕ್ಕುಗಳ ರಕ್ಷಣೆ ಬಗ್ಗೆ ಅಧ್ಯಯನ ನಡೆಸಲು ಆರ್‌ಬಿಐ ಈ ಸಮಿತಿಯನ್ನು ರಚಿಸಿತ್ತು. ಅದು ಈಚೆಗೆ ತನ್ನ ವರದಿ ಸಲ್ಲಿಸಿದೆ. ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆ ಇರುವ ಸ್ಮಾರ್ಟ್‌ಫೋನ್ ಬಳಕೆ ಮಾಡುವವರಿಗೆ ದೇಶದಲ್ಲಿ ಇಂತಹ ಒಟ್ಟು 1,100 ಆ್ಯಪ್‌ಗಳು ಲಭ್ಯವಿವೆ ಎಂಬ ಮಾತು ಸಮಿತಿಯ ವರದಿಯಲ್ಲಿ ಇದೆ. ಈ ವರ್ಷದ ಜನವರಿಯಿಂದ ಫೆಬ್ರುವರಿ ಕೊನೆಯವರೆಗಿನ ಮಾಹಿತಿ ಅನ್ವಯ ಇಷ್ಟು ಆ್ಯಪ್‌ಗಳು ಇವೆ ಎಂದು ಸಮಿತಿಯು ತಿಳಿಸಿದೆ. ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆ ಇರುವ ಸ್ಮಾರ್ಟ್‌ಫೋನ್‌ಗಳಲ್ಲಿ ಗೂಗಲ್‌ನ ಪ್ಲೇಸ್ಟೋರ್ ಅಲ್ಲದೆ, ಬೇರೆ ಬೇರೆ ಆ್ಯಪ್ ಸ್ಟೋರ್‌ಗಳಿಂದ ಪಡೆದ ಆ್ಯಪ್‌ಗಳನ್ನೂ ಸ್ಥಾಪಿಸಿಕೊಳ್ಳಲು (ಇನ್‌ಸ್ಟಾಲ್) ಅವಕಾಶ ಇದೆ.

‘ಸಾಲ ನೀಡುವುದಾಗಿ ಆಮಿಷ ಒಡ್ಡುವ ಕೆಲವು ಅನಧಿಕೃತ ಆ್ಯಪ್‌ಗಳ ಜಾಲಕ್ಕೆ ಬಲಿಯಾಗಬಾರದು. ಸಾಲ ಕೊಡುವುದಾಗಿ ಹೇಳುವ ಇಂತಹ ಆ್ಯಪ್‌ಗಳ ಸಂಖ್ಯೆ ಹೆಚ್ಚುತ್ತಿದೆ ಎಂದೂ ಅದು ಹೇಳಿದೆ. ಸಾಲವನ್ನು ತಕ್ಷಣಕ್ಕೆ, ಯಾವುದೇ ತೊಂದರೆ ಇಲ್ಲದೆ ನೀಡುವುದಾಗಿ ಹೇಳುವ ಇಂತಹ ಆ್ಯಪ್‌ಗಳ ಜಾಲದಲ್ಲಿ ಸಾರ್ವಜನಿಕರು ಹಾಗೂ ಕೆಲವು ಸಣ್ಣ ಉದ್ದಿಮೆಗಳು ಸಿಲುಕಿರುವ ವರದಿಗಳು ಇವೆ’ ಎಂದು ಆರ್‌ಬಿಐ 2020ರ ಡಿಸೆಂಬರ್‌ನಲ್ಲಿ ಸಾರ್ವಜನಿಕರಿಗೆ ಕಿವಿಮಾತು ಹೇಳಿತ್ತು. ಇಂತಹ ಆ್ಯಪ್‌ಗಳ ಬಗ್ಗೆ ದೂರುಗಳು ಇದ್ದರೆ ಸಚೇತ್ (sachet.rbi.org.in) ಪೋರ್ಟಲ್ ಮೂಲಕ ಅದನ್ನು ದಾಖಲಿಸಬಹುದು ಎಂದು ಕೂಡ ತಿಳಿಸಿತ್ತು.

ಈ ಪೋರ್ಟಲ್ ಮೂಲಕ ಸಾರ್ವಜನಿಕರು ದೂರು ಸಲ್ಲಿಸುವುದು ಜಾಸ್ತಿ ಆಗುತ್ತಿದೆ. 2020ರ ಜನವರಿಯಿಂದ 2021ರ ಮಾರ್ಚ್‌ವರೆಗಿನ ಅವಧಿಯಲ್ಲಿ 2,562 ದೂರುಗಳು ದಾಖಲಾಗಿವೆ. ಬಹುತೇಕ ದೂರುಗಳು ರಿಸರ್ವ್ ಬ್ಯಾಂಕ್ ನಿಯಂತ್ರಣದಲ್ಲಿ ಇಲ್ಲದ ಸಂಸ್ಥೆಗಳ ಆ್ಯಪ್‌ಗಳ ವಿರುದ್ಧ ಇವೆ. ಕೆಲವೊಂದಿಷ್ಟು ದೂರುಗಳು ಸಣ್ಣ ಪ್ರಮಾಣದ ಬ್ಯಾಂಕೇತರ ಹಣಕಾಸು ಸಂಸ್ಥೆಗಳ (ಎನ್‌ಬಿಎಫ್‌ಸಿ) ವಿರುದ್ಧ ಇವೆ. ಇಂತಹ ಆ್ಯಪ್‌ಗಳ ವಿರುದ್ಧ ಸಚೇತ್ ಪೋರ್ಟಲ್ ಮೂಲಕ ದಾಖಲಾಗಿರುವ ರಾಜ್ಯವಾರು ದೂರುಗಳ ಪಟ್ಟಿಯಲ್ಲಿ ಕರ್ನಾಟಕವು ಎರಡನೆಯ ಸ್ಥಾನದಲ್ಲಿ ಇದೆ. ಮೊದಲ ಸ್ಥಾನದಲ್ಲಿ ಮಹಾರಾಷ್ಟ್ರ ಇದೆ.

ಡಿಜಿಟಲ್ ವೇದಿಕೆಗಳ ಮೂಲಕ ಸಾಲ ನೀಡುವುದನ್ನು, ಸಾಲ ಪಡೆಯುವುದನ್ನು ಸುರಕ್ಷಿತಗೊಳಿಸಲು ಕಾರ್ಯಪಡೆಯುವ ಕೆಲವು ಶಿಫಾರಸುಗಳನ್ನು ಮಾಡಿದೆ. ಡಿಜಿಟಲ್ ವೇದಿಕೆ ಮೂಲಕ ಸಾಲ ಕೊಡುವ ಆ್ಯಪ್‌ಗಳು ನೋಡಲ್ ಸಂಸ್ಥೆಯೊಂದರ ಮೂಲಕ ನೋಂದಣಿ ಮಾಡಿಸಿಕೊಳ್ಳುವ ವ್ಯವಸ್ಥೆ ಇರಬೇಕು. ಇಂತಹ ಆ್ಯಪ್ ಕಂಪನಿಗಳು ಸ್ವಯಂ ನಿಯಂತ್ರಣಕ್ಕೆ ಪ್ರತ್ಯೇಕ ವ್ಯವಸ್ಥೆಯೊಂದನ್ನು ರೂಪಿಸಿಕೊಳ್ಳಬೇಕು. ಡಿಜಿಟಲ್ ವೇದಿಕೆ ಮೂಲಕ ಸಾಲ ನೀಡುವಲ್ಲಿ ಅಕ್ರಮ ನಡೆಯುವುದನ್ನು ತಡೆಯಲು ಪ್ರತ್ಯೇಕ ಕಾಯ್ದೆ ರೂಪುಗೊಳ್ಳಬೇಕು ಎಂದು ಕಾರ್ಯಪಡೆಯ ಶಿಫಾರಸಿನಲ್ಲಿ ಹೇಳಲಾಗಿದೆ.

ದೂರುಗಳು – ಯಾವ ರಾಜ್ಯದಿಂದ, ಎಷ್ಟು?

ರಾಜ್ಯ	ದೂರುಗಳ ಸಂಖ್ಯೆ
ಮಹಾರಾಷ್ಟ್ರ	572
ಕರ್ನಾಟಕ	394
ದೆಹಲಿ	352
ಹರಿಯಾಣ	314
ತೆಲಂಗಾಣ	185
ಆಂಧ್ರಪ್ರದೇಶ	144
ಉತ್ತರಪ್ರದೇಶ	142
ಪಶ್ಚಿಮ ಬಂಗಾಳ	138
ತಮಿಳುನಾಡು	57
ಗುಜರಾತ್	56

ಜನಸಾಮಾನ್ಯರು ಆರ್ಥಿಕ ಒತ್ತಡದ ಕಾರಣದಿಂದಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ. ಕೇಂದ್ರ ಸರ್ಕಾರ ಹಾಗೂ ಆರ್‌ಬಿಐ ರೂಪಿಸಿರುವ ವಿತ್ತೀಯ ಸೇರ್ಪಡೆ ಕಾರ್ಯಕ್ರಮ ಮತ್ತು ಬ್ಯಾಂಕಿಂಗ್ ಸಾಕ್ಷರತೆ ಅಭಿಯಾನ ಪೂರ್ಣ ಪ್ರಮಾಣದಲ್ಲಿ ಯಶಸ್ಸು ಕಾಣದಿರುವುದೇ ಇದಕ್ಕೆ ಕಾರಣ.

ಯು.ಪಿ. ಪುರಾಣಿಕ್, ಬ್ಯಾಂಕಿಂಗ್ ತಜ್ಞ

ಹೋಂಡಾ ಕಂಪನಿಗೆ 40 ಲಕ್ಷ ಗ್ರಾಹಕರು

ಬೆಂಗಳೂರು: ಹೋಂಡಾ ಮೋಟಾರ್ ಸೈಕಲ್ ಆ್ಯಂಡ್ ಸ್ಕೂಟರ್ ಕಂಪನಿಯು ರಾಜ್ಯದಲ್ಲಿ ಒಟ್ಟು 40 ಲಕ್ಷಕ್ಕಿಂತ ಹೆಚ್ಚು ಗ್ರಾಹಕರನ್ನು ಪಡೆದಿರುವುದಾಗಿ ಹೇಳಿದೆ.

ಕರ್ನಾಟಕದಲ್ಲಿ ಮೊದಲ 20 ಲಕ್ಷ ಗ್ರಾಹಕರನ್ನು ಹೊಂದಲು ಹೋಂಡಾ ದ್ವಿಚಕ್ರ ವಾಹನ ಕಂಪನಿಯು 16 ವರ್ಷ ತೆಗೆದುಕೊಂಡಿತ್ತು. ಈಗ ಐದೇ ವರ್ಷಗಳಲ್ಲಿ ಮತ್ತೆ 20 ಲಕ್ಷ ಗ್ರಾಹಕರನ್ನು ಕಂಪನಿಯು ತನ್ನದಾಗಿಸಿಕೊಂಡಿದೆ ಎಂದು ಪ್ರಕಟಣೆ ತಿಳಿಸಿದೆ. ಹೊಸ ಮಾದರಿಯ ವಾಹನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದು, ವಿಶ್ವಾಸಾರ್ಹ ಗ್ರಾಹಕ ಸೇವೆ ಒದಗಿಸಿದ್ದು ಈ ಸಾಧನೆಗೆ ಕಾರಣವಾಗಿವೆ ಎಂದು ಕಂಪನಿ ಹೇಳಿದೆ.

ಹುತಾತ್ಮ ಯೋಧನ ಪತ್ನಿ ಸೇನಾಧಿಕಾರಿ

ಚೆನ್ನೈ: ಭಾರತೀಯ ಸೇನೆಯ ಹುತಾತ್ಮ ಯೋಧ ನಾಯಕ್ ದೀಪಕ್ ಕುಮಾರ್ ಅವರ ಪತ್ನಿ ಜ್ಯೋತಿ ದೀಪಕ್ ನೈನ್ವಲ್ ಅವರು ಚೆನ್ನೈನ ಆಫಿಸರ್ಸ್ ಟ್ರೈನಿಂಗ್ ಅಕಾಡೆಮಿಯಲ್ಲಿ ತರಬೇತಿ ಪೂರ್ಣಗೊಳಿಸುವ ಮೂಲಕ ಸೇನೆಯಲ್ಲಿ ಅಧಿಕಾರಿಯಾಗಿದ್ದಾರೆ.

ಡೆಹ್ರಾಡೂನ್‌ನ ಗೃಹಿಣಿ ಜ್ಯೋತಿ ಅವರ ಪತಿ 2018ರಲ್ಲಿ ಜಮ್ಮು- ಕಾಶ್ಮೀರದಲ್ಲಿ ಉಗ್ರರ ವಿರುದ್ಧ ನಡೆದ ಕಾರ್ಯಾಚರಣೆಯಲ್ಲಿ ಹುತಾತ್ಮರಾಗಿದ್ದಾರೆ.

ಡೀಸೆಲ್ ಕಾರು ಉತ್ಪಾದನೆ ಇಲ್ಲ: ಮಾರುತಿ ಸುಜುಕಿ

ನವದೆಹಲಿ (ಪಿಟಿಐ): ಡೀಸೆಲ್ ಎಂಜಿನ್ ಕಾರುಗಳ ತಯಾರಿಕೆಯನ್ನು ಮತ್ತೆ ಆರಂಭಿಸುವುದಿಲ್ಲ ಎಂದು ದೇಶದ ಪ್ರಮುಖ ಕಾರು ತಯಾರಿಕಾ ಕಂಪನಿ ಮಾರುತಿ ಸುಜುಕಿ ಸ್ಪಷ್ಟಪಡಿಸಿದೆ.

2023ರ ವೇಳೆಗೆ ಮುಂದಿನ ಹಂತದ ಮಾಲಿನ್ಯ ನಿಯಂತ್ರಣ ನಿಯಮಗಳು ಜಾರಿಗೆ ಬರಲಿದ್ದು, ಡೀಸೆಲ್ ಕಾರುಗಳ ಬೆಲೆಯನ್ನು ಅವು ಇನ್ನಷ್ಟು ಹೆಚ್ಚಿಸಲಿವೆ. ಆಗ ಡೀಸೆಲ್ ಕಾರುಗಳ ಮಾರಾಟವು ಮತ್ತಷ್ಟು ಕಡಿಮೆಯಾಗಲಿದೆ ಎಂದು ಭಾವಿಸಿರುವುದಾಗಿ ಕಂಪನಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ನಾವು ಡೀಸೆಲ್ ಕಾರು ತಯಾರಿಸುವತ್ತ ಮತ್ತೆ ಮುಖ ಮಾಡುತ್ತಿಲ್ಲ. ಡೀಸೆಲ್ ಕಾರುಗಳ ಕುರಿತು ಅಧ್ಯಯನ ನಡೆಸಿ, ಗ್ರಾಹಕರಿಂದ ಬೇಡಿಕೆ ಇದ್ದರೆ ಆ ಬಗ್ಗೆ ಚಿಂತನೆ ನಡೆಸುತ್ತೇವೆ ಎಂದಷ್ಟೇ ಈ ಹಿಂದೆ ಹೇಳಿದ್ದೆವು. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಡೀಸೆಲ್ ಕಾರು ತಯಾರಿಸಲು ಮುಂದಾಗುವುದಿಲ್ಲ. ಇದಕ್ಕೆ ಮುಂದಿನ ಹಂತದ ಮಾಲಿನ್ಯ ನಿಯಂತ್ರಣ ನಿಯಮಗಳೇ ಮುಖ್ಯ ಕಾರಣ’ ಎಂದು ಮಾರುತಿ ಸುಜುಕಿಯ ಮುಖ್ಯ ತಾಂತ್ರಿಕ ಅಧಿಕಾರಿ ಸಿ.ವಿ.ರಾಮನ್ ತಿಳಿಸಿದ್ದಾರೆ.

ಬೌನ್ಸ್ ಇನ್‌ಫಿನಿಟಿ ಡಿ. 2ಕ್ಕೆ ಅನಾವರಣ

ಮುಂಬೈ (ಪಿಟಿಐ): ಬಾಡಿಗೆ ಆಧಾರದಲ್ಲಿ ದ್ವಿಚಕ್ರ ವಾಹನಗಳ ಸೇವೆ ಒದಗಿಸುವ ಬೌನ್ಸ್ ಕಂಪನಿಯು ತಯಾರಿಸಲಿರುವ ವಿದ್ಯುತ್ ಚಾಲಿತ (ಇ.ವಿ.) ದ್ವಿಚಕ್ರ ವಾಹನ ‘ಇನ್‌ಫಿನಿಟಿ’ ಡಿಸೆಂಬರ್‌ನಲ್ಲಿ ಅನಾವರಣ ಆಗಲಿದೆ. ಈ ಇ.ವಿ. ಗ್ರಾಹಕರ ಕೈಗೆ 2022ರ ಆರಂಭದಲ್ಲಿ ಸಿಗುವ ಸಾಧ್ಯತೆ ಇದೆ.

ಬೆಂಗಳೂರು ಮೂಲದ ಬೌನ್ಸ್ ಕಂಪನಿಯು ‘22ಮೋಟರ್ಸ್’ ಕಂಪನಿಯನ್ನು ಹಾಗೂ ಅದು ರಾಜಸ್ಥಾನದ ಭಿವಡಿಯಲ್ಲಿ ಹೊಂದಿರುವ ತಯಾರಿಕಾ ಘಟಕವನ್ನು ಸ್ವಾಧೀನಕ್ಕೆ ತೆಗೆದುಕೊಂಡಿದೆ. ದಕ್ಷಿಣ ಭಾರತದಲ್ಲಿ ದ್ವಿಚಕ್ರ ವಾಹನ ತಯಾರಿಕೆಗೆ ಒಂದು ಘಟಕ ಆರಂಭಿಸುವ ಆಲೋಚನೆ ತನಗೆ ಇದೆ ಎಂದೂ ಬೌನ್ಸ್ ತಿಳಿಸಿದೆ.

ಬೌನ್ಸ್ ಇನ್‌ಫಿನಿಟಿ ದ್ವಿಚಕ್ರ ವಾಹನವು ಡಿಸೆಂಬರ್ 2ರಂದು ಅನಾವರಣ ಆಗಲಿದೆ. ಅದೇ ದಿನದಿಂದ ಬುಕಿಂಗ್ ಅವಕಾಶ ಕೂಡ ಲಭ್ಯವಾಗಲಿದೆ. ₹499 ಪಾವತಿಸಿ ಈ ದ್ವಿಚಕ್ರ ವಾಹನವನ್ನು ಬುಕ್ ಮಾಡಬಹುದು. ಇವು ಭಾರತದಲ್ಲೇ ತಯಾರಾಗಲಿವೆ ಎಂದು ಬೌನ್ಸ್ ಪ್ರಕಟಣೆ ತಿಳಿಸಿದೆ.

ವಾಹನದಿಂದ ಹೊರಕ್ಕೆ ತೆಗೆಯಬಹುದಾದ ಲಿಥಿಯಮ್-ಅಯಾನ್ ಬ್ಯಾಟರಿಯನ್ನು ಈ ಸ್ಕೂಟರ್ ಹೊಂದಿರಲಿದೆ. ಬ್ಯಾಟರಿ ಇಲ್ಲದ ಸ್ಕೂಟರ್‌ಅನ್ನು ಗ್ರಾಹಕರು ಕಡಿಮೆ ಬೆಲೆಗೆ ಖರೀದಿಸಬಹುದು. ನಂತರ, ಬೌನ್ಸ್ ಬ್ಯಾಟರಿ ಸ್ವ್ಯಾಪಿಂಗ್ ಜಾಲವನ್ನು ಬಳಸಿಕೊಂಡು ವಾಹನ ಚಲಾಯಿಸಬಹುದು. ಆಗ ಅವರು ಬ್ಯಾಟರಿ ಸ್ವ್ಯಾಪಿಂಗ್‌ಗೆ ಮಾತ್ರ ಹಣ ಪಾವತಿಸಿದರೆ ಸಾಕು ಎಂದೂ ಕಂಪನಿ ಹೇಳಿದೆ.

ಮರಳು ಗಣಿಗಾರಿಕೆಗೆ ಪಾರದರ್ಶಕ ವಿಧಾನ: ಎನ್‌ಜಿಟಿಗೆ ವರದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಉಡುಪಿ ಜಿಲ್ಲಾಡಳಿತವು ಮರಳು ಗಣಿಗಾರಿಕೆ ಮತ್ತು ಮರಳು ಮಾರಾಟದ ವೇಳೆ ಪಾರದರ್ಶಕ ವಿಧಾನವನ್ನು ಅನುಸರಿಸಿದೆ ಎಂದು ರಾಜ್ಯ ಸರ್ಕಾರವು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ತಿಳಿಸಿದೆ.

ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ಹೊರಡಿಸಿದ ಮಾರ್ಗಸೂಚಿಗನುಸಾರ ಮರಳು ಗಣಿಗಾರಿಕೆಯನ್ನು ನಡೆಸಲಾಗಿದೆ ಎಂದು ಎನ್‌ಜಿಟಿಯ ದಕ್ಷಿಣ ಪೀಠಕ್ಕೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಜಿಲ್ಲಾಡಳಿತವು ಹೇಳಿದೆ.

ಉಡುಪಿ ಜಿಲ್ಲೆಯಲ್ಲಿ ಮರಳು ಗಣಿಗಾರಿಕೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದ ಅರ್ಜಿಯ ವಿಚಾರಣೆಯನ್ನು ಎನ್‌ಜಿಟಿ ನಡೆಸುತ್ತಿದೆ.

‘ಏಳು ಸದಸ್ಯರನ್ನು ಒಳಗೊಂಡ ಉಡುಪಿ ಜಿಲ್ಲಾ ಮರಳು ಮೇಲ್ವಿಚಾರಣಾ ಸಮಿತಿಯನ್ನು ರಚಿಸಲಾಗಿದೆ. ಮರಳು ಗಣಿಗಾರಿಕೆ ವೇಳೆ ಮಾರ್ಗಸೂಚಿಗಳನ್ನು ಸರಿಯಾಗಿ ಪಾಲಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ಸಮಿತಿಯು ವೈಜ್ಞಾನಿಕ ಮತ್ತು ಪಾರದರ್ಶಕ ವಿಧಾನವನ್ನು ಆಯ್ಕೆ ಮಾಡಿದೆ’ ಎಂದು ಪ್ರಮಾಣಪತ್ರದಲ್ಲಿ ತಿಳಿಸಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000 -15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degreeಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100- 56,000/- ವಸತಿಯೂಟದೊಂದಿಗೆ. 7899778278, 9611715755

TOYOTA, ಟಾಟಾಮೋಟಾರ್ಸ್, ಬಿಗ್ ಬಜಾರ್‍ಸ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000- 60,000 /- ವಸತಿಯೂಟವಿದೆ. 7795837319, 9901312461

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000- 15,000. 8951315839, 9880545002

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ sslc,puc,degree ಸಂಬಳ15000 to 28000 ಸಂಪರ್ಕಿಸಿ 9980814578, 9980812378

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/-ESI & PF ಸೌಲಭ್ಯವಿರುತ್ತದೆ. ಬೆಂಗಳೂರು.ಸಂಪರ್ಕಿಸಿ: 9606385001, 9606384001.

ಬೆಂಗಳೂರಿನಲ್ಲಿರುವ ಕಂಪನಿಯಲ್ಲಿ ಕೆಲಸ ಮಾಡುವುದಕ್ಕೆ ಯುವತಿಯರು ಯುವಕರು ಬೇಕಾಗಿದ್ದಾರೆ ವಯಸ್ಸು 25ರೊಳಗೆ ವಸತಿಯೂಟವಿರುತ್ತದೆ. ಸಂಬಳ 15,000/ 25,000/ 7899931996/ 8050060001

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ವ್ಯಾಪಾರ

Business to Business

Business

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.8792252077, ಶಿವಮೊಗ್ಗ.9008013895

ಭವಿಷ್ಯ

Astrology

★||ಶ್ರೀಕಬ್ಬಾಳಮ್ಮ ದೇವಿ||★ ಜ್ಯೋತಿಷ್ಯಾಲಯ ಪ್ರೀತಿಪ್ರೇಮ,ದಾಂಪತ್ಯಕಿರಿಕಿರಿ, ಸಾಲದಬಾದೆ,ವ್ಯಾಪಾರ, ಶತ್ರುಕಾಟ,ಇನ್ಯಾವುದೇ_ಕಠಣ ಸಮಸ್ಯೆಗಳಿಗೆ_ಕೇವಲ 30_ನಿಮಿಷದಲ್ಲಿ ಶಾಶ್ವತಪರಿಹಾರ. "ಸ್ತ್ರೀಯರಿಗೆ ಕಡಿಮೆ_ಖರ್ಚಿನಲ್ಲಿ ವಿಶೇಷ_ಪರಿಹಾರ" ನಂ.1.ವಶೀಕರಣ ಸ್ಪೆಷಲಿಸ್ಟ್ ಸಹದೇವ್‌ಭಟ್. 9900222591

ಉಚಿತ ಜ್ಯೋತಿಷ್ಯವಾಣಿ. ರಾಘವೇಂದ್ರ ಕುಲಕರ್ಣಿ. ಜನವಶ, ಧನವಶ,ಶತ್ರುಬಾಧೆ, ವಶೀಕರಣ, ಇನ್ನಿತರ ಸಮಸ್ಯೆಗಳಿಗೆ ಫೋನಿನ ಮೂಲಕ ಶೀಘ್ರದಲ್ಲಿ ಪರಿಹಾರ. 9535759222.

ಪ್ರವಾಸ

Travel

20.12.2021 ರಿಂದ 14 ದಿನಗಳು ಪಂಚದ್ವಾರಕಾ, ಓಂಕಾರೇಶ್ವರ್, ಉಜ್ಜಯಿನಿ, ಸೋಮನಾಥ್, ಮಾತ್ರಗಯಾ, ಡಾಕೂರ್, ಅಹಮದಾಬಾದ್/ 19.01.2022 ರಿಂದ 14 ದಿನಗಳು ಕಾಶಿ.,ಗಯಾ, ಪ್ರಯಾಗ, ಅಯೋಧ್ಯ, ನೈಮಿಶಾರಣ್ಯ, ಗೋರಕ್‌ಪುರ್/ 2022ರ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ 15/20/25 ದಿನಗಳ ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರನಾಥ್, ಕಾಶಿ,ಗಯಾ ಪೂರಿಜಗನ್ನಾಥ್, ವೈಷ್ಣೋದೇವಿ ಯಾತ್ರೆಗಳಿಗೆ ಕೂಡಲೇ ಸಂಪರ್ಕಿಸಿ: 'ಶ್ರೀಸುಧಾ ಟ್ರಾವೆಲ್ಸ್' 22429289, 9448119290, 9019301300

24-12-21 ಶಿರಡಿ, ಮಹಾರಾಷ್ಟ್ರ ಜ್ಯೋತಿರ್ಲಿಂಗಗಳು, ಕೇರಳ, ತಮಿಳುನಾಡು ಪ್ರವಾಸಗಳು, ಜನವರಿಯಿಂದ ಜೂನ್‌ವರೆಗೆ ಆಗ್ರಾ, ದೆಹಲಿ, ಅಮೃತಸರ್, ವೈಷ್ಣೋದೇವಿ, ಹರಿದ್ವಾರ, ಕಾಶಿ, ಗಯಾ, ನೇಪಾಳ, ಮಧ್ಯಪ್ರದೇಶ, ಗುಜರಾತ್, ರಾಜಸ್ತಾನ, ಚಾರ್ ಧಾಮ್, ಅಮರನಾಥ, ಪ್ರವಾಸಗಳಿಗೆ ಸಂಪರ್ಕಿಸಿ : ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

29/12/2021, 21/1/2022ರಿಂದ 9ದಿನಗಳ ನವಗ್ರಹಸಮೆತ ರಾಮೇಶ್ವರಂ,ಕನ್ಯಾಕುಮಾರಿ, ತ್ರಿವೇಂದ್ರಂ.13ದಿನಗಳ ಪಂಚರಾಮಕ್ಷೇತ್ರ ಸಮೇತ ಶ್ರೀಶೈಲಂ,ಅನ್ನವರಮ್, ವಿಶಾಖಪಟ್ಟಣ ಇತ್ಯಾದಿ ವಿವರಗಳಿಗೆ:ಏಷ್ಯನ್ ಟ್ರಾವೆಲ್ ಲೈನ್ಸ್(S) #164/3, ಆರ್.ವಿ.ರಸ್ತೆ, ಬೆಂಗಳೂರು.4 08026565085. 9480182865, 8105657052

10.12.2021 11 ದಿನಗಳು ರಾಜಸ್ಥಾನ್.,20.01.2022 11ದಿನಗಳು ಉಜ್ಜೈನಿ, ಗುಜರಾತ್.,22.02.2022 13ದಿನಗಳು ಕಾಶಿಪ್ರವಾಸ., 03.01.2022 9ದಿನಗಳು ಆಂಧ್ರ ಭದ್ರಾಚಲಂಪ್ರವಾಸ. ಆರ್.ಗಾಂಧಿ ಟೂರ್ಸ್(ರಿ).9945445809/ 9902433500

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
For Lineage & Single/ Multi Column Classifieds Display ads
BOOK YOUR AD ON SUNDAY & GET 50% OFF ON WEEKDAYS
For more information contact:
9880856233 / 9845114560
9606912256

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

‘ವೀರ’ ಸಹೋದರರ ಕಮಾಲ್

ರಾಷ್ಟ್ರೀಯ ಶೂಟಿಂಗ್: ವಿಜಯವೀರ್, ಉದಯವೀರ್‌ಗೆ ಪದಕ ಸಂಭ್ರಮ

ನವದೆಹಲಿ (ಪಿಟಿಐ): ಅವಳಿ ಸಹೋದರರಾದ ವಿಜಯವೀರ್ ಮತ್ತು ಉದಯವೀರ್ ಸಿಧು ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನ 25 ಮೀಟರ್ಸ್ ಪಿಸ್ತೂಲ್ ಜೂನಿಯರ್ ವಿಭಾಗದಲ್ಲಿ ಮೊದಲ ಎರಡು ಸ್ಥಾನಗಳನ್ನು ತಮ್ಮದಾಗಿಸಿಕೊಂಡರು.

ವಿಜಯವೀರ್ 587 ಪಾಯಿಂಟ್ ಗಳಿಸಿ ಚಿನ್ನಕ್ಕೆ ಮುತ್ತಿಕ್ಕಿದರೆ ಉದಯವೀರ್ ಒಂದು ಪಾಯಿಂಟ್‌ನಿಂದ ಹಿಂದೆ ಉಳಿದು ಬೆಳ್ಳಿ ಪದಕ ಗೆದ್ದುಕೊಂಡರು. ಹರಿಯಾಣದ ಶಿವ ನರ್ವಾಲ್ 582 ಪಾಯಿಂಟ್ ಗಳಿಸಿ ಮೂರನೇ ಸ್ಥಾನಕ್ಕೆ ಕುಸಿದರು.

ಡಾ.ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಪಂಜಾಬ್ ಅಗ್ರಸ್ಥಾನದಲ್ಲಿದೆ.

ವಿಜಯ್ ವೀರ್ ಮತ್ತು ಉದಯ್ ವೀರ್ ಟ್ವಿಟರ್ ಚಿತ್ರ

25 ಮೀಟರ್ಸ್ ಪಿಸ್ತೂಲ್ ತಂಡ ವಿಭಾಗದಲ್ಲೂ ಚಿನ್ನದ ಪದಕ ಪಂಜಾಬ್ ಪಾಲಾಯಿತು. ರಾಜ್ ಕನ್ವರ್ ಸಿಂಗ್ ಸಂಧು, ಫತೇಜೀತ್ ಸಿಂಗ್ ಮತ್ತು ಅಮನ್‌ಪ್ರೀತ್ ಸಿಂಗ್ ಚಿನ್ನದ ಪದಕ ಗಳಿಸಿಕೊಟ್ಟರು. ಇವರು ಕ್ರಮವಾಗಿ 577, 571 ಮತ್ತು 569 ಪಾಯಿಂಟ್ ಕಲೆ ಹಾಕಿದರು. ಹರಿಯಾಣ ಬೆಳ್ಳಿ ಪದಕಕ್ಕೆ ಸಮಾಧಾನಪಟ್ಟುಕೊಂಡಿತು. ಕಂಚಿನ ಪದಕ ದೆಹಲಿ ಪಾಲಾಯಿತು. ಸಿವಿಲಿಯನ್ ಜೂನಿಯರ್ ಪುರುಷರ 25 ಮೀಟರ್ಸ್ ಪಿಸ್ತೂಲ್ ಜೂನಿಯರ್ ವಿಭಾಗದಲ್ಲಿ ಹರಿಯಾಣದ ಅಭಿಮನ್ಯು ಯಾದವ್, ಸಮೀರ್ ಮತ್ತು ಜತಿನ್ ಅವರನ್ನು ಒಳಗೊಂಡ ತಂಡ 1714-1704ರಲ್ಲಿ ಪಂಜಾಬ್ ವಿರುದ್ಧ ಜಯ ಗಳಿಸಿತು. ಜಗ್‌ವಿಜಯ್ ಶೆಖಾನ್, ಫತೇಜೀತ್ ಮತ್ತು ಅಮನ್‌ಪ್ರೀತ್ ಅವರು ಪಂಜಾಬ್ ಪ್ರತಿನಿಧಿಸಿದ್ದರು. ಕಂಚಿನ ಪದಕ ಮಧ್ಯಪ್ರದೇಶದ ಪಾಲಾಯಿತು.

ಜೂನಿಯರ್ ಪುರುಷರ ವೈಯಕ್ತಿಕ ಪಿಸ್ತೂಲು ವಿಭಾಗದಲ್ಲಿ ಉದಿತ್ ಜೋಶಿ 575 ಪಾಯಿಂಟ್ ಗಳಿಸಿ ಚಿನ್ನ ಗೆದ್ದುಕೊಂಡರು.

ಇದು ಮಧ್ಯಪ್ರದೇಶಕ್ಕೆ ಲಭಿಸಿದ ದಿನದ ಮೊದಲ ಚಿನ್ನ ಆಗಿತ್ತು. ಅಭಿಮನ್ಯು ಯಾದವ್ ಬೆಳ್ಳಿ ಗಳಿಸಿದರೆ ತಮಿಳುನಾಡಿನ ಮಹೇಶ್ ಪಶುಪತಿ ಕಂಚಿನ ಪದಕಕ್ಕೆ ಸಮಾಧಾನ ಪಟ್ಟುಕೊಂಡರು.

ರ‍್ಯಾಪಿಡ್ ಚೆಸ್‌ನಲ್ಲಿ ಆ್ಯಂಟೊನಿಯೊ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಟರ್‌ನ್ಯಾಷನಲ್ ಮಾಸ್ಟರ್, ಕರ್ನಾಟಕದ ವಿಯಾನಿ ಆ್ಯಂಟೊನಿಯೊ ಡಿ’ಕುನ್ಹ ಅವರು ಇಲ್ಲಿ ನಡೆದ ಫಿಡೆ ರೇಟೆಡ್ ಎನ್‌ಜಿಐ ಅಖಿಲ ಭಾರತ ಮುಕ್ತ ರ‍್ಯಾಪಿಡ್ ಚೆಸ್ ಟೂರ್ನಿಯ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಯಲಹಂಕದ ರಾಮಗೊಂಡನಹಳ್ಳಿಯಲ್ಲಿರುವ ನಾಗಾರ್ಜುನ ಪದವಿ ಕಾಲೇಜಿನಲ್ಲಿ ಆಯೋಜಿಸಿದ್ದ ಟೂರ್ನಿಯಲ್ಲಿ ವಿಯಾನಿ ಒಂಬತ್ತರ ಪೈಕಿ 8.5 ಪಾಯಿಂಟ್ ಗಳಿಸಿದರು. ತಮಿಳುನಾಡಿನ ಹೇಮಂತ್ ರಾಮ್ ಮತ್ತು ಇಂಟರ್‌ನ್ಯಾಷನಲ್ ಮಾಸ್ಟರ್ ಹರಿಕೃಷ್ಣ, ಮಹಾರಾಷ್ಟ್ರದ ಇಂಟರ್‌ನ್ಯಾಷನಲ್ ಮಾಸ್ಟರ್ ಸಮ್ಮೇದ್ ಜಯಕುಮಾರ್ ಮ್ತು ನಿಖಿಲ್ ದೀಕ್ಷಿತ್ ತಲಾ ಎಂಟು ಪಾಯಿಂಟ್ ಗಳಿಸಿದರು.

ಉತ್ತಮ ಟೈಬ್ರೇಕ್ ಸ್ಕೋರ್ ಆಧಾರದಲ್ಲಿ ಹೇಮಂತ್, ಸಮ್ಮೇದ್, ಹರಿಕೃಷ್ಣ ಮತ್ತು ನಿಖಿಲ್ ಕ್ರಮವಾಗಿ ಎರಡರಿಂದ ಐದನೇ ಸ್ಥಾನ ಗಳಿಸಿದರು.

ಬ್ಲಿಟ್ಜ್ ವಿಭಾಗದಲ್ಲಿ ತಮಿಳುನಾಡಿನ ಇಂಟರ್‌ನ್ಯಾಷನಲ್ ಮಾಸ್ಟರ್ ಮುತ್ತಯ್ಯ 8.5 ಪಾಯಿಂಟ್‌ಗಳೊಂದಿಗೆ ಮೊದಲಿಗರಾದರು.

ಹರಿಕೃಷ್ಣ ಎಂಟು ಪಾಯಿಂಟ್ ಗಳಿಸಿ ಎರಡನೇ ಸ್ಥಾನಕ್ಕೆ ಮತ್ತು ಗ್ರ್ಯಾಂಡ್‌ಮಾಸ್ಟರ್ ವಿಷ್ಣು ಪ್ರಸನ್ನ ಮೂರನೇ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡರು.

ಗೋಲು ಗಳಿಸಿದ ಲಯೊನೆಲ್ ಮೆಸ್ಸಿ (ಬಲ) –ಎಎಫ್‌ಪಿ ಚಿತ್ರ

ಫ್ರೆಂಚ್ ಫುಟ್‌ಬಾಲ್ ಲೀಗ್: ಮೆಸ್ಸಿಗೆ ಮೊದಲ ಗೋಲು

ಪ್ಯಾರಿಸ್ (ಎಪಿ): ಅರ್ಜೆಂಟೀನಾದ ತಾರೆ ಲಯೊನೆಲ್ ಮೆಸ್ಸಿ ಫ್ರೆಂಚ್ ಫುಟ್‌ಬಾಲ್ ಲೀಗ್‌ನಲ್ಲಿ ಮೊದಲ ಗೋಲು ದಾಖಲಿಸಿದರು. ಕಿಲಿಯನ್ ಬಾಪೆ ತಮ್ಮ ವೃತ್ತಿಜೀವನದ ಅತಿವೇಗದ ಗೋಲು ಕೂಡ ಹೊಡೆದರು. ಇವರಿಬ್ಬರ ಸೊಗಸಾದ ಆಟದಿಂದ ಪ್ಯಾರಿಸ್ ಸೇಂಟ್ ಜರ್ಮನ್ (ಪಿಎಸ್‌ಜಿ) ತಂಡ ಗೆದ್ದಿತು.

ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ ಪಿಎಸ್‌ಜಿ 3–1ರಿಂದ ನಾಂಟ್ ತಂಡವನ್ನು ಮಣಿಸಿತು. ವಿಜೇತ ತಂಡದ ಪರ ಬಾಪೆ 2ನೇ ನಿಮಿಷ ಮತ್ತು ಮೆಸ್ಸಿ 87ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು. ಇನ್ನೊಂದು ಗೋಲು ತಂಡಕ್ಕೆ ‘ಉಡುಗೊರೆ’ ರೂಪದಲ್ಲಿ ನಾಂಟ್ ತಂಡದ ಡೆನಿಸ್ ಅಪ್ಪೆ (81ನೇ ನಿಮಿಷ) ಅವರಿಂದ ಬಂದಿತು.

ನಾಂಟ್ ತಂಡದ ಏಕೈಕ ಗೋಲನ್ನು ರ‍್ಯಾಂಡಲ್ ಕೊಲೊ ಮುವಾನಿ (76ನೇ ನಿಮಿಷ) ಗಳಿಸಿದರು.

65ನೇ ನಿಮಿಷದಲ್ಲಿ ಗೋಲ್ ಕೀಪರ್ ಕೇಲರ್ ನವಾಸ್, ರೆಡ್ ಕಾರ್ಡ್ ಪಡೆದರು. ಹೀಗಾಗಿ ಪಿಎಸ್‌ಜಿ 10 ಆಟಗಾರರೊಂದಿಗೆ ಆಡಬೇಕಾಯಿತು.

ಕೊನೆಯ ಹಂತದಲ್ಲಿ ಬಾಪೆ ನೀಡಿದ ಪಾಸ್‌ನಲ್ಲಿ ಮೆಸ್ಸಿ ಮೋಡಿ ಮಾಡಿದರು. ಡ್ರಿಬಲ್ ಮಾಡುತ್ತ ಗೋಲುಪೆಟ್ಟಿಗೆಯ ತುದಿಗೆ ಹೋಗಿ ಎಡಗಾಲಿನಿಂದ ಒದ್ದು ತಮ್ಮ ‘ಸಿಗ್ನೇಚರ್ ಶಾಟ್’ ಮೂಲಕ ಗೋಲು ದಾಖಲಿಸಿದರು.

ಈ ಬೇಸಿಗೆಯಲ್ಲಿ ಬಾರ್ಸಿಲೋನಾದಿಂದ ಪಿಎಸ್‌ಜಿಗೆ ಸೇರಿದ ಮೆಸ್ಸಿ, ಈಗಾಗಲೇ ತಂಡಕ್ಕಾಗಿ ಚಾಂಪಿಯನ್ಸ್ ಲೀಗ್‌ನಲ್ಲಿ ಮೂರು ಗೋಲು ಗಳಿಸಿದ್ದರು. ಫ್ರೆಂಚ್ ಲೀಗ್‌ನಲ್ಲಿ ಇದು ಅವರ ಆರನೇ ಪಂದ್ಯವಾಗಿತ್ತು.

ರಾಷ್ಟ್ರೀಯ ಕೊಕ್ಕೊ: ತಂಡಗಳ ಆಯ್ಕೆ

ಚಳ್ಳಕೆರೆ: ಇಲ್ಲಿನ ಅಶೋಕ ಸ್ಪೋರ್ಟ್ಸ್ ಕ್ಲಬ್ ಮತ್ತು ಬೆಂಗಳೂರು ಕೊಕ್ಕೊ ಸಂಸ್ಥೆ ಆಶ್ರಯದಲ್ಲಿ ನಡೆಸಿದ ಕೊಕ್ಕೊ ತರಬೇತಿ ಶಿಬಿರದಲ್ಲಿ ಬಾಲಕ, ಬಾಲಕಿಯರನ್ನು ರಾಷ್ಟ್ರೀಯ ಟೂರ್ನಿಗೆ ಆಯ್ಕೆ ಮಾಡಲಾಗಿದೆ.

ತಂಡಗಳು ಹಿಮಾಚಲ ಪ್ರದೇಶದಲ್ಲಿ ನಡೆಯಲಿರುವ ರಾಷ್ಟ್ರೀಯ ಕೊಕ್ಕೊ ಟೂರ್ನಿಯಲ್ಲಿ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ.

ಮೈಸೂರಿನ ವಿಜಯ ಬಿ., ದಾವಣಗೆರೆಯ ಪುನೀತ್, ಪ್ರಕಾಶ್, ಸಮರ್ಥ, ಚಳ್ಳಕೆರೆಯ ಗುರುರಾಜ್, ಬೆಂಗಳೂರಿನ ತೇಜಸ್, ಗಣೇಶ್, ಮೈಸೂರಿನ ಕುಮಾರ್, ಹಾವೇರಿಯ ಹರ್ಷ, ಮಂಡ್ಯದ ಮೂರ್ತಿ, ಕುರುಬಾರು ಪ್ರೀತಮ್, ಮನೋಜ್ ಅವರನ್ನು ಬಾಲಕರ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ರಾಯಚೂರಿನ ಮಂಜುಳಾ, ರೇಣುಕಾ, ಶಾಂತಾ, ಗಾಯಿತ್ರಿ, ಪ್ರಿಯಾ, ಸುಶ್ಮಿತಾ, ಕ್ಯಾತನಹಳ್ಳಿಯ ಕೀರ್ತನ, ಹರ್ಷಿತಾ, ಟಿ. ನರಸೀಪುರದ ಮಾನಸ, ಪ್ರಕೃತಿ, ಬೆಂಗಳೂರಿನ ಮಾನ್ಯ ಹಾಗೂ ಚಳ್ಳಕೆರೆಯ ಪದ್ಮಾವತಿ ಅವರನ್ನು ಬಾಲಕಿಯರ ತಂಡಕ್ಕೆ ಆಯ್ಕೆ ಮಾಡಲಾಗಿದೆ ಎಂದು ಕೊಕ್ಕೊ ಸಂಸ್ಥೆಯ ರಾಜ್ಯ ಜಂಟಿ ಕಾರ್ಯದರ್ಶಿ ಒ. ಶ್ರೀನಿವಾಸ್ ತಿಳಿಸಿದ್ದಾರೆ.

ಬೆಂಗಳೂರಿನ ಜೋಸೆಫ್ ವೇದಾಕುಮಾರ್, ಅಶೋಕ್ ಕ್ಲಬ್ ವ್ಯವ ಸ್ಥಾಪಕ ನಾರಾಯಣರಾವ್, ವೀರೇಶ್, ಸಿದ್ದು, ಸಂಪತ್, ಪಾಪಣ್ಣ ಮುಂತಾದವರು ಆಯ್ಕೆ ಪ್ರಕ್ರಿಯಯಲ್ಲಿ ಪಾಲ್ಗೊಂಡಿದ್ದರು.

ಸಮಾಜ ಕಲ್ಯಾಣ ಇಲಾಖೆಗೆ ಹಂಪಿ ಕನ್ನಡ ವಿ.ವಿ ಸುಳ್ಳು ಮಾಹಿತಿ ಸಲ್ಲಿಕೆ ಆರೋಪ

ಅಧಿಸೂಚನೆ ಬಳಿಕ ಮೀಸಲಾತಿಗೆ ಪ್ರಸ್ತಾವ

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಎರಡೂವರೆ ತಿಂಗಳ ಹಿಂದೆಯೇ 17 ಬೋಧಕ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಿರುವ ಇಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯವು ಮೀಸಲಾತಿ ಬಗ್ಗೆ ಸಮಾಜ ಕಲ್ಯಾಣ ಇಲಾಖೆಗೆ ಈಗ ಪ್ರಸ್ತಾವ ಸಲ್ಲಿಸಿದೆ.

2021ರ ಸೆಪ್ಟೆಂಬರ್ 3ರಂದು ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ನ.15ರಂದು ಲಿಖಿತ ಪರೀಕ್ಷೆಗೆ ದಿನಾಂಕ ನಿಗದಿಯಾಗಿತ್ತು. ಎರಡು ದಿನ ಇರುವಾಗ ಪರೀಕ್ಷೆ ಮುಂದೂಡಲಾಗಿತ್ತು. ಅಷ್ಟೇ ಅಲ್ಲ, ಪರೀಕ್ಷೆ ನಡೆಯಬೇಕಿದ್ದ ನ.15ರಂದೇ ಸಮಾಜ ಕಲ್ಯಾಣ ಇಲಾಖೆಗೆ ಮೀಸಲಾತಿ ಅನುಮತಿ ಕೋರಿ ಕುಲಸಚಿವರು ಪ್ರಸ್ತಾವ ಸಲ್ಲಿಸಿದ್ದಾರೆ. ಆ ಪತ್ರ ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ವಿಶ್ವವಿದ್ಯಾಲಯದಲ್ಲಿ ಬೋಧಕ, ಬೋಧಕೇತರ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸುವುದಕ್ಕೂ ಮುನ್ನ ಸಮಾಜ ಕಲ್ಯಾಣ ಇಲಾಖೆಗೆ ಮೀಸಲಾತಿ ಸಂಬಂಧ ಪ್ರಸ್ತಾವ ಸಲ್ಲಿಸಿ, ಒಪ್ಪಿಗೆ ಪಡೆಯ ಬೇಕೆಂಬ ನಿಯಮ ಇದೆ. ಆದರೆ, ಅದನ್ನು ಪಾಲಿಸಿಲ್ಲ.

ಪ್ರಜಾವಾಣಿ ವಿಶೇಷ

2017–18 ರಲ್ಲಿ ಬಾಕಿ ಉಳಿದ ಹುದ್ದೆಗಳನ್ನು ‘ಮಿಸ್ಸಿಂಗ್ ರೋಸ್ಟರ್’ ಎಂದು ಪ್ರಸ್ತಾವದಲ್ಲಿ ತಿಳಿಸಿದ್ದಾರೆ. ಆದರೆ, ಅಧಿಸೂಚನೆಯಲ್ಲಿ ಈ ವಿಷಯ ಉಲ್ಲೇಖಿಸಿರಲಿಲ್ಲ.

2017–18ರಲ್ಲಿ 21 ಹುದ್ದೆಗಳಲ್ಲಿ 11 ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ–4, ಪರಿಶಿಷ್ಟ ಪಂಗಡ–1, ಪ್ರವರ್ಗ–1ಕ್ಕೆ 2 ಹುದ್ದೆ, ಪ್ರವರ್ಗ–2ಎಗೆ 2 ಹುದ್ದೆ, ಪ್ರವರ್ಗ–2ಬಿ 1 ಹುದ್ದೆ ಮೀಸಲಿಡಲಾಗಿತ್ತು. ಒಟ್ಟು ಹುದ್ದೆಗಳಲ್ಲಿ 9 ಹುದ್ದೆ ತುಂಬಲಾಗಿತ್ತು. ಉಳಿದ ಹುದ್ದೆಗಳಿಗೆ ಅರ್ಜಿ ಸಲ್ಲಿಕೆಯಾಗದ ಕಾರಣ ಅವುಗಳನ್ನು ತುಂಬಿರ ಲಿಲ್ಲ.

ಒಂದುವೇಳೆ ಅರ್ಜಿ ಬರದೇ ಹುದ್ದೆಗಳು ಭರ್ತಿ ಯಾಗದಿದ್ದಲ್ಲಿ 2015ರ ಸರ್ಕಾರದ ಆದೇಶದ ಪ್ರಕಾರ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗದ ಹುದ್ದೆಗಳನ್ನು ಬ್ಯಾಕ್‌ಲಾಗ್ ಎಂದು ಘೋಷಿಸಬೇಕು. ಹಾಗೆ ಮಾಡದೇ ಹುದ್ದೆ ಪುನಃ ವರ್ಗೀಕರಣ ಮಾಡುವಂತಿಲ್ಲ. ಆದರೆ, ಅದನ್ನು ಉಲ್ಲಂಘಿಸಲಾಗಿದೆ.

ಗೆಜೆಟ್ ನೋಟಿಫಿಕೇಶನ್ 1995 ಕಂಡಿಕೆ 9, ಅನುಬಂಧ 2 ಹಾಗೂ 2015ರ ರಾಜ್ಯ ಸರ್ಕಾರದ ಆದೇಶದ ಪ್ರಕಾರ, ಮಿಸ್ಸಿಂಗ್ ರೋಸ್ಟರ್ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದವರಿಗಷ್ಟೇ ಅನ್ವಯವಾಗುತ್ತದೆ. ಆದರೆ, ಇಲ್ಲಿ ಸಾಮಾನ್ಯ ವರ್ಗದವರಿಗೆ ಮಿಸ್ಸಿಂಗ್ ರೋಸ್ಟರ್ ಎಂದು ದಿಕ್ಕು ತಪ್ಪಿಸುವ ಪ್ರಯತ್ನಗಳಾಗಿವೆ ಎಂಬ ಆರೋಪಗಳು ಕೇಳಿ ಬಂದಿವೆ.

5 ಕ್ಯಾಲೆಂಡರ್ ವರ್ಷದವರೆಗೆ ಮಿಸ್ಸಿಂಗ್ ರೋಸ್ಟರ್ ಮುಂದುವರೆಯುತ್ತದೆ. ಈಗ 25 ವರ್ಷ ಕಳೆದಿದೆ. ಆದರೆ, ಹಳೆಯ ಮಿಸ್ಸಿಂಗ್ ರೋಸ್ಟರ್ ತೋರಿಸಲಾಗಿದೆ. ಮಿಸ್ಸಿಂಗ್ ರೋಸ್ಟರ್ ಇಲ್ಲದಕ್ಕೆ 2018ರ ನೇಮಕಾತಿಯಲ್ಲಿ ತೋರಿಸಿರಲಿಲ್ಲ.

ಹಂಪಿ ಕನ್ನಡ ವಿಶ್ವವಿದ್ಯಾಲಯ

ಕುಲಪತಿ ಅವಧಿ 6 ತಿಂಗಳಿದ್ದಾಗ ನೇಮಕ ಮಾಡುವಂತಿಲ್ಲ

2016 ಜುಲೈ 15ರ ಸುತ್ತೋಲೆ ಪ್ರಕಾರ, ಕುಲಪತಿ ಅಧಿಕಾರದ ಅವಧಿ ಆರು ತಿಂಗಳಿದ್ದಾಗ ಯಾವುದೇ ನೇಮಕಾತಿ, ಪ್ರಮುಖ ನಿರ್ಣಯ ತೆಗೆದುಕೊಳ್ಳುವಂತಿಲ್ಲ. ಸರ್ಕಾರ ಅದನ್ನು ಪರಿಷ್ಕರಿಸಿ 2021ರ ಸೆ. 28ರಂದು ಮತ್ತೊಂದು ಸುತ್ತೋಲೆ ಹೊರಡಿಸಿ, ಅದನ್ನು ಎರಡು ತಿಂಗಳಿಗೆ ಇಳಿಸಿದೆ. ಆದರೆ, ಬೋಧಕ ಹುದ್ದೆಗಳ ನೇಮಕಾತಿಗೆ 2021ರ ಸೆ. 3ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಆಗ ಸರ್ಕಾರದ ಹಳೆಯ ಆದೇಶವೇ ಜಾರಿಯಲ್ಲಿತ್ತು. ಹೀಗಾಗಿ ಅಧಿಸೂಚನೆ ಹೊರಡಿಸಿರುವುದು ಕಾನೂನುಬಾಹಿರ ಎಂಬ ಆರೋಪವಿದೆ.

ಹಣ ಮಾಡುವುದಕ್ಕಾಗಿಯೇ ನಿಯಮ ಉಲ್ಲಂಘಿಸಿ ನೇಮಕಕ್ಕೆ ಕುಲಪತಿ ಮುಂದಾಗಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಪ್ರಸ್ತಾವ ತಡೆ ಹಿಡಿಯಬೇಕು

ಮರಡಿ ಜಂಬಯ್ಯ ನಾಯಕ ಸಾಮಾಜಿಕ ಕಾರ್ಯಕರ್ತ

ಅಧಿಸೂಚನೆ ರದ್ದತಿಗೆ ನಾನು ಸೇರಿ ಹಲವರು ನ್ಯಾಯಾಲಯದ ಮೊರೆ ಹೋಗಿದ್ದೇವೆ. ಆದರೆ, ಈ ವಿಷಯವನ್ನು ಮುಚ್ಚಿಟ್ಟಿದ್ದಾರೆ

ಪ್ರಕಾಶ್ ಬಿ. ಹುಗ್ಗಿ, ಅರ್ಜಿದಾರ

ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತಡೆ ಹಿಡಿದು ಈಗ ಸಮಾಜ ಕಲ್ಯಾಣ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ

ಪ್ರೊ.ಎ. ಸುಬ್ಬಣ್ಣ ರೈ, ಕುಲಸಚಿವ

‘ಮೀಸಲಾತಿ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಬೇಕು. ಇಲ್ಲವಾದಲ್ಲಿ ಅರ್ಜಿದಾರರು ಅನಗತ್ಯ ದಾವೆ ಹೂಡಿ ತೊಡಕು ಮಾಡಬಹುದು’ ಎಂದು ಪ್ರಸ್ತಾವದಲ್ಲಿ ಕೋರಿದ್ದಾರೆ. ಆದರೆ, ಈಗಾಗಲೇ ಶಂಕರಪ್ಪ ಬಡಿಗೇರ್, ವೈಶಾಲಿ, ಎ.ಶಿವಮ್ಮ, ಪ್ರಕಾಶ್ ಬಿ. ಹುಗ್ಗಿ ಸೇರಿ 7 ಜನ ಕೋರ್ಟ್ ಮೊರೆ ಹೋಗಿದ್ದು, ವಿಶ್ವವಿದ್ಯಾಲಯಕ್ಕೆ ನೋಟಿಸ್ ನೀಡಲಾಗಿದೆ. ಆದರೆ, ಈ ವಿಷಯ ಮುಚ್ಚಿಟ್ಟು ತರಾತುರಿಯಲ್ಲಿ ನೇಮಕ ಪ್ರಕ್ರಿಯೆ ಮುಗಿಸಲು ಯತ್ನಿಸಲಾಗುತ್ತಿದೆ ಎಂದು ಆರೋಪಿಸಲಾಗಿದೆ.

ಈ ಸಂಬಂಧ ಸಮಾಜ ಕಲ್ಯಾಣ ಇಲಾಖೆಯ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಹಲವು ಸಲ ಸಂಪರ್ಕಿಸಿದರೂ ಅವರು ಮಾಹಿತಿಗೆ ಲಭ್ಯರಾಗಲಿಲ್ಲ.

ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಪ್ರಾಬಲ್ಯ ಹೆಚ್ಚಿಸಿಕೊಳ್ಳುತ್ತಿರುವ ಚೀನಾ ವಿರುದ್ಧ ವಾಗ್ದಾಳಿ

ಕೆಲ ರಾಷ್ಟ್ರಗಳಿಂದ ಕಡಲ ಕಾನೂನಿನ ತಪ್ಪು ವ್ಯಾಖ್ಯಾನ: ರಾಜನಾಥ್ ಸಿಂಗ್

ಮುಂಬೈ (ಪಿಟಿಐ): ‘ಪಕ್ಷಪಾತ ಧೋರಣೆ ಹಾಗೂ ಪ್ರಾಬಲ್ಯ ಮೆರೆಯುವ ಪ್ರವೃತ್ತಿ ಹೊಂದಿರುವ ಕೆಲವು ಬೇಜವಾಬ್ದಾರಿ ರಾಷ್ಟ್ರಗಳು ವಿಶ್ವಸಂಸ್ಥೆಯ ಕಡಲ ಕಾನೂನನ್ನು (ಯುಎನ್‌ಸಿಎಲ್‌ಒಎಸ್) ತಪ್ಪಾಗಿ ವ್ಯಾಖ್ಯಾನಿಸುತ್ತಿವೆ’ ಎಂದು ರಕ್ಷಣಾ ಮಂತ್ರಿ ರಾಜನಾಥ್ ಸಿಂಗ್ ಭಾನುವಾರ ಟೀಕಿಸಿದರು.

ಜಲಾಂತರ್ಗಾಮಿ ನಿಗ್ರಹ ಯುದ್ಧನೌಕೆ ‘ಐಎನ್‌ಎಸ್ ವಿಶಾಖಪಟ್ಟಣಂ’ ಅನ್ನು ನೌಕಾಪಡೆಗೆ ಸೇರ್ಪಡೆಗೊಳಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪರೋಕ್ಷವಾಗಿ ಚೀನಾ ವಿರುದ್ಧ ವಾಗ್ದಾಳಿ ನಡೆಸಿದರು.

‘ಕೆಲವು ರಾಷ್ಟ್ರಗಳು ತಮಗೆ ತೋಚಿದಂತೆ ವ್ಯಾಖ್ಯಾನ ಮಾಡುವ ಮೂಲಕ ಕಡಲ ಕಾನೂನನ್ನು ದುರ್ಬಲಗೊಳಿಸುತ್ತಿರುವುದು ಕಳವಳಕಾರಿ’ ಎಂದರು.

‘ಕಡಲ ರಕ್ಷಣೆ ವಿಷಯದಲ್ಲಿ ಜವಾಬ್ದಾರಿಯುತ ಭಾಗಿದಾರ ದೇಶವಾಗಿರುವ ಭಾರತ, ಒಮ್ಮತದ ತಳಹದಿ ಮೇಲೆ ರೂಪಿಸಲಾಗಿರುವ ತತ್ವಗಳನ್ನು ಬೆಂಬಲಿಸುತ್ತದೆ. ಶಾಂತಿಯುತವಾದ ಹಾಗೂ ನಿಯಮಗಳಿಗೆ ಬದ್ಧವಾಗಿರುವ ಕಡಲ ರಕ್ಷಣಾ ವ್ಯವಸ್ಥೆಯನ್ನು ಬಯಸುತ್ತದೆ’ ಎಂದು ಅವರು ಹೇಳಿದರು.

‘ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ಮುಕ್ತ ವ್ಯಾಪಾರ, ನೌಕಾಯಾನದ ಸ್ವಾತಂತ್ರ್ಯ ಹಾಗೂ ಈ ಪ್ರದೇಶದ ಎಲ್ಲ ಭಾಗಿದಾರ ರಾಷ್ಟ್ರಗಳ ಹಿತಾಸಕ್ತಿ ರಕ್ಷಣೆಗೆ ಭಾರತ ಬೆಂಬಲ ನೀಡುತ್ತದೆ’ ಎಂದರು.

ವಿಶ್ವದ ಬಹುತೇಕ ವಾಣಿಜ್ಯ ಹಡಗುಗಳು ದಕ್ಷಿಣ ಚೀನಾ ಸಮುದ್ರವನ್ನು ಹಾದುಹೋಗುತ್ತವೆ. ಹೀಗಾಗಿ ಈ ಮಾರ್ಗವು ಮುಕ್ತವಾಗಿರುವುದು ಅತ್ಯಗತ್ಯ. ಖನಿಜ ಸಂಪತ್ತೂ ಹೇರಳವಾಗಿರುವ ಈ ಪ್ರದೇಶದಲ್ಲಿ ಚೀನಾ ತನ್ನ ಹಕ್ಕು ಪ್ರತಿಪಾದಿಸುತ್ತಿದೆ. ಕೃತಕ ದ್ವೀಪಗಳನ್ನು ಸೃಷ್ಟಿಸಿ ತನ್ನ ಸೇನಾ ನೆಲೆಯನ್ನು ಸ್ಥಾಪಿಸಿದೆ. ಚೀನಾದ ಈ ನಡವಳಿಕೆಗೆ ವಿಶ್ವದ ಪ್ರಮುಖ ದೇಶಗಳು ಆಕ್ಷೇಪ ವ್ಯಕ್ತಪಡಿಸಿವೆ.

ಮುಂಬೈನಲ್ಲಿ ಭಾನುವಾರ ನೌಕಾಪಡೆಗೆ ಸೇರ್ಪಡೆಗೊಂಡ ಜಲಾಂತರ್ಗಾಮಿ ನಿಗ್ರಹ ಯುದ್ಧನೌಕೆ ‘ಐಎನ್‌ಎಸ್ ವಿಶಾಖಪಟ್ಟಣಂ’ ಅನ್ನು ರಕ್ಷಣಾ ಮಂತ್ರಿ ರಾಜನಾಥ್ ಸಿಂಗ್ ವೀಕ್ಷಿಸಿದರು –ಪಿಟಿಐ ಚಿತ್ರ

‘ಮಹತ್ವದ ಸೇರ್ಪಡೆ’

‘ಭಾರತವು ಮುಕ್ತ ಮತ್ತು ಸ್ವತಂತ್ರ ಸಮುದ್ರಯಾನದ ರಕ್ಷಣೆಗೆ ಬದ್ಧವಾಗಿದೆ. ಕೆಲವು ದೇಶಗಳು ಇದಕ್ಕೆ ಅಡಚಣೆ ಉಂಟು ಮಾಡು ತ್ತಿವೆ. ಇವುಗಳನ್ನು ಎದುರಿಸಲು ಭಾರತವು ಸಮುದ್ರದಲ್ಲಿ ತನ್ನ ಸೇನಾ ಬಲವನ್ನು ಹೆಚ್ಚಿಸಿಕೊಳ್ಳುತ್ತಿದೆ. ಆ ದಿಸೆಯಲ್ಲಿ ಐಎನ್‌ಎಸ್ ವಿಶಾಖಪಟ್ಟಣಂ ನೌಕೆಯ ಸೇರ್ಪಡೆ ಮಹತ್ವದ ಬೆಳವಣಿಗೆಯಾಗಿದೆ’ ಎಂದು ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಭದ್ರತಾ ಸಮಸ್ಯೆ ಮತ್ತು ಆಂತರಿಕ ಕಲಹಗಳ ಕಾರಣದಿಂದ ಬಹುತೇಕ ರಾಷ್ಟ್ರಗಳು ತಮ್ಮ ಸೇನೆಯ ಸಾಮರ್ಥ್ಯ ಮೇಲ್ದರ್ಜೆಗೆ ಏರಿಸಲು ಎದುರು ನೋಡುತ್ತಿವೆ. ಇದರಿಂದ ಸೇನಾ ಸಲಕರಣೆ ಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಸೇನಾ ಸಲಕರಣೆಗಳ ಅಭಿವೃದ್ಧಿ, ತಯಾರಿಕೆಯಲ್ಲಿ ಭಾರತವು ತನ್ನ ಪೂರ್ಣ ಸಾಮರ್ಥ್ಯ ಬಳಸಿಕೊಳ್ಳಬೇಕು ಎಂದರು.

ಹೆಚ್ಚಿನ ಕಾಲಾವಕಾಶ ಕೋರಿದ್ದ ವಿಮಾ ಕಂಪನಿಗಳ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ರಸ್ತೆ ಅಪಘಾತ, ಮೋಟಾರು ವಾಹನಗಳ ಅಪಘಾತದಲ್ಲಿ ಸಂತ್ರಸ್ತರಿಗೆ ಪರಿಹಾರ ಒದಗಿಸಲು ನ್ಯಾಯಮಂಡಳಿಗಳಲ್ಲಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಅನುಕೂಲವಾಗುವಂತೆ ಅಖಿಲ ಭಾರತ ಮಟ್ಟದಲ್ಲಿ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲು ಹೆಚ್ಚಿನ ಕಾಲಾವಕಾಶ ಕೋರಿದ್ದ ವಿಮಾ ಕಂಪನಿಗಳ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ.

‘ವಿಮಾ ಕಂಪನಿಗಳ ಈ ನಡೆಯನ್ನು ನಾವು ಪ್ರಶಂಸಿಸುವುದಿಲ್ಲ. ನ್ಯಾಯಾಲಯದ ನಿರ್ದೇಶನದಿಂದ ವಿಮಾ ಕಂಪನಿಗಳು ಹೊರಗುಳಿಯಲು ಸಾಧ್ಯವಿಲ್ಲ. ಈ ಆ್ಯಪ್ ತಯಾರಿಸಲು ಸಮರ್ಥರಾಗಿರದಿದ್ದರೆ ನಾವು ಸರ್ಕಾರಕ್ಕೆ ಸೂಚನೆ ನೀಡುತ್ತೇವೆ’ ಎಂದು ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ನೇತೃತ್ವದ ಪೀಠ ಹೇಳಿದೆ.

ಆ್ಯಪ್ ತಯಾರಿಕೆಗೆ ಕೋರ್ಟ್ ವಿಮಾ ಕಂಪನಿಗಳಿಗೆ 2 ತಿಂಗಳ ಕಾಲಾವಕಾಶ ನೀಡಿದೆ. ಆ್ಯಪ್ ಅಭಿವೃದ್ಧಿಯಿಂದ ರಸ್ತೆ ಅಪಘಾತ, ನ್ಯಾಯಮಂಡಳಿ, ಪೊಲೀಸ್, ವಿಮಾ ಕಂಪನಿಗಳ ಸಂತ್ರಸ್ತರು ಪರಿಹಾರ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಿಕೊಳ್ಳಬಹುದು.

‘ನೆಹರೂ: ದ ಡಿಬೇಟ್ಸ್ ದಟ್ ಡಿಫೈನ್ಡ್ ಇಂಡಿಯಾ’ ಕೃತಿಯಲ್ಲಿ ಉಲ್ಲೇಖ

ಕೃತಿಯಲ್ಲಿ ಕವಿ ಮಹಮ್ಮದ್ ಇಕ್ಬಾಲ್, ಮೊಹಮ್ಮದ್ ಅಲಿ ಜಿನ್ನಾ, ಸರ್ದಾರ್ ಪಟೇಲ್, ಶ್ಯಾಂ ಪ್ರಸಾದ್ ಮುಖರ್ಜಿ ಅವರೊಂದಿಗೆ ನಡೆದ ಚರ್ಚೆಯ ಉಲ್ಲೇಖ

ಗಾಂಧೀಜಿ ಜೊತೆಗೂ ಬೌದ್ಧಿಕ ಸಂಘರ್ಷ ನಡೆಸಿದ್ದ ನೆಹರೂ

ನವದೆಹಲಿ (ಪಿಟಿಐ): ‘ಜವಹರಲಾಲ್ ನೆಹರೂ ಅವರು ತಮ್ಮ ಚಿಂತನೆಗಳಿಗೆ ಸಂಬಂಧಿಸಿ ರಾಜಕೀಯ ಪ್ರಮುಖರ ಜೊತೆ ಆಗಾಗ್ಗೆ ಬಿಸಿ ಚರ್ಚೆ ನಡೆಸಿ ವಿಚಾರ ಸ್ಪಷ್ಟಪಡಿಸುತ್ತಿದ್ದರು. ಬೌದ್ಧಿಕ ಸಂಘರ್ಷದ ಈ ಪ್ರಕ್ರಿಯೆಯಲ್ಲಿ ಮಹಾತ್ಮಗಾಂಧಿ ಅವರನ್ನೂ ಬಿಟ್ಟರಲಿಲ್ಲ’.

ತ್ರಿಪುರ್ದಮನ್ ಸಿಂಗ್ ಮತ್ತು ಅದೀಲ್ ಹುಸೇನ್ ಅವರು ರಚಿಸಿರುವ ‘ನೆಹರೂ: ದ ಡಿಬೇಟ್ಸ್ ದಟ್ ಡಿಫೈನ್ಡ್ ಇಂಡಿಯಾ’ ಶೀರ್ಷಿಕೆಯ ನೂತನ ಪುಸ್ತಕದಲ್ಲಿ ಈ ಅಂಶ ವ್ಯಕ್ತವಾಗಿದೆ.


ಜವಹರಲಾಲ್ ನೆಹರೂ

ರಾಜಕೀಯ ಪ್ರತಿಸ್ಪರ್ಧಿಗಳಲ್ಲದ, ಸಮಕಾಲೀನರಾದ ರಾಜಕೀಯ ಮತ್ತು ಬೌದ್ಧಿಕ ಚಿಂತಕರ ಜೊತೆಗೆ ವೇದಿಕೆಯನ್ನು ಹಂಚಿಕೊಂಡ ಸಂದರ್ಭದಲ್ಲಿಯೂ ನೆಹರೂ ಅವರು ಇಂತಹ ಬಿಸಿ ಚರ್ಚೆಗೆ ಮುಂದಾಗುತ್ತಿದ್ದರು ಎಂದು ಕೃತಿಕಾರರು ತಿಳಿಸಿದ್ದಾರೆ.

ಆಲ್ ಇಂಡಿಯಾ ಮುಸ್ಲಿಂ ಲೀಗ್ ಮುಖ್ಯಸ್ಥರಾಗಿದ್ದ ಮೊಹಮ್ಮದ್ ಅಲಿ ಜಿನ್ನಾ, ಹಿಂದೂ ಮಹಾಸಭಾದ ಶ್ಯಾಂ ಪ್ರಸಾದ್ ಮುಖರ್ಜಿ ಅಂತಹ ರಾಜಕೀಯ ಪ್ರತಿಸ್ಪರ್ಧಿಗಳು ಹಾಗೂ ಕಾಂಗ್ರೆಸ್‌ನ ಸರ್ದಾರ್ ವಲ್ಲಭಭಾಯಿ ಪಟೇಲ್ ಸೇರಿದಂತೆ ತಮ್ಮ ಚಿಂತನೆಯನ್ನು ಒಪ್ಪದ ಸಹೋದ್ಯೋಗಿಗಳಿಗೆ ವಿಷಯವನ್ನು ಮನದಟ್ಟು ಮಾಡಿಕೊಡಲೂ ಇಂತಹ ವಾದಕ್ಕೆ ಮುಂದಾಗುತ್ತಿದ್ದರು ಎಂದು ತಿಳಿಸಿದೆ.

‘ಬ್ರಿಟೀಷರೇ ದೇಶ ಬಿಟ್ಟು ತೊಲಗಿ’ ಚಳವಳಿ ಕುರಿತು ನೆಹರೂ ಜೊತೆಗೆ ನಡೆದಿದ್ದ ವಾದ ಉಲ್ಲೇಖಿಸಿ ಗಾಂಧೀಜಿ ಅವರು ಒಮ್ಮೆ ವೈಸ್‌ರಾಯ್ ಲಾರ್ಡ್ ಲಿಲ್‌ನಿತ್‌ಗೊ ಅವರಿಗೆ, ‘ಬರುವ ದಿನಗಳಲ್ಲಿ ವಾದ ಮಾಡುವ ಸಾಮರ್ಥ್ಯ ನೆಹರೂಗಿದೆ’ ಎಂದು ತಿಳಿಸಿದ್ದರು.

ಇಂತಹ ಬೌದ್ಧಿಕ ಸಂಘರ್ಷದಲ್ಲಿ ಅವರು ಮಹಾತ್ಮಗಾಂಧಿ ಅವರನ್ನು ಬಿಟ್ಟರಲಿಲ್ಲ. ಆದರೆ, ಮಾರ್ಗದರ್ಶಕರಾಗಿದ್ದ ಗಾಂಧೀಜಿ ಅವರೊಂದಿಗೆ ಬಹಿರಂಗವಾಗಿ ಸಂಘರ್ಷಕ್ಕೆ ಇಳಿಯುವುದಿಂದ ನುಣುಚಿಕೊಳ್ಳುತ್ತಿದ್ದರು ಎಂದು ಕೃತಿಯಲ್ಲಿ ಉಲ್ಲೇಖಿಸಲಾಗಿದೆ.

ಕೃತಿಯನ್ನು ಹಾರ್ಪರ್‌ಕಾಲಿನ್ಸ್ ಇಂಡಿಯಾ ಪ್ರಕಾಶನ ಸಂಸ್ಥೆ ಹೊರತಂದಿದೆ.

ಯಾರನ್ನೂ ನೋಯಿಸುವ ಉದ್ದೇಶವಿಲ್ಲ ‘ಜೈಭೀಮ್’ ನಿರ್ದೇಶಕ ವಿಷಾದ

ಪ್ರಜಾವಾಣಿ ವಾರ್ತೆ

ಚೆನ್ನೈ: ‘ಯಾರನ್ನೂ ಕೆಟ್ಟದಾಗಿ ಬಿಂಬಿಸುವ ಉದ್ದೇಶವಿಲ್ಲ. ಆದರೆ, ಚಿತ್ರದಲ್ಲಿನ ಯಾವುದೇ ದೃಶ್ಯವು ಯಾರಿಗಾದರೂ ನೋವು ಅಥವಾ ಅವರ ಭಾವನೆಗಳಿಗೆ ಗಾಸಿಯುಂಟು ಮಾಡಿದ್ದರೆ ಅದಕ್ಕಾಗಿ ನಾನು ವಿಷಾದಿಸುತ್ತೇನೆ’ ಎಂದು ತಮಿಳಿನ ಜನಪ್ರಿಯ ಸಿನಿಮಾ ‘ಜೈ ಭೀಮ್’ ಚಿತ್ರದ ನಿರ್ದೇಶಕ ಟಿ.ಜೆ. ಜ್ಞಾನವೇಲ್ ಅವರು ಭಾನುವಾರ ಹೇಳಿದ್ದಾರೆ.

ಈ ಕುರಿತು ಎರಡು ಪುಟಗಳ ಹೇಳಿಕೆ ಬಿಡುಗಡೆ ಮಾಡಿರುವ ಜ್ಞಾನವೇಲ್ ಅವರು, ‘ಚಿತ್ರದಲ್ಲಿ ಅಗ್ನಿಕುಂಡವಿರುವ ಕ್ಯಾಲೆಂಡರ್‌ನ ದೃಶ್ಯದ ಜವಾಬ್ದಾರಿಯನ್ನು ತೆಗೆದುಕೊಳ್ಳುವೆ. ಚಿತ್ರದ ಪೋಸ್ಟ್ ಪ್ರೊಡಕ್ಷನ್ ಸಮಯದಲ್ಲಿ ವಿವಿಐಪಿಗಳಿಗಾಗಿ ಆಯೋಜಿಸಿದ್ದ ವಿಶೇಷ ಚಿತ್ರ ಪ್ರದರ್ಶನದಲ್ಲಿ ಕ್ಯಾಲೆಂಡರ್ ಬಗ್ಗೆ ಚಿತ್ರತಂಡದ ಸದಸ್ಯರು ಗಮನಿಸಿರಲಿಲ್ಲ. ಅಮೆಜಾನ್ ಪ್ರೈಮ್‌ನಲ್ಲಿ ಸಿನಿಮಾ ಬಿಡುಗಡೆಯಾದ ಒಂದು ದಿನದ ನಂತರ ಅಂದರೆ ನ.2ರಂದು ಸಮಸ್ಯೆಯನ್ನು ನಮ್ಮ ಗಮನಕ್ಕೆ ತರಲಾಯಿತು. ಕೂಡಲೇ ಕ್ಯಾಲೆಂಡರ್‌ನಲ್ಲಿದ್ದ ಅಗ್ನಿಕುಂಡದ ಬದಲಿಗೆ ಮತ್ತೊಂದು ಚಿತ್ರ ಹಾಕಲು ಕ್ರಮಕೈಗೊಂಡಿದ್ದೇನೆ’ ಎಂದು ತಿಳಿಸಿದ್ದಾರೆ.

‘ಜೈಭೀಮ್’ ಸಿನಿಮಾದ ಪೋಸ್ಟರ್

‘ಸಿನಿಮಾದಲ್ಲಿ ಪೊಲೀಸ್ ಅಧಿಕಾರಿ ಅಂಥೋನಿಸಾಮಿ ಅವರ ಹೆಸರನ್ನು ಉದ್ದೇಶಪೂರ್ವಕವಾಗಿ ಗುರುಮೂರ್ತಿ (ಪಿಎಂಕೆ ನಾಯಕ) ಎಂದು ಬದಲಾಯಿಸಿರುವುದು ಹಾಗೂ ಕ್ಯಾಲೆಂಡರ್‌ನ ಅಗ್ನಿಕುಂಡದ ದೃಶ್ಯವನ್ನು ತಮಿಳುನಾಡಿನ ಪ್ರಬಲ ವಣ್ಣಿಯಾರ್ ಸಮುದಾಯಕ್ಕೆ ಕಳಂಕ ತರುವಂತೆ ಚಿತ್ರಿಸಲಾಗಿದೆ’ ಎಂದು ಪಿಎಂಕೆ ಮತ್ತು ಅದರ ಮಾತೃಸಂಸ್ಥೆ ವಣ್ಣಿಯಾರ್ ಸಂಗಮ್ ಟೀಕಿಸಿತ್ತು.

ವಿವಾದದ ಕುರಿತು ಪಿಎಂಕೆ ನಾಯಕ ಮತ್ತು ಕೇಂದ್ರದ ಮಾಜಿ ಆರೋಗ್ಯ ಸಚಿವ ಅನ್ಬುಮಣಿ ರಾಮದಾಸ್ ಅವರು ನಟ ಸೂರ್ಯ ಅವರಿಗೆ ಪತ್ರ ಬರೆದಿದ್ದಾರೆ. ‘ವಿವಾದದಿಂದಾಗಿ ನಿರ್ಮಾಪಕ ಮತ್ತು ನಟ ಸೂರ್ಯ ಅವರಿಗೆ ತೊಂದರೆಯಾಗಿದ್ದಕ್ಕಾಗಿ ವಿಷಾದಿಸುವೆ’ ಎಂದೂ ಜ್ಞಾನವೇಲ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸುಡಾನ್: ಪ್ರಧಾನಿ ಮರುನೇಮಕಕ್ಕೆ ಒಪ್ಪಿಗೆ

ಕೈರೊ: ‘ಅಕ್ಟೋಬರ್‌ನಲ್ಲಿ ನಡೆದ ದಂಗೆಯಲ್ಲಿ ಪದಚ್ಯುತಗೊಂಡಿದ್ದ ಸುಡಾನ್ ಪ್ರಧಾನಿ ಅಬ್ದಲ್ಲಾ ಹಮ್‌ಡೋಕ್ ಅವರನ್ನು ಮರುನೇಮಕ ಮಾಡಲು ಅಲ್ಲಿನ ರಾಜಕೀಯ ನಾಯಕರು ಮತ್ತು ಮಿಲಿಟರಿ ನಡುವೆ ಒಪ್ಪಂದ ಮಾಡಿಕೊಳ್ಳಲಾಗಿದೆ’ ಎಂದು ಸೇನೆ ಮತ್ತು ಸರ್ಕಾರಿ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

‘ಅ. 25ರಂದು ನಡೆದ ದಂಗೆಯಲ್ಲಿ ಬಂಧಿತರಾಗಿದ್ದ ಸರ್ಕಾರಿ ಅಧಿಕಾರಿಗಳು ಹಾಗೂ ರಾಜಕೀಯ ನಾಯಕರನ್ನು ಸುಡಾನ್‌ನ ಅತಿದೊಡ್ಡ ರಾಜಕೀಯ ಪಕ್ಷವಾಗಿರುವ ಉಮ್ಮಾ ಪಕ್ಷ, ಮಿಲಿಟರಿ ಮತ್ತು ರಾಜಕೀಯ ಪಕ್ಷಗಳ ನಡುವಿನ ಒಪ್ಪಂದದ ಭಾಗವಾಗಿ ಬಿಡುಗಡೆ ಮಾಡಲಾಗುವುದು’ ಎಂದೂ ಅಧಿಕಾರಿಗಳು ಹೇಳಿದ್ದಾರೆ. ಆದರೆ, ‘ಜನರ ಆಕಾಂಕ್ಷೆಗಳನ್ನು ಪೂರೈಸಲು ವಿಫಲವಾದ ಈ ಒಪ್ಪಂದಕ್ಕೆ ಸಹಿ ಹಾಕಿಲ್ಲ’ ಎಂದು ಉಮ್ಮಾ ಪಕ್ಷವು ತಿಳಿಸಿದೆ.

ಆಂಧ್ರ: ಭಾರಿ ಮಳೆ– ಪ್ರಮುಖ ರಸ್ತೆ, ರೈಲು ಸಂಪರ್ಕ ಕಡಿತ

ಅಮರಾವತಿ (ಪಿಟಿಐ): ಆಂಧ್ರ ಪ್ರದೇಶದಲ್ಲಿ ಭಾರಿ ಮಳೆ ಪರಿಣಾಮ ಪ್ರಮುಖ ರಸ್ತೆ ಹಾಗೂ ರೈಲು ಮಾರ್ಗಗಳಲ್ಲಿನ ಸಂಚಾರ ಕಡಿದುಹೋಗಿದೆ. ಅದರಲ್ಲೂ, ಪೆನ್ನಾ ನದಿ ಉಕ್ಕಿ ಹರಿಯುತ್ತಿರುವ ಕಾರಣ ದಕ್ಷಿಣ ಮತ್ತು ಪೂರ್ವ ಭಾಗಗಳಿಗೆ ಸಂಪರ್ಕ ಕಡಿತಗೊಂಡಿದೆ.

ನೆಲ್ಲೂರು ಜಿಲ್ಲೆಯ ಪಡುಗುಪಾಡು ಎಂಬಲ್ಲಿ, ಚೆನ್ನೈ–ಕೋಲ್ಕತ್ತ ರಾಷ್ಟ್ರೀಯ ಹೆದ್ದಾರಿ 16ರಲ್ಲಿ ಕುಸಿತ ಕಂಡುಬಂದಿದೆ. ಈ ಕಾರಣಕ್ಕೆ ಹೆದ್ದಾರಿಯನ್ನು ಬಂದ್ ಮಾಡಲಾಗಿದೆ. ನೆಲ್ಲೂರು ಬಸ್ ನಿಲ್ದಾಣ ಬಸ್‌ಗಳಿಂದ ತುಂಬಿದೆ.

ಪಡುಗುಪಾಡು ಬಳಿ ರೈಲು ಹಳಿ ಪ್ರವಾಹದಲ್ಲಿ ಕೊಚ್ಚಿಹೋಗಿರುವ ಕಾರಣ ಚೆನ್ನೈ–ವಿಜಯವಾಡ ಮಾರ್ಗದಲ್ಲಿ ಸಂಚರಿಸುವ ಕನಿಷ್ಠ 17 ಎಕ್ಸ್‌ಪ್ರೆಸ್ ರೈಲುಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ. 3 ರೈಲುಗಳ ಸಂಚಾರ ವನ್ನು ಭಾಗಶಃ ರದ್ದುಪಡಿಸಲಾಗಿದೆ ಇಲ್ಲವೇ ಸಂಚಾರ ಮಾರ್ಗವನ್ನು ಬದಲಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಸೋಮಶಿಲ ಅಣೆಕಟ್ಟೆಯಿಂದ 2 ಲಕ್ಷ ಕ್ಯುಸೆಕ್‌ಗೂ ಅಧಿಕ ನೀರು ಬಿಟ್ಟಿರುವ ಕಾರಣ ಪ್ರವಾಹ ಉಂಟಾಗಿದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಪ್ರವಾಹ ಸಂಕಷ್ಟದಲ್ಲಿರುವವರಿಗೆ ನೆರವು ನೀಡಿ: ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಆಂಧ್ರಪ್ರದೇಶದಲ್ಲಿ ಸತತ ಮಳೆ ಮತ್ತು ಪ್ರವಾಹದಿಂದ 25 ಮಂದಿ ಮೃತಪಟ್ಟಿರುವ ಬಗ್ಗೆ ಸಂತಾಪ ವ್ಯಕ್ತಪಡಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಂಕಷ್ಟಕ್ಕೆ ಸಿಲುಕಿರುವವರಿಗೆ ಪಕ್ಷದ ಕಾರ್ಯಕರ್ತರು ಸಾಧ್ಯವಾದಷ್ಟು ನೆರವು ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಆಂಧ್ರಪ್ರದೇಶದಲ್ಲಿ ಪ್ರವಾಹವು ಅಪಾರ ಪ್ರಮಾಣದಲ್ಲಿ ಹಾನಿ ಉಂಟುಮಾಡಿದೆ. ತೊಂದರೆಯಲ್ಲಿರುವವರಿಗೆ ಪಕ್ಷದ ಕಾರ್ಯಕರ್ತರು ನೆರವಾಗಬೇಕು ಎಂದು ಟ್ವಿಟರ್‌ನಲ್ಲಿ ಹೇಳಿದ್ದಾರೆ.


ರಾಹುಲ್

ಮಳೆ ಮತ್ತು ಪ್ರವಾಹಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಅನಂತಪುರ ಮತ್ತು ಕಡಪ ಜಿಲ್ಲೆಯಲ್ಲಿ ಕನಿಷ್ಠ 25 ಮಂದಿ ಸಾವಿಗೀಡಾಗಿದ್ದು 15 ಮಂದಿ ಕಾಣೆಯಾಗಿದ್ದಾರೆ.

ಗಾಯಕಿ ಗುರ್ಮೀತ್ ಬಾವಾ ನಿಧನ

ಅಮೃತಸರ(ಪಿಟಿಐ): ದೀರ್ಘಕಾಲದ ಅನಾರೋಗ್ಯದಿಂದಾಗಿ ಪ್ರಸಿದ್ಧ ಪಂಜಾಬಿ ಗಾಯಕಿ ಗುರ್ಮೀತ್ ಬಾವಾ(77) ಅವರು ಭಾನುವಾರ ನಿಧನರಾದರು.

‘ಗುರ್ಮೀತ್ ಅವರಿಗೆ ತೀವ್ರ ಉಸಿರಾಟದ ತೊಂದರೆ ಕಾಣಿಸಿಕೊಂಡ ಕಾರಣ ಶನಿವಾರ ಸಂಜೆ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅಲ್ಲಿಯೇ ಕೊನೆಯುಸಿರೆಳೆದರು ಎಂದು ಅವರ ಕುಟುಂಬ ಸ್ನೇಹಿತ ಭೂಪೀಂದರ್ ಸಿಂಗ್ ಸಂಧು ಹೇಳಿದರು.

ಪಂಜಾಬ್ ಜನಪದ ಗಾಯಕ ಕಿರ್ಪಾಲ್ ಬಾವಾ ಅವರ ಪತ್ನಿ ಗುರ್ಮೀತ್ ಬಾವಾ ಅವರು 45 ಸೆಕೆಂಡುಗಳ ಕಾಲ ಉಸಿರನ್ನು ಹಿಡಿದು ಸುಮಧುರ ರಾಗವನ್ನು ಹಾಡುವಲ್ಲಿ ಹೆಸರುವಾಸಿಯಾಗಿದ್ದರು.

ಕೇಂದ್ರ ಜವಳಿ ಸಚಿವ ಪಿಯೂಷ್ ಗೋಯಲ್ ಘೋಷಣೆ

ಮೀರಾಬಾಯಿ ಚಾನು ಗ್ರಾಮದಲ್ಲಿ ಕೈಮಗ್ಗ ಕ್ಲಸ್ಟರ್

ಪ್ರಜಾವಾಣಿ ವಾರ್ತೆ

ಗುವಾಹಟಿ: ‘ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದ ಮಣಿಪುರದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅವರ ಗ್ರಾಮ ನಾಂಗ್‌ಪೋಕ್ ಕಾಕ್ಚಿಂಗ್‌ನಲ್ಲಿ ಕೇಂದ್ರ ಸರ್ಕಾರವು ಮೆಗಾ ಕೈಮಗ್ಗ ಕ್ಲಸ್ಟರ್ ಸ್ಥಾಪಿಸಲಿದೆ’ ಎಂದು ಕೇಂದ್ರ ಜವಳಿ, ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪಿಯೂಷ್ ಗೋಯಲ್ ಘೋಷಿಸಿದ್ದಾರೆ.

ಇಂಫಾಲದಲ್ಲಿ ಶನಿವಾರ ನಡೆದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಪಿಯೂಷ್, ‘ದೇಶವೇ ಹೆಮ್ಮೆಪಡುವಂತೆ ಮಾಡಿದ ಮೀರಾಬಾಯಿ ಅವರ ಸಾಧನೆಗಾಗಿ ನಾಂಗ್‌ಪೋಕ್ ಕಾಕ್ಚಿಂಗ್‌ನಲ್ಲಿ ₹ 30 ಕೋಟಿ ವೆಚ್ಚದಲ್ಲಿ ಮೆಗಾ ಕೈಮಗ್ಗ ಕ್ಲಸ್ಟರ್ ಸ್ಥಾಪಿಸಲಾಗುವುದು. ಅಂತೆಯೇ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಭಾರತದ ನೆಲದಲ್ಲಿ ಮೊದಲ ಬಾರಿಗೆ ರಾಷ್ಟ್ರಧ್ವಜ ಹಾರಿಸಿದ ಭಾರತೀಯ ಸೇನೆಯ ಯೋಧರ ಗೌರವಾರ್ಥ ಮೊಯಿರಾಂಗ್ ಅನ್ನು ಕೈಮಗ್ಗ ಗ್ರಾಮವನ್ನಾಗಿ ಮಾಡಲಾಗುವುದು’ ಎಂದು ಘೋಷಿಸಿದರು.

ಮೀರಾಬಾಯಿ ಚಾನು

‘ಮಣಿಪುರದ ಕೈಮಗ್ಗ ಮತ್ತು ಕರಕುಶಲ ಸಾಮರ್ಥ್ಯವನ್ನು ದೇಶವು ಮತ್ತಷ್ಟು ಮುಂಚೂಣಿಗೆ ತರಬೇಕಿದೆ. ಅಗತ್ಯವಿದ್ದಲ್ಲಿ ಕರಕುಶಲ ಸಚಿವಾಲಯವು, ಕೌಶಲ ಅಭಿವೃದ್ಧಿ, ಮೌಲ್ಯವರ್ಧನೆ, ಪ್ಯಾಕೇಜಿಂಗ್, ವಿನ್ಯಾಸ ಮತ್ತು ಬ್ರ್ಯಾಡಿಂಗ್‌ನಲ್ಲಿ ಸಾಧ್ಯವಿರುವ ಎಲ್ಲ ಸಹಾಯ ನೀಡಲಿದೆ’ ಎಂದು ಅವರು ಹೇಳಿದರು.

‘ರಾಜ್ಯದ ಕೈಮಗ್ಗ ಮತ್ತು ಕರಕುಶಲ ಉತ್ಪನ್ನಗಳು ಅನನ್ಯವಾಗಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಳ್ಳುವ ಸಾಮರ್ಥ್ಯ ಹೊಂದಿದೆ’ ಎಂದು ಮಣಿಪುರ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಹೇಳಿದರು.

ಮಣಿಪುರದ ಜವಳಿ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ತೊಂಗಮ್ ಬಿಸ್ವಜಿತ್ ಸಿಂಗ್ ಮಾತನಾಡಿ, ‘ಮಣಿಪುರವು ದೇಶದಲ್ಲೇ ಅತಿ ಹೆಚ್ಚು ಮಗ್ಗಗಳನ್ನು ಹೊಂದಿದೆ. ಇಲ್ಲಿ ಸುಮಾರು 2.11 ಲಕ್ಷ ಮಗ್ಗಗಳು ಮತ್ತು 2.12 ಲಕ್ಷ ನೇಕಾರರಿದ್ದಾರೆ. ಇತರ ರಾಜ್ಯಗಳಲ್ಲಿ ನೇಕಾರರ ಸಂಖ್ಯೆಯು ಇಳಿಕೆಯಾಗುತ್ತಿರುವಾಗ, ರಾಜ್ಯದಲ್ಲಿ ಅವರ ಜನಸಂಖ್ಯೆಯು ಹೆಚ್ಚಾಗುತ್ತಿದೆ’ ಎಂದರು.

ಇದೇ ಸಂದರ್ಭದಲ್ಲಿ ಸಚಿವ ಪಿಯೂಷ್ ಗೋಯಲ್ ಅವರು ‘ಸಾಯಿಕೋಮ್ ಮೀರಾಬಾಯಿ ಚಾನೂ’ ಕಿರುಚಿತ್ರವನ್ನು ಬಿಡುಗಡೆ ಮಾಡಿದರು. ಕಿರುಚಿತ್ರಕ್ಕಾಗಿ ಮೀರಾ ಅವರ ತಾಯಿಗೆ ₹ 20 ಲಕ್ಷ ಮೊತ್ತದ ಚೆಕ್ ಅನ್ನು ವಿತರಿಸಿದರು.

ಮೆಡಿಟರೇನಿಯನ್ ಸಮುದ್ರದಲ್ಲಿ ಮುಳುಗಿದ 75 ವಲಸಿಗರು

ರೋಮ್ (ಎಪಿ): ಲಿಬಿಯಾದ ಉತ್ತರಕ್ಕಿರುವ ಮೆಡಿಟರೇನಿಯನ್ ಸಮುದ್ರದಲ್ಲಿ 75 ವಲಸಿಗರು ಮುಳುಗಿ ಮೃತಪಟ್ಟಿದ್ದಾರೆ ಎಂದು ಅಂತರರಾಷ್ಟ್ರೀಯ ವಲಸೆ ಸಂಘಟನೆ (ಐಒಎಂ) ತಿಳಿಸಿದೆ.

ವಲಸಿಗರು ದೋಣಿಯೊಂದರಲ್ಲಿ ಇಟಲಿಯತ್ತ ಸಾಗುತ್ತಿದ್ದಾಗ ಈ ದುರಂತ ಸಂಭವಿಸಿದೆ ಎಂದು ವಿಶ್ವಸಂಸ್ಥೆಯ ಅಂಗಸಂಸ್ಥೆಯಾಗಿರುವ ಐಒಎಂ ಟ್ವೀಟ್ ಮಾಡಿದೆ.

ದೋಣಿಯಲ್ಲಿದ್ದವರ ಪೈಕಿ 15 ಜನರನ್ನು ಮೀನುಗಾರರು ರಕ್ಷಿಸಿದ್ದು, ಅವರನ್ನು ಲಿಬಿಯಾದ ವಾಯವ್ಯ ಭಾಗದಲ್ಲಿರುವ ಜುವಾರಾ ಬಂದರಿಗೆ ಕರೆತರಲಾಗಿದೆ ಎಂದೂ ಸಂಘಟನೆ ತಿಳಿಸಿದೆ.

‘ಮೆಡಿಟರೇನಿಯನ್ ಸಮುದ್ರದಲ್ಲಿ ಸಾಗುತ್ತಿದ್ದ ವೇಳೆ ತೊಂದರೆಗೆ ಸಿಲುಕಿದ್ದ, ಮಕ್ಕಳು ಸೇರಿದಂತೆ 420 ವಲಸಿಗರನ್ನು ಶನಿವಾರ ರಕ್ಷಿಸಲಾಗಿದೆ’ ಎಂದು ಇಟಲಿಯ ಕೋಸ್ಟ್‌ಗಾರ್ಡ್ ಪ್ರಕಟಣೆ ತಿಳಿಸಿದೆ.

‘ಆಫ್ರಿಕಾ, ಮಧ್ಯಪ್ರಾಚ್ಯ ಹಾಗೂ ದಕ್ಷಿಣ ಏಷ್ಯಾದಿಂದ ಸಾವಿರಾರು ವಲಸಿಗರು ಪ್ರತಿವರ್ಷ ಯುರೋಪ್ ರಾಷ್ಟ್ರಗಳಿಗೆ ತೆರಳಲು ಮೆಡಿಟರೇನಿಯನ್ ಸಮುದ್ರ ದಾಟಲು ಪ್ರಯತ್ನಿಸುತ್ತಾರೆ. ಪ್ರಯಾಣಿಸಲು ಯೋಗ್ಯವಲ್ಲದ ದೋಣಿಗಳು ಹಾಗೂ ಅವುಗಳ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪ್ರಯಾಣಿಸುವುದು ಕಂಡುಬರುತ್ತದೆ’ ಎಂದು ಐಒಎಂ ತಿಳಿಸಿದೆ.

ಟಿ20 ಸರಣಿ: ರೋಹಿತ್ ನಾಯಕತ್ವ, ದ್ರಾವಿಡ್ ಮಾರ್ಗದರ್ಶನಕ್ಕೆ ಗೆಲುವಿನ ಹೊಳಪು

ಕಿವೀಸ್ ಎದುರು ಭಾರತದ ಕ್ಲೀನ್‌ಸ್ವೀಪ್

ಮುಖ್ಯಾಂಶಗಳು

- ರಾಹುಲ್ ದ್ರಾವಿಡ್ ಮುಖ್ಯ ಕೋಚ್ ಆದ ಮೊದಲ ಸರಣಿ
- ಬ್ಯಾಟಿಂಗ್‌ನಲ್ಲಿ ಮಿಂಚಿದ ಹರ್ಷಲ್, ದೀಪಕ್

ಕೋಲ್ಕತ್ತ (ಪಿಟಿಐ): ಈಡನ್ ಗಾರ್ಡನ್‌ನಲ್ಲಿ ಭಾನುವಾರ ರಾತ್ರಿ ಸೇರಿದ್ದ ಕ್ರಿಕೆಟ್‌ಪ್ರಿಯರನ್ನು ಭಾರತ ತಂಡದ ನಾಯಕ ರೋಹಿತ್ ಶರ್ಮಾ ನಿರಾಶೆಗೊಳಿಸಲಿಲ್ಲ.

'ಹಿಟ್‌ಮ್ಯಾನ್' ಖ್ಯಾತಿಗೆ ತಕ್ಕಂತೆ ಬ್ಯಾಟ್ ಬೀಸಿದ ರೋಹಿತ್ (56; 31ಎಸೆತ, 5ಬೌಂಡರಿ, 3ಸಿಕ್ಸರ್) ಮುಂದೆ ಕಿವೀಸ್ ಬೌಲರ್‌ಗಳು ಬಸವಳಿದರು. ನ್ಯೂಜಿಲೆಂಡ್ ಎದುರಿನ ಮೂರನೇ ಟಿ20 ಪಂದ್ಯದಲ್ಲಿ 73 ರನ್‌ಗಳಿಂದ ಗೆದ್ದಿತು. ಆತಿಥೇಯ ತಂಡವು ಸರಣಿಯಲ್ಲಿ 3–0ಯಿಂದ ಕ್ಲೀನ್‌ಸ್ವೀಪ್ ಮಾಡಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡಕ್ಕೆ ರೋಹಿತ್ ಮತ್ತು ಇಶಾನ್ ಕಿಶನ್ (29; 21ಎ, 6ಬೌಂಡರಿ) ಅವರ ಅಬ್ಬರದ ಆಟ ರಂಗೇರಿತು. ಇದರಿಂದಾಗಿ ಭಾರತ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 184 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಕಿವೀಸ್ ತಂಡವು 17.2 ಓವರ್‌ಗಳಲ್ಲಿ 111 ರನ್ ಗಳಿಸಿ ಆಲೌಟ್ ಆಯಿತು. ಅಕ್ಷರ್ ಪಟೇಲ್ (9ಕ್ಕೆ3) ಸ್ಪಿನ್ ಮೋಡಿಗೆ ಶರಣಾಯಿತು. ಮಾರ್ಟಿನ್ ಗಪ್ಟಿಲ್ (51 ರನ್) ಅರ್ಧಶತಕ ವ್ಯರ್ಥವಾಯಿತು.

ನಾಯಕತ್ವದ ಚೊಚ್ಚಲ ಸರಣಿಯಲ್ಲಿ ಸಾಧನೆ: ಟಿ20 ತಂಡದ ನಾಯಕತ್ವ ವಹಿಸಿಕೊಂಡ ಮೊದಲ ಸರಣಿಯಲ್ಲಿಯೇ ರೋಹಿತ್ ಬ್ಯಾಟಿಂಗ್ ಮತ್ತು ತಂತ್ರಗಾರಿಕೆಯಲ್ಲಿ ಮೇಲುಗೈ ಸಾಧಿಸಿದರು. ಬೌಂಡರಿಯೊಂದಿಗೆ ಖಾತೆ ತೆರೆದ ರೋಹಿತ್ ಅವರ ಆಟದ ಅಬ್ಬರ ಮೇರೆ ಮೀರಿತು. ಇದರಿಂದಾಗಿ ಮೊದಲ ಆರು ಓವರ್‌ಗಳಲ್ಲಿಯೇ ತಂಡವು 69 ರನ್ ಗಳಿಸಿತು.

ಆದರೆ 7ನೇ ಓವರ್‌ನಲ್ಲಿ ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ ಭಾರತದ ಜೋಡಿಯ ಭರಾಟೆಗೆ ಕಡಿವಾಣ ಹಾಕಿದರು. ಎರಡನೇ ಎಸೆತದಲ್ಲಿ ಇಶಾನ್ ಕಿಶನ್ ವಿಕೆಟ್ ಪಡೆದ ಅವರು ಜೊತೆಯಾಟ ಮುರಿದರು. ಅದೇ ಓವರ್‌ನ ಕೊನೆಯ ಎಸೆತದಲ್ಲಿ ಸೂರ್ಯಕುಮಾರ್ ಯಾದವ್ ವಿಕೆಟ್ ಕೂಡ ಕಬಳಿಸಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ಸ್ಯಾಂಟನರ್ ಅವರು ರಿಷಭ್ ಪಂತ್ (4 ರನ್) ವಿಕೆಟ್ ಕೂಡ ಗಳಿಸಿದರು. ಈ ಹಂತದಲ್ಲಿ ರೋಹಿತ್ ತಮ್ಮ ಆಟ ಮುಂದುವರಿಸಿದ್ದರು. ಅರ್ಧ ಶತಕ ಪೂರೈಸಿದರು. ಅವರು ಇನ್ನಷ್ಟು ಪ್ರಹಾರ ನಡೆಸುವ ಸಿದ್ಧತೆಯಲ್ಲಿದ್ದಾಗಲೇ ಸ್ಪಿನ್ನರ್ ಈಶ್ ಸೋಧಿ ಎಸೆತದಲ್ಲಿ ಅವರಿಗೇ ಕ್ಯಾಚ್ ಕೊಟ್ಟು ಔಟಾದರು.

ಕ್ರೀಸ್‌ನಲ್ಲಿ ಜೊತೆಗೂಡಿದ ಶ್ರೇಯಸ್ ಅಯ್ಯರ್ (25,20ಎ) ಮತ್ತು ವೆಂಕಟೇಶ್ ಅಯ್ಯರ್ (20; 15ಎ) ಮೊತ್ತವನ್ನು ಹಿಗ್ಗಿಸುವ ಪ್ರಯತ್ನ ಮಾಡಿದರು. ಆದರೆ ಇನಿಂಗ್ಸ್‌ನಲ್ಲಿ ಇನ್ನೂ ನಾಲ್ಕು ಓವರ್‌ಗಳು ಬಾಕಿ ಇದ್ದಾಗಲೇ ಇಬ್ಬರೂ ಔಟಾದರು.

ದೀಪಕ್ – ಹರ್ಷಲ್ ಮಿಂಚು: ಇನಿಂಗ್ಸ್‌ನ ಕೊನೆಯ ಹಂತದಲ್ಲಿ ಹರ್ಷಲ್ ಪಟೇಲ್ ಮತ್ತು ದೀಪಕ್ ಚಾಹರ್ ಮಿಂಚಿದರು. ಹರ್ಷಲ್ 11 ಎಸೆತಗಳಲ್ಲಿ 18 ರನ್ ಗಳಿಸಿದರು. ಎರಡು ಬೌಂಡರಿ ಮತ್ತು ಒಂದು ಸಿಕ್ಸರ್ ಸಿಡಿಸಿದರು. ದೀಪಕ್ (ಔಟಾ ಗದೇ 21, 8ಎಸೆತ) ಕೂಡ ಬ್ಯಾಟ್ ಬೀಸಿದರು.

ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಭಾರತ ತಂಡದ ಆಟಗಾರರು– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ 7ಕ್ಕೆ 184 (20 ಓವರ್)

ರೋಹಿತ್ ಶರ್ಮಾ ಸಿ ಮತ್ತು ಬಿ ಸೋಧಿ 56 (31 ಎ, 4x5, 6x3), ಇಶಾನ್ ಸಿ ಸೀಫರ್ಟ್ ಬಿ ಸ್ಯಾಂಟನರ್ 29 (21 ಎ, 4x6), ಸೂರ್ಯಕುಮಾರ್ ಸಿ ಗಪ್ಟಿಲ್ ಬಿ ಸ್ಯಾಂಟನರ್ 0 (4 ಎ), ಪಂತ್ ಸಿ ನಿಶಾಮ್ ಬಿ ಸ್ಯಾಂಟನರ್ 4 (6 ಎ), ಶ್ರೇಯಸ್ ಸಿ ಮಿಚೆಲ್ ಬಿ ಮಿಲ್ನೆ 25 (20 ಎ, 4x2), ವೆಂಕಟೇಶ್ ಸಿ ಚಾಪ್‌ಮನ್ ಬಿ ಬೌಲ್ಟ್ 20 (15 ಎ, 4x1, 6x1), ಅಕ್ಷರ್ ಔಟಾಗದೆ 2 (4 ಎ), ಹರ್ಷಲ್ ಹಿಟ್ ವಿಕೆಟ್ ಬಿ ಫರ್ಗ್ಯುಸನ್ 18 (11 ಎ, 4x2, 6x1), ದೀಪಕ್ ಚಾಹರ್ ಔಟಾಗದೆ 21 (8 ಎ, 4x2, 6x1)

ಇತರೆ (ಬೈ 2, ಲೆಗ್ ಬೈ 1, ವೈಡ್ 6) 9

ವಿಕೆಟ್ ಪತನ: 1-69 (ಇಶಾನ್ ಕಿಶನ್, 6.2), 2-71 (ಸೂರ್ಯಕುಮಾರ್ ಯಾದವ್, 6.6), 3-83 (ರಿಷಭ್ ಪಂತ್, 8.6), 4-103 (ರೋಹಿತ್ ಶರ್ಮಾ, 11.2), 5-139 (ವೆಂಕಟೇಶ್ ಅಯ್ಯರ್, 15.5), 6-140 (ಶ್ರೇಯಸ್ ಅಯ್ಯರ್, 16.1), 7-162 (ಹರ್ಷಲ್ ಪಟೇಲ್, 18.3)

ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–31–1, ಆ್ಯಡಂ ಮಿಲ್ನೆ 4–0–47–1, ಲಾಕಿ ಫರ್ಗ್ಯೂಸನ್ 4–0–45–1, ಮಿಚೆಲ್ ಸ್ಯಾಂಟನರ್ 4–0–27–3, ಈಶ್ ಸೋಧಿ 4–0–31–1

ನ್ಯೂಜಿಲೆಂಡ್ 111ಕ್ಕೆ ಆಲೌಟ್ (17.2 ಓವರ್)

ಗಪ್ಟಿಲ್ ಸಿ ಯಾದವ್ ಬಿ ಚಾಹಲ್ 51 (36 ಎ, 4x4, 6x4), ಮಿಚೆಲ್ ಸಿ ಹರ್ಷಲ್ ಬಿ ಅಕ್ಷರ್ 5 (6 ಎ, 4x1), ಚಾಪ್‌ಮನ್ ಸ್ಟಂಪ್ಡ್ ಪಂತ್ ಬಿ ಅಕ್ಷರ್ 0 (2 ಎ), ಫಿಲಿಪ್ಸ್ ಬಿ ಅಕ್ಷರ್ 0 (4 ಎ), ಸೀಫರ್ಟ್ ರನೌಟ್ (ಇಶಾನ್/ಪಂತ್) 17 (18 ಎ, 4x1), ನಿಶಾಮ್ ಸಿ ಪಂತ್ ಬಿ ಹರ್ಷಲ್ 3 (7 ಎ), ಸ್ಯಾಂಟನರ್ ರನೌಟ್ (ಇಶಾನ್) 2 (4 ಎ), ಮಿಲ್ನೆ ಸಿ ಶರ್ಮಾ ಬಿ ವೆಂಕಟೇಶ್ 7 (6 ಎ, 6x1), ಸೋಧಿ ಸಿ ಯಾದವ್ ಬಿ ಹರ್ಷಲ್ 9 (11 ಎ, 4x2), ಫರ್ಗ್ಯುಸನ್ ಸಿ ಮತ್ತು ಬಿ ದೀಪಕ್ 14 (8 ಎ, 6x2), ಟ್ರೆಂಟ್ ಬೌಲ್ಟ್ ಔಟಾಗದೆ 2 (2 ಎ)

ಇತರೆ (ವೈಡ್ 1) 1

ವಿಕೆಟ್ ಪತನ: 1-21 (ಡ್ಯಾರಿಲ್ ಮಿಚೆಲ್, 2.1), 2-22 (ಮಾರ್ಕ್ ಚಾಪ್‌ಮನ್, 2.6), 3-30 (ಗ್ಲೆನ್ ಫಿಲಿಪ್ಸ್, 4.4), 4-69 (ಮಾರ್ಟಿನ್ ಗಪ್ಟಿಲ್, 10.3), 5-76 (ಟಿಮ್ ಸೀಫರ್ಟ್, 11.4), 6-76 (ಜೇಮ್ಸ್ ನಿಶಾಮ್, 12.3), 7-84 (ಮಿಚೆಲ್ ಸ್ಯಾಂಟನರ್, 13.1), 8-93 (ಆ್ಯಡಂ ಮಿಲ್ನೆ, 15.1), 9-95 (ಈಶ್ ಸೋಧಿ, 16.1), 10-111 (ಲಾಕಿ ಫರ್ಗ್ಯುಸನ್, 17.2)

ಬೌಲಿಂಗ್: ಭುವನೇಶ್ವರ್ ಕುಮಾರ್ 2–0–12–0, ದೀಪಕ್ ಚಾಹರ್ 2.2–0–26–1, ಅಕ್ಷರ್ ಪಟೇಲ್ 3–0–9–3, ಯಜುವೇಂದ್ರ ಚಾಹಲ್ 4–0–26–1, ವೆಂಕಟೇಶ್ ಅಯ್ಯರ್ 3–0–12–1, ಹರ್ಷಲ್ ಪಟೇಲ್ 3–0–26–2

ಫಲಿತಾಂಶ: ಭಾರತಕ್ಕೆ 73 ರನ್‌ಗಳ ಜಯ; 3–0ಯಿಂದ ಸರಣಿ

ಎಸ್‌ಸಿ ಈಸ್ಟ್ ಬೆಂಗಾಲ್–ಜೆಮ್ಶೆಡ್‌ಪುರ ಪಂದ್ಯ ಡ್ರಾ

ವಾಸ್ಕೊ (ಪಿಟಿಐ): ಮೊದಲಾರ್ಧದಲ್ಲಿ ಮೂಡಿಬಂದ ತಲಾ ಒಂದೊಂದು ಗೋಲುಗಳ ನಂತರ ಎಸ್‌ಸಿ ಈಸ್ಟ್ ಬೆಂಗಾಲ್ ಮತ್ತು ಜೆಮ್ಶೆಡ್‌ಪುರ ಎಫ್‌ಸಿ ತಂಡಗಳು ರಕ್ಷಣಾತ್ಮಕ ಆಟಕ್ಕೆ ಒತ್ತು ಕೊಟ್ಟವು. ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಭಾನುವಾರ ರಾತ್ರಿ ನಡೆದ ಈ ತಂಡಗಳ ನಡುವಿನ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು.

ಫ್ರಾಂಜೊ ಪಿಯರ್ಸ್ 17ನೇ ನಿಮಿಷದಲ್ಲಿ ಗಳಿಸಿದ ಗೋಲಿನ ಮೂಲಕ ಈಸ್ಟ್ ಬೆಂಗಾಲ್ ತಂಡ ಮುನ್ನಡೆ ಸಾಧಿಸಿತು. ಆದರೆ ಮೊದಲಾರ್ಧದ ಕೊನೆಯ ನಿಮಿಷದಲ್ಲಿ ಪೀಟರ್ ಹಾರ್ಟ್ಲೆ ಚೆಂಡನ್ನು ಗುರಿ ಮುಟ್ಟಿಸಿ ಜೆಮ್ಶೆಡ್‌ಪುರ ಎಫ್‌ಸಿಗೆ ಸಮಬಲ ತಂದುಕೊಟ್ಟರು.

ಗೋಲು ಗಳಿಸಿದ ಪೀಟರ್ ಹಾರ್ಟ್ಲೆ ಸಂಭ್ರಮ–ಐಎಸ್‌ಎಲ್ ಚಿತ್ರ

ಮುಂಬೈಗೆ ಗೋವಾ ಸವಾಲು: ಕಳೆದ ಆವೃತ್ತಿಯಲ್ಲಿ ಅಮೋಘ ಆಟವಾಡಿರುವ ಎಫ್‌ಸಿ ಗೋವಾ ತಂಡ ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿಯನ್ನು ಸೋಮವಾರ ಎದುರಿಸಲಿದೆ.

ಸ್ಕೀಯಿಂಗ್: ಒಲಿಂಪಿಕ್ಸ್ ಅರ್ಹತೆಗಾಗಿ ಮದುವೆ ಮುಂದೂಡಿದ ಆರಿಫ್

ಬೆಂಗಳೂರು: ಜಮ್ಮು ಮತ್ತು ಕಾಶ್ಮೀರದ ಸ್ಕೀಯಿಂಗ್ ಪಟು ಆರಿಫ್ ಮೊಹಮ್ಮದ್ ಖಾನ್ ಅವರು 2022ರ ಚಳಿಗಾಲದ ಒಲಿಂಪಿಕ್ಸ್ ಅರ್ಹತೆಗೆ ಗಳಿಸಲು ತಮ್ಮ ವಿವಾಹವನ್ನೇ ಮುಂದೂಡಿದ್ದಾರೆ.



ಆರಿಫ್ ಖಾನ್

ಬೀಜಿಂಗ್‌ನಲ್ಲಿ ಫೆಬ್ರುವರಿ 4ರಿಂದ 20ರವರೆಗೆ ನಡೆಯಲಿರುವ ಟೂರ್ನಿಯ ಅರ್ಹತೆಗಾಗಿ ಸೆಪ್ಟೆಂಬರ್‌ನಲ್ಲಿ ನಿಗದಿಯಾಗಿದ್ದ ವಿವಾಹವನ್ನು ಆರಿಫ್ ಮುಂದೂಡಬೇಕಾಯಿತು.

'ಕೋವಿಡ್–19ಕ್ಕೆ ಸಂಬಂಧಿಸಿದ ನಿರ್ಬಂಧಗಳನ್ನು ಸಡಿಲಿಸಿದ ಬಳಿಕ ಒಲಿಂಪಿಕ್ಸ್ ಪ್ರವೇಶ ಪಡೆಯಲು ಆರಿಫ್ ಆಸ್ಟ್ರೇಲಿಯಾಕ್ಕೆ ತರಬೇತಿಗಾಗಿ ತೆರಳಿದ್ದರು' ಎಂದು ಆರಿಫ್ ತಂದೆ ಯಾಸಿನ್ ಖಾನ್ ಹೇಳಿದರು.

ಮೂರನೇ ಪ್ರಶಸ್ತಿ ಮೇಲೆ ಕಣ್ಣು

ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಫೈನಲ್: ಕರ್ನಾಟಕ–ತಮಿಳುನಾಡು ಹಣಾಹಣಿ

ನವದೆಹಲಿ (ಪಿಟಿಐ): ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟ್ರೋಫಿಯನ್ನು ಮೂರನೇ ಸಲ ಜಯಿಸುವ ಛಲದೊಂದಿಗೆ ಕರ್ನಾಟಕ ಮತ್ತು ತಮಿಳುನಾಡು ತಂಡಗಳು ಸೋಮವಾರ ಕಣಕ್ಕಿಳಿಯಲಿವೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್‌ನಲ್ಲಿ ದಕ್ಷಿಣ ಭಾರತದ ಎರಡೂ ತಂಡಗಳ ನಡುವೆ ರೋಚಕ ಹಣಾಹಣಿ ನಡೆಯುವ ನಿರೀಕ್ಷೆ ಗರಿಗೆದರಿದೆ. ಟೂರ್ನಿಯ ಇತಿಹಾಸದಲ್ಲಿ ಉಭಯ ತಂಡಗಳು ತಲಾ ಎರಡು ಬಾರಿ ಪ್ರಶಸ್ತಿ ಜಯಿಸಿವೆ. 2019–20ರ ಫೈನಲ್‌ನಲ್ಲಿ ಎರಡೂ ತಂಡಗಳು ಮುಖಾಮುಖಿಯಾಗಿದ್ದವು. ಆ ರೋಚಕ ಪಂದ್ಯದಲ್ಲಿ ಕರ್ನಾಟಕ ಮೇಲುಗೈ ಸಾಧಿಸಿತ್ತು. ಹೋದ ಸಲ ಕರ್ನಾಟಕ ಫೈನಲ್ ಪ್ರವೇಶಿಸಲು ವಿಫಲವಾಗಿತ್ತು. ತಮಿಳುನಾಡು ಫೈನಲ್‌ನಲ್ಲಿ ಬರೋಡಾ ವಿರುದ್ಧ ಜಯಿಸಿತ್ತು.

ಇದೀಗ ಸತತ ಮೂರನೇ ಬಾರಿ ಮತ್ತು ಒಟ್ಟಾರೆ ನಾಲ್ಕನೇ ಸಲ ಫೈನಲ್ ತಲುಪಿದ ಸಾಧನೆಯನ್ನು ತಮಿಳುನಾಡು ಮಾಡಿದೆ. ಅನುಭವಿ ಬೌಲರ್‌ಗಳ ಕೊರತೆ ಇರುವ ಕರ್ನಾಟಕ ತಂಡವು ಬ್ಯಾಟಿಂಗ್ ವಿಭಾಗದ ಮೇಲೆಯೇ ಹೆಚ್ಚು ಅವಲಂಬಿತವಾಗಿದೆ. ನಾಯಕ ಮನೀಷ್ ಪಾಂಡೆ ತಮ್ಮ ಚುರುಕಿನ ಫೀಲ್ಡಿಂಗ್, ಮಿಂಚಿನ ಬ್ಯಾಟಿಂಗ್ ಮತ್ತು ಚಾಣಾಕ್ಷ ತಂತ್ರಗಳ ಮೂಲಕ ತಂಡವು ಪ್ರೀ ಕ್ವಾರ್ಟರ್ ಮತ್ತು ಕ್ವಾರ್ಟರ್‌ಫೈನಲ್‌ಗಳಲ್ಲಿ ಜಯಿಸಲು ಕಾರಣರಾಗಿದ್ದರು.

ರೋಹನ್ ಕದಂ, ಅಭಿನವ್ ಮನೋಹರ್, ಕರುಣ್ ನಾಯರ್, ಅನಿರುದ್ಧ ಜೋಶಿ ಅವರು ಉತ್ತಮ ಲಯದಲ್ಲಿರುವುದು ಬ್ಯಾಟಿಂಗ್‌ನಲ್ಲಿ ಹೆಚ್ಚು ಚಿಂತೆ ಇಲ್ಲ. ಟೂರ್ನಿಯಲ್ಲಿ ಮನೀಷ್ 259 ಮತ್ತು ಕರುಣ್ 223 ರನ್ ಸೇರಿಸಿದ್ದಾರೆ. ಆದರೆ ಹೊಸಪ್ರತಿಭೆಗಳಾದ ವಿದ್ಯಾಧರ್ ಪಾಟೀಲ, ವಿಜಯಕುಮಾರ್ ವೈಶಾಖ, ಎಂ.ಬಿ. ದರ್ಶನ್ ಅವರಿಗೆ ತಮಿಳುನಾಡು ಬ್ಯಾಟಿಂಗ್ ಬಲವನ್ನು ಕಟ್ಟಿಹಾಕುವ ಸವಾಲಿದೆ. ಶಾರೂಕ್ ಖಾನ್, ನಾಯಕ ವಿಜಯಶಂಕರ್, ಎನ್. ಜಗದೀಶನ್ ಅವರು ಬ್ಯಾಟಿಂಗ್ ವಿಭಾಗದ ಪ್ರಮುಖರಾಗಿದ್ದಾರೆ.

ತಮಿಳುನಾಡು ಬೌಲಿಂಗ್ ವಿಭಾಗವು ಉತ್ತಮವಾಗಿದೆ. ಸೆಮಿಫೈನಲ್‌ನಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದ ಪಿ. ಸರವಣಕುಮಾರ್ ಮತ್ತು ಸಂದೀಪ್ ವರಿಯರ್ ಉತ್ತಮ ಲಯದಲ್ಲಿದ್ದಾರೆ. ಗಾಯದಿಂದಾಗಿ ಟಿ. ನಟರಾಜನ್ ಕಳೆದೆರಡು ಪಂದ್ಯಗಳಲ್ಲಿ ಆಡಿಲ್ಲ. ಅವರು ಚೇತರಿಸಿಕೊಂಡು ಫೈನಲ್‌ನಲ್ಲಿ ಕಣಕ್ಕಿಳಿಯುವ ಸಾಧ್ಯತೆ ಇದೆ.

ತಮಿಳುನಾಡು, 2017ರ ನಂತರ ಕರ್ನಾಟಕದ ಎದುರು ಗೆದ್ದಿಲ್ಲ. ಮನೀಷ್ ಬಳಗವು ಈ ದಾಖಲೆಯನ್ನು ಮುಂದುವರಿಸಿಕೊಂಡು ಹೋಗುವ ಛಲದಲ್ಲಿದೆ.

ಪ್ರಶಸ್ತಿ ಸಾಧನೆ

ತಂಡ	ವರ್ಷ
ಕರ್ನಾಟಕ	2018-19
ಕರ್ನಾಟಕ	2019-20
ತಮಿಳುನಾಡು	2006-07
ತಮಿಳುನಾಡು	2020-21

ಬಲಾಬಲ

ಪಂದ್ಯಗಳು	10
ಕರ್ನಾಟಕ ಜಯ	6
ತಮಿಳುನಾಡು ಜಯ	3
ಟೈ	1

ತಂಡಗಳು

ಕರ್ನಾಟಕ: ಮನೀಷ್ ಪಾಂಡೆ (ನಾಯಕ), ರೋಹನ್ ಕದಂ, ಅಭಿನವ್ ಮನೋಹರ್, ಕರುಣ್ ನಾಯರ್, ಅನಿರುದ್ಧ ಜೋಶಿ, ಬಿ.ಆರ್. ಶರತ್, ಜೆ. ಸುಚಿತ್, ವಿಜಯಕುಮಾರ್ ವೈಶಾಖ, ಎಂ.ಬಿ. ದರ್ಶನ್, ಕೆ.ಸಿ. ಕಾರ್ಯಪ್ಪ, ವಿದ್ಯಾಧರ್ ಪಾಟೀಲ, ಆರ್. ಸಮರ್ಥ್, ಪ್ರವೀಣ ದುಬೆ, ಆದಿತ್ಯ ಸೋಮಣ್ಣ, ವಿ. ಕೌಶಿಕ್, ಪ್ರತೀಕ್ ಜೈನ್, ನಿಹಾಲ್ ಉಲ್ಲಾಳ, ರಿತೇಶ್ ಭಟ್ಕಳ, ಕೆ.ವಿ. ಸಿದ್ಧಾರ್ಥ್

ತಮಿಳುನಾಡು: ವಿಜಯಶಂಕರ್ (ನಾಯಕ), ಹರಿನಿಶಾಂತ್, ಎನ್. ಜಗದೀಶನ್ (ವಿಕೆಟ್‌ಕೀಪರ್), ಸಂಜಯ್ ಯಾದವ್, ಶಾರೂಖ್ ಖಾನ್, ಎಂ. ಮೊಹಮ್ಮದ್, ಮುರುಗನ್ ಅಶ್ವಿನ್, ರವಿಶ್ರೀನಿವಾಸನ್ ಸಾಯಿಕಿಶೋರ್, ಪಿ. ಸರವಣಕುಮಾರ್, ಸಂದೀಪ್ ವರಿಯರ್, ಜೆ. ಕೌಶಿಕ್, ಜಗದೀಶನ್ ಕೌಶಿಕ್, ಗಂಗಾಶ್ರೀಧರ್ ರಾಜು, ಆದಿತ್ಯ ಗಣೇಶ್, ಆರ್. ಸಿಲಂಬರಸನ್, ಆರ್. ವಿವೇಕ್, ಮಣಿಮಾರನ್ ಸಿದ್ಧಾರ್ಥ್, ತಂಗವೇಲು ನಟರಾಜನ್.

ಪಂದ್ಯ ಆರಂಭ: ಮಧ್ಯಾಹ್ನ 12

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ವಿಜಯಶಂಕರ್ · ಮನೀಷ್ ಪಾಂಡೆ

ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮಕ್ಕಳು ಹಿಡಿದು ನಿಂತ ದೊಡ್ಡ ಗಾತ್ರದ ಟೆನಿಸ್ ಚೆಂಡುಗಳ ಮೇಲೆ ಹಸ್ತಾಕ್ಷರ ಮಾಡಿದ ಪೆಂಗ್ ಶುಯಿ

ಸಾರ್ವಜನಿಕ ಕಾರ್ಯಕ್ರಮಕ್ಕೆ ಪೆಂಗ್ ಶುಯಿ ಹಾಜರ್

ಬೀಜಿಂಗ್ (ಎಪಿ): ಕಾಣೆಯಾಗಿದ್ದಾರೆಂದು ಸುದ್ದಿಯಾಗಿದ್ದ ಚೀನಾದ ಟೆನಿಸ್ ತಾರೆ ಪೆಂಗ್ ಶುಯಿ ಭಾನುವಾರ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾರೆ.

ಚೀನಾ ಓಪನ್ ಸಂಘಟನೆಯು ಭಾನುವಾರ ವೀಬೊ ಸಾಮಾಜಿಕ ಜಾಲತಾಣದಲ್ಲಿ ಪೆಂಗ್ ಅವರು ಟೆನಿಸ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಚಿತ್ರಗಳನ್ನು ಪೋಸ್ಟ್ ಮಾಡಿದೆ. ಕೋರ್ಟ್ ಪಕ್ಕದಲ್ಲಿ ನಿಂತಿರುವ ಪೆಂಗ್, ಮಕ್ಕಳಿಗೆ ಸ್ಮರಣಿಕೆಯಾಗಿ ನೀಡಲಾದ ದೊಡ್ಡಗಾತ್ರದ ಟೆನಿಸ್ ಚೆಂಡುಗಳಿಗೆ ಹಸ್ತಾಕ್ಷರ ಹಾಕುತ್ತಿರುವ ಚಿತ್ರ ಇದಾಗಿದೆ.

ಮೂರು ಬಾರಿ ಒಲಿಂಪಿಯನ್ ಮತ್ತು ಮಾಜಿ ವಿಂಬಲ್ಡನ್ ಚಾಂಪಿಯನ್ ಆಗಿರುವ ಪೆಂಗ್ ಶುಯಿ ಅವರು ಈಚೆಗೆ ಕಮ್ಯುನಿಸ್ಟ್ ಪಕ್ಷದ ಪ್ರಭಾವಿ ನಾಯಕ ಝೂಂಗ್ ಗವೊಲಿ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿದ್ದರು. ಅದಾಗಿ ಕೆಲವು ದಿನಗಳ ನಂತರ ಪೆಂಗ್ ಕಾಣೆ ಯಾಗಿರುವ ಸುದ್ದಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಈ ಕುರಿತು ವಿಶ್ವದ ಟೆನಿಸ್ ದಿಗ್ಗಜರು, ಕ್ರೀಡಾ ಆಡಳಿತ ಸಂಸ್ಥೆಗಳು ಮತ್ತು ಮಾಜಿ ಆಟಗಾರರು ಚೀನಾ ಸರ್ಕಾರದ ವಿರುದ್ಧ ಕಿಡಿ ಕಾರಿದ್ದರು. ಸಾಮಾಜಿಕ ತಾಣದಲ್ಲಿ 'ವೇರ್ ಇಸ್ ಪೆಂಗ್ ಶುಯಿ' ಎಂಬ ಹ್ಯಾಷ್‌ಟ್ಯಾಗ್ ಅಡಿ ಅಭಿಯಾನ ಆರಂಭಿಸಿದ್ದರು. ನವೊಮಿ ಒಸಾಕಾ, ಸೆರೆನಾ ವಿಲಿಯಮ್ಸ್, ಜೊಕೊವಿಚ್ ಇದರಲ್ಲಿ ಸಕ್ರಿಯವಾಗಿದ್ದರು.

ಜ್ವೆರೆವ್‌ಗೆ ಎಟಿಪಿ ಕಿರೀಟ

ಟುರಿನ್, ಇಟಲಿ (ಎಪಿ): ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರು ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಹಣಾಹಣಿಯಲ್ಲಿ ಅವರು 6-4, 6-4ರಿಂದ ರಷ್ಯಾದ ಡೇನಿಯಲ್ ಮೆಡ್ವೆಡೆವ್ ಅವರ ಸವಾಲು ಮೀರಿದರು.

ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜ್ವೆರೆವ್, ಈ ವರ್ಷ ಆರನೇ ಪ್ರಶಸ್ತಿಗೆ ಮುತ್ತಿಟ್ಟರು. ಹಾಲಿ ಚಾಂಪಿಯನ್ ಆಗಿದ್ದ ಮೆಡ್ವೆಡೆವ್ ವಿರುದ್ಧದ ಸತತ ಐದು ಸೋಲುಗಳ ಸರಣಿಯನ್ನು ತುಂಡರಿಸಿದರು.

ಶನಿವಾರ ರಾತ್ರಿ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ಜ್ವೆರೆವ್ 7-6 (4), 4-6, 6-3ರಿಂದ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ನೊವಾಕ್ ಜೊಕೊವಿಚ್ ಅವರನ್ನು ಪರಾಭವಗೊಳಿಸಿದ್ದರು. ಇದರೊಂದಿಗೆ ಈ ವರ್ಷದಲ್ಲಿ ಎರಡನೇ ಬಾರಿ ಸರ್ಬಿಯಾ ಆಟಗಾರನಿಗೆ ಪ್ರಮುಖ ಟೂರ್ನಿಯೊಂದರ ಪ್ರಶಸ್ತಿ ಸುತ್ತಿನಲ್ಲಿ ಆಡುವ ಅವಕಾಶ ತಪ್ಪಿಸಿದರು.

ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಅಲೆಕ್ಸಾಂಡರ್ ಜ್ವೆರೆವ್– ಎಎಫ್‌ಪಿ ಚಿತ್ರ

ಟೆನ್‌ಪಿನ್: ಟ್ರೈಡೆಂಟ್ ಸೂಪರ್ ಕಿಂಗ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಟ್ರೈಡೆಂಟ್ ಸೂಪರ್ ಕಿಂಗ್ಸ್ ತಂಡದವರು ಕರ್ನಾಟಕ ಓಪನ್ ಟ್ರಯೋಸ್ ಟೆನ್‌ಪಿನ್ ಬೌಲಿಂಗ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಚರ್ಚ್ ಸ್ಟ್ರೀಟ್‌ನಲ್ಲಿರುವ ಅಮೀಬಾ ಬೌಲಿಂಗ್ ಕೇಂದ್ರದಲ್ಲಿ ನಡೆದ ಟೂರ್ನಿಯ ಫೈನಲ್‌ನಲ್ಲಿ ಟ್ರೈಡೆಂಟ್ ಸೂಪರ್ ಕಿಂಗ್ಸ್ ತಂಡವು ಗುಜರಾತ್ ರೋಲರ್ಸ್ ತಂಡವನ್ನು ಸೋಲಿಸಿತು.

ಬೇಕರ್ಸ್ ಟ್ರೈಡೆಂಟ್ ಮಾದರಿಯಲ್ಲಿ ನಡೆದ ಎರಡು ಗೇಮ್‌ಗಳ ಪಿನ್‌ಫಾಲ್‌ನಲ್ಲಿ ಅಕ್ರಮುಲ್ಲಾ ಬೇಗ್, ಹಬೀಬುರ್ ರೆಹಮಾನ್ ಮತ್ತು ಉಮೇಶ್ ಕುಮಾರ್ ಅವರಿದ್ದ ತಂಡವು ಗೆದ್ದಿತು.

ಎರಡೂ ಗೇಮ್‌ಗಳ ನಂತರ ಉಭಯ ತಂಡಗಳ ಬಳಿ ತಲಾ 434 ಪಾಯಿಂಟ್ಸ್ ಇದ್ದವು. ಆದರೆ ಎಂಟು ಪಿನ್‌ಗಳ ಒಂದು ಬಾಲ್‌ನ ರೂಲ್ ಆಫ್‌ನಲ್ಲಿ ಜಯ ಸಾಧಿಸಿದ ಸೂಪರ್ ಕಿಂಗ್ಸ್ ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿತು.

ಸೆಮಿಫೈನಲ್‌ಗಳಲ್ಲಿ ಸೋತ ಬೆಂಗಳೂರು ಹಾಕ್ಸ್ ಮತ್ತು ಗುಜರಾತ್ ಗ್ಲೇಡಿಯೇಟರ್ಸ್ ತಂಡಗಳು ಕಂಚಿನ ಪದಕಗಳನ್ನು ಗಳಿಸಿದವು.

ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಟ್ರೈಡೆಂಟ್ ಸೂಪರ್ ಕಿಂಗ್ಸ್ ತಂಡದ (ಎಡದಿಂದ) ಉಮೇಶ್ ಕುಮಾರ್, ಅಕ್ರಂ ಬೇಗ್ ಹಾಗೂ ಹಬೀಬುರ್ ರೆಹಮಾನ್

ಈಕ್ವೆಸ್ಟ್ರಿಯನ್ ಟೂರ್ನಿ: ಸಂಯೋಗಿತಾ ಜಯಭೇರಿ

ಬೆಂಗಳೂರು: ನಗರದ ರೈಡರ್ ಸಂಯೋಗಿತಾ ಕಾಡು ಅವರು ಎಫ್‌ಇಐ ಜಂಪಿಂಗ್ ವಿಶ್ವ ಚಾಲೆಂಜ್‌ನ ದಕ್ಷಿಣ ಭಾರತ ಸ್ಪರ್ಧೆಯ ಬಿ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. ಎಆರ್‌ಸಿಯಲ್ಲಿ ನಡೆದ 1.10ರಿಂದ 1.20ರ ವರೆಗಿನ ವಿಭಾಗದಲ್ಲಿ ಅವರು ಈ ಸಾಧನೆ ಮಾಡಿದರು.

ಚೇತನ್ ರೆಡ್ಡಿ ಮತ್ತು ನೂಕಾಲ ಕಿರಣ್ ದಿನೇಶ್ ಅವರು ಕ್ರಮವಾಗಿ 'ಎ' ಮತ್ತು 'ಬಿ' ವಿಭಾಗದಲ್ಲಿ ಮುನ್ನಡೆ ಗಳಿಸಿದ್ದರು. ಆದರೆ ಕೊನೆಯಲ್ಲಿ ಮಾಡಿದ ಪ್ರಮಾದದಿಂದಾಗಿ ಎಂಬಸಿ ಇಂಟರ್‌ನ್ಯಾಷನಲ್ ರೈಡಿಂಗ್ ಸ್ಕೂಲ್‌ನ ಸಂಯೋಗಿತಾ ಅವರ ಹಾದಿಯನ್ನು ಸುಗಮಗೊಳಿಸಿತು.

ಟಿಟಿ: ವರುಣ್, ತೃಪ್ತಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಧಾರವಾಡ: ಬೆಂಗಳೂರಿನ ಪಾನ್ ಕ್ಲಬ್‌ನ ವರುಣ್ ಬಿ. ಕಶ್ಯಪ್ ಹಾಗೂ ಎಸ್‌ಕೆಐ ಕ್ಲಬ್‌ನ ತೃಪ್ತಿ ಪುರೋಹಿತ್ ಅವರು ಇಲ್ಲಿನ ಕಾಸ್ಮಸ್ ಕ್ಲಬ್ ಆಯೋಜಿಸಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 17 ವರ್ಷದ ಒಳಗಿನವರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಪಡೆದರು.

ಭಾನುವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ವರುಣ್ ಬಿ. ಕಶ್ಯಪ್ 17–15, 5–11, 11–9, 11–9, 11–8ರಲ್ಲಿ ಎಸ್‌ಕೆಐಇಎಸ್ ಕ್ಲಬ್‌ನ ಪಿ.ವಿ.ಶ್ರೀಕಾಂತ ಕಶ್ಯಪ್ ಎದುರು ಗೆಲುವು ಪಡೆದರು. ಬಾಲಕಿಯರ ಫೈನಲ್‌ನಲ್ಲಿ ನೀತಿ ಎಸ್‌ಕೆ ಐಇಎಸ್ ಕ್ಲಬ್‌ನ ತೃಪ್ತಿ ಪುರೋಹಿತ್ ಅವರು 11–6, 11–5, 11–13, 5–11, 11–7, 11–9ರಲ್ಲಿ ತಮ್ಮದೇ ತಂಡದ ಜಿ. ಕರುಣಾ ಎದುರು ಗೆದ್ದರು.

ಪ್ರಶಸ್ತಿಗಳೊಂದಿಗೆ ತೃಪ್ತಿ ಪುರೋಹಿತ್ ಹಾಗೂ ವರುಣ್ ಬಿ. ಕಶ್ಯಪ್

ದಿಮುತ್ ಶತಕದ ಸೊಬಗು

ಗಾಲ್, ಶ್ರೀಲಂಕಾ (ಎಎಫ್‌ಪಿ/ ರಾಯಿಟರ್ಸ್): ಆರಂಭಿಕ ಬ್ಯಾಟರ್, ನಾಯಕ ದಿಮುತ್ ಕರುಣರತ್ನೆ (ಬ್ಯಾಟಿಂಗ್ 132; 265 ಎಸೆತ, 13 ಬೌಂಡರಿ) ಅವರ ಅಮೋಘ ಆಟದ ನೆರವಿನಿಂದ ಶ್ರೀಲಂಕಾ ಭಾನುವಾರ ಆರಂಭಗೊಂಡ ವೆಸ್ಟ್ ಇಂಡೀಸ್ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಬೃಹತ್ ಮೊತ್ತದತ್ತ ದಾಪುಗಾಲಿಟ್ಟಿದೆ.

ಟಾಸ್ ಗೆದ್ದ ಆತಿಥೇಯ ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಎದುರಾಳಿ ತಂಡದ ಬೌಲರ್‌ಗಳನ್ನು ಸತತವಾಗಿ ಕಾಡಿದ ಬ್ಯಾಟರ್‌ಗಳು ಭರ್ಜರಿ ಆಟವಾಡಿದರು. ಬೆಳಕಿನ ಅಭಾವದಿಂದ ದಿನದಾಟ ನಿಂತಾಗ ತಂಡ 88 ಓವರ್‌ಗಳಲ್ಲಿ ಮೂರು ವಿಕೆಟ್‌ಗಳಿಗೆ 267 ರನ್ ಕಲೆ ಹಾಕಿದೆ.

ಪಾಥುಮ್ ನಿಸಾಂಕ (56; 140 ಎ 7 ಬೌಂ) ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ದಿಮುತ್ ಮೊದಲ ವಿಕೆಟ್‌ಗೆ 139 ರನ್ ಸೇರಿಸಿದರು. ಸ್ಪಿನ್ನರ್ ರಾಸ್ಟನ್ ಚೇಸ್ ಅವರು ಒಶಾಡೊ ಫೆರ್ನಾಂಡೊ ಮತ್ತು ಏಂಜೆಲೊ ಮ್ಯಾಥ್ಯೂಸ್ ವಿಕೆಟ್ ಉರುಳಿಸಿದಾಗ ವೆಸ್ಟ್ ಇಂಡೀಸ್ ತಂಡದಲ್ಲಿ ಭರವಸೆ ಮೂಡಿತು. ಆದರೆ ದಿನವಿಡೀ ಕ್ರೀಸ್‌ನಲ್ಲಿ ಉಳಿದು ಮಿಂಚಿದರು. ಅವರೊಂದಿಗೆ ಧನಂಜಯ ಸಿಲ್ವಾ (56; 77 ಎ, 5 ಬೌಂ) ಮುರಿಯದ ನಾಲ್ಕನೇ ವಿಕೆಟ್‌ಗೆ 97 ರನ್ ಸೇರಿಸಿದರು.

ಕರುಣರತ್ನೆ ಅವರು ಟೆಸ್ಟ್‌ನಲ್ಲಿ 13ನೇ ಶತಕ ಸಿಡಿಸಿದರು. ಇದು ಈ ವರ್ಷದಲ್ಲಿ ಅವರ ನಾಲ್ಕನೇ ಶತಕ. 2021ರಲ್ಲಿ ಈ ವರೆಗೆ 10 ಇನಿಂಗ್ಸ್ ಆಡಿರುವ ಅವರು 750 ರನ್ ಗಳಿಸಿದ್ದಾರೆ.

ಜೆರೆಮಿ ಅಪಾಯದಿಂದ ಪಾರು: ತಲೆಗೆ ಪೆಟ್ಟು ಬಿದ್ದು ಆಸ್ಪತ್ರೆ ಸೇರಿರುವ ವೆಸ್ಟ್ ಇಂಡೀಸ್‌ನ ಜೆರೆಮಿ ಸೊಲೊಜಾನೊ ಅಪಾಯದಿಂದ ಪಾರಾಗಿದ್ದಾರೆ. ಭಾನುವಾರ ಶ್ರೀಲಂಕಾ ಇನಿಂಗ್ಸ್ ವೇಳೆ ಶಾರ್ಟ್ ಲೆಗ್‌ನಲ್ಲಿ ಫೀಲ್ಡಿಂಗ್ ಮಾಡುತ್ತಿದ್ದ ಜೆರೆಮಿ ಅವರಿಗೆ ಗಾಯವಾಗಿತ್ತು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ (ಮೊದಲ ಇನಿಂಗ್ಸ್): 88 ಓವರ್‌ಗಳಲ್ಲಿ 3ಕ್ಕೆ 267 (ಪಾಥುಮ್ ನಿಸಾಂಕ 56, ದಿಮುತ್ ಕರುಣರತ್ನೆ ಬ್ಯಾಟಿಂಗ್ 132, ಧನಂಜಯ ಡಿ ಸಿಲ್ವಾ ಬ್ಯಾಟಿಂಗ್ 56; ಶಾನಾನ್ ಗ್ಯಾಬ್ರಿಯಲ್ 56ಕ್ಕೆ1, ರಾಸ್ಟನ್ ಚೇಸ್ 42ಕ್ಕೆ2). ವೆಸ್ಟ್ ಇಂಡೀಸ್ ಎದುರಿನ ಪಂದ್ಯ.